ಕನ್ನಡ ಕಾವ್ಯಮಾಲೆ—೭೦

ಕವಿ ರನ್ನನ

# ಗದಾಯುದ್ಧಸಂಗ್ರಹಂ

೧ ನೆಯ ಸಂಪುಟ

(ಕಾವ್ಯಭಾಗ ಮತ್ತು ಟಿಪ್ಪಣಿಗಳು)

ಸಂಪಾದಕ

ತೀ. ನಂ. ಶ್ರೀಕಂಠಯ್ಯ, ಎಂ.ಎ.

ಪ್ರಕಾಶಕರು:

ಕಾವ್ಯಾಲಯ

ಮೈಸೂರು

ಮೊದಲನೆಯ ಮುದ್ರಣ : ೧೯೪೯

**ಸೂಚನೆ**

ಕಾವ್ಯವಿಮರ್ಶೆ ಮೊದಲಾದವನ್ನು ಒಳಕೊಂಡು ಈ ಗ್ರಂಥದ ಪ್ರಸ್ತಾವನೆ ಎರಡನೆಯ ಸಂಪುಟವಾಗಿ ಕ್ಷಿಪ್ರದಲ್ಲಿಯೇ ಪ್ರಕಟವಾಗುತ್ತದೆ.

ಎಲ್ಲ ಹಕ್ಕುಗಳೂ ಸಂಪಾದಕರಿಗೆ ಸೇರಿವೆ

ಬೆಲೆ : ಮೂರು ರೂಪಾಯಿ

ಮೈಸೂರಿನ ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನಲ್ಲಿ
ಹ್ಯೂ ವಾರನ್ ಅವರಿಂದ ಮುದ್ರಿಸಲ್ಪಟ್ಟಿತು

ಕವಿ ರನ್ನನು ಜನ್ಮವೆತ್ತಿ
ಒಂದುಸಾವಿರ ವರ್ಷಗಳು ಸಂದ ಸಮಯದಲ್ಲಿ

ಕನ್ನಡದ ರಕ್ಷಾಮಣಿ
**ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ**
ನೆನಪಿಗೆ

ಶಿಷ್ಯನೊಬ್ಬನ
ಭಕ್ತಿಯ ನಿವೇದನ

# ಕೆಲವು ಸಂಕೇತಗಳು

(ಅ) (ಅ೧) ಮತ್ತು (ಅ೨).

(ಅ೧) ಗದಾಯುದ್ಧಕಾವ್ಯದ ಪ್ರಥಮ ಮುದ್ರಣ: ಎಸ್. ಜಿ. ನರಸಿಂಹಾಚಾರ್ ಮತ್ತು ಮಂ. ಆ. ರಾಮಾನುಜೈಯಂಗಾರ್ ಅವರು ಸಂಪಾದಿಸಿದ್ದು; ೧೮೯೫.

(ಅ೨) ಗದಾಯುದ್ಧಕಾವ್ಯದ ತೃತೀಯ ಮುದ್ರಣ: ಮಂ. ಆ. ರಾಮಾನುಜೈಯಂಗಾರ್ ಅವರು ಸಂಪಾದಿಸಿದ್ದು; ೧೯೨೫.

ಅಜಿತಪು ರನ್ನನ ಅಜಿತತೀರ್ಥಕರಪುರಾಣತಿಲಕ.

ಆದಿಪು ಪಂಪನ ಆದಿಪುರಾಣ.

ಕಾವ್ಯಾವ ನಾಗವರ್ಮನ ಕಾವ್ಯಾವಲೋಕನ.

ಗದಾಮೂ ಗದಾಯದ್ಧಕಾವ್ಯ: ಮೂಲಗ್ರಂಥ.

ಗದಾಸಂ ಗದಾಯುದ್ಧಸಂಗ್ರಹ: ಪ್ರಸ್ತುತ ಗ್ರಂಥ.

(ಟ) "ಶ್ರೀ" ಅವರ ಗದಾಯುದ್ಧನಾಟಕ.

ಧಾ. ಧಾತು.

(ನ) ಮೈಸೂರಿನ ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟಿನಲ್ಲಿರುವ ಗದಾಯುದ್ಧ ಕಾವ್ಯದ ಕೈಬರೆಹದ ಕಾಗದದ ಪ್ರತಿ (ಸಂಖ್ಯೆ KA 50).

ನಾ. ನಾಮಪದ.

ಪ. ಪದ್ಯಸಂಖ್ಯೆ.

ಪಂಪಭಾ ಪಂಪನ ವಿಕ್ರಮಾರ್ಜುನವಿಜಯ (ಪಂಪಭಾರತ).

ಪಾ ಪಾಠಾಂತರ; (ಅ೧ಪಾ) ಎಂದರೆ (ಅ೧)ರಲ್ಲಿ ಅದರ ಸಂಪಾದಕರು ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ ಪಾಠಾಂತರ; ಮಿಕ್ಕ ಕಡೆಗಳಲ್ಲೂ ಸಂದರ್ಭೋಚಿತವಾಗಿ ಅನ್ವಯಿಸಿಕೊಳ್ಳಬೇಕು.

ಪು. ಪುರುಷ.

ಪ್ರ. ಪ್ರತ್ಯಯ.

(ಮ) ಮದರಾಸಿನ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿಯಲ್ಲಿರುವ ಗದಾಯುದ್ಧದ ಅತಿತ್ರುಟಿತವಾದ ಓಲೆಗರಿಯ ಪ್ರತಿಯ ನಕಲು (ಈ ಸಂಪಾದಕನ ಕೋರಿಕೆಯ ಮೇರೆಗೆ ಶ್ರೀ ಎಂ. ಮರಿಯಪ್ಪಭಟ್ಟರು ಪಂಡಿತರೊಬ್ಬರಿಂದ ನಕಲು ಮಾಡಿಸಿಕೊಟ್ಟದ್ದು).

ಮಹಾಭಾ ಸಂಸ್ಕೃತ ಮಹಾಭಾರತ : ಪುಣೆಯ ಭಾಂಡಾರ್‌ಕರ್ ಸಂಸ್ಥೆಯ ಪರಿಷ್ಕರಣ.

ವ. ವಚನ.

ವೇಣೀಸಂ ಭಟ್ಟನಾರಾಯಣನ ವೇಣೀಸಂಹಾರ.

ಶಬ್ದಮ ಕೇಶಿರಾಜನ ಶಬ್ದಮಣಿದರ್ಪಣ.

ಶಬ್ದಾನು ಭಟ್ಟಾಕಳಂಕನ ಶಬ್ದಾನುಶಾಸನ.

ಶಾಂತಿಪು ಪೊನ್ನನ ಶಾಂತಿಪುರಾಣ.

ಸಂ. ಸಂಸ್ಕೃತರೂಪ.

(ಸ) "ಸರ್ವತ್ರ" : ಎಲ್ಲ ಮಾತೃಕೆಗಳ ಪಾಠ.

ಸ್ವೀಪಾ= ಈ ಸಂಪಾದಕನು ಸ್ವೀಕರಿಸಿರುವ ಪಾಠ ಇಂಥ ಮಾತೃಕೆಯದು ಎಂಬುದನ್ನು ಇದು ತೋರಿಸುತ್ತದೆ.

[ ] ಮೂಲ ಹೀಗಿರಬಹುದೆಂದು ಈ ಸಂಪಾದಕನು ಯಥಾಮತಿಯಾಗಿ ಊಹಿಸಿದ ಪಾಠವನ್ನು ಈ ಚಿಹ್ನೆಯೊಳಗೆ ಕೊಟ್ಟಿದೆ. ಕಾವ್ಯಸಂಗ್ರಹ ಮಾಡುವಾಗ, ವಾಕ್ಯಗಳನ್ನು ಹೊಂದಿಸಿಕೊಳ್ಳಲು ಆವಶ್ಯಕವಾದ ಮಾರ್ಪಾಡುಗಳನ್ನೂ ಈ ಚಿಹ್ನೆಯೊಳಗೆ ತೋರಿಸಿದೆ. ಅಲ್ಲದೆ, (ಅ೧) (ಅ೩) ಮೊದಲಾದವುಗಳ ಸಂಪಾದಕರು ಈ ಚಿಹ್ನೆಯಲ್ಲಿ ಕೊಟ್ಟಿರುವ ಪಾಠಗಳನ್ನು ನಿರ್ದೇಶಿಸುವುದಕ್ಕೂ ಇದನ್ನು ಸಮಯೋಚಿತವಾಗಿ ಉಳಿಸಿಕೊಂಡಿದೆ.

[ ] ? ಮೂಲಪಾಠವನ್ನು ತಿದ್ದುವುದು ಸಾಹಸವೆಂದು ತೋರಿದಾಗ ಸಂಪಾದಕೀಯ ಸೂಚನೆಯನ್ನು ಅಡಿಟಿಪ್ಪಣಿಯಲ್ಲಿ ಈ ರೀತಿ ತೋರಿಸಿದೆ.

(?) ಅರ್ಥ ಮೊದಲಾದವುಗಳಲ್ಲಿ ಸಂದೇಹವುಂಟೆಂದು ತೋರಿದಾಗ ಟಿಪ್ಪಣಿಗಳಲ್ಲಿ ಈ ಚಿಹ್ನೆಯನ್ನು ಉಪಯೋಗಿಸಿದೆ.

××× ಮಾತೃಕೆಗಳಲ್ಲಿ ಗ್ರಂಥಪಾತವಾಗಿರುವುದನ್ನು ತೋರಿಸುವ ಚಿಹ್ನೆ.

ಅಡಿಟಿಪ್ಪಣಿಯ ಪಾಠಾಂತರಗಳಲ್ಲಿ ಹೀಗೆ ತೋರಿಸಿರುವ ಭಾಗವು ಇದರ ಹಿಂದೆ ಕೊಟ್ಟಿರುವ ಪಾಠಾಂತರದ ಭಾಗಕ್ಕೆ ಸಮಾನವಾಗಿದೆಯೆಂದು ಅರ್ಥ.

> ಒಂದು ಶಬ್ದರೂಪದಿಂದ ಇನ್ನೊಂದು ಶಬ್ದರೂಪವು ಬಂದಿದೆಯೆಂದು ತೋರಿಸುವ ಚಿಹ್ನೆ.

< ಒಂದು ಶಬ್ದರೂಪಕ್ಕೆ ಇನ್ನೊಂದು ಶಬ್ದರೂಪವು ಮೂಲವೆಂದು ತೋರಿಸುವ ಚಿಹ್ನೆ.

° ಸಮಾಸದ ಒಂದು ಭಾಗವನ್ನು ಪ್ರತ್ಯೇಕಿಸಿ ಟಿಪ್ಪಣಿಗಳಲ್ಲಿ ಉದ್ಧರಿಸಿದೆಯೆಂದು ತೋರಿಸುವ ಚಿಹ್ನೆ.

# ವಿಷಯಸೂಚಿಕೆ


| | |
|---|---|
| | ಪುಟ |
| ನಿವೇದನ | iii |
| ಕೆಲವು ಸಂಕೇತಗಳು | v |
| ಶುದ್ಧಿಪತ್ರ | viii |
| ಗದಾಯುದ್ಧಸಂಗ್ರಹಂ— | |
| ೧. ಅವತರಣಿಕೆ | ೧ |
| ೨. ಭೀಮಸೇನಪ್ರತಿಜ್ಞೆ | ೫ |
| ೩. ಸಂಜಯವಚನಂ | ೧೧ |
| ೪. ಧೃತರಾಷ್ಟ್ರವಚನಂ | ೨೫ |
| ೫. ದುರ್ಯೋಧನವಿಲಾಪಂ | ೩೧ |
| ೬. ಭೀಷ್ಮವಚನಂ | ೪೪ |
| ೭. ಭೀಮಸೇನಾಡಂಬರಂ | ೫೨ |
| ೮. ಗದಾಯುದ್ಧಂ | ೭೧ |
| ೯. ದುರ್ಯೋಧನಾವಸಾನಂ | ೮೧ |
| ೧೦. ಭೀಮಸೇನಪಟ್ಟಬಂಧಂ | ೮೮ |
| ಟಿಪ್ಪಣಿಗಳು .... .... | ೯೩ |

# ಶುದ್ಧಿಪತ್ರ

[ಸೂಚನೆ.—ಕಾವ್ಯಭಾಗಕ್ಕೆ ಸಂಬಂಧಿಸಿದ ತಿದ್ದುಪಾಡುಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ.]

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೬ | ೪ | ತೆಱದಿಂರ್ದಯ್ | ತೆಱದಿಂದಿರ್ದಯ್ |
| ೧೨ | ೫ | ಮಸುೞ್ದುವು | ಮಸುಳ್ದುವು |
| ೨೭ | ೨ | ಸಮಗೊಳಿಸಲ್ಕೆ | ಸಮ[ಕೊ]ಳಿಸಲ್ಕೆ |
| ೨೮ | ೧೭ | ೪೪ | ೧೪ |
| ೩೨ | ೧೨ | ಜಗುಳ್ದಂಘ್ರಿ | ಜಗುೞ್ದಂಘ್ರಿ |
| ೩೫ | ೬ | ನಿನ್ನ ನಾನಿತಂ | ನಿನ್ನ ನಾನಿನಿತಂ |
| ೪೬ | ೧೧ | ತದ್ವಸ | ತದ್ವಶ |
| ೬೧ | ೧೮ | ಪಿಟಿಯಲ್ಕೆ | ಪಿಳಿಯಲ್ಕೆ |
| ೮೫ | ೩ | ಕುರುನಂದನ | ಗುರುನಂದನ |
| ೮೮ | ೧೦ | ಗ್ಬಾಗದೊ | ಗ್ಭಾಗದೊ |

* * * *

ಪುಟ ೧೧-೧೨ರಲ್ಲಿ, ೩.೩ನೆಯ ಪದ್ಯದ ತಿದ್ದಿದ ಪಾಠಕ್ಕೆ ಟಿಪ್ಪಣಿಗಳ ಪರಿಶಿಷ್ಟವನ್ನು ನೋಡಿ.

# ಗದಾಯುದ್ಧಸಂಗ್ರಹಂ

## ೧. ಅವತರಣಿಕೆ

ಶ್ರೀಯುವತೀಪ್ರಿಯಂ ಬಲಯುತಂ ಬಲಿದರ್ಪಹರಂ ಜಿತಾರಿದೈ-
ತೇಯನನಂತಭೋಗನಿಲಯಂ ಪ್ರತಿಪಾಲಿತ ಧರ್ಮಚಕ್ರಸ-|
ಬ್ಜಾಯತನೇತ್ರನಾದಿಪುರುಷಂ ಪುರುಷೋತ್ತಮನೀ ಚಳುಕ್ಯನಾ-
ರಾಯಣದೇವನೀಗೆಮಗೆ ಮಂಗಳಕಾರಣಮುತ್ಸವಂಗಳಂ || ೧

**ಕೂರಿಸಿ [1]ವೀರ[1]ಶ್ರೀಯಂ**
**ಕೂರದರಂ ಕೊಂದು ಸಮರಜಯಮಂ ಮಾಡಲ್ |**
**ಕೂರಸಿಯೊಳ್ ನೆಲಸುಗೆ [2]ಕಂ-**
ಠೀರವವಾಹನೆ ಚಳುಕ್ಯ[2]ಕಂಠೀರವನಾ || ೨

[3]ಪದಿನಾಱಿಲ್ಲವಲಂಕ್ರಿಯಾರಚನೆ ಮೂವತ್ತಾಱು ನೇರ್ಪಟ್ಟುವೊಂ
ದಿದ ಶೃಂಗಾರಮದಲ್ಲಮೊಂದೆ ರಸವೊಂಬತ್ತೆಯ್ದೊಡಂಬಟ್ಟುವೆಂ |
ಬುದನೆಂಬನ್ನೆಗಮಂಗನೋಚಿತ ರಸಾಲಂಕಾರಮಂ ತಾಳ್ದದೊ-
ಪ್ಪಿದ[3] ವಾಕ್ಸುಂದರಿ ಬಂದು ಸನ್ನಿಹಿತೆಯಕ್ಕೆನ್ನೀ ಮುಖಾಂಭೋಜದೊಳ್ ||

ಬರೆ ಗರ್ಭಕ್ಕರಿವಸ್ತುವಾಹನಚಯಂ ಕಯ್ಗೆಯ್ದೆ ವಂದತ್ತು ಪು-
ಟ್ಟೆ ರಣೋತ್ಸಾಹದೆ ಚಕ್ರವರ್ತಿವಿಭವಂ ಪುಟ್ಟಿತ್ತು ಕಯ್ವತ್ತಿ ನಿಂ-|
ದಿರೆ ಪತ್ತಿತ್ತು ಸಮಸ್ತಧಾತ್ರಿ [4][ಬಳೆಯಲ್ಕೆಂತುಂ][4] ದಿಶಾದಂತಿಗ-
ಳ್ಬರೆಗಂ ತಂದೆಯ ಕೀರ್ತಿ[5][ಯುಂ] ಬಳೆದು[ದೇಂ][5] ಸತ್ಯಾಶ್ರಯಂ ಧನ್ಯನೋ ||

---

[1] ಸ್ವೀಪಾ = (ಕಾವ್ಯಾವ, ೩೮೬); ವಿಜಯ (ನ, ಅ). [2] ಸ್ವೀಪಾ = (ಕಾವ್ಯಾವ, ೩೮೬); ಲಕ್ಷ್ಮ ಚರಣಂ ವೈರಿಕಳಭ (ನ), ಲಕ್ಷ್ಮೀಚ . . (ಅ೧ಪಾ). [3] ಸ್ವೀಪಾ = (ಅಜಿತಪು, ೧. ೧೩); (ಅ೧, ನ) ಪಾಠ ಕೆಲಮಟ್ಟಿಗೆ ಭಿನ್ನವಾಗಿದೆ. [4] ವಳಯಕ್ಕೆಂದುಂ (ನ, ಅ). [5] ಯಂ ಬಳೆದುದೋ (ನ), ಯುಂ ಬ . . . (ಅ).

ನೆಱೆಗೊಂಡುದು ನಾರಾಚಂ
ನೆಱೆಗಾಣಲ್ಕಾರ್ತುದಿಲ್ಲ ಬೀರಕೆ ಬೀಯ-|
ಕ್ಕೆಱೆವ ಬೆಡಂಗನೊಳಾರ್ ದೊರೆ
ನೆಱೆ ತೋರ್ಕುಮೆ ಶತ್ರುಜನಕಮರ್ಥಿಜನಕ್ಕಂ || ೫

ಬೆಳಗುವ ಸೊಡರೊಳ್ ಸೊಡರಂ
ಬೆಳಗಿ ಪಲರ್ ಕೊಂಡು ಪೋಗೆಯುಂ ಕುಂದದೆ ಪ-|
ಜ್ಜಳಿಸುವವೊಲ್ ಜಗಮೆಲ್ಲಂ
ಕೊಳಲುಂ ತವದಿತ್ತು ಮೆಱೆವನಿಱೆವ ಬೆಡಂಗಂ || ೬

ಎನಿಸಿದ ಸತ್ಯಾಶ್ರಯದೇ-
ವನೆ ಪೃಥ್ವೀವಲ್ಲಭಂ ಕಥಾನಾಯಕನಾ-|
ಗನಿಲಜನೊಳ್ ಪೋಲಿಸಿ ಪೇ-
ಳ್ದನೀ ಗದಾಯುದ್ಧಮಂ ಮಹಾಕವಿ ರನ್ನಂ || ೭

೬೧ ಕೃತಿ ನೆಗಳ್ದ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ |
ಕೃತಿಯಂ ವಿರಚಿಸಿ[1][ದನ][1]ಲಂ-
ಕೃತಿಯಂ ಕವಿರತ್ನನೆಂಬೊಡೇವಣ್ಣಿಪುದೋ || ೮

ಮೊದಲೊಳ್ ಬದ್ಧವಿರೋಧದಿಂ ನೆಗಳ್ದ ಕುಂತೀಪುತ್ರರೊಳ್ ಭೀಮನಂ-
ಕದ ಗಾಂಧಾರಿಯ ಪುತ್ರರೊಳ್ ಮೊದಲಿಗಂ ದುರ್ಯೋಧನಂ ಧರ್ಮಯು-|
ದ್ಧದೊಳಂತಾತನನಿಕ್ಕಿ ಕೊಂದನದಱಿಂ ಭೀಮಂ ಜಯೋದ್ದಾಮನೆಂ-
ಬುದನೆಂಬಂತಿದು ವಸ್ತುಯುದ್ಧಮೆನಿಸಲ್ ಪೇಳ್ದಂ ಗದಾಯುದ್ಧಮಂ || ೯

ಮೊದಲೊಳ್ ಸಾವಂತರಿನಿನಿ-
ಸುದಿತೋದಿತನಾಗಿ ಮಂಡಲೇಶ್ವರನಿಂದ- |

---

1 ಸ್ವೀಪಾ = (ಅ); ಸದ (ನ), ದ (ಅ೧ಪಾ).

ಭ್ಯುದಯಪರನೆನಿಸಿ ಚಕ್ರಿಯಿ-
ನುದಯಪರಂಪರೆಯನೆಯ್ದಿದಂ ಕವಿರತ್ನಂ ‖ ೧೦

ಪಡೆಯೆಡೆಯ ಕಡೆಯ ಬಡವಲ್
ಕುಡೆ ಪಡೆದನೊ ಚಕ್ರವರ್ತಿಯೊಳ್ ತೈಲಪನೊಳ್ |
ಪಡೆದಂ ಮಹಿಮೋನ್ನತಿಯಂ
ಪಡೆದಂ ಕವಿಚಕ್ರವರ್ತಿವೆಸರಂ ರನ್ನಂ ‖ ೧೧

ಆರಾ[1]ತೀಯಕವೀಶ್ವರ[1]-
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ- |
**ಡಾರದ ಮುದ್ರೆಯನೊಡೆದಂ**
**ಸಾರಸ್ವತಮೆನಿಪ ಕವಿತೆಯೊಳ್** ಕವಿರತ್ನಂ ‖ ೧೨

**ಕನ್ನಡಮೆರಡಱುನೂಱಱ**
ಕನ್ನಡಮಾ ತಿರುಳ ಕನ್ನಡಂ ಮಧುರಮ್ಯೋ- |
ತ್ಪನ್ನಂ ಸಂಸ್ಕೃತಮೆನೆ ಸಂ-
ಪನ್ನಂ ನೆಗಱ್ದುಭಯಕವಿತೆಯೊಳ್ ಕವಿರನ್ನಂ ‖ ೧೩

**ರತ್ನಪರೀಕ್ಷಕನಾಂ ಕೃತಿ-**
ರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾ- |
ರತ್ನಮುಮಂ ರನ್ನನ ಕೃತಿ-
ರತ್ನಮುಮಂ ಪೇೞ್ ಪರೀಕ್ಷಿಪಂಗೆಂಟೆರ್ದೆಯೇ ‖ ೧೪

ಒಳಪೊಕ್ಕು ನೋಡೆ ಭಾರತ-
ದೊಳಗಣ ಕಥೆಯೆಲ್ಲಮಿಾ ಗದಾಯುದ್ಧದೊಳಂ- |
ತೊಳಕೊಂಡತ್ತೆನೆ ಸಿಂಹಾ-
ವಳೋಕನಕ್ರಮದಿನಱಪಿದಂ ಕವಿರನ್ನಂ ‖ ೧೫

---

[1] ತೀಯಕವಿಪುಂಗವ (ನ, ಅ೧ಪಾ).

ಕವಿಗಳೊಳಾ ಪುರಾಣಕವಿಪುಂಗವರೊಳ್ಳಿದರೀಗಳಿಲ್ಲ ಸ-
ತ್ಕವಿಗಳೆನಲ್ಕೆ ವೇಡವರ ಪೋದೊಡವಂದಿರ ಕಬ್ಬಮಿನ್ನು ವಿಃ- |
ರ್ಪವು ಗುಣದೋಷಮಂ ನಿಕಷಮಿಟ್ಟು ಪರೀಕ್ಷಿಸಿ ನೋಡೆ ತಾಮೆ ಪೇ-
ಱವೆ ಬುಧರಿರ್ದು ಸೋ[1]ಪ್ಪು[1]ದು ಪುರಾತನನೂತನಕಾವ್ಯರೇಖೆಯಂ || ೧೬

ಶ್ರೀಯುತನೊಳುದಾರತೆ ವಾಕ್-
ಶ್ರೀಯುತನೊಳಮತ್ಸರತ್ವಮಾಗದುದಾರಂ |
ಶ್ರೀಯುತನಮತ್ಸರಂ ವಾಕ್-
ಶ್ರೀಯುತನಾದೊಡೆ ಕೃತಾರ್ಥರಾಗರೆ ಕವಿಗಳ್ || ೧೭



1 ಸ್ತ್ರೀಪಾ = (ಅ೩); ಳ್ಕ (ನ), ಟ್ಕ (ಅ೧).

## ೨. ಭೀಮಸೇನಪ್ರತಿಜ್ಞೆ

ಕುರುಭೂಭೃದ್ಬಲ[1][ತೂಲಕಾ][1]ಲಪವನಂ ಕೌರವ್ಯಗಂಧೇಭಕೇ-
ಸರಿ ದುಶ್ಶಾಸನರಕ್ತರಕ್ತವದನಂ ದುರ್ಯೋಧನೋರುಕ್ಷಮಾ-|
ಧರವಜ್ರಂ ಕುರುರಾಜರತ್ನಮಕುಟೋತ್ಕೂಟಾಂಘ್ರಿಸಂಘಟ್ಟಸಂ-
ಗರಸಂದೆಂದಭಿವರ್ಣಿಪೆಂ ರಣಯಶಃಶ್ರೀರಾಮನಂ ಭೀಮನಂ ‖ ೧

ಖಳದುಶ್ಶಾಸನಕೃಷ್ಣಲೋಹಿತಜಲಾ[2][ಶ್ಲಿ][2]ಷ್ಟಂ ಕುರುಪ್ರೋದ್ಭವ-
ಪ್ರಳಯಜ್ವಾಲಿ ಸುಯೋಧನೋರುಮಕುಟೋದ್ಘಟ್ಟಪ್ರತಿಜ್ಞಾಕ್ಷರಾ-|
ವಳಿವಿನ್ಯಸ್ತವಿಶಾಲನಿಶ್ಚಳಶಿಲಾಸ್ತಂಭಂ ಕುರುಕ್ಷೇತ್ರದೊಳ್
ಪ್ರಳಯೋಗ್ರಾಂತಕನಂತಗುರ್ವಸೊಳಕೊಂಡಿರ್ದಂ ಹಿಡಿಂಬಾಂತಕಂ ‖ ೨

ಆ ಪ್ರಸ್ತಾವದೊಳ್ ದೃಷ್ಟಾದೃಷ್ಟಪರಂಪರೆಯೆಂಬ ವೃದ್ಧಕಂಚುಕಿಯುಂ ಬುದ್ಧಿಮತಿಯೆಂಬ ಮೇಳದ ಕೆಳದಿಯುಂ ಬೆರಸು ದೇವಾಸುರಯುದ್ಧಕ್ಕೆ ಕರಗಂಬೊತ್ತಳೆಂಬಂತೆ ಅನವರತವಾರಿಧಾರಾಪೂರಪರಿಪಾರಿಪಲ್ಲವನೇತ್ರೆಯುಂ ಅಸಹ್ಯಪರಿಭವಾನಲದಂದಹ್ಯಮಾನಗಾತ್ರೆಯುಂ ಆಗಿ ಯಜ್ಞವೇದೀಸಂಭವೆಯುಂ [3][ಯಾಜ್ಞಸೇನಿಯುಂ][3] ದ್ರುಪದರಾಜೋಪವನಜಯವೈಜಯಂತಿಯುಂ ಎನಿಸಿದ ಪಾಂಚಾಲರಾಜತನೂಜೆ ಪವಮಾನತನೂಜನಲ್ಲಿಗೆ ವಂದು

ದನುಜವಿರೋಧಿ ಮಾಡಿದೊ[4][ಡಮಾ]ಗದೆ [ಸಂಧಿ ದ]ಲೆನ್ನ ನಿನ್ನ[4] ಸೈ-
ಪಿನೊಳವಶಿಷ್ಟ[5][ಕೇವಲ][5]ಸುಯೋಧನಮಾ[6][ಯ್ತರಿಸೇನೆ][6] ಸಿಂಧುನಂ-|
ದನ ಧೃತರಾಷ್ಟ್ರರಿರ್ದೊರೆಯ ಸಮ್ಮರಸಂ ಮರಳ್ದಿಂಬುಕೆಯ್ಗುಮೆಂ-
ದನುಶಯಮಾದುದಿಂದೆನಗೆ ಸಂಶಯಮಂ ಕಳೆ ಕೌರವಾಂತಕಾ ‖ ೩

---

[1] ಕೂಲತೂ (ನ, ಅ). [2] ಸ್ವೀಪಾ=(ಅ); ಕ್ಳ (ನ, ಅ೧ಪಾ). [3] ಯಜ್ಞಸೂನುವುಂ (ನ, ಅ). [4] ಡೆಯಾಗದಸಾಂಡಿಸಲೆನಗಿನ್ನ (ನ), ಲೀನನಿನ್ನ (ಅ೧), ಡೆಯಾಗದೆ ಸಾಧಿಸಲೀನನಿನ್ನ (ಅ೩), ಡಮಾಗದೆ ಸಂಧಿಯದೆನ್ನ ನಿನ್ನ (ಟ). [5] (ನ)ದಲ್ಲಿ ಏನೂ ಇಲ್ಲ; ××× (ಅ), ನಿರ್ಧನ (ಟ). [6] ಸ್ವೀಪಾ=(ಟ); ಯ್ತು (ನ), ಯ್ತು ××× (ಅ).

ಖಳದುಶ್ಶಾಸನವಕ್ಷಃ-
ಸ್ಥಳೋಚ್ಚಲತ್ಕೃಷ್ಣರಕ್ತಜಲದಿಂ ಕೋಪಾ-|
ನಳನಂ [1]ಮ[ಟ್ಟಿಗಿಸಿ ನೀಸುಂ]
ಗ[ಳಾ] ಗಳಿತ[1]ಕೋಪನಿರ್ಪ ತೆಱದಿಂದ್ರದರ್ಯ್ ‖ ೪

ಸಮವಾಯಮಹಿತರೊಳ್ ಸಂ-
ಧಿಮಾಡಿ ಯಮಸೂನು ಪೇಱೆ ವನವಾಸವೆ ದಲ್ |
ನಿಮಗೆ ಶರಣೆನಗಮಂದ-
ಗ್ನಿಮುಖದೆ ಪುಟ್ಟಿದುದಱಿಂದೆ ಶರಣಗ್ನಿಮುಖಂ ‖ ೫

ಎಂದು ನೊಂದು ನುಡಿಯೆ ಮರುನ್ನಂದನಂ ದರಹಸಿತವದನಾರವಿಂದನಾಗಿ ತನ್ನಂತರ್ಗತದೊಳ್

ಕುರುರಾಜಾನುಜ ಭೀಕರ-
ಕರವಿಲುಳಿತ ನೀಲಕಬರಿಭರಮಂ ಪಿಡಿದುಂ |
೬ ಪರಿಭವಿಸಲ್ ಕೃಷ್ಣೆಗೆ ಮಿಗೆ
ದೊರೆಕೊಳಿಸದೆ ಕೋಪಮಂ ಮನಸ್ತಾಪಮುಮಂ ‖ ೬

ಎಂದುಪಲಕ್ಷಿಸಿ

ಧಾತ್ರಿಯುಮನೀ ಹುತಾಶನ-
ಪುತ್ರಿಯುಮಂ ಬಱಿದೆ ಸೋಲ್ತನಲ್ಲಂ ಜೂದಿಂ |
ಕ್ಷತ್ರಿಯತೇಜಮುಮಂ ಯಮ-
ಪುತ್ರಂ ರಿಪುಗಂದೆ ಸೋಲ್ತನಾಗಲೆ ವೇಡಾ ‖ ೭

ಎಂದನಿಲಸುತಂ ನಿಜಾಗ್ರಜಂಗೆ ಮುಳಿದು

ಪರವಶದೊಳಿರ್ದರೋ ಮೇಣ್
ಪರಾರ್ಜಿತಪ್ರಾಣರಾದರೋ ದ್ರೌಪದಿಯುಂ |

---

[1] ಸ್ತೀಪಾ=(ಟ) ; ಮಗ್ಗಿಸದಿನ್ನುಂ ಗಳಗಳಿತಸ (ನ), ಮನ್ನಿಸ . . . (ಅ).

ಪರಿಭವಿಸುವಲ್ಲಿ ನೋಡು-
ತ್ತಿರಲಕ್ಕುಮೆ ಪವನಸೂನುಗಂ ಪಾರ್ಥಂಗಂ || ೮

ಎಂದು ತನಗಮರ್ಜುನಂಗಂ ಒಡನೆ ಮುಳಿದು

ವಿನಯಮನೆ ಬಗೆದು ವಿಕ್ರಮ-
ಮನೆ ಬಗೆ[1][ಯೆವೆ][1] ಸರನುವೂನುಮೆನಗಂ ಸಂವೋ-|
ಹನವಾದುದಕ್ಕುಮಂದ-
ಣ್ಣನ ಸೂನೃತವಚನವೆಂಬ ಮಂತ್ರಾಕ್ಷರದಿಂ || ೯

**ಎಂದು ಪಶ್ಚಾತ್ತಾಪಂಗೆಯ್ದು ಕುರುಕುಲವಿಳಯಜ್ವಾಲೆ ಸುಯೋಧನ ಪ್ರಳಯಕಾಳಿ ಪಾಂಚಾಲಿಯ ವದನಮಂ ನೋಡಿ**

ಗಳಿಯಿಸುತಿರೆ ಕಬರಿಭರಂ
ಗಳಿಯಿಸುತಿರೆ ನಯನವಾರಿ ನಿನ್ನಾನನದಿಂ|
ನಳಿನಾನನೆ ನೀನಿರೆ ಕುರು
ಕುಳಾಂತಕಂ ಗಳಿತಕೋಪನೇ [2][ಈ][2] ಭೀಮಂ || ೧೦

ಸತ್ಯಪ್ರತಿಜ್ಞನೆನೆ ಕುರು-
ಪತ್ಯೂರುಕಿರೀಟಭಂಗಮಂ ಪಡೆದು ಜಗತ್-|
ಸ್ತುತ್ಯಕೃತಕೃತ್ಯನೆನಿಸದೆ
ಸತ್ಯಾಶ್ರಯವೆಸರ್ಗೆ ಮುಯ್ಯನಾಂಪನೆ ಭೀಮಂ || ೧೧

ನೀನಗ್ನಿ ಪುತ್ರಿಯಯ್ ಪವ-
ಮಾನತನೂಭವನೆನಾನಣಂ ಕೂ[3][ಡಿರೆ ಸಂ][3]-|
ಧಾನಮರಿನೃಪರೊಳೆಂತನ-
ಲಾನಿಲಸಂಯೋಗಮುರಿಪದಿರ್ಕುಮೆ ಪಗೆಯಂ || ೧೨

---

[1] ಸ್ವೀಪಾ = (ಟ); ಯದೆ (ನ, ಅ). [2] ಸ್ವೀಪಾ = (ಟ); (ನ)ದಲ್ಲಿ ಏನೂ ಇಲ್ಲ; [ಠಿಠಿ] (ಅ೧), [ಠಲಿ] (ಅ೩). [3] ಸ್ವೀಪಾ = (ಟ); ಡುಸು (ನ), ಡೆ ಸು[ಸಂ] (ಅ)

ಕುರುಕುಲಜೀವಾಕರ್ಷಣ-
ಪರಿಣತಮಿದು ಕಾಳಹಸ್ತಮಲ್ಲದೆ ಪರಮೇ-|
ಶ್ವರಿ ಕೇಶಹಸ್ತಮಕ್ಕುಮೆ
ಪರಾಭವಜ್ವಲನಧೂಮಕೃಷ್ಣಂ ಕೃಷ್ಣೇ || ೧೩

ಕುರುನಂದನರಂ ಕೊಂದೆಂ
ಕುರುಶಾಬಾನುಜನ ನೆತ್ತರಂ ಕುಡಿದೆಂ ಪೂ-|
ಣ್ದೆರಡಂ ತೀರ್ಚಿದೆನಿರ್ದಪು-
ವೆರಡುಮವಂ ತೀರ್ಚಿ ತೀರ್ಚದಿರ್ಪೆನೆ ಪಗೆಯಂ || ೧೪

ಊರುಗಳನುಡಿವೆನೊದೆವೆಂ
ಕೌರವಪರಿವೃಢನ ಮಕುಟಮಂ ವೇಣೀಸಂ-|
ಹಾರಂ ಮಾಡುವೆನದಱಿಂ
ಭಾರಮ[1]ದಿನಿತ[1]ಲ್ಲದೆನ್ನ ಪರಿಭವಭಾವಂ || ೧೫

೬ ಕುರುಕುಲಶೋಣಿತಪಾದಪದ್ಮತಳಂ ತಳೋ-
ದರಿಗೆ ವೃಕೋದರನಾಗಿಪಂ ಕಚಬಂಧ ಬಂ-|
ಧುರತೆಯನಾತನ ಪೂಣ್ದ ಪೂಣ್ಕೆ ಶಿಳಾತಳಾ-
ಕ್ಷರಮೆನಿಸಿರ್ಪ ಜನೋಕ್ತಿಯಂ ಪುಸಿಮಾಳ್ಪನೇ || ೧೬

ಅಱಿನ ಮಗಂ ಪ್ರಾರ್ಥಿಸೆ ಬಾಂ-
ದೊಱೆಯ ಮಗಂ ಮಾಡೆ ಸಂಧಿಯಾದಪುದೆನುತುಂ |
ಮಱು[2]ಗುವೆ [ಅಣ್ಣ][2]ನ ಮಾತಂ
ಪೆಱಗಿಕ್ಕುವೆನಜ್ಜನಿರ್ದು ಮಾ[3]ಣ್ಬೊ[3]ಡಮಿಾಯೆಂ || ೧೭

ಎಂದು ಕೌರವ್ಯಕುಲಕಾಲಾನಲನುಂ ಕುರುರಾಜನಿರ್ವ್ಯಾಜನಿಬಿಡೋರು ದ್ವಯಭಂಗ ಪ್ರತಿಜ್ಞಾಭಾರನುಂ ಫಣಿಪತಿಕೇತನಧೂಮಕೇತುವುಂ ಪಾಂಡವ ಬಲಪ್ರಾಕಾರನುಂ ಏಕಾಂಗವೀರನುಂ ಜರಾಸಂಧಸಂಧಿಬಂಧವಿಘಟನನುಂ

---

[1] ವಿನಿತಿ (ನ). [2] ಗುವೆನಜ್ಜ (ನ, ಅ), ಗದಿರಣ್ಣ (ಟ). [3] ಡೊ (ಟ).

ಇಱುವ ಬೆಡಂಗನುಂ ಅಕಲಂಕಚರಿತನುಂ ಅಮ್ಮನ. ಗಂಧವಾರಣನುಂ ಸಾಹಸಾಂಕನುಂ ಎನಿಸಿದ ಭೀಮಸೇನನಂತು ಆರೂಢಕೋಪನುಂ ಪ್ರತಿಜ್ಞಾರೂಢನುಂ ಆ[1][ಗೆ][1]

ಸಮದೇಭಕುಂಭಭೇದನ-
ಸಮಯೋಗ್ರನಖಂಗೆ ಹರಿಗೆ ಮೃಗರಿಪುವೆಸರು- |
ತ್ರಮಿಕೆಯೆ ನಿನಗೆ ಜರಾಸಂ-
ಧಮಥನ ಕುರುವೈರಿವೆಸರದೇನುನ್ನತಿಯೇ ‖ ೧೮

**ಇಱುವ ಬೆಡಂಗ ದೇವ ಪರಮೇಶ್ವರ ಸಾಹಸಭೀಮ ನಿನ್ನೊಳಾ-**
**ರಿಱಿದು ಬರ್ದುಂಕುವರ್ ನಿಜಭುಜೋಗ್ರಗದಾಪರಿಘಪ್ರಹಾರದಿಂ |**
**ಪಱವಱಿಯಾಗಿ [2]ವೃ[2]ಣ್ಣವೇಣನಾಗಿ** ಮರುಳ್ಗುಣಿಸಾಗಿ ಯುದ್ಧದೊಳ್
**ಕುಱುದಱಿಯಾಗಿ** ಬಿಟ್ಟರಿಬಲಂಗಳೆ ಪೇಟವೆ ನಿನ್ನ ಬೀರಮಂ ‖ ೧೯

ಎಂದು ಅಸಲಸಂದಸೆ ಅನಿಲನಂದನನಂ ಪೊಗಟ್ದು

ಒಡಲೊಡಮೆಯೆಂಬಿವೆರಡುಂ
ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ |
ಕೆಡುವೊಡಲೊಡಮೆಯನೆಂದುಂ
ಕೆಡದೊಡವೆಗೆ ಮಾಱುಗುಡುವುದಿಱುವ ಬೆಡಂಗಾ ‖ ೨೦

ಮಣಿ ಕನಕಂ ವಸ್ತು ವಿಭೂ-
ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡರ್ |
ಗುಣಮನೆ ಮೆಚ್ಚುವುದು ಶಸ್ತ್ರ-
ವ್ರಣಮಂ ನಿನ್ನಂತೆ ಮೆಚ್ಚುವುದಿಱುವ **ಬೆಡಂಗಾ** ‖ ೨೧

ಎಂದು ಮೂದಲಿಸಿ **ನುಡಿಯೆ** ಭೀಮಸೇನನನುಮತದೊಳ್ ಸರ್ವಸಚಿವನುಂ ಪರಿಹಾಸ[3]ಕ[3]ಶೀಲನುಮೆನಿಸಿದ ವಿದೂಷಕನೆಂದಂ ಇನ್ನೆಲ್ಲಿಯ ಧೃತರಾಷ್ಟ್ರಂ ಎತ್ತಣ ಗಾಂಗೇಯಂ ಎಲ್ಲಿಯ ಸಂಧಿಕಾರ್ಯಂ ದುಶ್ಶಾಸನಾದಿಗಳಪ್ಪ

[1] ಗ (ನ, ಅ). [2] ಪೊ (ಟ). [3] ಸ್ವೀಪಾ=(ನ, ಅ೧ಪಾ) ; ಕೇಳ್ (ಅ).

ನೂರ್ವರ್ ಕೌರವರುಮನಗುರ್ವಾಗೆ ಕೊಂದಿಕ್ಕಿದಂ ಇನ್ನೊರ್ಬನುೞಿದಂ ದುರ್ಯೋಧನನಂ ಕೊಲ್ವುದುಂ ಗೆಲ್ವುದುಂ ನಮ್ಮರಸಂಗಾವುದು ಗಹನಂ ಅದರ್ಕೆ ಚಿಂತಿಸದಿರಿಂ ಎಂದು ಪಾಂಚಾಲರಾಜತನೂಜೆಯ ಮೊಗಮಂ ನೋಡಿ

ಕುರುಕುಲಮಂ ನುಂಗಿದೆಯಿ-
ನ್ನರೆಬರುಮಂ ನುಂಗಲಿರ್ದೆ ಕುರುಪತಿಯುಮನಿ- |
ನ್ನೆರಡನೆಯ ಹಿಡಿಂಬೆಯನೆ-
ಮ್ಮರಸಂ ರಕ್ಕಸಿಯನೆಲ್ಲಿ ತಂದನೊ ನಿನ್ನಂ || ೨೨

ಎಂದು ವಿದೂಷಕಂ ಅೞುತ್ತುಂ ಬಂದ ತನ್ನಂ ನಗುತ್ತುಂ ಪೋಪಂತೆ ಸಂತೋಷಂ ಮಾಡಿಸಿದುದರ್ಕೊಡಂಬಟ್ಟು ಚಾರುಹಾಸಿನಿ ನಿಜನಿವಾಸಕ್ಕೆ ಪೋದಳ್

## ೩. ಸಂಜಯವಚನಂ

ಅನ್ನೆಗಮಿತ್ತ ಕುರುಕುಲಪಿತಾಮಹನುಂ ಆಹವಭೀಷ್ಮನುಂ ಎನಿಸಿದ ಭೀಷ್ಮನ ಶರಶಯನದೊಳಂ ಬಿಲ್ಲ ಜಾಣಂ ದ್ರೋಣಸಱಿವಿನೊಳಂ ತನ್ನ ಮಯ್ದುನಂ ಜಯದ್ರಥನ ವಿಪತ್ತಿನೊಳಂ ತನ್ನಣುಗದಮ್ಮಂ ದುಶ್ಶಾಸನನ ಪಂಚತ್ವಪ್ರಪಂಚದೊಳಂ ತನ್ನಣುಗಾಳಪ್ಪ ಕರ್ಣನ ಸಾವಿನೊಳಂ ತನ್ನ ಮಾವನಪ್ಪ ಶಲ್ಯನ ಸಂಹರಣದೊಳಂ ಕುರುಕುಲಚೂಡಾಮಣಿಯುಂ ಪನ್ನಗ ಪತಾಕನುಂ ಕನಕಲತಾಲಾಂಛಿತೋತ್ತುಂಗಘನಗದಾಯುಧನುಂ ದಿವ್ಯ ಮುನಿವರಾಪರಾಧನುಂ ಸಕಲಲಕ್ಷ್ಮೀನಿವಾಸನುಂ ಸಮರಧೈರ್ಯನುಂ ಮಹಾ ಶೌರ್ಯನುಂ ರಾಧೇಯನಿಜಸಹಾಯನುಂ ಛಲದಂಕಮಲ್ಲನುಂ ಸಕಲಭೋಗ ಲಕ್ಷ್ಮೀಪತಿಯುಂ ಅಭಿಮಾನಧನನುಮೆನಿಸಿದ ಸುಯೋಧನಂ ಚಿಂತಾ ಕ್ರಾಂತನಾಗಿ

ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ
ನೊಸಲೊಳ್ ಕಣ್ ಗಡಮೆಂದು ನಚ್ಚಿ ಪೊರೆದಂ ತಾನಕ್ಕೆ ತಮ್ಮಮ್ಮನ-|
ಕ್ಕಿಸಲಂಬಂ ತಿರುವಾಯ್ಗೆ ತಂದಱುವರೇ [1]ತಮ್ಮಿ[1]ರ್ವರುಂ ಕಯ್ದುವಂ
ಬಿಸುಟರ್ ಜೋಳದ ಪಾಱಿಯುಂ ಬಗೆ[2]ದರಿ[2]ಲ್ಲಾ ದ್ರೌಣಿಯುಂ ದ್ರೋಣನುಂ ‖

ಪದುಳಂ ಕುಳ್ಳಿರ್ದ ಮಗಾ-
ಯದ ಮಾತಂ ತಗುಳೆ ಗಱಿಪಿ ಪೋದಂ ಸಂದಿ-|
ರ್ದದಟರೊಳೞಿದೞಿಯಂ ತ-
ಪ್ಪದೆ ಕಮ್ಮಱಿಯೋಜನೆನಿಸಿದಂ ಬಿಲ್ಲೋಜಂ ‖ ೨

ಈಯಲಿಱಿಯಲ್ ಶರಣ್ಬುಗೆ
ಕಾಯಲ್ ಕ್ಷತ್ರಿಯರೆ ಬಲ್ಲ[3]ರಾ ಬ್ರಹ್ಮಣ್ಯ[ರ್][3] |

---

[1] ಸ್ವೀಪಾ=(ಕಾವ್ಯಾವ, ೧೪೬); ತಾವಿ (ನ,ಅ). [2] ಸ್ವೀಪಾ=(ಕಾವ್ಯಾವ, ೧೪೬); ದುದಿ (ನ, ಅ). [3] ರಲ್ಲದೆ ಬ್ರಹ್ಮರ್ (ನ, ಅ), ರಾಬ್ರಹ್ಮಣ್ಯಂ (ಮ).

ಭೋಯೆನಲುಂ ಬಲ್ಲರ್ ಕೊಲೆ
ಧೋಯೆನಲುಂ ಬಲ್ಲರಿಱಿಯಲವರೆತ್ತಱಿವರ್ ‖ ೩

ಓಜಂ ಗಡ ಚಿಃ ಭಾರ-
ದ್ವಾಜಂ ಗಡ ಬಿಲ್ಲ ಬಲ್ಮೆಯುಂ ಕುಲಮುಂ ನಿ- |
ರ್ವ್ಯಾಜಂ ಮಸುೞ್ದುವು ಪಾಂಡುತ-
ನೂಜರ ಪಕ್ಕದೊಳೆ ಪಾೞಿಗಿಡೆ ನೆಗೞ್ದುದಱಿಂ ‖ ೪

ತಪನಸುತಂ ಬೇಱಾಂ ಬೇ-
ಱೆ ಪೊಲ್ಲದಂ ನುಡಿದನಾ[1]ವಗಂ ಬಿಸುಟಂ ರ- |
ಕ್ಷಿಪ ಕಯ್ದುವನೆಮಗಾ[1] ಮಱೆ
ಯ ಪಾಂಡವಂ ಬಗೆದು ನೋೞ್ಪೊಡಶ್ವತ್ಥಾಮಂ ‖ ೫

ಗೆಲಲಾರ್ಪೊಡಿಱಿದು ಗೆಲ್ವುದು
ಗೆಲಲಾಱದೊಡಣ್ಮಿ ಸಾವುದಾಳ್ಗಿನಿತೆ ಗುಣಂ |
ಗೆಲಲುಂ ಸಾಯಲುಮಾಱದೆ
ತೊಲಗಿದೊಡೆ ನೆಗೞ್ತೆ [2]ತೊಲಗದಿರ್ಕು[ಮೆ][2] ಮೆಯ್ಯಂ ‖ ೬

ಕರವಾಳಂ ಮಸೆವಂ[3]ತಿರೆ[3]
ಮರವಾಳಂ ಮಸೆಯೆ ಕೂರಿತಕ್ಕುಮೆ ಕಲಿಯಂ |
ಪೊರೆದೊಡೆ ಕೂರ್ಪಂ ತೋರ್ಪಂ-
ತಿರೆ ತೋರ್ಕುಮೆ ಪಂದೆ ಪತಿಗೆ ಸಂಗರದೆಡೆಯೊಳ್ ‖ ೭

ತುಱು[4]ಗೋ[ಳೊಳ್][4] ಪೆಣ್ಬುಯ್ಯಲೊ-
[5][ಳೆಱೆ][5]ವೆಸದೊಳ್ ನಂಟನೆಡಱೊಳೂರಳಿವಿನೊಳಂ |
ತಱಿಸಂದು ಗಂಡುತನಮನೆ
ನೆಱಪದವಂ ಗಂಡನಲ್ಲನೆಂತುಂ ಷಂಡಂ ‖ ೮

---

[1] ಸ್ವೀಪಾ = (ಮ); ತನಂ ಬಿಸುಟಂ ತಕ್ಕಿಪ ನುಡಿಯು ನುಡಿವನೇ (ನ, ಅ). [2] ತೋಱುಗುಮೆ ಸಿರಿ (ನ, ಅ), ತೊಲಗದಿಕ್ಕು × (ಮ). [3] ಸ್ವೀಪಾ = (ನ, ಮ); ದದೆ (ಅ). [4] ಗೊಳ್ಳಲ್ (ನ, ಅಪಾ). [5] ಳಱು (ನ, ಅ).

ಎಂದರಸನವರ್ಗೆ ವಿರಸವಾಗಿ ಪರುಷಂ ನುಡಿಯೆ ಸಂಜಯಂ ತನ್ನಂತ
ರ್ಗತದೊಳ್

ಕಾರ್ಯಸಖಂ ಶಕುನಿ ಗ[1]ಡಂ[1]
ಶೌರ್ಯಸಖಂ ಸೂತಜಂ ಗ[1]ಡಂ[1] ಭೀಷ್ಮ ಶರಾ-|
ಚಾರ್ಯರ ನುಡಿ [2]ಕೈಪೆ ಗ[ಡಮ-
ನಾ]ರ್ಯಂ[2]ಗಹಿಕೇತನಂಗೆ ವಿಧಿವಿಳಸನದಿಂ ‖ ೯

ಗುರು ಕವಚಂ ಕರ್ಣಂ ಬಾ-
ಹುರಕ್ಕೆ ಸುರಸಿಂಧುನಂದನಂ ಸೀಸಕಮಾ-|
ಗಿರೆ ಮೆಯ್ಗೆ ಮುಳಿಯಲಱಿಯದೆ
ಕುರುರಾಜನ ತೊಡೆಯನುಡಿವೆನೆಂದಂ ಭೀಮಂ ‖ ೧೦

ಎಂದು ಸಂಜಯಂ ಕುರುರಾಜನಂ ನೋಡಿ

ಭುವನಕ್ಕಾರಾಧ್ಯನೆಂಬೀ ನೆಗೞ್ದ ಬಿರುದಿನಂಕಕ್ಕೆ ತಕ್ಕಂದದಿಂ ಭಾ-
ರ್ಗವನೊಳ್ ದಿವ್ಯಾಸ್ತ್ರಮಂ ಮುಂ ಪಡೆದು ನೆಗೞ್ದ ಶೌರ್ಯಕ್ಕೆ ತಕ್ಕಂದದಿಂ ಪಾಂ-|
ಡವರುಂ ಕೌರವ್ಯರುಂ ಕಯ್ಮುಗಿಯೆ ನೆಗೞ್ದ ಪೆಂಪಿಂಗೆ ತಕ್ಕಂದದಿಂ ಬಿ-
ಲ್ಲೊವಜಂ ಗಾಂಡೀವಿಯೊಳ್ ಕಾದಿದನವರ ಶರಾ[3][ಸಂಖ್ಯೆ]ಯಂ ನೀನೆ ಕಾಣಾ[3] ‖ ೧೧

ಇದು ದಲ್ ಗಂಗಾತ್ಮಜನ್ಮಕ್ಕನುಗುಣಮಿದು ರಾಜಪ್ರಸಾದಕ್ಕೆ ಪೋ ತ-
ಕ್ಕುದಿದೀ ದೋರ್ದಂಡಕಂಡೂಯನಕೆ ಸದೃಶಮಾ ಕಲ್ತ ಬಿಲ್ಬಿನ್ನಣಕ್ಕಿಂ-|

[1] ಡಾ (ನ, ಅ). [2] ತಪ್ಪು ಗಡಾಕಾರ್ಯಂ (ನ, ಅಗಪಾ), ಕೈಪೆರಡಾಚಾರ್ಯಂ (ಮ), ತಪ್ಪು [ಗಡಮನಾ]ರ್ಯಂ (ಅ), ತಪ್ಪು ಗಡ ಅಕಾರ್ಯಂ (ಟಿ). [3] ಶಂಖೆ ನೀನೆ ಕಾಣಾ (ನ), ಸಂಖೆಯಿಂ ನೀನೆ ಕಂಡೈ (ಮ), [ಸಾರಮಂ] ನೀನೆ ಕಂಡೈ (ಅ).

ತಿದೆ ಯುಕ್ತಂ ಭೀಷ್ಮ ನಾಮಕ್ಕಿದು ಸಮುಚಿತಮೆಂಬಂತೆ ಸಂಗ್ರಾಮರಂಗೋ-
ನ್ಮದ[1]ಮತ್ತಂ ನೋಡೆ ಪಾರ್ಥಂ[1] ಕದನದೊಳದಟಂ ತೋಱಿದಂ
ಸಿಂಧುಪುತ್ರಂ ‖ ೧೨

ಕಳಶನದೀಜರ್ ಭಕ್ತಿಗೆ
ಕಳಶಾರೋಹಣಮಿದೆನಿಸಿ ನೆಱಪಿದರವರೊಂ- |
ದಳವಲ್ತು ಕಾದಿ ಗೆಲಲಾ-
ರಳವಲ್ತರ್ಜುನನ ಶೌರ್ಯಮಂ ನೀನಱಿಯಾ ‖ ೧೩

ನೃಪ ನಿನ್ನಂ ಪಿಡಿದುಯ್ಯೆ ಭಾನುಮತಿಯಂ ಸಂತೈಸಿ ಚಿತ್ರಾಂಗದಂ-
ಗುಪಯೋಗಾಸ್ತ್ರಮನೆಚ್ಚು ಕೂಡೆ [2]ನಭದಿಂ[2] ಗಾಂಡೀವಿ ತರ್ಪಾಗಳೀ |
ಕೃಪನೀ ಸೈಂಧವನೀ ಸರಿತ್ತನಯನೀ ರಾಧೇಯನೀ ಮದ್ರಭೂ-
ಮಿಪನೀ ಕುಂಭಜನೀ ಕುರುಪ್ರಭವರಂದೇಂ ಹಮ್ಮಿದಂಬೋದರೇ ‖ ೧೪

ಕಲಿ ಪನ್ನೊಂದಕ್ಷೋಹಿಣಿ
ಬಲವೆಲ್ಲಮನೊಂದೆ ರಥದೊಳೊರ್ವನೆ ಗೆಲ್ದಂ |
ಗೆಲಲರಿಯಂ ಗೋಗ್ರಹಣದ
ಕಲಹದೊಳೇಕಾಂಗವಿಜಯನಾದಂ ವಿಜಯಂ ‖ ೧೫

ಉರಿ ಕೊಳೆ ಕೋಟ್ಮಿಗಂ ಕೊಳೆ ವಿಷಾಹಿಕುಳಂ ಕೊಳೆ ಶತ್ರುಭೂಮಿಯೊಳ್
ಗಿರಿಗಹನಂಗಳೊಳ್ ವಿಷಮರಾಕ್ಷಸಸಂಕುಳದೊಳ್ ವರಾಹಸಿಂ- |
ಧುರ[3][ಖ][3]ರ ಶಯ್ಯೆಯೊಳ್ ವಿಪುಳಭೀಕರದೊಳ್ ನಿಜಬಾಹುವ-
ಜ್ರಪಂಜರದೊಳಗಿಟ್ಟು ರಕ್ಷಿಸಿದನಲ್ತೆ ಸಹೋದರರಂ ವೃಕೋದರಂ ‖ ೧೬

ಬಕನಂ ಹಿಡಿಂಬನಂ ಕೀ-
ಚಕನಂ ಕಿಮ್ಮೀರನಂ ಜಟಾಸುರನಂ ಕೊಂ- |
ದ ಕಲಿ ಜರಾಸಂಧನನಿ-
ಕ್ಕಿ ಕೊಂದ ಬಲ್ಲಾಳ್ ಮರುತ್ಸುತಂ ಕೇವಳನೇ ‖ ೧೭

---

[1] ಸ್ವೀಪಾ=(ನ, ಅಪ್ರಾ); ರೆಲ್ಲಂ ನೋಡೆ ಪೆಂಪಂ (ಮ, ಅ). [2] ಭರದಿಂ (ನ).
[3] ತ (ನ, ಅ).

ಎಂದು ಸಂಜಯಂ ಸಾಹಸಭೀಮನ ಸಾಹಸಂಗಳನಭಿವರ್ಣಿಸಿ –

ನೆಗಪ್ದಾ ಭಾರತಮಲ್ಲ [1]ಶಂತನುಜ[1]ಬಾಣಾಘಾತದಿಂ ಭೀಮಭೀ-
ಮಗದಾದಂಡವಿಘಾತದಿಂ ಕುರುನೃಪಾನೀಕಂ ಪಡಲ್ವಟ್ಟು ಜೀ-|
ರಗೆಯೊಕ್ಕಿಲ್ಗೆ ಣೆಯಾಗಿ ಬಿದ್ದ ಭಟರಿಂ ಬಿದ್ದಶ್ವದಿಂ ಬಿದ್ದ ದಂ-
ತಿಗಳಿಂದಂ ಜವನುಂಡು ಕಾಱಿದವೊಲಾಯ್ತೆತ್ತಂ ಕುರುಕ್ಷೇತ್ರದೊಳ್ || ೧೮

ಪವನಸುತಂ ಗದೆಗೊಳೆ ಗಾಂ
ಡಿವಿ ಬಿಲ್ಗೊಳೆ ಕಯ್ದುಗೊಳ್ವ ಮಾರ್ಕೊಳ್ವದಟರ್ |
ಭುವನದೊಳಿಲ್ಲವರ್ಗಳ ಬಾ
ಹುವಿಕ್ರಮಂ ನಿನಗೆ ಪೊಸತೆ ಕೌರವರಾಜಾ ‖ ೧೯

ಜವನ ಮುಳಿಸವನ ಮುಳಿಸೆನೆ
ಜವನೇ ಬರ್ಚಿದವೊಲಿಂತು ಕುಱಿದಱಿದಱಿದಂ |
ಜವನಂ ಮುಳಿಯಿಸಿ ಸುಭಟರ
ಜವನಂ ಮುಳಿಯಿಸಿ ಬರ್ದುಂಕುವನ್ನರುಮೊಳರೇ ‖ ೨೦

ದಾನಂ ಪ್ರಿಯವಾಕ್ಸಹಿತಂ
ಜ್ಞಾನಮಗರ್ವಂ [2]ಕ್ಷಮಾ[2]ನ್ವಿತಂ ಶೌರ್ಯಮೆನಿ-|
ಪ್ಪೀ ನುಡಿಯನೆ ನುಡಿಯಿಸಿದುದು
ದಾನಂ ಜ್ಞಾನಂ ಕ್ಷಮಾಗುಣಂ ಧರ್ಮಜನಾ || ೨೧

ಅಮಳ್ಗಳ್ ವಿನಯ[3][ದ][3] ವಿಕ್ರಮ-
ದಮಳ್ಗಳವರ್ ಮುಳಿಯೆ ಗಂಡರಿಲ್ಲವರ ಪರಾ-|
ಕ್ರಮವಂ ನೀನಱಿದಿರ್ದುಂ
ಸಮರದೊಳಿಳಿಸುವುದೆ ಕುರುಕುಲಾಂಬರಭಾನೂ || ೨೨

ಎಂದು ನುಡಿದ ಸಂಜಯನ ನುಡಿಗೆ ಫಣಿರಾಜಕೇತನಂ ಸಿಡಿಲ್ದು

---

[1] [ಶಕ್ರಸುತ] ?   [2] ಸ್ವೀಪಾ = (ನ) ; ಕೃಪಾ (ಅ).   [3] ದಿ (ನ), ದೆ (ಅ).

ಸ್ಥಿರಸತ್ಯವ್ರತಿಯೆಂದು ಧರ್ಮರುಚಿಯೆಂದಾ ಧರ್ಮಪುತ್ರಂ ದಯಾ-
ಪರನೆಂದೆಲ್ಲರ ಪೇೞ್ದ ಮಾತು ಪುಸಿಯಾಯ್ತೀ ಕಾರ್ಮುಕಾಚಾರ್ಯನಂ |
ಗುರುವಂ ಬ್ರಾಹ್ಮಣನಂ ತೊದಳ್‌ನುಡಿದು ಕೊಂ[1]ದಾಗಳ್[1] ಮೃಷಾ ಪಾತಕಂ
ಪರಮೆಂಬೀ ನುಡಿಯಿಂ ಪೃಥಾಪ್ರಿಯಸುತಂ ಪಾಪಕ್ಕೆ ಪಕ್ಕಾಗನೇ ‖ ೨೩

ಈ ದೊರೆಯಱಮಗನುಂ [2]ಮೃ[2]ಷ-
ವಾದಂ ನೋಡೆಂದು ಧರ್ಮನಂ ಮೂದಲಿಸಲ್ |
ಪೋದಂ ಪುತ್ರನನಱಸಲ್
ಪೋದನೆ ಯಮಪುರಕೆ ಮುಕ್ತಬಾಣಂ ದ್ರೋಣಂ ‖ ೨೪

ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾ-
ಗನೆ ಭಗದತ್ತನಾನೆ ಬರಿಯೆಲ್ವುಡಿವನ್ನೆಗಮೊತ್ತೆ ಗಂಡನಾ- |
ಗನೆ ಕೊಲಲೊಲ್ಲದಂಗಪತಿ ಬಿಲ್ಲೊಳೆ [3]ಕೋದೆ[3]ಡೆವಲ್ಲಿ ಗಂಡನಾ-
ಗನೆ ಕುರು[4]ಬಾಲ[4]ಸಂಹರಣಮಾತ್ರದೆ ಮಾಱುತಿ ಗಂಡನಾದನೇ ‖ ೨೫

ಒಡವುಟ್ಟಿದರಂ ಕೊಂದವ-
ರಡಗಂ ತಿಂದವರ ನೆತ್ತರಂ [5]ಬಗಸೆರೆ[5]ಯೊಳ್ |
ಕುಡಿವೀ ನಿಸ್ತ್ರಿಂಶತೆಯಂ
ಹಿಡಿಂಬೆಯಂ ಪೊರ್ದಿ ಕಲ್ತನಾಗನೆ ಭೀಮಂ ‖ ೨೬

ಎನಗಾ ಜೂದಿನೊಳಗ್ರಜಾನುಜಸಮೇತಂ ಗಂಡುದೊಱ್ತಾಗಿ ಕಾ-
ನನದೊಳ್ ವಲ್ಕಲಧಾರಿಯಾಗಿ ಹರನೊಳ್ ದಿವ್ಯಾಸ್ತ್ರಮಂ ಬೇಡೆ ಬೆ- |
ಳ್ತನದಿಂ ತಾಪಸನಾಗಿ ಪೇಡಿಯೆನೆ ಮತ್ಸ್ಯಾವಾಸದೊಳ್ ವಾಸುದೇ-
ವನ ನಂಟಂ ನಟನಾಗಿ ಬಾರದ ಭವಂ ಬಂದಂ ಪೃಥಾನಂದನಂ ‖ ೨೭

ಗುರುವಂ [6]ಪ್ರೋಜ್ಝಿತಚಾಪನಂ[6] ಪುಸಿದು ಕೊಂದಾ ಬೀರಮಂ ಭೀಷ್ಮರಂ
ಶರಶಯ್ಯಾಗತರಂ ಕಱುತ್ತು ಗುಱಿಯೆಚ್ಚಾ ಪೊಚ್ಚಱಿಂ ಕರ್ಣನಂ |

---

[1] ದಂತಾ (ಮ). [2] ಧಿ (ಮ). [3] ಕೊಡೆ (ನ), ಕೊಂಡೆ (ಮ, ಅಪಾ). [4] ಸ್ವೀಪಾ = (ಮ, ಅ); ಪುತ್ರ (ನ, ಅ೧ಪಾ). [5] ಬೆಸಲಗೆ (ಮ, ಅ). [6] ಪ್ರಾತೀತಚಾಪವ್ಯತಿಕರ-ಗತರಂ (ಮ).

ವಿರಥಜ್ಯಾಯುಧನೆನ್ನದೆಚ್ಚು [1]ತಳೆಗೊಂಡಾ[1] ಶೌರ್ಯಮಂ ಪಾಂಡುಪು-
ತ್ರರೆ ಬಲ್ಲರ್ ಮೆಱೆಯಲ್ಕೆ ಸಾಹಸಧನಂ ದುರ್ಯೋಧನಂ ಬಲ್ಲನೇ ‖ ೨೮

ಸೊಕಮಿರ್ಕಕ್ಕಟ ದರ್ಭಪಾಣಿ ಯಮಜಂ ದರ್ವೀಕರಂ ವಾಯುಪು-
ತ್ರಕನುಂ ಜರ್ಜರಹಸ್ತನಿಂದ್ರತನಯಂ ದಸ್ರಾತ್ಮಜರ್ ದಂಡಮು-|
ಷ್ಟಿಕರರ್ ಶಸ್ತ್ರವಿಡಂಬಮೇವ್ರದವರ್ಗಂ ಪಾಂಚಾಳಿಯುಂ ಗಂಧದಾ-
ಯಕಿಯಾಗಿರ್ಪಿನಮಂದು ಮತ್ಸ್ಯಗೃಹದಿಂದೀ ನಿಗ್ರಹಂ ಪೊಲ್ಲದೇ ‖ ೨೯

ಸಭೆಯೊಳ್ ತಮ್ಮಯ ಪಕ್ಕದೆನ್ನನುಜನಾ ಪಾಂಚಾಲಿಯಂ ಪಂಚವ-
ಲ್ಲಭೆಯಂ ಮೋದೆಯುಮಲ್ಲಿ ಮಿಳ್ಮಿಳನೆ ನೋಡುತ್ತಿರ್ದ ಬಲ್ಲಾಳ್ಗಳಿ-|
ಲ್ಲಿ ಭರಂಗೆಯ್ದಪರೀ ಪರಾಕ್ರಮಮುಮೀ ಪೆರ್ಮಾತುಮೀ ಗಂಡುಮೀ
ಸುಭಟಾಲಾಪಮುಮೆಲ್ಲಮಾ ನೃಪ[2]ಸುತರ್ಗಂದೆಲ್ಲಿ ಪೊಕ್ಕಿರ್ದುದೋ[2] ‖ ೩೦

ಎಂದು ಧೃತರಾಷ್ಟ್ರನಂದನಂ ಧರ್ಮನಂದನನುಮಂ ವಾಯುನಂದನನು-
ಮಂ ಸಂಕ್ರಂದನನಂದನನುಮಂ ಅಶ್ವಿನೀನಂದನರುಮಂ ನಿರಾಕರಣಂಗೆಯ್ದು
ಅನಿತಱೊಳಂ ಮಾಣದೆ

ಪವನಂಗೆ ಪುಟ್ಟಿದಂ ರಾ-
ಘವನಣುಗಾಳ್ ತ್ರಿಣಯನಾಂಶಮೆನಿಪಣುವಂ ಪಾಂ-|
ಡವಕೇತುದಂಡದೊಳ್ ನೆಲ-
ಸುವುದಾವಗ್ಗಳಿಕೆ ಕಪಿಗೆ ಚಪಲತೆ ಸಹಜಂ || ೩೧

ಅನುಜೆಯನಿತ್ತು ನರಂಗಾ-
ತನ ತನಯಂಗಿತ್ತು ತನ್ನ ಮಗಳಂ ತಾನಾ-|
ತನ ರಥಮನೆಸಗಿ ಧರ್ಮಜ-
[3]ನನುಜನ ನೆವದಿಂದಮರಸುಗೆಯ್ವಂ[3] ಕೃಷ್ಣಂ || ೩೨

---

1 ಸ್ವೀಪಾ = (ಮ) ; ತವೆ ಕೊಂದಾ (ನ, ಅ). 2 ತಿಗಳಿಗೇ ನೆಂಬೆನೆಲ್ಲಿ ದುದೋ (ಮ).
3 ನ ನೇಮದಿಂದರಸುಗೈಯನಾಗನೆ (ಮ).

ಪುರುಷರ್ ಮೂವರೊಳೊರ್ಬನೆಂಬರಸುರಪ್ರಧ್ವಂಸಿಯೆಂಬರ್ ಜಗ-
ದ್ಗುರುವೆಂಬರ್ ಪೆಱರ್ಗೇಕೆ ತೇರನೆಸಪಂ ಧರ್ಮಾನುಜಂಗೇಕೆ ಕಿಂ-|
ಕರನಾದಂ ಕರವೇಟಿಯಾದನದಱಿಂ ಸೂತಂ ಭಟಂ ಪೇಟಿಯೆಂ-
ಬರ ಮಾತೊಪ್ಪುಗುಮಾದಿದೇವನೆನಿಸಲ್ ಕೃಷ್ಣಂಗದೆಂತೊಪ್ಪುಗುಂ || ೩೩

ಅನಿಮೇಷಾದ್ಯವತಾರಂ
ತನಗಾ[1]ಯ್ತು[1] ದಶಾವತಾರಮ[2]ನಿತಱೊಳಿ[2]ರದ-|
ರ್ಜುನನ ರಥಮೆಸಪ ಪನ್ನೊಂ-
ದನೆಯದು ಸೂತಾವತಾರಮುಂ ಹರಿಗಾಯ್ತೇ || ೩೪

ಎಂದು ದುರ್ಯೋಧನಂ ಕಪಿರಾಜನುಮಂ ಕಂಜೋದರನುಮಂ ನಿರಾಕರ
ಣಂಗೆಯ್ದು ಅನಿತಱೊಳಂ ಮಾಣ್ದು ಸೈರಿಸಲಾಱದೆ ಸಮರೋದ್ಯೋಗಂ
ಗೆಯ್ಯೆ ಸಂಜಯನಂಜದೆ ಮಾರ್ಕೊಂಡು

ಪ್ರತಿಕೂಲದೈವನಯ್ ನೀಂ
ಪ್ರತಿನೃಪರನುಕೂಲದೈವರಸಹಾಯನೆ ನೀಂ |
ಪ್ರತಿನೃಪರಸಹಾ[3]ಯ[ಜಿತ][3]
ಪ್ರತಿಬಲ[4][ರ][4]ದಱಿಂದನರ್ಥಕಂ ವಾಕ್ಯಾರ್ಥಂ || ೩೫

ಎಂದು ನುಡಿದ ಸಂಜಯನ ನುಡಿಗೆ ದುರ್ಯೋಧನಂ ನಿರ್ವೈಸಿ

ಸಮರಜಯಂ ದೈವಾಯ-
ತ್ತಮದಱಿನಾ ಪುರುಷಕಾರಮೆಮಗಾಯ್ತೇಗಳ್ |
ಯಮನಂದನಾದಿಗಳೊಳೊಂ-
ದೆ ಮೆಯ್ಯೊಳಾಂತಿಱಿವೆನೆನ್ನ ಛಲಮಂ ಮೆಱೆವೆಂ || ೩೬

ಸುರಸಿಂಧೂದ್ಭವ ಕುಂಭಜನ್ಮ ದಿನಕೃತ್ಪುತ್ರಾದಿಗಳ್ ಸಾಯೆ ಸಂ-
ಗರದೊಳ್ ಪಾಂಡವರಂ ಗೆಲಲ್ [5]ನೆಱೆಯನಿನ್ನೇ[5]ಕಾಕೆ ದುರ್ಯೋಧನಂ |

---

[1] ಗೆ (ಮ). [2] ಸ್ಟೀಪಾ = (ಮ) ; ಲ್ಲದೊಡಿ (ನ, ಅ). [3] ಯರ್ ನೀಂ (ನ, ಅ) ; ××× (ಮ). [4] ಮ (ನ, ಅ೩ಪಾ), ನ (ಮ, ಅ೩), ವ (ಅ೧). [5] ನೆರದನಿಲ್ಲೀ (ಮ).

ಸೆರಗಂ ಪಾರ್ದ ಪನೆಂಗುಮೀ ಧರೆ ಭುಜಾದಂಡಂ ಗದಾದಂಡಮೆಂ-
ಬೆರಡುಂ ಸಂಜಯ ಮಜ್ಜಯು[1]ಕ್ಕೆ ನೆರವಿಂ ಮತ್ತನ್ಯರಂ ಪಾರ್ವನೇ ‖ ೩೭

ಮದವತ್ಕರಿಗಳ ಬಿದುವಂ
ವಿದಾರಣಂಗೆಯ್ದು ಕೋಲ್ವ ಕಂಠೀರವಕಂ |
ಕದನದೊಳರಿನೃಪರಂ ಕೋ-
ಪದೆ ಕೊಲ್ವೆನಗಂ ಸಹಾಯರೆಂಬರುಮೊಳರೇ || ೩೮

ಎಂದು ನುಡಿದು ಕಾಲದಂಡಪ್ರಚಂಡಮಪ್ಪ ತನ್ನ ಗದಾದಂಡಮಂ ಭುಜಾದಂಡದೊಳಳವಡಿಸಿಕೊಂಡು ಸಮರಾಭಿಮುಖನಾಗಿ ನಡೆವ ಫಣಿರಾಜಕೇತನನಂ ಸಂಜಯನಂಜದೆ ಮಾರ್ಕೊಂಡು

ಪವನಾತ್ಮಜಂ ಮಹಾರಥ-
ನವನಿಪ ಸಮರಥನೆ ನೀನದರ್ಕಧಿಕನೊಳಾ |
ಪವನಾತ್ಮಜನೊಳ್ ಮಱೆ ಬ-
ದ್ಧವೈರಮಂ ಸಂಧಿಮಾಳ್ಪುದುತ್ತಮಪಕ್ಷಂ || ೩೯

ಎಂದು ನುಡಿದ ಸಂಜಯನ ನುಡಿಗೆ ಪಿಂಗಾಕ್ಷನತಿವಿಷಮಪರುಷವೇಷಾವೇಶಧರನಾಗಿ

ಅತಿರಥನಾತಂ ಗಡ ಬಲ-
ಯುತ[2][ನಾಂ] ಸಮರಥನ[ನ][2]ಧಿಕಬಲವಂತಂ ಮಾ- |
ರುತಿ ಗಡ ಮಹಾರಥಂ ಮಾ-
ರುತಿಯುಂ ತದ್ರಥದ ಗಾಲಿಗಳ್ ದೊಡ್ಡಿದುವೇ || ೪೦

ಪೆಱರಂ ಪೊಗೞ್ದಪೆಯೆಮ್ಮಂ
ಕಿಱಿ[3]ಯಂ[3]ಮಾಡಿದಪೆಯೆಲವೊ ಸಂಜಯ ನೀನುಂ |
ಪೆಱನೊರ್ವಂ ಬಿಲ್ಲೋಜಂ
ಪೆಱನೊರ್ವಂ ಸಿಂಧುಪುತ್ರನಾಗಲ್ ಬಗೆವೋ || ೪೧

---

[1] ಕ್ಕೆ ನೆರವಿಂ ಮತ್ತಾರ್ನೆರಂ ಬಾ (ನ, ಅ), ಕ್ಕಿದುವೆನೆ ಮತ್ತನ್ಯರಂ ಪಾ (ಮ).
[2] ಸಮರಥನೆನ್ನೊಳ (ನ, ಅ). [3] ಯರ್ (ಟ).

ಎಂದರಸನವಂಗೆ ವಿರಸಮಾಗಿ ಪರುಷಮುಂ ನುಡಿಯೆ ಸಂಜಯನಂಜಿ

ಎನಿತೆನಿತಂ ಕಲಿಸಿದೊಡಂ-
ತನಿತನಿ[1]ತು ನಿಜಸ್ವ[1]ಭಾವಮಕ್ಕುಂ ನೃಪನಂ-।
ದನ[2]ನಂತು[2]ಮಂತು ಕರ್ಕಶ-
ತನುವಂತಃಶೂನ್ಯಮಕ್ಕುಮುನ್ನತವಂಶಂ ॥ ೪೨

ಎಂದಱಿದು 'ಮೌನಂ ಸರ್ವಾರ್ಥಸಾಧನಂ' ಎಂಬುದು ಈತಂಗೆ ಅನುಕೂಲವೃತ್ತಿಯುಂ ಸ್ವಚ್ಛಂದಾನುವೃತ್ತಿಯುಮಾಗಿ ಸೆಗ[3][ಱ್ವುದು] ಎಂ[3]ತುಂ 'ಆರಾಧ್ಯಂ ನ ಪ್ರಕೋಪಯೇತ್' ಎಂದು ಮೋನಂಗೊಂಡು ಸಂಜಯಂ ಕಿಱಿದು ಬೇಗಮಿರ್ದು ಫಣಿರಾಜಕೇತನಂ ಯುದ್ಧಸನ್ನದ್ಧನಾಗಿ ನಡೆವುದಂ ಕಂಡು ಮತ್ತಮಾ ಸಂಜಯಂ ನಿಸರ್ಗಮೂರ್ಖನುಂ ಸ್ವಭಾವದೃಢನುಂ ಸ್ವಾಮಿಹಿತವನುಂ ಅಪ್ಪುದಱಿಂದಿರಲಾಱದೆ

ಬಲ[4]ದೊಳನ[4]ಶ್ವತ್ಥಾಮಂ
ಬಲನೊಳನಿರ್ವರುಮನಾಸೆಗೆಯ್ಯದೆ ವಿದ್ಯಾ-।
ಬಲದಿಂ ಕಾ[5][ದ][5]ದೆ ನಿಜಭುಜ-
ಬಲದಿಂ ಪಾಂಡವರೊಳರಸ ಕಾದಲ್ ಬಗೆದಯ್ ॥ ೪೩

ಆ ಬಲದೇವಾಶ್ವತ್ಥಾಮರುಮಿರ್ದರ್ ಅವರಿರ್ವರುಮಲ್ಲದೆ ಕೃಪ ಕೃತವರ್ಮರುಮಿರ್ದರ್ ಅಂತು ನಾಲ್ವರೊಳೊರ್ಬಂಗೆ ವೀರಪಟ್ಟಮಂ ಕಟ್ಟಿ ವೀರಪ್ರಮುಖಂಗೆ ಸೇನಾಧಿಪತ್ಯಾಭಿಷೇಕಮಂ ಮಾಡಿ ಪಗೆಯಂ ಕಯ್ಗೆ ಮಾಱ್ಪುದು ಎಂಬುದುಂ ಸಂಜಯನ ನುಡಿಗೆ ದುರ್ಯೋಧನನಿಂತೆಂದಂ

ತ್ರಿದಶನದೀಸುತನಿಂ ತೀ-
ರದ ಕಜ್ಜಂ ಮುನ್ನ ಕಳಶಸಂಭವನಿಂ ತೀ-।

[1] ತ ನಿಜಸ (ನ), ತಂ ನಿಜಸ್ವ (ಅಗಪಾ), ತುಂ ನೈಜ (ಅ). [2] ನಂತೆ (ನ, ಅಗಪಾ), ನೆಂತು (ಅ). [3] ಳ್ದಂ (ನ), ಡ್ದಂ (ಅ). [4] ನೊಳನ (ನ, ಅಗಪಾ), ದೊಳಗ (ಅ). [5] ಡ (ನ), ದಿ (ಅ).

ರದ ಕಜ್ಜಮಿನಜನಿಂ ತೀ-
ರದ ಕಜ್ಜಂ ದ್ರೋಣಪುತ್ರನಿಂ ತೀರ್ದಪುದೇ ‖ ೪೪

ದ್ರೋಣನೆಮಗೊಳ್ಳಿಕೆಯ್ದಂ
ದ್ರೋಣನ ಸುತನೊಳ್ಳಿಕೆಯ್ಯದಿರ್ಕುಮೆ ಸಮರ-|
ಕ್ಷೋಣಿಯೊಳಿನ್ನವನಾಸ[1][ಯೆ][1]
ಮಾಣೆಯಣಂ ಕಯ್ಪೆ ಸೂರೆಯ ಕುಡಿಯೇಂ ಮಿಡಿಯೇಂ ‖ ೪೫

ಹಲಿಯಂ ರಣಕೇಳಿಕುತೂ-
ಹಲಿಯಂ ನಚ್ಚಿರ್ದೆ ನವನುಮಾಹವಕೋಲಾ-|
ಹಲದಲ್ಲಿ ತೀರ್ಥಯಾತ್ರಾ-
ಚ್ಛಲದಿಂದಮಗಲ್ದು ಪೋದನಿನ್ನುಂ ಬಾರಂ ‖ ೪೬

ಮಡಿ[2][ವೊಡೆ][2] ಪಗೆ ರವಿಸುತನಿಂ
ಮಡಿಗುಂ ಮೇಣ್ ಶೌರ್ಯಶಾಳಿ ದುಶ್ಶಾಸನನಿಂ|
ಮಡಿಗುಂ ಮೇಣೆನ್ನಿಂದಂ
ಮಡಿಗುಂ ಪೆಱಪೆಱರಿನೆನ್ನ ಪಗೆ ಮಡಿದಪುದೇ ‖ ೪೭

ಕಡುಗೂರಿತಕ್ಕುಮುಕ್ಕಿನೊ-
ಳೊಡಗೂಡಿದ ಪಚ್ಚೆ ಬೇಱೆ ಕೂರ್ಪಿಲ್ಲಾರುಂ|
ತೊಡರ್ದಿಱುವರರ್ಕನಂದನ-
ನೊಡ[3]ನಿಲ್ಲದೆ[3] ತಾಮೆ ಬೇಱೆ ಕೂರಿದರೊಳರೇ ‖ ೪೮

ಕಾನೀನಂ ದ್ರೋಣನದೀ-
ಸೂನುಗಳಟಿದಿಂಬಟಿಕ್ಕೆ ಪೆಱ[4]ತೆ[4]ನಗಿಲ್ಲೆಂ-|
ದಾನೆ ಗಳಿತಾಶ್ರುಜಲದಿಂ
ಸೇನಾಪತ್ಯಾಭಿಷೇಕಮಂ ಮಾಡಿದಪೆಂ ‖ ೪೯

---

[1] ಸ್ವೀಪಾ = (ಟ) ; ಯ (ನ, ಅ). [2] ಯಡಿ (ನ), ಯುದ್ಧೆ (ಅ), ಗುಮೆ (ಟ).
[3] [ದೊಡೆ] ? [4] ರೆ (ಅ೩, ಟ).

ಎನಗಿರ್ವರುಮೆರಡುಂ ತೋ-
ಳೆನಗಿರ್ವರುಮೆರಡು ಕಣ್ಗ[1][ಳ][1]ನ್ನರೆ ಯುವರಾ-|
ಜನುಮಂಗರಾಜನುಂ ಪೋ-
ರೆನೆ ಸಂಜಯ ಮತ್ತಮೆನಗೆ ಮಾನಸವಾಪೇ ‖ ೫೦

ಕಟಿದಂ ದಿನಕರತನಯಂ
ಕಟಿದಂ ಯುವರಾಜನಪ್ಪ ದುಶ್ಶಾಸನನುಂ|
ತುಟಿಲಾಳ್ಗಳನಿರ್ವರುಮಂ
ಕಟಿಪಿ ಸುಯೋಧನನ ಬಾಟ್ವುದು ನಂಬಿದಿರೇ ‖ ೫೧

ಎನಗೆ ಮನಮಿಂದು ಶೂನ್ಯಂ
ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾ-|
ವನಿ ಶೂನ್ಯಮಾಯ್ತು ದುಶ್ಶಾ-
ಸನನಿಲ್ಲದೆ ಕರ್ಣನಿಲ್ಲದಾನೆಂತಿರ್ಪೆಂ || ೫೨

ಬಾಂಧವರನಿಱಿಸಿ ಸರಸಿಜ-
ಬಾಂಧವತನಯನುಮನೆನ್ನ ತಮ್ಮನುಮಂ ನ-|
ಮ್ಮಂಧನರೇಂದ್ರನ ಮೊಗಮಂ
ಗಾಂಧಾರಿಯ ಮೊಗಮನಾವ ಮೊಗದೊಳೆ ನೋೞ್ಪೆಂ ‖ ೫೩

ಎನೆ ಸಂಜಯನಾ ಪ್ರಸ್ತಾವದೊಳ್ ಭೀಷ್ಮ ದ್ರೋಣ ಕರ್ಣ ದುಶ್ಶಾಸನ ಶಲ್ಯ ಶಕುನಿ ಸೈಂಧವ ಭೂರಿಶ್ರವ[ಃ] ಸೋಮದತ್ತ ಭಗದತ್ತ ಸೌಬಲ ಬೃಹದ್ಬಲ ಬಾಹ್ಲೀಕ ವಿಂದಾನುವಿಂದಾದಿಗಳ ಸಾವಿನೊಳ್ ಸರ್ವಾಂಗವಿಕಳರಾಗಿರ್ದ ಧೃತರಾಷ್ಟ್ರಗಾಂಧಾರಿಯರ ಚರಣಾರವಿಂದವಂದನಂಗೆಯ್ದು ದೇವರ ಮನಃಕ್ಷತಮನಾಱಿಸಲ್ವೇೞ್ಪುದು ಪೀಡಿಂಗೆ ಬಿಜಯಂಗೆಯ್ವುದೆನೆ

[2][ಸ]ವಳ[2]ದೆ ಗುರುಜನದಲ್ಲಿಗೆ
ಯುವರಾಜನುಮಂಗರಾಜನುಂ ಬೆರಸು ರಣೋ-|

[1] ಳೆ (ನ, ಅ). [2] ಪವಳ (ನ), ಎವಗ (ಅ೧, ಅ೩ಪಾ), ಪವಣ (ಅ೩).

ತ್ಸವದಿಂ ಪೋ[1][ದೆಂ][1] ನಾಣ್ಚುವೆ-
ನವರಿರ್ವರುಮಿಲ್ಲದೀಗಳಲ್ಲಿಗೆ ಪೋಗಲ್ ‖ ೫೪

ಪತಿಶೋಕವಿಕಳ ಪಾರ್ಥಿವ-
ನಿತಂಬಿನೀಜನಮನೀಕ್ಷಿಸಲ್ ಸಂಜಯ ಲ-|
ಜ್ಜಿತ[2]ನೆನ್ನಿರ್ಪಿರವಿಂದೇ[2]
ಕೆ ತೋರ್ಪೆನಾನೆನ್ನ ಮೊಗಮನತಿದುಃಖಿತನೆಂ ‖ ೫೫

ಎಂಬನ್ನೆಗಂ ಸಕಲಚತುರಂಗಬಲವಿಕಳನಾಗಿ ಸಪ್ತಾಂಗರಾಜ್ಯಸಮಾಲಿಂಗಿತನಾಗಿ ಸಂಗ್ರಾಮರಂಗದೊಳಿರ್ದನೆಂಬುದಂ ಆಪ್ತಚರರಱಿಪೆ ಕೇಳ್ದು ಗಾಂಧಾರಿಯುಂ ಧೃತರಾಷ್ಟ್ರನುಂ ಶೋಕಾಕುಲೀಕೃತಚಿತ್ತರಾಗಿ ತಮ್ಮ ಮಗನನಾರಯ್ಯಲುಂ ಮನಃಕ್ಷತಮನಾಱಿಸಲುಮೆಂದು ಅಱಸುತ್ತುಂ ಬಂದು

ಪಡೆ ಪನ್ನೊಂದಕ್ಷೋಹಿಣಿ-
ಗೊಡೆಯನೆ ಮೂರ್ಧಾಭಿಷಿಕ್ತನಯ್ ಮೂಱುಂ ಬೆ-|
ಳ್ಗೊಡೆಯ ನಡುವಿರ್ಪ ನೀನಿ-
ರ್ದೆಡೆಯುಮನೆಮಗಱಿಯದಂತುಟಾದುದೆ ಮಗನೇ ‖ ೫೬

ಎಂದು ಪಱಿಯಿಸುತ್ತುಂ ಬರ್ಪ ಗುರುಜನದ ಸರಮಂ ಸಂಜಯನಱಿದು ಕರಕಮಲಮುಕುಳಿತಾಂಜಲಿಯಾಗಿ ದೇವಾ ನಿನ್ನಲ್ಲಿಗೆ ನಿಜಜನನೀಜನಕರ್ ಅಱಿಸುತ್ತುಂ ಬಂದರ್ ಎಂಬುದುಂ ಉ[3]ದ್ಧೃತ[3]ಗೋತ್ರಾಭಿಮುಖಂ ವಜ್ರಾಘಾತಮಾದಂತೆ ಸಿಗ್ಗಾಗಿ ತಲೆಯಂ ಬಾಗಿ

ಅರಿಭೂಪಾಲರನಿಕ್ಕಿ ಗೆಲ್ದ ಸಗೆಯಿಂ ತೂರ್ಯಸ್ವನಂ ಪೊಣ್ಮೆ ಸೋ-
ದರರುಂ ಮಕ್ಕಳುಮಾಪ್ತರುಂ ಬೆರಸು ಬಂದಾನಂದದಿಂ ಕಾಣ್ಬೆನೆಂ-|
ದಿರಲಿಂತಾಯ್ತು ವಿಧಾತ್ರ ಮದ್ಗುರುಗಳಂ ದುಃಖಾತ್ಮರಂ ಶೋಕತ-
ಪ್ತರರಂ ಮೆಯ್ಯೊಳೆ [4]ಬೀೞುವ[4]ಶ್ರುಮುಖರಂ ಕಾಣ್ಬಂತುಟಂ ಮಾಡಿದಯ್ ‖

---

[1] ಗಲ್ (ನ,ಅ). [2] ನೆನಿಪ್ಪಿರವಿಂನೆ (ನ) ; ನೇನಿರ್ಪಿರವಿನ್ನೆ (ಅಪಾ), ನೇನಿರ್ಪಿರವಿಂದೇ (ಅ೧). [3] ಉದ್ದಿಷ್ಟ (ಮ). [4] ಬೀಳುವ (ನ, ಅ೧ಪಾ), [ಬೀೞ್ದ] (ಅ).

ಕಂದ ನಿಜಾನುಜರೆಲ್ಲಿದ-
ರೆಂದೆನ್ನಂ ಜನನಿ ಬಂದು ಬೆಸಗೊಂಡೊಡದೇ-|
ನೆಂದು ಮಱುಮಾತುಗುಡುವೆಂ
ಕೊಂದರ್ ಕೌಂತೇಯರೆಂದು ಬಿನ್ನೈಸುವೆನೋ || ೫೮

ಶೋಕಂ ಮಿಗೆ ಫಣಿರಾಜಪ-
ತಾಕಂ [1]ವಿಗಳಿತವಿವೇಕನವಿರಳ[1]ಬಾಷ್ಪೋ-|
ದ್ರೇಕಂ ಹಾ ದುಶ್ಶಾಸನ
ಹಾ ಕರ್ಣಾ ಎನುತುಮಂತೆ ಮೂರ್ಛೆಗೆ ಸಂದಂ || ೫೯

---

[1] ವಿಕಳಿತವಿವೇಕಶೂನ್ಯಂ (ನ, ಅ), ವಿಗಳಿತತಿರೇಕನತವಿರಳ (ಮ).

## ೪. ಧೃತರಾಷ್ಟ್ರವಚನಂ

ಅಂತು ಮೂರ್ಛಾಪ್ರಸಂಗನಾದ ಪನ್ನಗಪತಾಕಂಗೆ ಶಿಶಿರೋಪಚಾರಕ್ರಿಯೆಗಳಂ ಮಾೞ್ಪ ಸಂಜಯನಿರವಂ ತತ್ಪರಿಜನಂ ಕಂಡು ಪೇೞೆ ಗಾಂಧಾರಿ ಮನದೊಳಳ್ಕಿ ಬಳ್ಕಿ ನಸೆಕೊಸೆವೋಗಿ

ಮೃಗಧರಕುಲಲಕ್ಷ್ಮೀವ-<br>
ಲ್ಲಿಗೆ ಪೆಱರಾರ್ ನೀನೆ ಮುನ್ನ [1][ಡರ್ಪನಲಿ]ರ್ದಯ್[1] |<br>
ಮಗನೆ ಲಯಕಾಲ ಭೀಮೋ-<br>
ರಗನುರಗಪತಾಕ ನಿನ್ನುಮಂ ನುಂಗಿದನೇ || ೧

ಎಮಗಂಧಯಷ್ಟಿಯಾಗಿ-<br>
ರ್ದೆ ಮಗನೆ ನೀನುಳ್ಳೊಡೆಲ್ಲ[2][ರೊ]ಳರೆಂದೀ[2] ನಿ- |<br>
ನ್ನುಮನಿರಿಸದೆ ಕುರುವಂಶಾ-<br>
ನಿಮಿತ್ತರಿಪು ಪಾಶಪಾಣಿ ಸವಿನೋಡಿದನೇ || ೨

ಗುರುಚರಣಂಗಳ್ಗೆ ಱಗದೆ<br>
ಪರಕೆಯನಾದರದಿನಾಂತು ಕೊಳ್ಳದೆ ಮೋಸಂ- |<br>
ಬೆರಸಿರ್ಪುದು ನಿನಗುಚಿತಮೆ<br>
ಗುರುವಿನಯಮನೇಕೆ ಮಱೆದೆ ಕುರುಕುಲತಿಲಕಾ || ೩

ಮಡಿದೀ ದುಶ್ಶಾಸನನೇಂ[3]<br>
ನುಡಿಯಿಸುವನೊ ಕುರುನರೇಂದ್ರ ದುರ್ಮರ್ಷಣ[4]ನೇಂ[4] |<br>
ನುಡಿಯಿಸುವನೊ ದುಷ್ಕರ್ಣಂ<br>
ನುಡಿಯಿಸುವನೊ ನೀನುಮುಸಿರದಿರ್ಪುದೆ ಮಗನೇ || ೪

---

1 ಸ್ವೀಪಾ = (ಅ) ; ದರ್ಪನಿರ್ದೈ (ನ), ನ ××× ದಿರ್ಪ್ಪೈ (ಮ). 2 ಮೆಳರೆಂದಿ (ನ), ಮೊಳ[ವೆಂದಿರೆ] (ಅ). 3 ನುಂ (ನ, ಅಪಾ). 4 ಮೋಣ್ (ನ, ಅಪಾ).

ಎಂದು ಗಾಂಧಾರಿ ವಿಪ್ರಲಾಪಂಗೆಯ್ಯೆ ಧೃತರಾಷ್ಟ್ರಂ ತನ್ನ ನಂದನನ ಕಾಲ ಮೇಲೆ ಕವಿದು ಬಿೞ್ದು

ಹಾ ಕುರುಕುಲಚೂಡಾಮಣಿ
ಹಾ ಕುರುಕುಲಚಕ್ರವರ್ತಿ ಹಾ ಸಕಲಧರಿ-|
ತ್ರೀಕಾಂತ ನಿನ್ನುಮಂ ಪರ-
ಲೋಕಕ್ಕಟ್ಟಿದನೆ ಕಾಯ್ದು ಮಾ[1]ಯ್ದ[1] ವಿಧಾತ್ರಂ ‖ ೫

ಎಂದು ಕರುಣಾಕ್ರಂದಸಂಗೆಯ್ದು ಗುರುಜನಂಗಳ ಸರಮಂ ಸಂಜಯಂ ಮಾಣಿಸಿ ಕರ್ಣದುಶ್ಶಾಸನಾದಿಗಳ ಸಾವಿನೊಳ್ ಶೋಕೋದ್ರೇಕದಿಂ ಮೂರ್ಛಾಗತನಾಗಿರ್ದಪಂ ಈಗಳೆ ಚೇತರಿಸುಗುಂ ಅನ್ನೆಗಂ ವಿಪ್ರಲಾಪಮನುಪಸಂಹರಿಪುದೆನೆ ಸಮಾಹಿತಾಂತಃಕರಣರುಮಾಗಿ

ಕುರುಕುಲಚೂಡಾಮಣಿ ನಿಜ-
ಗುರುಗಳ ನಯನಾಂಬು ತಳಿವ ಜಲಮಾಗಿರೆ ತ-|
ದ್ಗುರು [2]ಜನದೀರ್ಘಶ್ವಾ[2]ಸಮೆ
ಪರಿ[3][ವೀ]ಜನ[3]ಮಾಗೆ ಮೂರ್ಛೆಯಿಂದೆೞ್ಚತ್ತಂ ‖ ೬

ಅಂತು ಮೂರ್ಛೆಯಿಂದೆೞ್ಚತ್ತು ನಿಜಜನನೀಜನಕರಂ ಕಂಡು ಲಜ್ಜಾಭರದಿಂ ಶಿರಮನಾನತಂ ಮಾಡೆ ಸಂಜಯಂ ಧೃತರಾಷ್ಟ್ರಂಗಂ ಗಾಂಧಾರಿಗಂ ನಿಜತನೂಜನಪ್ಪ ರಾಜರಾಜಂ ನಿಮಗೆ [4]ವಿನಯ[4]ವಿನಮಿತೋತ್ತಮಾಂಗನಾದಂ ಅವಧರಿಸುವುದು ಎನೆ ತದೀಯವಚನಾಮೃತಸ್ಪರ್ಶನದಿಂದಾನಂದಿತಚಿತ್ತರಾಗಿ ತಡವರಿಸಿಯುಂ ತೆಬ್ಬರಿಸಿಯುಂ ತೆಗೆದಪ್ಪಿಯುಂ ಮನಃಕ್ಷತಶರೀರನಂ ಪರಮಾಶೀರ್ವಚನಶತಸಹಸ್ರಗಳಿಂ ಪರಸಿ ಪುನಃಪುನರಾಲಿಂಗನಂಗೆಯ್ದು ಕಿಱಿದಾನುಂ ಬೇಗದಿಂ ವಿಗತಪರಿಜನಂಮಾಡಿ

---

[1] ಯ್ದು (ನ, ಅಪಾ). [2] ಸ್ವೀಪಾ =(ಮ); ಗಳ ದೀರ್ಘೋಚ್ಛ್ವಾ (ನ, ಅ).
[3] ಘೋಷಮು (ನ, ಅ), ವಜನ (ಮ). [4] ಸ್ವೀಪಾ =(ನ); (ಅ) ದಲ್ಲಿ ಇಲ್ಲ.

ಯಮಸುತನಿಂಬುಕೆಯ್ವನೆಮಗಿನ್ನುಮೊಡಂಬಡು ಕಂದ ಸಂಧಿಯಂ
ಸಮಗೊಳಿಸಲ್ಕೆ ಸಂಜಯನನಟ್ಟುವೆ ಭೀಮನೊಳಾದ ಬದ್ಧವೈ-|
ರಮನುಟಿ ನೋಡದಿರ್ ಸುತಸಹೋದರದುಃಖಮನೀವುದರ್ಧರಾ-
ಜ್ಯಮನವರ್ಗೆಂದು [1]ಕಾಲ್ವಿಡಿದು[1] ಬೇಡಿದನಂಧನೃಪಾಲ ಪುತ್ರನಂ ‖ ೭

ಅಂತು ಕುರುನರೇಂದ್ರನಂ ಅಂಧನರೇಂದ್ರನಭ್ಯರ್ಥಿಸಿ

ಶ್ರೀವನಿತೆಗೆ ನಿಜವಿಜಯ-
ಶ್ರೀವನಿತೆಯೆ ಸವತಿಯಾಗೆ ರಿಪುನೃಪರಂ ಶೌ-|
ರ್ಯಾವಷ್ಟಂಭದೆ ಗೆಲ್ದ ಜ-
ಯಾವಸಥನಸಾಧ್ಯನಲ್ತೆ ಸಾಹಸಭೀಮಂ ‖ ೮

ಅದಱಿನಾತನೊಳಪ್ಪ ಸಮರಾನುಬಂಧಮಂ ಮಾಣ್ಬುದು ಎನ್ನೆಂಬುದ ನಿಂಬುಕಯ್ವುದು ಎಂದ ಧೃತರಾಷ್ಟ್ರನ ನುಡಿಯಂ ಗಾಂಧಾರಿ ಸಮಭ್ಯರ್ಥಿಸಿ ತಾನುಂ ಪ್ರಾರ್ಥಿಸಿ

ಪರಿಣತವಯಸರೆಮಿರ್ಕ-
ಣ್ಗುರುಡರೆಮೆಮಗಿಂಬುಕಯ್ವುದುಚಿತಂ ನಿನ್ನೀ |
ಗುರು ನುಡಿದ ನುಡಿಗೊಡಂಬಡು
ಗುರುವಚನಮಲಂಘನೀಯಮೆಂಬುದು ಮಗನೇ ‖ ೯

ಸಮರವ್ಯಾಪಾರಂ ಮಾ-
ಣ್ದು ಮಗನೆ ನಿಜಶಿಬಿರದತ್ತ ಬಿಜಯಂಗೆಯ್ ಸ-|
ತ್ತ ಮಗಂದಿರ್ ಸತ್ತರ್ ನೀ-
ನೆಮಗುಳ್ಳೊಡೆ ಸಾಲ್ವುದವರನಿಂ [2]ತಂದ[2]ಪೆವೇ ‖ ೧೦

ಎಂದು ತನ್ನ ಮತ್ತಿನ ಮಕ್ಕಳಂ ನೆನೆದು ಗಾಂಧಾರಿ ದುಃಖಂಗೆಯ್ಯೆ ಸಂಜಯಂ ಜಡಿದು

---

[1] ಕೆಯ್ಮುಗಿದು (ಅಇ). [2] ಸ್ವೀಪಾ = (ಅ, ಅಪಾ) ; ಕಂಡ (ನ).

ಪ್ರಿಯಸುತನಂ ಬಂದುಂ ಸಂ-
ತಯಿಸುವುದದುಗೆಟ್ಟು ನೀನೆ [1][ಗಳ][1] ಶೋಕಾಕ್ರಾಂ-|
ತೆಯುಮಾಗಿ ಶೋಕಿಸಲ್ ಸಂ-
ತಯಿಸುವರಾರಂಧನೃಪತಿಯಂ ನೃಪತಿಯುಮಂ ‖ ೧೧

ಎಂಬುದುಂ ವೃದ್ಧರಾಜಂ ಕುರುರಾಜಂಗಭಿಮುಖನಾಗಿ

ವೀರ[2]ಶ[2]ತಜನನಿಗೀ ಗಾಂ-
ಧಾರಿಗೆ [3]ದುಃಖಶತ[3]ಜನನಿವೆಸರಾಯ್ತೀಗಳ್ |
ಕೌರವಪತಿ ದುಃಖಮಹಾ-
ಭಾರಮನಾಂತಾಯಸಕ್ಕೆ ಗುಱಿಯಾದುದಱಿಂ || ೧೨

ಭವದನುಜಕ್ಷಯಮಂ ಧಾ-
ತ್ರಿವಲ್ಲಭಂ ಕಂಡು ಸಂಧಿಮಾಡಲ್ ಶೋಕಾ|
[4][ರ್ತಿ]ವಹಂ ಬಗೆವಂ[4] ಧರ್ಮಜ-
ನವ[5]ನಾ ಕೃತಕ[5]ಪ್ರತಿಜ್ಞೆಯಂ ಕೇಳ್ದಱಿಯಾ || ೧೩

ಸಮರದೊಳದೃಷ್ಟವಶದಿಂ
[6]ಸಮ[6]ವಾಯಂ ಸಾಯೆ ನಾಲ್ವರನುಜರೊಳೊರ್ವಂ |
ಯಮ[7]ಭವ[ನಾತಿಥಿಯ][7]ಪ್ಪಂ
ಯಮಸಂದನನಡಱಿನಾ ನೃಪಂ[8]ಗಂ [ಭ][8]ಯಮೇ || ೪೪

ಎಂದು ನುಡಿದ ನರೇಂದ್ರನ ನುಡಿಗೆ ಸಂಜಯನೊಡಂಬಟ್ಟು

ನೃಪಪತಿಯುಕ್ತಮಿದಂ ನೀಂ
ನೃಪ ಕಯ್‌ಕೊಳ್ ನಿನ್ನ ತಂದೆಯೆಂದುದನೆನೆ ಭೂ- |

---

[1] ಸ್ವೀಪಾ=(ಅ) ; ಗುಣ (ನ, ಅಪಾ). [2] ಸ್ವೀಪಾ=(ಮ, ಟ) ; ಸು (ನ, ಅ). [3] ಸ್ವೀಪಾ=(ಟ) ; ಶತದುಕ್ಖ (ನ), [ಸುತ] ದುಃಖ (ಅ). [4] ನಿವಹಂ ಬಗೆವಂ (ನ, ಅ), ಗೆಯಲ್ (ಮ). [5] ರು ಮಹಾ (ಮ) ; [ನ ಕೃತೋಗ್ರ] ? [6] ಸಾವೊ (ನ), ಸಾವು (ಅ೧ಪಾ). [7] ಭರನತೀತನ (ನ, ಅ೩), ಭವನತೀತನ (ಅ೧). [8] ಸಂಶ (ನ, ಅ), ಗಂ ಜ (ಮ, ಅ೩ಪಾ).

ಮಿಪಸೆಂದಂ ನಿಮ್ಮಯ ಪೂ-
ರ್ವಪಕ್ಷಮೆ[1]ನಗಾ[ಯ್ತು][1]ದೇ ವಲಂ ಸಿದ್ಧಾಂತಂ ‖ ೧೫

ತನ್ನೊಡವುಟ್ಟಿದರ್ ಪೆಸರ ನಾಲ್ವರೊಳೊರ್ವರುಮಿಲ್ಲದಿರ್ದೊಡಂ
ತನ್ನ ಸುವಂ ನಿವೇದಿಸುವಸಗ್ನಿಗೆ ಧರ್ಮತನೂಜನೆಂದೊಡಾ- |
ನೆನ್ನೊಡವುಟ್ಟಿದರ್ ಪೆಸರ ನೂರ್ವರೊಳೊರ್ವರುಮಿಲ್ಲ ಬಾಳ್ವೆನೆಂ-
ಬೆನ್ನ ಬಿಯಾಸೆಯಂ [2]ಬಿಸುಡಿಮೆ[2]ನ್ನ ವರಾದುದನಾಗದಿರ್ಪೆನೇ ‖ ೧೬

ಸಾದಿಸುವೆಂ ಫಲ್ಗುಣ[3][ನಿಂ][3]
ಸಾದಿಸುವೆಂ ಪವನಸುತನ ಬಸಿಱಿಂ [4]ಹಾ[4] ಕ- |
ರ್ಣಾ ದುಶ್ಶಾಸನ ತೆಗೆವೆಂ
[5]ನಿರ್ದೋಷಿ ಬಟಿಕ್ಕೆ[5] ಯಮಜನೊಳ್ ಪುದುವಾಳ್ವೆಂ ‖ ೧೭

ಧರೆಯಂ ಪಚ್ಚಾಳ್ದಿರ್ ಪಾಂ-
ಡುರಾಜಸುಂ ನೀ[6]ಮು[6]ಮದನೆ ಕೈತವದಿಂ[7]ದ- |
ಯ್ವ[7]ರ ಕಯ್ಯೊಳೆಟೆದುಕೊಂಡುಂ
ಕುರು[8]ರಾಜಂ[8] ಮತ್ತಮವರ್ಗೆ ಪುದು[9]ವಿತ್ತಪ[9]ನೇ ‖ ೧೮

ಆಂ ಮಗನೆನಾಗೆ ಧರ್ಮಜ-
ನೇಂ ಮಗನಲ್ಲನೆ ಬಟಿಕ್ಕೆ ನೀಮುಂ ತಾಮುಂ |
ನಿಮ್ಮೊಳ್ ನೇರ್ಪಡುಗಿಡದೆ ಸು-
ಖಂ ಮುನ್ನಿನ ತೆಱದೆ ಬಾಳ್ವುದಾಂ ಬೆಸಕ[10]ಯ್ವೆಂ[10] ‖ ೧೯

ಬಿಡಿಮೆನ್ನನೆಂದು ಮುಂದಿ-
ರ್ದಡಿಗೆಱಗಿದ ಮಗನನಪ್ಪಿಕೊಂಡಶ್ರುಜಲಂ |

---

[1] ಮಗಾದು (ನ, ಅ), ನಗಾಯ್ತು (ಮ). [2] ಬಸುಟಿಪೆ (ನ), ಬಸುಱಿಪೆ (ಅ೧ಪಾ), ಬಿಸುಡಿಮಿ (ಅ೩). [3] ಸ್ವೀಪಾ — (ಟ) ; ನಂ (ನ, ಅ). [4] ದಾ (ನ). [5] ನಿರ್ದೋಷಿಗ ಬಳಿಕ್ಕೆ (ನ), ನಿರ್ವಾದಿಗಳೊಳ್ ಬಳಿಕ (ಮ), ನಿರ್ದೋಷಿಗಳಿಕ್ಕೆ (ಅ). [6] ನು (ಅ, ಮ). [7] ದಮ (ನ, ಅ೧). [8] ಪರಿವೃಢ (ಮ). [9] ಮಾಡುವವೆ (ನ), ಮಾಡುವ (ಅ೧). [10] ಯ್ಯೆಂ (ಅ೩).

ಗುಡುಗುಡನೆ ಸುರಿಯೆ ನಾಲಗೆ
ತಡತಡವರೆ ನುಡಿದನಂಧನೃಪನಾ ನೃಪನಂ ‖ ೨೦

ನೀನೆಂತುಮೆಮ್ಮ ಪೇೞ್ವುದಂ ಕಯ್ಕೊಳ್ಳದೆ [1]ಛಲ[1]ಮನೆ ಕಯ್ಕೊಂಡು ಪಾಂಡುನಂದನರೊಳ್ ಕಾದಿದಲ್ಲದೆ ಸಂಧಿಯನೊಡಂಬಡೆಯಪ್ಪಿಸಂ ನೀನೆ ಮಗನಿತನೊಳ್ಳಿ ಕಯ್ಯಲ್ವೇೞ್ಪುದು ನೆಗೞ್ವ ಕಜ್ಜಮಾವುದುಮಂ ನಿಮ್ಮಜ್ಜನೊಳಾಲೋಚಿಸಿ ನೆಗೞ್ವುದು ಅಲ್ಲಿಗೆ ಬಿಜಯಂಗೆಯ್ವುದೆನೆ ಮಹಾಪ್ರಸಾದಮೆಂದು ಅದನೊಡಂಬಟ್ಟು ಅಂತೆ ಗೆಯ್ವೆನೆಂದು ಗುರುಜನಮಂ ಬೀೞ್ಕೊಂಡು ಅವರಂ ಬೀಡಿಂಗೆ ಪೋಗಲ್ವೇೞ್ದು [2]ಕಿ[2]ಱಿದು ಪೊೞ್ತು ಶೋಕಾನುಬಂಧದೊಳ್ ಕೋಪಾನುಬಂಧಮುಂ ಸಮರಾನುಬಂಧಮುಂ ಅಂತರಿಸಿರ್ದು ಸಂಜಯದ್ವಿತೀಯನುಂ ನಿಜಭುಜಗದಾಸಹಾಯನುಂ ಆಗಿ ಸಂಗ್ರಾಮಭೂಮಿಯೊಳಗನೆ [ಬರುತುಮಿರ್ದಂ]

---

[1] ವೈರ (ಅ). [2] ಸ್ವೀಪಾ = (ಮ, ಅ೩) ; ಪಿ (ನ, ಅ೧).

# ೫. ದುರ್ಯೋಧನವಿಲಾಪಂ

[ಅಂತು] ಬರ್ಪಲ್ಲಿ -

ಉಡಿದಿರ್ದ ಕಯ್ದು ನೆತ್ತರ
ಕಡಲೊಳಗಡಿಗಡಿಗೆ ತಳಮನುರ್ಚುತ್ತಿರೆ ಕಾ-|
ಲಿಡಲೆಡೆವಡೆಯದೆ ಕುರುಪತಿ
ದಡಿಗವೆಣಂಗಳನೆ ಮೆಟ್ಟಿ ಮೆಲ್ಲನೆ ನಡೆದಂ ‖ ೧

ಹಲಚಕ್ರಾಂಕುಶರೇಖಾ-
ವಿಲಸಿತಪದತಳಕೆ ಮಾಡೆ [1]ಪುನರು[1]ಕ್ತತೆಯಂ |
ಹಲಚಕ್ರಾಂಕುಶ ಕುರುಕುಲ-
ತಿಲಕಂ ಕುಸಿಕುಸಿದು ಮೆಲ್ಲಮೆಲ್ಲನೆ ನಡೆದಂ ‖ ೨

ಆಗಳದಂ ಸಂಜಯಂ ಕಂಡು ಮನ್ಯೂದ್ಗತಕಂಠನುಮಾಗಿ

ವಿನುತವಿರೋಧಿಮಂಡಳಿಕಮೌಳಿವಿಘಟ್ಟಿತಪಾದಪೀಠ ಕಾಂ-
ಚನಕಮಳಾಯಮಾನಮಿವು ನಿಮ್ಮಯ ಮೆಲ್ಲಡಿ ಭಿಂಡಿವಾಳದಂ-|
ಬಿನ ಕರವಾಳ ಕಕ್ಕಡೆಯ ಕೊಂತದ ಧಾರೆಗಳುರ್ಚೆ ಸಂಯುಗಾ-
ವನಿತಳದೊಳ್ ವಿಧಾತ್ರವಶದಿಂ ನಿಮಗಂ ನಡೆವಂತುಟಾದುದೇ ‖ ೩

ಎಂದು ಗಳಗಳನೆ ಕಣ್ಣ ನೀರಂ ಸೆರವುವ ಸಂಜಯನಂ ಅಭಿಮಾನಧನಂ ಸುಯೋಧನಂ [2]ಮಾಣಿ[2]ಸಿ

ತನುಜಾನುಜರ ವಿಯೋಗದ
ಮನಃಕ್ಷತಂ ನೋಯಿಸಲ್ಕೆ ನೆಱೆಯವು ಸಮರಾ-|
[3]ವನಿಯೊಳುಡಿದಿರ್ದ ಕಯ್ದುಗ-
ಳ[3]ನಿಸುಂ ನೋಯಿಕುಮೆ ವಜ್ರಮನಸಪ್ಪೆನ್ನಂ ‖ ೪

---

[1] ಸ್ವೀಪಾ = (ಮ) ; ನವರ (ನ, ಅ). [2] ಸ್ವೀಪಾ = (ಮ) ; ಸಂತೈ (ನ, ಅ).
[3] ವನಿಜಾತಂ ಚರಣಕ್ಷತಮಿ (ಮ).

ಎಂದು ಕುರುಕುಲಮಾನಸ್ತಂಭಂ ಧೈರ್ಯಾವಷ್ಟಂಭನಾಗಿ ಬರುತ್ತುಂ

ಮೊನೆಯೊಳಿದಿರ್ಚಿ ಸತ್ತ ಭಟನಂ ಗಜ[1]ದಂತದೊ[1]ಳಣ್ಮಿ ಸತ್ತ ಬೀ-
ರನನದಟಿಂ ಸಹಸ್ರಭಟರಂ ರಣದೊಳ್ [2]ಪೆಣೆದಿ[2]ಕ್ಕಿ ಸತ್ತ ಗಂ- |
ಡನನಱಸುತ್ತೆ ಬರ್ಪ ಸುರಸುಂದರಿಯರ್ಕಳನೀಕ್ಷಿಸುತ್ತುಮೊ-
ಯ್ಯನೆ ನಡೆದಂ ಪರಾಕ್ರಮನಿಕೇತನನಾ ಫಣಿರಾಜಕೇತನಂ ‖ ೫೯

[ಅಂತು] ಬರೆವರೆ

ಗುರುವಿನ ನೆತ್ತರಂ ಕುಡಿವೆನಪ್ಪೊಡವಂ ದ್ವಿಜವಂಶಜಂ ನಿಜಾ-
ವರಜನ ನೆತ್ತರಂ ಕುಡಿವೆನಪ್ಪೊಡೆ ಭೀಮನೆ ಪೀರ್ದನೆಯ್ದೆ ಭೀ- |
ಷ್ಮರ ಬಿಸುನೆತ್ತರಂ ಕುಡಿವೊಡಿನ್ನುಮೊಳಂ ಕುರುರಾಜ ನಿನ್ನ ನೆ-
ತ್ತರ ಸವಿಸೋಲ್ಪಿಸಂ ಬಯಸಿ [3]ಬಾತ[3]ಪೆನೆಂದುದದೊಂದು ಪುಲ್ಮರುಳ್ ‖ ೬೦

ಅದಂ ಕೇಳುತ್ತುಂ ಬರೆವರೆ

ಕದನದೊ[4][ಳು]ಣ್ಮಿ ದು[4]ಳ್ಮಿದುಳ ಕರ್ದಮದೊಳ್ ಜಗುಳ್ದಂಘ್ರಿ ಜಾಱುವೋ-
ಪುದುಮೊಡನಿರ್ದ ಸಂಜಯನಿಳೇಶ್ವರನಂ ಪಿಡಿದೂರುಭಂಗಮಾ- |
ಗದೆ ವಲಮೆಂದೊಡಾಗದೆನೆ ಪುಲ್ಮರುಳೊಂ[5]ದೆಡೆವೋ[5]ಗಿ ಭೀಮಕೋ-
ಪದೆ ನಿನಗೂರುಭಂಗಭಯಮಾಗದೆ ಪೋಕುಮೆ ಕೌರವೇಶ್ವರಾ ‖ ೬೧

ಎಂದು ನುಡಿಯೆ ತನಗೆ ಕರ್ಣಕಠೋರಮಾಗೆ ನುಡಿದ ಪಿಶಾಚಾಳಾಪಮಂ ತನಗೆ ಮುನ್ನಂ ಮೈತ್ರೇಯರ್ ಕೊಟ್ಟ ಶಾಪಮಂ ನೆನೆನೆನೆದು ಮನದೊಳ್ ಕಟ್ಟುಕಡೆದು ತಾಂ ಮಹಾಸತ್ವನಪ್ಪುದಱಿಂದವಧಾರಿಸದೆ ಮರುಳ ಮಾತಿನೊಳ್ ಪುರು[6]ಳೇನೆಂ[6]ದರಸಂ ಪೋಗೆವೋಗೆ

ಅರಗಿನ ಮಾಡದೊಳ್ ವಿಷದ ಲಡ್ಡುಗೆಯೊಳ್ ಕೊಲ[7]ಲೊಡ್ಡಿ ಬದ್ಧ[7]ಮ-
ತ್ಸರದೊಳೆ ವೈರಮಂ [8]ಪದೆ[8]ದು ಭೀಮನನಿಂತಿನಿತರ್ಕೆ ತಂದ ನೀಂ |

---

[1] ಸ್ವೀಪಾ=(ಮ) ; ದೃಷ್ಟಿಯೊ (ನ, ಅ). [2] [ಪೊಣರ್ದಿ] (ಮ, ಅ). [3] ಬೀತ (ಅ), ಬಂದ (ಮ). [4] ಳಣ್ಮಿದೊ (ನ, ಅ), ಳಣ್ಮಿದು (ಮ). [5] ದರೆಯಾ (ಮ). [6] ಳಿಲ್ಲಿಂ (ಅ). [7] ಲಿಂದು ಬಂದು (ಮ), ಲಿಂದು ಬಂಧು (ಅ೩). [8] ಸ್ವೀಪಾ=(ಅ೩) ; ನೆನೆ (ನ, ಅ೧), ಪಡೆ (ಮ).

ಮರು[1]ಳಯೊ[1] ಭೂತಕೋಟಿವೆರಸಾಹವರಂಗದೊಳಾಡುತಿರ್ಪ ತಾಂ
ಮರು[2]ಳೆನೊ[2] ನೋೞ್ಪಮಿರ್ವರ ಮರುಳ್ತನಮುಂ ಫಣಿರಾಜಕೇತನಾ || ೮

ನುಡಿಯದೆ ಪೋಗಲೀಯೆನೆಲೆ ಪೋದೊಡೆ ಧೂರ್ಜಟಿಯಾಣೆ ಮೀಱಿ ಪೋ-
ದೊಡೆ ಕಲಿಭೀಮನಾಣೆಯೆನೆ ಧೂರ್ಜಟಿಯಾಣೆಗೆ ನಿಂದು ಭೀಮನೆಂ- |
ದೊಡೆ ಮುಳಿದಟ್ಟಿ ಕುಟ್ಟಲರಸಂ ಗದೆಯಂ ಕೊಳೆ ಭೂತಕೋಟಿಯುಂ
ಬಡಿಗೊಳೆ ಸಂಜಯಂ ನಯದೆ ಬಗ್ಗಿಸಿದಂ ಫಣಿರಾಜಕೇತುವಂ || ೯

ಅಂತು ಬಹುಳಪ್ರ[3]ತ್ಯ[ವಾ]ಯಪ್ರದೇಶಂ[3]ಗಳನೆಂತಾನುಂ ಕಳೆದು ಪೋಗೆ ಪೋಗೆ

ಮುನಿದೆಯ್ತಂದಿಲ್ಲಿ ಭೀಮಂ ಭವದನುಜನನಾ ದ್ರೌಪದೀದ್ರೋಹನಂ ಕೊಂ-
ದನೆನಲ್ಕಾಂ ಕೇಳಲಾಱೆಂ ಪರಿಭವಮನದಂ ಮುಂದೆಮುಂದೆಂದು ಬಾಷ್ಪಾಂ-|
ಬುನಿಮಗ್ನಂ ಭಗ್ನಚಿತ್ತಂ ತಲೆಯನೆಱಗಿ ಬಿಲ್ಲೋಜನೆಲ್ಲಿರ್ದನೆಲ್ಲಿ-
ರ್ದನೊ ಭೀಷ್ಮಂ ನೋಡುವೆಂ ತೋಱೆನೆ ಕುರುಕುಲನಂ ಸಂಜಯಂ
ಕೊಂಡುಪೋದಂ || ೧೦

ಅಂತು ಪೋಗೆ

ಇಭಶೈಲಂಗಳನೇಱಿಯೇಱಿ ರುಧಿರಸ್ರೋತಂಗಳಂ ದಾಂಟಿ ದಾಂ-
ಟಿಭ[4]ದೋರ್ನಿರ್ಲ[4]ಲತಾಪ್ರತಾನ ವಿಪಿನವ್ರಾತಂಗಳೊಳ್ ಸಿಲ್ಕಿ ಸಿ-|
ಲ್ಕಿ ಭರಂಗೆಯ್ದುಱದೆಯ್ದಿ ಸಂಜಯಶಿರ[ಃ]ಸ್ಕಂಧಾವಲಂಬಂ ಕುರು-
ಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣನಂ ದ್ರೋಣನಂ || ೧೧

ಅಂತು ನಿಸರ್ಗದುಷ್ಟಧೃಷ್ಟದ್ಯುಮ್ನಕರವಿಲುಳಿತಮೌಳಿಯಾಗಿರ್ದ ಭಾರದ್ವಾಜನಿರವಂ ರಾಜರಾಜಂ ನೋಡಿ

---

[1] ಳುನೊ (ನ), ಳಿಯೊ (ಮ), ಳನೊ (ಅ), ಳಿಯೊ (ಟ). [2] ಳನೊ (ನ, ಅ), ಳಿಯೊ (ಮ. ಟ). [3] ಸ್ತೀಪಾ = (ಅ) ; ತ್ಯಯಪ್ರದೇಶಂ (ನ), ತ್ಯಾಳಾಪಂ (ಮ). [4] ದೋನಿಕ (ನ), ಭಿಸ್ರಾಂತ (ಮ).

ಅಱಿಯೆಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ
ನೆಱೆಯನಿದಿರ್ಚಿ ನಿಮ್ಮೊಡನೆ ಕಾದಿ ಗೆಲಲ್ಕದು ನಿಮ್ಮ ಪೇೞ್ಕೆಯೆಂ-।
ದಱಿಯೆನಿದೆನ್ನ ಕರ್ಮ[1]ವಶ[1]ಮೆಂದಱಿಯೆಂ ನಿಮ[2][ಗೆಂ]ತು[2] ಸಾವು[3]ಮೀ[3]-
ತೆಱದಿನಕಾರಣಂ ನೆಱೆಯೆ ಸಂಭವಿಸಿರ್ದುದೊ ಕುಂಭಸಂಭವಾ ॥ ೧೨

ಎಂದು ದುಃಖಂಗೆಯ್ದು

ಶರಸಂ[4]ದೋಹ[4]ಮನನ್ಯಸೈನ್ಯದೊಡಲೊಳ್ ಬಿಲ್ಬಲ್ಮೆಯಂ ತನ್ನ ಶಿ-
ಷ್ಯರ ಮೆಯ್ಯೊಳ್ ನಿಜಕೀರ್ತಿಯಂ ನಿಖಿಳದಿಕ್ಚಕ್ರಂಗಳೊಳ್ ಚಿತ್ತಮಂ।
ಹರಪಾದಾಂಬುಜಯುಗ್ಮದೊಳ್ ನಿಱಿಸಿದಂ ಚಾಪಾಗಮಾಚಾರ್ಯರೊಳ್
ದೊರೆಯಾರೆಂಬಿನಮುಣ್ಮಿ ಸತ್ತಳವಿದೇಂ ದ್ರೋಣಂಗೆ ಮೆಯ್ವೆತ್ತುದೋ ॥

ಎಂದು ಕುಂಭಸಂಭವನಂ ತ್ರಿಃಪ್ರದಕ್ಷಿಣಂಗೆಯ್ದು ಬರುತ್ತುಂ ಆ ದಿಶಾ
ಭಾಗದೊಳ್

ಅರೆಮುಗಿದಿರ್ದ ಕ[5]ಣ್ಮ[ಲರ][5]ಲರ್ದ ಮೊಗಂ ಕಡಿವೋದ ಕಯ್ಯುಮಾ-
ಸುರತರಮಾಗೆ ಕರ್ಚಿದವುಡುಂ ಬೆರಸನ್ಯಶರಪ್ರಹಾರ ಜ-।
ರ್ಜರಿತಶರೀರನಾಗಿ ನವಲೋಹಿತವಾರ್ಧಿಯೊಳಟ್ಟು ಬಿಟ್ಟನಂ
ಕುರುಪತಿ ನೋಡಿ ಕಂಡನಭಿಮನ್ಯುಕುಮಾರನನಾಜಿವೀರನಂ ॥ ೧೪

ಅಂತಾತನನಹಿಕೇತನಂ ನೋಡಿ

ಗುರು ಪಣ್ಣಿದ ಚಕ್ರವ್ಯೂ-
ಹರಚನೆ ಪೆಱಗ‌ರಿದು ಪುಗ[6]ಲ[6]ದಂ ಪೊಕ್ಕು ರಣಾ-।
ಜಿರದೊಳರಿನೃಪರನಿಕ್ಕಿದ
ನರಸುತ ನಿನ್ನೊರೆಗೆ ದೊರೆಗೆ ಗಂಡರುಮೊಳರೇ ॥ ೧೫

---

[1] ಫಲ (ಮ).  [2] ನಿಂನು (ನ), ಗಿಂತು (ಮ, ಅಃ), ಗಿನ್ನು (ಅ೧).  [3] ಮೋ (ಅ).
[4] ಸ್ವೀಪಾ=(ಮ, ಅಃಪಾ), ದಾನ (ನ), ಧಾನ (ಅ).  [5] ಣ್ಗಳುಮ (ನ, ಅ),
ಣ್ಮಲಿ× (ಮ).  [6] ಸ್ವೀಪಾ=(ಮ); ಲಿ (ನ, ಅ).

ಪಲರಿರ್ದು ಕಾದಿದರ್ ಮೆಯ್-
ಗಲಿಗಳ್ [1][ತ]ನ್ನೊಂ[1]ದೆ ಮೆಯ್ಯೊಳಂ ತವೆ ಕೊಂದಯ್ |
ಪಲರಂ ನಿನ್ನಂ ಪೆತ್ತಳ್
ಮೊಲೆಪೆತ್ತಳೆ ವೀರಜನನಿವೆಸರಂ ಪೆತ್ತಳ್ || ೧೬

ಅಸಮಬಲ ಭವದ್ವಿಕ್ರಮ-
ಮಸಂಭವಂ ಪೆಱರ್ಗೆ ನಿನ್ನ ನಾನಿತಂ ಪ್ರಾ-|
ರ್ಥಿಸುವೆನಭಿಮನ್ಯು ನಿಜಸಾ-
ಹಸೈಕದೇಶಾನುಮರಣಮೆಮಗಕ್ಕೆ ಗಡಾ || ೧೭

ಎಂದಾತ್ಮಗತದೊಳೆ ಬಗೆದು ಅಭಿಮನ್ಯುಗೆ ಕಯ್ಗಳಂ ಮುಗಿದು ಬರುತ್ತುಂ ತನ್ನ ಮಗನಪ್ಪ ಲಕ್ಷ್ಮಣಕುಮಾರನಂ [2]ನೆನೆದು ಮನ್ಯೂದ್ಗತಕಂಠನಾಗಿ ತದಾಸನ್ನಪ್ರ[2]ದೇಶದೊಳ್ ಕಂಡು

ಗಳಿತಶರಮಾಯ್ತು ಹಸ್ತಂ
ಗಳಿತರಣೋತ್ಸಾಹಮಾಯ್ತು ಹೃದಯಂ ನಯನಂ |
ಗಳಿತಾಶ್ರುವಾಯ್ತು ಕೌರವ-
ಕುಳತಿಲಕಂಗಾ ಕುಮಾರನಂ ಕಾಣಲೊಡಂ || ೧೮

ಅಂತು ಪುತ್ರಸ್ನೇಹ[3]ಕಾ[ತರ][3]ಹೃದಯನಾಗಿ ಗಾಂಧಾರೀನಂದನಂ ಭಾನುಮತೀನಂದನನ ವದನಾರವಿಂದಮಂ ನೋಡಿ

ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್ |
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ || ೧೯

---

[1] ನಿನ್ನೊಂ (ನ, ಅ೩), ನೀನೊಂ (ಅ೧), ಪನ್ನೊಂ (ಮ). [2] ಸ್ವೀಪಾ = (ಅ೩); ತತ್ಪ್ರ (ನ, ಅ), ನೆನನೆನೆದು ಮನ್ಯೂದ್ಗತಕಂಠನಾಗಿ ××× (ಮ). [3] ಸ್ವೀಪಾ = (ಅ); ಕಾರಣ (ನ, ಅಪಾ), ××× ಂತರ (ಮ).

ಎಂದಲ್ಲಿ ನಿಲಲಾಱದಾ ಪ್ರದೇಶದಿಂ ತಳರ್ದು ಬರೆವರೆ [ರಣದೊಳ್ ಮಡಿದ] ಶಲ್ಯನುಮಂ ಸಿಂಧುರಾಜನುಮಂ ಶಕುನಿಯುಮಂ [ಮತ್ತೆ ಪಲಂಬರ್ ನೃಪತಿಗಳುಮಂ] ಕಂಡು ಶೋಕಾಕುಲೀಕೃತಚಿತ್ತನಾಗಿ

[1]ಗುಣಿಗಳ್[1] ತ್ರಿಲೋಕಚೂಡಾ-
ಮಣಿಗಳ್ ಕೈಲಾಸಶೈಲ[2]ಕಲ್ಪ[ಕ][2]ಸುಭಟಾ- |
ಗ್ರಣಿಗಳ್ ಸೆರೆದೆನ್ನಯ ಕಾ-
ರಣದಿಂದೀ ನೃಪಸುತರ್ಕಳಟ್ಟಾಡಿದರೇ ‖ ೨೦

ಎಂದು ಪಶ್ಚಾತ್ತಾಪಂಗೆಯ್ಯೆ ಸಂಜಯಂ ಸಂತೈಸಿ [ಮುಂದೊಯ್ಯೆ] ಭೀಮಸೇನನ ಗದಾಪರಿಘಪ್ರಹರಣದಿಂ ರುಧಿರಪ್ರವಾಹವಶಗತನಾಗಿರ್ದ ಯುವರಾಜನಿರ್ದೆಡೆಯುಮಂ ಕುರುರಾಜನೆಯ್ದೆವಂದಾಗಳ್

ಪುಡಿಯೊಳ್ ಪೊರಳ್ಚಿಯುಂ ಮೆ-
ಯ್ಯಡಗಂ [3]ಕಿಱುಕಿಱಿದು ಕೊಱೆದು[3] ತಿಂದುಂ [4]ಗೊಲ್ಲಂ[4]- |
ಗುಡಿದುಂ ನೆತ್ತರಸೆಂತುಂ
ಹಿಡಿಂಬರಿಪು ತಣಿದನಿಲ್ಲ ದುಶ್ಶಾಸನನಂ ‖ ೨೧

ಎಂದು ಸಂಜಯಂ ಪೇೞೆ ಕೇಟಗಿ ಏಗೇಳ್ದು ಕಿಱಿದೆಡೆಯಂ ಪೋ[ಗಿ] ತನ್ನ ತಮ್ಮ [ನಿರ್ದಿರವಂ ಕಂಡು] ಸೈರಿಸಲಾಱದೆ

ನಡುವುಡಿವನ್ನ ಮೇಱಿ ಬರಿಯೆಲ್ವುಡಿವನ್ನೆಗಮೊತ್ತಿ ಮೆಟ್ಟಿ ಮೆ-
ಯ್ಯಡಗಡಗಾಗೆ ಮುನ್ನುರಮನಿರ್ಬಗಿಯಾಗಿರೆ ಪೋೞ್ದು ನೆತ್ತರಂ |
ಕುಡಿ[5]ದನ ನೆತ್ತರಂ ಕುಡಿಯದನ್ನೆಗ[5]ಮೆನ್ನ ಬಲೆಂತು ಪೋಕುಮೆಂ-
ದಡಿಗಡಿಗೞ್ತು ತನ್ನಣುಗದಮ್ಮನನೀಕ್ಷಿಸಿದಂ ಸುಯೋಧನಂ ‖ ೨೨

ಅಂತು ನಿಂದು ನೋಡಿ ಪಲುಂಬಿ ಪಲವಾಡಿ

---

[1] ಸ್ವೀಪಾ = (ಮ) ; ಗಣಿಸಲ್ (ನ, ಅ). [2] ಸ್ವೀಪಾ = (ಅ) ; ಕಲ್ಪಿತ (ನ, ಅಪಾ) [3] ಸ್ವೀಪಾ = (ಮ) ; ಕಿಱಿದ ಕೊಱೆದು (ನ) ; (ಅ) ಪಾಠಗಳು ಅಸಮಗ್ರ. [4] ಗೊಟ್ಟಂ (ಮ). [5] ಸ್ವೀಪಾ = (ಮ) ; ಯದನ್ನಕ (ನ), ಯದ ××× ನ್ನೆಗ (ಅ).

ನಿಜಜೀವಂ ಪರಲೋಕದೊಳ್ ನಿಜಮಹಾಮಾಂಸಂ ಪಿಶಾಚಾಸ್ಯದೊಳ್
ನಿಜರಕ್ತಂ ರಿಪುಕುಕ್ಷಿಯೊಳ್ ನಿಜಶಿರಂ ನಕ್ತಂಚರೀಹಸ್ತದೊಳ್ |
ನಿಜಕಾಯಂ ಕುರುಭೂಮಿಯೊಳ್ ನೆಲಸೆ ಗಾಂಧಾರೀಜ ದುರ್ಯೋಧನಾ-
ನುಜ ದುಶ್ಯಾಸನ ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್ ||

ನಿನ್ನಂ ಕೊಂದಂ ಗಡಮೊಳ-
ನಿನ್ನುಂ ಕೊಂದವನ[1]ನಿಕ್ಕಿ[1] ಕೊಲ್ಲದೆ ಮಾಣ್ದಾ-|
ನಿನ್ನುಮೊಳೆಂ [2]ಗಡ ಸಾಲದೆ[2]
ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ || ೨೪

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯಭೋ-
ಜನಮೆಂಬಿಂತಿವನುಂಡೆನಾಂ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ |
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂಡ್ ತಡಮಾಯ್ತುದೊಂದೆಡೆಯೊಳಂ ಹಾ ವತ್ಸ ದುಶ್ಯಾಸನಾ

ಎಂದು ವಿಪ್ರಳಾಪಂಗೆಯ್ದು

ಅನುಜನ ನೆತ್ತರನೀಂಟಿದ-
[3]ನ ನೆತ್ತರ[ಂ] ಜೀವ[3]ಸಹಿತಮೀಂಟದೆ ದುರ್ಯೋ-|
ಧನನೆಂಬ ಪೆಸರ್ಗೆ ಮುಯ್ಯಾಂ-
ಪೆನೆ ದುಶ್ಯಾಸನನ ಬನ್ನಮಂ ನೀಗುವೆನೇ || ೨೫

ಎಂದು ಪಿಂಗಾಕ್ಷಂ ಕೋಪಾರುಣೀಕೃತನೇತ್ರನಾಗಿ ತನ್ನ ತಮ್ಮನ ಕಳೇಬರಮಂ ನೋಡಲಾಱದೆ ಅಲ್ಲಿಂ ತಳರ್ದು

ಕರಿತುರಗನರಕಳೇಬರ-
ಕರಾಳ[4]ಸಂಘಟ್ಟ[4]ದಲ್ಲಿ ಬರೆವರೆ ಕಂಡಂ |

---

[1] ಸ್ವೀಪಾ = (ಮ) ; ನಿಳ್ಕಿ (ನ), ಸೀಳ್ಕಿ (ಅ). [2] ಗಂಡನಕ್ಕುಮೆ (ಮ), ಗಡ [ತಕ್ಕುದೆ] ?
[3] ಸ್ವೀಪಾ = (ಟ) ; ವನ ನೆತ್ತರ ಜೀವ (ನ, ಅ), ವನನಿಂದಾಪ್ರಾಣ (ಮ). [4] ರಣರಂಗ (ಮ, ಅ ೩)

ಸರಕರವಿಮುಕ್ತಶರಜ-
ರ್ಜರಿತಾಂಗನನಂಗರಾಜನಂ ಕುರುರಾಜಂ ‖ ೨೭

ಆಗಳದಂ ಸಂಜಯಂ ಕಂಡು 'ಗಂಡಸ್ಯೋಪರಿ ಸ್ಫೋಟಕಂ' ಎಂಬಂತೆ ನಿಜಪ್ರಿಯತನೂಜಾನುಜರ ಶೋಕದಿಂ ವಿಹ್ವಳೀಕೃತನಪ್ಪ ಭೂತಳೇಶ್ವರಂಗೆ ನಿಜಪ್ರಿಯಸಖನಪ್ಪ ಕರ್ಣನ ದರ್ಶನದಿಂ ದುಃಖಂ ಮಱು[1]ಕೊಳಿ[1]ಸುಗುಂ ಎಂದು ಮನದೊಳೆ ಬಗೆದಿರೆ

ನೆಗಪಿ ವರೂಥಮಂ ವಸುಧೆ ನುಂಗಿದುದಂ ಸಮಪಾದ[2]ದಾಸನಂ[2]
ಬಗೆಗೊಳೆ ತನ್ನ ಮುಂ ತೆಗೆದ [3]ಮುಷ್ಟಿಯೆ ದಕ್ಷಿಣ[3]ಕರ್ಣಮೂಲದೊಳ್ |
ಸೊಗಯಿಸೆ ಪಾಟಿಯುಂ ನೆಱಪದಾಳ್ದನ ಕಜ್ಜಮನೊಕ್ಕು ಸತ್ತರಂ
ನಗುವವೊಲಿರ್ದನಂಗಪತಿ ನೆಮ್ಮಿ ನಿಜೋನ್ನತಕೇತುದಂಡಮಂ ‖ ೨೮

ಅಂತಿರ್ದ ದಿನಕರತನೂಜನಂ ರಾಜರಾಜಂ ನೋಡಿ ಬಾಷ್ಪವಾರಿಧಾರಾಪೂರಿತಲೋಚನನುಂ ಮನ್ಯೂದ್ಗತಕಂಠನುಂ ಅಸಹ್ಯಶೋಕಾನಲದಹ್ಯಮಾನಾಂತಃಕರಣನುಮಾಗಿ

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಱದ ಬಱ- |
ಕ್ಕಾನುಂ ನೀನೆ ದಲೀಗಳ್
ನೀ[4]ನುಮಗಲ್ದೆ[4]ತ್ತವೋದೆಯಂಗಾಧಿಪತೀ ‖ ೨೯

ನಿನ್ನ ಮಗಂ ವೃಷಸೇನಂ
ತನ್ನ ಮಗಂ ಸತ್ತನಣ್ಮಿ ಲಕ್ಷ್ಮಣನುಂ ನೀ- |
ನೆನ್ನಂ ಸಂತೈಸುವುದಾಂ
ನಿನ್ನಂ ಸಂತೈಸೆ ಬಂದೆನಂಗಾಧಿಪತೀ ‖ ೩೦

---

[1] ಕಣಿ (ನ). [2] ಶೋಭೆಯಿಂ (ಮ). [3] ದಕ್ಷಿಣಮುಷ್ಟಿಯೆ (ಮ, ಅ೩).
[4] ಸ್ವೀಪಾ=(ಕಾವ್ಯಾವ, ೧೫೩); ನುಂ ಮಗುಳ್ದೆ (ನ), ನುಂ ಮಗುಳ್ದೆ (ಮ), ನುಂ ಮಗುಡ್ದೆ (ಅ).

ಅಱಿಯೆನಿದಂ ನಿನ್ನಿಂದಿನ
ತೆಱನಂ ನೀನೆನಗೆಯೇಕೆ ಮುಳಿದಿರ್ದೆಯೊ ಮೇಣ್ |
ಮಱುಮಾತುಗುಡದೆ ರವಿಸುತ
ಮಱವಿಂದಿರ್ದಪೆಯೊ ಮೇಣ್ ಬೞಲ್ದಿರ್ದಪೆಯೋ ‖ ೩೧

ನಿನ್ನ ಕೆಳೆಯಂ ಸುಯೋಧನ-
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ-|
ನೆನ್ನದೆ ಜೀಯೆನ್ನದೆ ದೇ-
ವೆನ್ನದೆ ಯೇಕುಸಿರದಿರ್ದೆಯಂಗಾಧಿಪತೀ ‖ ೩೨

ಅನೃತಂ ಲೋಭಂ ಭಯಮೆಂ-
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ-|
ದನ ನನ್ನಿ ಚಾಗಮುಣ್ಮೆಂ-
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್ ‖ ೩೩

ಆನಱಿವೆಂ ಪೃಥೆಯಱಿವಳ್
ದಾನವರಿಪುವಱಿವನರ್ಕಱಿವಂ ದಿವ್ಯ-|
ಜ್ಞಾನಿ ಸಹದೇವನಱಿವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ ‖ ೩೪

ಒಡವುಟ್ಟಿದನೆಂದಱಿದೊಡೆ
ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ |
ಕುಡಲಾರ್ತೆನಿಲ್ಲ ರಾಜ್ಯ-
ಕ್ಕೊಡೆಯ[1]ನನಱಿಯುತ್ತುಮಿರ್ದೆನಂ[1]ಗಾಧಿಪತೀ ‖ ೩೫

ನೀನೊಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್ |

---

[1] ಸ್ವೀಪಾ—(ಅ) ; ನನರವುತ್ತುಮಿರ್ದೆನಂ (ನ, ಅ೧ಪಾ), ರನರಸುತ್ತಮಿರ್ದೆಯಂ (ಮ).

ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ ‖ ೩೬

ಹರಿ ಬೇಡೆ ಕವಚಮಂ ನೀ-
[1]ಸರಿ[1]ದಿತ್ತಯ್ ಕೊಂತಿ ಬೇಡೆ [2]ಬೆಗಡ[2]ದೆ ಕೊಟ್ಟಯ್ |
[3]ಪು[3]ರಿಗಣೆಯಂ ನಿನಗೆಣೆ ಕಸ-
ವರಗಲಿ ಮೆಯ್ಗುಲಿಯುಮಾವನಂಗಾಧಿಪತೀ ‖ ೩೭

ನಯನದೊಳಮೆರ್ದೆಯೊಳಂ ನಿ-
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ-|
ನ್ನಯ ಕಿವಿಯೊಳ್[4]ಮಿ[4]ಸನಂದನ
ವಿಯೋಗಮೆಂತಾದುದ[5]ಱಿಯೆನಂಗಾಧಿಪತೀ[5] ‖ ೩೮

ನಿನ್ನಂ ಕೊಂದ ಕಿರೀಟಿಯು-
ಮೆನ್ನ [6]ಣುಗ[6]ನನಿಕ್ಕಿ ಕೊಂದ ಭೀಮನುಮೊಳನಾ-|
ನಿನ್ನುಮೊಳೆಂ [7]ಗಡ ಸಾಲದೆ[7]
ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ ‖ ೩೯

ಇಂದಾನಾದೆಂ ಮೇಣಿನ-
ನಂದನ ಕೇಳ್ ಪಾಂಡುತನಯರಾದರ್ ನಿನ್ನಂ |
ಕೊಂದುಂ ದುಶ್ಶಾಸನನಂ
ಕೊಂದುಂ ಬರ್ದು[8]ಕುವನದಾವನಂ[8]ಗಾಧಿಪತೀ ‖ ೪೦

ಎಂದು ವಿಪ್ರಳಾಪಂಗೆಯ್ದು

---

[1] ಸ್ವೀಪಾ=(ಅಗಪಾ) ; ನಿರ (ನ, ಅ), ನಿರಿ (ಮ). [2] ಬೆಚ್ಚ (ಮ). [3] ಸ್ವೀಪಾ= (ಮ) ; ಹು (ನ, ಅ). [4] ಸ್ವೀಪಾ=(ಮ) ; ಗಿ (ನ, ಅ). [5] ಱಿಯೆನೆನಗಂ ನಿನಗಂ (ಮ), ಯ್ಯಯೆನಗಂ ನಿನಗಂ (ಶಬ್ದಾನು, ಸೂತ್ರ ೪೫ ರ ಕೆಳಗೆ). [6] ಸ್ವೀಪಾ=(ನ), ನುಜ (ಮ, ಅ). [7] ಗಂಡಕ್ಕಿದೆ (ಮ) ; ಗಡ [ತಕ್ಕು]ದೆ ? [8] ಕುವರೆ ಬದುಕರಂ (ಮ).

ಇನಸುತಸಿರವಂ ದುಶ್ಶಾ-
ಸನನಿರವಂ ಕಂಡುಮಿನ್ನುಮೆನ್ನಸು [1]ತಾಂ[1] ಸೆ-|
ಟ್ಟನೆ ಪೋದುದಿಲ್ಲ ಕಲ್ಲೆರ್ದೆ-
ತನದಿಂದೆನ್ನಂತು ಬರ್ದನಾ[2]ವ[2]ನುವೊಳನೇ || ೪೧

ಎಂದು ತನ್ನಂ ತಾನೆ ನಿಂದಿಸಿಕೊಂಡು

ಸೂನುಗಳಟಿವಂ ಪ್ರಿಯಮಿ-
ತ್ರಾನುಜರಟಿವಂ ವಿಧಾತ್ರ ನೀಂ ಕಾಣಿಸಿ ಯಿ-|
ನ್ನೇನಂ ಕಾಣಿಸಲಿರ್ದಪೆ
ನೀನೆನ್ನಂ ಪಾಪಕರ್ಮನಂ ನಿರ್ಗುಣಿಯಂ || ೪೨

ಎಂದು ವಿಧಾತ್ರಂಗೆ ಪಲುಂಬಿ ರಾಧಾನಂದನನ ಮೊಗಮಂ ನೋಡಿ ಸಂಜಯನನಿಂತೆಂದಂ

ಆರೊಡನೆ ನುಡಿವೆನಟ್ಟಿಯೊ-
ಳಾರೊಡನೋಲಗದೊಳಿರ್ಪೆನಾರೊಡನೆ ಸಮಂ-|
ತಾರೋಗಿಪೆನೇಱುವೆನಾ-
ನಾರೊಡನೆನ್ನಣುಗರಿಲ್ಲದಿಭವಾಜಿಗಳಂ || ೪೩

ಕೆಳೆಯಂಗಾಯ್ತುಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ ಧರಾ-
ತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ-|
ಡಳಮಂ ಸುಟ್ಟನಿವಂ ಪ್ರ[3]ತಾ[3]ಪಶಿಖಿಯಿಂದಾನೀತನಂ [4]ಸತ್ಕ್ರಿಯಾ[4]-
ನಳನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ || ೪೪

ಎಂಬುದುಂ ದೇವಾ ನೀವಿಂತೇಕೆ ಪಟಯಿಸುವಿರೆಂದು ಸಂಜಯನಿಂತೆಂದಂ

---

[1] ಸ್ವೀಪಾ = (ಮ) ; ವಿದು (ನ, ಅ). [2] ದ (ಮ). [3] ಕೋ (ಅ೧ಪಾ). [4] ಭೀರಿತಾ (ಮ).

ಜಲದಾನಕ್ರಿಯೆಯಂ [1]ವಾ[1]-
ಗ್ಜಲದಿಂ ಕೋಪಾಗ್ನಿಯಿಂದೆ ದಹನಕ್ರಿಯೆಯಂ |
ಕೆಳೆಯಂಗೆ ಮಾಡಿದಯ್ ಕುರು-
ಕುಲದರ್ಪಣ ಮಱೆವುದಿನ್ನ ಹ[2]ರ್ಪ[2]ತಿಸುತನಂ ‖ ೪೫

ಪೆಂಡಿರ್ ಪಟಯಿಸುವಂದದೆ
ಗಂಡರ್ ಪಟಯಿ[3]ಸಿದೊಡಾಯಮಂ ಛಲಮಂ[3] ಕಯ್- |
ಕೊಂಡೆಸಪರಾರೊ ಕುರುಕುಲ-
ಮಂಡನ ನೀನೆತ್ತಿಕೊಂಡ ಛಲಮನೆ ಮೆಱೆಯಾ ‖ ೪೬

ಎಂದು ಸಂಜಯಂ ನುಡಿದ ನುಡಿಯನವಧಾರಿಸಿ

ದರ[4]ಹಾಸಪೇಶಲಂ ದಿ-
ಕ್ಕರಿಗಮನಂ ಕನಕಪರ್ವತಪ್ರಾಂಶು[4] ದಿನೇ- |
ಶ್ವರಸುತನ ರೂಪು ಚಿತ್ರಂ
ಬರೆದಂತಿರ್ದಪುದು ಚಿತ್ತಭಿತ್ತಿಯೊಳೆನ್ನಾ ‖ ೪೭

ಗುರು ದೀಕ್ಷಾವಿಧಿಗಳ್ಗೆ ಮಂತ್ರಿ ಹಿತಕಾರ್ಯಾಳೋಚನಕ್ಕಾಳ್ದನು-
ರ್ವರೆಯಂ ಕಾವ ಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್ |
ಗುರುಭಾರಕ್ಕೆಱೆವಾಳ್ ರಣಕ್ಕೆ ತುಟಿಲಾಳ್ ಕಟ್ಟಾಯದೊಳ್ ಮೇಳದಾಳ್
ಪರಿಹಾಸಕ್ಕೆನಿಸಿರ್ದನೆಂತು ಮಱೆವಂ ದುರ್ಯೋಧನಂ ಕರ್ಣನಂ ‖ ೪೮

ಎಂದು ಶೋಕಾಂಧಂ ಕರ್ಣವಿರಹಿತನಪ್ಪುದಱಿಂ ಸಂಕ್ರಂದನನಂದನಂಗೆ ಮುಳಿದು

---

[1] ಸ್ವೀಪಾ=(ಅ) ; ಸ್ಯ (ಮ) ; (ನ) ದಲ್ಲಿ ಜಾಗ ಬಿಟ್ಟು ಪಂಕ್ತಿಗೆ ಮೇಲೆ 'ದ್ಯ' ಎಂದು ಸೀಸದ ಕಡ್ಡಿಯಲ್ಲಿ ಸೇರಿಸಿದೆ. [2] ಸ್ವೀಪಾ=(ನ, ಅ೧) ; ಸ್ವ (ಮ), ೩ಪ (ಅ೩).
[3] ಸ್ವೀಪಾ=(ಮ) ; ಸುವುದಾಯವೋ ಛಲವೋ (ನ, ಅ೧), . ಛಲಮಂ (ಅ೩).
[4] ಸ್ವೀಪಾ = (ಮ, ಅ೩) ; ಹಸಿತವದನ ಸುರಕುಂಜರಗಮನನ ಕನಕಪರ್ವತಪ್ರತಿಮ (ನ, ಅ೧).

[1]ತರಣಿತನಯನ ಗುಣೌಘ[1]-
ಸ್ಮರಣದೆ ಕಯ್ಗಣ್ಮುವೆನ್ನ ಶೋಕಮಹಾಸಾ-|
ಗರಮಂ ತವೆ ಪೀರ್ದುದು ಭೀ-
ಕರಮತ್ಕೋಪಾಗ್ನಿ ಬಾಡಬಾಗ್ನಿಯ ತೆಱದಿಂ ‖ ೪೯

ಎಂದು ಶೋಕರಸಮಂ ಕೋಪರಸದಮೇಲಿಕ್ಕಿ ಮಾರ್ಪಡೆಯೆಯ್ತ್ತರ್ಪುದಂ ನೋಡಿ ನಡೆವ ದಂದಶೂಕಪತಾಕನ ಮುಳಿಸಿನಂದಮನಱಿದು ಸಂಜಯನೆಂದಂ ಎಲೆ ದೇವಾ ಭೀಷ್ಮರಿತ್ತಲಿರ್ದಪರ್ ಇತ್ತ ಬಿಜಯಂಗೆಯ್ಯಿಂ ಎಂ[ತುಂ] ನಿಜಗುರುಜನಪ್ರಾರ್ಥನಾಭಂಗಂ ಮಾಡಲಾಗದು ಇಂ ನೀಂ ನೆಗಳ್ವ ಕಜ್ಜಮಾವುದುಮಂ ನಿಮ್ಮಜ್ಜನೊಳಾಳೋಚಿಸಿ ನೆಗಳ್ವುದು ಎಂದು ಪೇಳ್ವುದುಂ ಸಂಜಯನ ಮಾತಂ ಮಿಱದೆ ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದವಂದನಂ ಗೆಯ್ಯಲೆಂದು ಗಾಂಧಾರೀನಂದನಂ ಎಯ್ದೆವಂ[ದಂ]

---

[1] ತರಣಿಯ ತನಯನ ನೆನದಾ (ನ, ಅ), ಅರುಣತನಯನ ಗುಣೌಘ (ಮ).

## ೬. ಭೀಷ್ಮವಚನಂ

[ಅಂತು ಎಯ್ದೆವಂದಾಗಳ್]

ನರಶರಕೋಟಿ ಜರ್ಜರಿಸೆ ತನ್ನ ಶರೀರಮನಸ್ತ್ರವೇದನಾ-
ಪರವಶನಾಗಿಯುಂ ಮಱೆದನಿಲ್ಲ ಮುಕುಂದನನೇಕಚಿತ್ತದಿಂ |
ಸ್ಮರಿಯಿಸುತಿ[1]ರ್ದುಮತ್ತ ಕುರುಭೂ[ಮಿಯೊಳೀಗಳದೆಂ]ತುಟಾದುದೋ[1]
ಕುರುಪತಿಗೆಂದನಾ ಪರಮಯೋಗಿ[2]ಗಮಿಂತುಟು[2] ಮೋಹಮಾಗದೇ ‖ ೧

**ಅಂತಿರ್ದ ನದೀನಂದನನಂ ರಾಜರಾಜಂ ನೋಡಿ ಮನ್ಯೂದ್ಗತಕಂಠನಾಗಿ**

ವಿನಯಮನೊಕ್ಕು ನಿಮ್ಮ ಗುರುವೃದ್ಧರ ಪೇೞ್ದ ಹಿತೋಪದೇಶಮಂ
ಮನದೊ[3]ಳಿಳಿಂಕೆಗೊಂಡ[3]ನಿಲನಂದನವೈರದ ನಿಮ್ಮನಿಂದ್ರನಂ-|
ದನನೊಡನಾನೆ ಕಾದಿಸಿದೆನಾನೆ ಕಡಂಗಿದೆನೆನ್ನ ಪಾಪಕ-
ರ್ಮನ ಕತದಿಂದಮೀ ನಿಮಗಮೀ ಯಿರವಾದುದೆ ಸಿಂಧುನಂದನಾ ‖ ೨

ಎಂದು ಪಶ್ಚಾತ್ತಾಪಂಗೆಯ್ಯುತುಂ ಮುಂ ಬರ್ಪ ತನ್ನ ಮೊಮ್ಮನ ಕಾಲ ಸೊಪ್ಪುಳಂ ಕೇಳ್ದು ವಿಕಚಧವಳಕುವಲಯವಿಲಾಸೋಪ[4][ಹಾಸಿ][4]ಗಳುಂ ಕರ್ಣಾಂತವಿಶ್ರಾಂತಂಗಳುಮಪ್ಪ ತನ್ನ ಕಣ್ಗಳನರೆದೆಱೆದು ದರನಿಮೀಲಿತ [5][ಕಮಲ][5]ಕಮಲಾಕರಮಿರ್ಪಂತೆ ಯಿರ್ದ ಶಂತನುತನೂಜನ ಕರ್ಣಾಭ್ಯರ್ಣಮಂ ಪೊರ್ದಿ ಸಂಜಯನೆಂದಂ ಅಜ್ಜಾ ನಿಮ್ಮ ಮೊಮ್ಮನಪ್ಪ ಕುರುಕುಲಗಗನಗಭಸ್ತಿಮಾಲಿ ಬಾಹುಶಾಲಿ ದುರ್ಯೋಧನಂ ಬಂದನೆಂದು ಬಿನ್ನಪಂಗೆಯ್ಯೆ [6]ಯೋಗಾಭಿ[6]ಯೋಗಮನುಪಸಂಹರಿಸಿ ತನ್ನ [7]ಚರಣೋಪಾಂ[ತೋ]ತ್ತ

---

[1] ತಿರ್ದು ಮತ್ತ ಕುರುಭೂಪತಿಗೀಗಳಿದಿಂತುಟಾದುದೇ (ನ), ತಿರ್ದುಮತ್ತ (ಅ೧), ತಿರ್ದನಿತ್ತ (ಅ೩), ರ್ದನಿತ್ತಲಿಭೂಪತಿಗೆಂತುದುವಸ್ಥೆಯಾದುದೋ (ಮ). [2] ಗೆ ದೇಹದ (ಮ, ಅ೩). [3] ಳವಜ್ಞೆಗೈದ (ಮ). [4] ಸ್ವೀಪಾ = (ಪಂಪಭಾ, ೧೩. ೬೩ ವ); ವಾಸಿತಂ (ನ, ಅ). [5] ಲೋಚನ (ನ, ಅ); (ಮ) ದಲ್ಲಿ ಏನೂ ಇಲ್ಲ. [6] ಸ್ವೀಪಾ = (ಮ, ಅ೩); ಯೋಗಿ (ನ, ಅ೧). [7] ಚರಣಕಮಲಕ್ಕುತ್ತಮಾಂಗಾನತಂ

ಮೂಂಗನಾಗಿರ್ದ[7] ಪನ್ನಗಪತಾಕನಂ ಕುರುಕುಲೋತ್ತಂಸನಂ ಭೀಷ್ಮರ್ ಆಶೀರ್ವಚನಸಹಸ್ರಂಗಳಿಂ ಪರಸಿ ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಾದಂಡಂಗಳಿಂದೆ ತೆಗೆದಪ್ಪಿ ಬಾಷ್ಪಾಂಬುಪೂರಿತಲೋಚನನಾಗಿ

ಧವಳಗಜೇಂದ್ರಮುಂ ಧವಳಚಾಮರಮುಂ ಧವಳಾತಪತ್ರಮುಂ
ಧವಳವಿಲೋಚನೋತ್ಪಲವಧೂಜನಮುಂ ಬೆರಸಷ್ಟದಿಕ್ತಟಂ |
ಧವಳಿಸೆ ಕೀರ್ತಿಯಿಂ ಧವಳಮಂಗಳಗೇಯದಿನೊಪ್ಪಿ ಬರ್ಪ ಕೌ-
ರವಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬರ್ಪುದಾದುದೇ || ೩

ಎಂದು ಏಕಾಕಿಯಾಗಿ ಬಂದ ಧೃತರಾಷ್ಟ್ರನಂದನನ ಬರವಿನೊಳ್ ಸರಿತ್ಸುತಂ ಸಮರವೃತ್ತಾಂತಮನಱಿದು ವಿಸ್ಮಯಾಕ್ರಾಂತಸ್ವಾಂತನುಮಾಗಿ ಶೋಕಂಗೆಯ್ಯೆ ರಾಜರಾಜಂ ನದೀತನೂಜನಂ ಮಾಣಿಸಿ ನೀಮಪ್ಪೊಡೆ ವಿದಿತವೇದಿತ[1]ವ್ಯ[1]ರುಂ ಭಾವಿತಾತ್ಮರುಂ ಆಗಿರ್ದು ಅಜ್ಞಾನಿಗಳಂತೆ ನೆಗಟಲಾಗದೆಂದು ನಿಜಾಗಮನವೃತ್ತಾಂತಮಂ ಸಮರಪರಿಚ್ಛೇದಮುಮಂ ಅಱಿಪಿದೊಡೆ ಕಿಱಿದಾನುಂ ಬೇಗಂ ಚಿಂತಾಕ್ರಾಂತನಾಗಿರ್ದು ಮಗನೆ [2]ಸೋಮವಂಶದಿಂದವಿಚ್ಛಿನ್ನಮಾಗಿ ಬಂದ ಭರತಾನ್ವಯದೊಳ್ ಇನ್ನೆವರೆಗಂ ಗೋತ್ರಕಲಹಮೆಂಬುದಾದುದಿಲ್ಲ ನಿಮ್ಮೊ[2]ಳಾದುದು ಇ[3]ನ್ನು[ವಾ]ನೆಂ[3]ಬುದನಿಂಬುಕಯ್ವೆಯಪ್ಪೊಡೆ ಪಾಂಡವರನೊಡಂಬಡಿಸಿ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪೆಂ ಇನ್ನುಮವರೆಮ್ಮೆಂದುದಂ ಮಿಾಱುವರಲ್ಲ ನೀನುಮೆಮ್ಮ ಪೇೞ್ದುದಂ ಮಿಾಱದೆ ನೆಗೞಲ್ವೇೞ್ಕುಂ ಎನೆ ಸುಯೋಧನಂ ಮುಗುಳ್ನಗೆ ನಕ್ಕು

ನಿಮಗೆ ಪೊಡೆಮಟ್ಟು ಪೋ[4]ಪುದ[4]
ಸಮಕ[5]ಟ್ಟೆ[ನೆ][5] ಬಂದೆನಹಿತರೊಳ್ ಸಂಧಿಯನೇಂ |

---

ಮಾಡಿದ (ನ, ಅಗ) ; ಚರಣೋಪಾಂಗೋತ್ತಮಾಗಿರ್ದ (ಮ), ತ್ತಮಾಂಗನಾಗಿರ್ದ (ಅಞ). [1] ಸ್ವೀಪಾ = (ಮ); ಜ್ಞ (ನ, ಅ). [2] ಸ್ವೀಪಾ = (ಮ) ; ಸೋಮವಂಶದಿಂದಮವಿ (ಅಞ) ; (ನ) ದಲ್ಲಿ ಗ್ರಂಥಪಾತವಾಗಿರುವಂತೆ ತೋರುತ್ತದೆ ; ××× (ಅಗ). [3] ಲ್ಲಮೆಂ (ನ, ಅಗ), ನ್ನುನಾನೆಂ (ಮ), ನ್ನಾನೆಂ (ಅಞ). [4] ಸ್ವೀಪಾ = (ಅಗಪಾ) ; ದುದೆ (ನ), ಪೊಡೆ (ಮ), ಪೀ (ಅ). [5] ಟ್ಟೆಂ (ನ), ×× (ಮ), ಟ್ಬಂ (ಅ).

ಸಮಕೊಳಿಸಲೆಂದು ಬಂದೆನೆ
ಸಮರದೊ[1]ಳೆನಗಜ್ಜ ಪೇೞಿಮಾವುದು ಕಜ್ಜಂ[1] || ೪

ನೆಲಕಿಱುವೆನೆಂದು ಬಗೆವಿರೆ
ಛಲಕಿಱುವೆಂ ಪಾಂಡುಸುತರೊಳೀ ನೆಲನಿದು ಪಾ- |
ಣ್ಣೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ದಪೆನೇ || ೫

ಅನುಜಸಮೇತನೊಳಂತಕ-
ತನಯನೊಳನುಜಸ್ಯಪೇತನೀಗಳ್ ದುರ್ಯ್ಯೋ- |
ಧನನ[2]ಳಿಪಿ[2] ಸಂಧಿಗೆಯ್ದೊಡೆ
ಮುನಿವರ [3]ಮೆಚ್ಚುವರ ನುಡಿಗೆ[3] ಪಕ್ಕಾಗಿರೆನೇ || ೬

ಕೂಡೆ ವಿರೋಧಿಯಂ ತಱಿದು ತ[4]ದ್ವಸ[4]ಮಾಂಸದೆ ಭೂತಭೋಜನಂ
ಮಾಡದೆ ವೈರಿವಾರವನಿತಾವದನಾಂಬುರುಹಂಗಳಂ ಬೆಳ- |
ರ್ಮಾಡದೆ ಬಂಧುಶೋಕದೊಳೆ ಪೊರ್ದಿದ ಬಂಧುಜನಕ್ಕೆ ಸಂತಸಂ
ಮಾಡದೆ ಸಂಧಿಮಾಡುವನೆ ಪಾಂಡವರೊಳ್ ಫಣಿರಾಜಕೇತನಂ || ೭

ಬಾಡಮನಯ್ದನವರ್ ಮುಂ
ಬೇಡಿದೊಡಾನಿತ್ತೆನಿಲ್ಲ ರಾಜ್ಯಾರ್ಧಮನಾಂ |
ಬೇಡಿಯುವರಲ್ಲಿಗಟ್ಟಿದೊ-
ಡೇಡಿಸಿ ಙೋಡಿಸನೆ ಪವನನಂದನನೆನ್ನಂ || ೮

ಎನ್ನ ಣುಗಾಳನೆನ್ನ ಣುಗದಮ್ಮನನಿಕ್ಕಿದ ಪಾರ್ಥಭೀಮರು-
ಳ್ಳನ್ನೆಗಮೊಲ್ಲೆ ನೆನ್ನೊಡಲೊಳೆನ್ನ ಸುವುಳ್ಳಿನಮಜ್ಜ ಸಂಧಿಯಂ |
ಮುನ್ನಮಃವಂದಿರಿರ್ಬರುಮಃನಿಕ್ಕುವೆನಿಕ್ಕಿ ಬೞಿಕ್ಕೆ ಸಂಧಿ[5]ಗೆ-
ಯ್ವೆಂ[5] ನೆಗೞ್ದಂತಕಾತ್ಮಜನೊಳೆನ್ನ ಬಲಾೞಿದೊಡಾಗದೆಂಬೆನೇ || ೯

---

[1] ಳಿನ್ನಜ್ಜ ಪೇಳ ಮೇಗುಜ್ಜುಗಮಂ (ಮ). [2] ಳ್ಕಿ (ಮ). [3] ಸ್ವೀಪಾ = (ಅಫ) ; ಮೆಚ್ಚದರ ಮನಕೆ (ನ, ಅ೧), ಮೆಚ್ಚದರೆ ನುಡಿಗೆ (ಮ). [4] ದ್ರುಸ (ನ, ಅ), ದ್ವಶ (ಮ).
[5] ಸ್ವೀಪಾ = (ಅಫ) ; ಗೆಯ್ದೊಂ (ನ), ಗೆಯ್ವಂ (ಅ೧), ಗೈದಂ (ಮ).

ಪುದುವಾೞ್ಕೆಣಮಾಗದೆಂತುಮವರೊಳ್ ಸಂಧಾನಮಂ ಮಾಡಲಾ-
ಗದು ನೀಮಿಲ್ಲದೆಯಜ್ಜ ಬಿಲ್ಲ ಗುರುಗಳ್ ತಾಮಿಲ್ಲದಾ ಕರ್ಣನಿ-|
ಲ್ಲದೆ ದುಶ್ಶಾಸನನಿಲ್ಲದಾರೊಡನೆ ರಾಜ್ಯಂಗೆಯ್ವೆನಾರ್ಗೆನ್ನ ಸಂ-
ಪದಮಂ ತೋಱುವೆನಾರ್ಗೆ ತೋಱಿ ಮೆಱೆವೆಂ ನಾನಾವಿನೋದಂಗಳಂ ||

ಖಂಡಿತಮೆನಿಪ್ಪ [1]ವ[1]ರಮಹಿ-
ಮಂಡಲಧವಳಾತಪತ್ರಸಂಪದಮೆನಗೇ-|
ಭಂಡಮದನೊಲ್ಲೆನೊಲ್ಲೆನ-
ಖಂಡಿತಮಭಿಮಾನಮದನೆ ಬಲ್ವಿಡಿವಿಡಿವೆಂ || ೧೧

ಪುಟ್ಟಿದ ನೂರ್ವರುಮೆನ್ನೊಡ-
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ|
ಪುಟ್ಟಿ ಪೊದಳ್ದುದು ಸತ್ತರ್
ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ || ೧೨

ಕಾದದಿರೆನಜ್ಜ ಪಾಂಡವ-
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ-|
ಣಾದೆನದಱಿಂದೆ ಪಾಂಡವ-
ರ್ಗಾದುದು ಮೇಣಾಯ್ತು ಕೌರವಂಗವನಿತಳಂ || ೧೩

ಎಂದು ರಾಜಾಧಿರಾಜಂ ನಿರ್ವ್ಯಾಜಶೌರ್ಯಾವಳಂಬಿಯಾಗಿ ನುಡಿಯೆ ಗಾಂಗೇಯನಱಿದು ಅತಿವಿಸ್ಮಯಾಕುಳೀಕೃತಚಿತ್ತನಾಗಿ ಮುಹುರ್ಮುಹು ರಾಂದೋಳಿತೋತ್ತಮಾಂಗನುಮಾಗಿ

* ಜತುಗೇಹಾನಲಬೀಜಮುಗ್ರವಿಷಸಂಯುಕ್ತಾ[ನ್ನ]ಜಾತಾಂಕುರಂ
ಕೃತ[ಕ]ದ್ಯೂತವಿನೋದಪಲ್ಲವಚಯಂ ಪಾಂಚಾಲರಾಜಾತ್ಮಜಾ-|

---

[1] ಪ (ಅ೧ಪಾ, ಅ೩). * ಈ ಪದ್ಯದಲ್ಲಿ (ನ, ಅ೧) ಪಾಠ ಕೆಲಮಟ್ಟಿಗೆ ಬೇರೆಯಾಗಿದೆ ; ಸ್ವೀಪಾ = ಮುಖ್ಯವಾಗಿ (ಮ).

ಯತಕೇಶಗ್ರಹಪುಷ್ಪ[ಮುಂ] ಬೆಳೆದುದಾ ವೈರದ್ರುಮಂ ಕೌರವ-
ಕ್ಷಿತಿಪಾಲೋರುಕಿರೀಟಭಂಗ[1][ಫಲ]ಮಂ ಪೇಲ್ ಮಾಡದೇಂ ಪೋಕುಮೇ[1] ||

ಎಂದು ನಿಶ್ಚಯಿಸಿ

ಶರ[2]ಮೊಂದಂ ತೆಗೆದು ನಿಜೋ[2]-
ದರದಿಂ ಲೆಕ್ಕಣಿಕೆ ಮಾಡಿ ಗಜಮದಮಸಿಯಂ |
ತರಿಸಿ ಪತಾಕಾಪಟದೊಳ್
ಬರೆದಟ್ಟಿದನಂಧನೃಪತಿಗಾ ಸಿಂಧುಸುತಂ || ೧೫

ಅಂತು ನಿಜನಾಮಾಂಕಿತಲೇಖನಮಂ ಬರೆದು ಮೊಮ್ಮಂ ನುಡಿದ ನುಡಿಯನೆಂತುಮೊಡಂಬಡುವನಲ್ಲಂ ನೀನುಂ ಗಾಂಧಾರಿಯುಮಿರ್ದು ಕುರುಕುಲಪ್ರದೀಪ ದುರ್ಯೋಧನನಂ ಕೌಂತೇಯರೊಳ್[3][ಂತಾ][3]ನುಂ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪುದೆಂದು ಸಂಜಯನ ಕಯ್ಯೊಳ್ ಕೊಟ್ಟು ಧೃತರಾಷ್ಟ್ರನಲ್ಲಿಗಟ್ಟುವುದುಂ ಕುರುರಾಜಂ ಸಿಂಧುಸುತನ ಮೊಗಮಂ ನೋಡಿ

ತುಂಗಕುರುವಂಶಮಯಶೋ-
ಭಂಗಂ ಛಿದ್ರಿತಮದೆನ್ನ ದೂಸಱಿನಾಯ್ತಾ-|
ನುಂ ಗಡ ಕುರುರಾಜನೆ ನೀ-
ಮುಂ ಗಡ ಸಂಧಾನವೇಟ್ಟಿರೆನಗರಸು ಗಡಾ || ೧೬

ಈ ಯೆರ[4]ಡುಮೆ[4]ನ್ನ ನಿಡುದೋ-
ಳಾಯತ್ತಂ ವೀರವೃತ್ತಿ ಜಯಮೆಂಬುದು ದೈ-|
ವಾಯತ್ತಮಜ್ಜ ಭರತಾ-
ನ್ವಾಯಕ್ಕೆ ಕಲಂಕಮಾಗದಂತಿರೆ ನೆಗಲ್ವೆಂ || ೧೭

---

[1] ಭಯಮಂ ಪೇಲ್ ಮಾಡದೇಂ ಪೋಕುಮೇ (ನ, ಅ), ಮಿನಿತುಂ ಭೀಮಪ್ರತಿಜ್ಞಾಕ್ಷರಂ (ಮ). [2] ಸ್ವೀಪಾ = (ಮ, ಅ೩), ಮಂ ತೆಗೆದು ಶರೀರೋ (ನ, ಅ೧). [3] ಶ್ರಾ (ನ, ಅ).
[4] ಸ್ವೀಪಾ = (ಮ) ; ಡನೆ (ನ, ಅ, ಅ೧ಪಾ), ಡುವೆ (ಅ೧).

ಬೆಸಕಯ್ವೆಂ ಬಿಡಿಮಜ್ಜ ಮಂಗಳಮಹಾಶ್ರೀಸಂಧಿಕಾರ್ಯಕ್ಕೆ ಲಂ-
ಘಿಸಿದೆಂ ನಿಮ್ಮಯ ಮಾತನೊರ್ಮೆ[1]ಗಮಿ[1]ದಾಜ್ಞಾಲಂಘನಂ ದೋಷ[2]ಮೊಂ-|
ದಿಸದಿ[2]ನ್ನಾಗ್ರಹಮಂ ಬಿಸುಟ್ಟಪ್ಪುದೆನೆ ಸತ್ವಕ್ಕಂ ತದೇಕಾಂಗಸಾ-
ಹಸಕಂ ವಿಸ್ಮಯಮುತ್ತು ಮೆಚ್ಚಿ ಪೊಗಟ್ಟಿಂ ಮಂದಾಕಿನೀನಂದನಂ ‖ ೧೮

ಅಂತು ಗಾಂಗೇಯಂ ಮನದೊಳ್ ಪೊಗಟ್ಟುದಿಂ 'ಅಶುಭಸ್ಯ ಕಾಲಹರಣಂ' ಎಂಬ ವಾಕ್ಯಾರ್ಥಮನವಧಾರಿಸಿ ಮಗನೆ ನೀನೆಂತುಮೆಮ್ಮ ಪೇಳ್ದುದಂ ಕಯ್ಕೊಳ್ಳದೆ ಛಲಮನೆ ಕಯ್ಕೊಂಡು ಪಾಂಡುನಂದನರೊಳ್ ಕಾದಿದಲ್ಲದಿರೆನೆಂಬೆಯಪ್ಪೊಡೆ ತೀರ್ಥಯಾತ್ರೆಗೆ ಪೋದ ಬಲದೇವಂ ಬರ್ಪನ್ನೆಗಂ ನೀನಿರ್ದೆಡೆಯನಱಿಯದಂತು ಮೆಯ್ಗರೆದು ಅಶ್ವತ್ಥಾಮಕೃಪಕೃತವರ್ಮರ್ ಬರ್ಪನ್ನೆಗಂ ಕಾಲವಂಚನಂಗೆಯ್ವುದು ಮೇಣ್ ಜಲಮಂತ್ರವಿದ್ಯಾಭ್ಯಾಸಮಂ ಕಯ್ಕೊಂಡು ಕುರುಕ್ಷೇತ್ರದುತ್ತರದಿಶಾಭಾಗದೊಳಿರ್ಪ ವೈಶಂಪಾಯನ ಸರೋವರಮಂ ಪೊಕ್ಕಿರ್ದು ಇಂದಿನೊಂದಿರುಳಂ ಕಟಿಪಿ ನಾಳೆ ನಿಮ್ಮ ನೆಗಟ್ಟುದುಂ ನೆಗಟ್ಟುದೆಸೆ ಮಹಾಪ್ರಸಾದಂ ಎಂದು ಅದಕ್ಕೊಡಂಬಟ್ಟು ಇಂತೆ ಗೆಯ್ವೆನೆಂದು ಯಥೋಚಿತಹಿತೋಪದೇಶಂ ಬೆರಸು ಜಲಮಂತ್ರೋಪದೇಶಮಂ ಕಯ್ಕೊಂಡು ಕುರುಕುಲಪಿತಾಮಹನಂ ಬೀಳ್ಕೊಂಡು ನಿಜಭುಜಗದಾಸಹಾಯನುಮಾಗಿ ಸಂಗ್ರಾಮಭೂಮಿಯೊಳಗನೆ ಬರುತ್ತುಂ ತನ್ನಂತರ್ಗತದೊಳ್

ದಿನಕರತನಯನ ದುಶ್ಶಾ
ಸನನ ವಿಯೋಗದೊಳಮಿನಿತುವರೆಗಂ ನೋವಿ-|
ಲ್ಲೆ ನಗಹಿತರೊಡನೆ [3]ಪುದುವಾ-
ಟೆಸೆ[3] ನೊಂದೆಂ [4]ಸ್ವ[4]ಜನಗುರುಜನಾಭ್ಯರ್ಥನೆಯಿಂ ‖ ೧೯

ಅರಿ[5]ಯರ್[5] ಪಾಂಡವರವರೊಳ್
ವಿರೋಧಮಂ ಬಿಸುಟು ಸಂಧಿಯಂ ಮಾಡುವುದೆಂ-|

---

[1] ಗೆವು (ಮ). [2] ಸ್ವೀಪಾ = (ಮ); ಮೊಡ್ಡಿಸುನಿ (ನ, ಅ). [3] ಸಂಧಿಗುಡೆ (ಮ).
[4] ಸ್ವೀಪಾ = (ಮ); ಸು (ನ, ಅ). [5] ಸ್ವೀಪಾ = (ನ, ಅಪಾ); ಗಳಿ (ಅ), ಗಳ್ (ಮ).

ಬರ ನುಡಿಯಂ ಕೇಳಲ್ಕೆಂ
ದೆರಡುಂ ಕಿವಿಗಳುಮನೆನಗೆ ಬಿದಿ ಮಾಡಿದನೇ || ೨೦

ಎನುತುಂ ತತ್ಸರೋವರದ ಸಮೀಪಮಂ ಕುರುಕುಲಪ್ರದೀಪನೆಯ್ದೆವಂದಾಗಳ್

[1]ಒಂದೆರಡು ಮತ್ತ[1]ರಂತರ-
ದಿಂದಂ ಪೊಱಮ[2]ಟ್ಟ ಪಜ್ಜೆಯೆಂಬುದನೆನಿಸಲ್[2] |
ಪಿಂದು ಪೆಱಗಾಗಿ ಪುಗೆ ಚಿಃ
ಎಂದವನಂ ರಾಜ್ಯಲಕ್ಷ್ಮಿ ಪೇಸಿ [3]ಬಿಸುಟ್ಟಳ್[3] || ೨೧

ತುಱುಮಂ ಕಳಿಸುವ ಕೃಷ್ಣೆಯ
ನಿಱಿಯಂ ಪಿಡಿದುರ್ಚವೇೞ್ವ ಕೊಳನಂ ಪಿಂದುಂ |
ಪೆಱಗಾಗಿ ಪುಗುವ ದುರ್ನಯ-
ಮಱಿಪವೆ ಕೌರವನ ರಾಜ್ಯದಾ[4]ಯದ ಕೇಡಂ[4] || ೨೨

ಅಂತು ಸರೋವರಮನೆಯ್ದೆವಂದಾಗಳ್

ಗಗನಂ ಬಿೞ್ದುದೊ ಮೇಣ್ ನೆಲಕ್ಕೆ ನೆಲ[5]ನೇಂ ಪುಟ್ಟಿ[5]ತ್ತೊ ಮೇಣೆಲ್ಲಿ ಪ-
ನ್ನಗವೃಂದಾರಕರಿಂದುಮಿರ್ಪ ಬಿಲನೋ ಮೇಣಷ್ಟದಿಗ್ನಾಗ ರಾ- |
ಜಿಗೆ ಮೆಯ್ಗರ್ಚಿಕೊಳಲ್ಕ ಜಂ ಸಮೆದ ತೋಯೋದ್ದೇಶಮೋ ಸಂದೆಯಂ
ಬಗೆಗಾದತ್ತೆನಿಸಿರ್ದುದೇಂ ಪಿರಿದೊ ವೈಶಂಪಾಯನಾಬ್ಜಾಕರಂ || ೨೩

ಅಂತು ಗಂಭೀರ ನೀರಾಕರಮಿರ್ಪಂತಿರ್ದ ಕಮಲಾಕರಮಂ ನೋಡಿ ನಮಲ್ಲಿ

ಕುರುಪತಿ ನಿನ್ನ ಪೊಕ್ಕ ತೊಱೆಗಳ್ ಮೊದಲಾಗಿರೆ ಬತ್ತಿದಪ್ಪುವೀ
ದೊರೆಯ ದುರಾತ್ಮನಂ ಖಳನನಾನೊಳಕೊಂಡೊಡೆ ಭೀಮನೀ ಸರೋ- |

[1] ಒಂದೆರಡುಮಂ ತ (ನ, ಅ), ಬಂದೆರಡು ಮತ್ತ (ಮ). [2] ಟ್ಟು ಪಜ್ಜೆಯಂ ಸಲೆ ಕೊಳನಂ (ಮ). [3] ಬಿಟ್ಟಳ್ ಸುಯ್ದಳ್ (ಮ). [4] ಯುವ ಕೇಡಂ (ನ, ಅ), ಯದ ಗುಂದಂ (ಮ). [5] ನುಂ ಪತ್ತಿ (ಮ).

ವರಮುಮನೆಮ್ಮುಮಂ ಕದಡುಗುಂ ಪುಗದಿರ್ ತೊಲಗೆಂದು ಬಗ್ಗಿಪಂ-
ತಿರೆ ನೆ[1]ಗೞ್ದ[1]ತ್ತನೇಕ ಬಕ ಕೋಕ ಮರಾಳ ವಿಹಂಗಮಸ್ವನಂ ‖ ೨೪

ಆಗಳ್ ಕುರುಕುಳಸರೋರಾಜಹಂಸಂ ಮುನ್ನಂ ತನ್ನ ಮೆಯ್ಯೊಳ್ [2]ಕೆನ್ನೈಸಿದ ಕೆನ್ನೆ[2]ತ್ತರಂ ಕರ್ಚಿ ಕಳೆದು ಕರಚರಣವದನಪ್ರಕ್ಷಾಳನಂಗೆಯ್ದು ಮುಕ್ಕುಳಿಸಿಯುಗುಚ್ದಾಚಮನಕ್ರಿಯೆಗಳಂ ಮಾಡಿ ಜಲದೇವತಾನಮಸ್ಕಾರಂ ಗೆಯ್ದು ಜಲಮಂತ್ರೋಪದೇಶದಿಂ ಜಲಜಾಕರಮನಭಿಮಂತ್ರಿಸಿ ಜಲನಿಲಯನಾಗಿ ಪರಮಯೋಗಿಯವೊಲ್ ಮಂತ್ರಪದಾಕ್ಷರಂಗಳಂ ಮಿಸುಗುತುಮಿರ್ದಂ

[1] ಸ್ವೀಪಾ=(ಅ೧ಪಾ) ; ಗದ (ನ, ಮ), ಗೆದ (ಅ). [2] ಸ್ವೀಪಾ=(ಅ೩) ; ಕನ್ನೈಸಿದ ಕನ್ನೆ (ನ) ; ಕಱಂಗಿದ ನೆ (ಮ), ಕನ್ನೈಸಿದ ಕೆನ್ನೆ (ಅ೧).

# ೭. ಭೀಮಸೇನಾಡಂಬರಂ

ಅನ್ನೆಗಮಿತ್ತಲ್ ಶಲ್ಯನ ವಧೆಯಿಂ ಬೞಿಯಂ ಎಲ್ಲಿಯುಮಱಸಿಯುಂ ದುರ್ಯೋಧನನ ರೂಪುಗಾಣದೆ ಇದೇನಾನುಮೊಂದು ಕಾರಣಮಾಗಲ್ವೇೞ್ಕುಮೆಂದು ಸೂಕ್ಷ್ಮಕ್ರಿಯೆಯಿಂ ಅಂತಕತನಯಂ ಗರುಡಧ್ವಜನೊಳಾಳೋಚಿಸುವುದಂ ಕುರುಕುಳಾಂತಕಂ ಕೇಳ್ದು

ತೊದಳಾಯ್ತೆನ್ನಯ ಪೂಣ್ದ ಪೂಣ್ಕೆ ಸಭೆಯೊಳ್ ಪಾಂಚಾಲರಾಜಾತ್ಮಜಾ-
ವದನಮ್ಲಾನತೆ ಮಾಣ್ದುದಿ[1]ಲ್ಲ ಗಡ[1] ಮದ್ದೋರ್ದಂಡಕಂಡೂತಿ [2]ತೀ-|
ರ್ದುದುಮಿಲ್ಲಿನ್ನುಮೊಳಂ[2] ಸುಯೋಧನ[3]ನದಕೆ[F]ೕ[3]ಗೆಯ್ವೆನೆಂತಕ್ಕುಮೆಂ-
ಬುದನೆಂದುತ್ಸುಕಚಿತ್ತನುಮ್ಮಳಿಸಿದಂ [4]ಕೌರವ್ಯಕೋಳಾಹಳಂ[4] ‖ ೧

ಅಂತುಮ್ಮಳಿಸಿ ಕುರುಕುಲಮಹೀಪಾಲಬೃಹದೂರುದ್ವಂದ್ವಂಗಳಂ ತನ್ನ ಗದಾದಂಡದಿಂ ನುಗ್ಗುನುಱಿಮಾಡಲುಂ ತತ್ಕೌರವೇಶ್ವರನ ಬಾಹುಶಾಖೆಗಳಂ ತನ್ನ ಗದಾಕುಠಾರದಿಂ ತತ್ತಱದಱಿಯಲುಂ ತತ್ಪಿಂಗಾಕ್ಷನ ವಕ್ಷಃಸ್ಥಳಮಂ ತನ್ನ ಗದಾಲಾಂಗಲದಿಂದಿರ್ಬಗಿಯಾಗಿ ಪೋೞ್ದು ಪರಪಲುಂ ತತ್ಫಣಿರಾಜಕೇತನನ ಲಲಾಟಶಿಲಾಪಟ್ಟಮಂ ತನ್ನ ಗದಾಘಾತದಿಂ [5]ಚಿಪ್ಪುಚಿಪ್ಪಾರ್ದಿ[5]ಡಲುಂ ತದ್ದ್ರೌಪದೀದ್ರೋಹನ ಮಣಿಮಯಮಕುಟಮಂ ತನ ಗದಾಪ್ರಹರಣದಿಂದುರುಳ್ಚಿ ಪುಡಿಯೊಳ್ ಪೊರಳ್ಚಲುಂ ಆ ಸುಯೋಧನನ ರುಧಿರಧಾರಾಪೂರದಿಂ ತನ್ನ [6]ಧಗಧ[ಗಾ][6]ಯಮಾನ ವಿಪುಳಕೋಪಪಾವಕಶಿಖಾಕಲಾಪಮನಾಱಿಸಲುಂ ಪಡೆಯದಡಹಡಿಸಿ ಭೀಮಸೇನಂ ಕಿಡಿಕಿಡಿವೋಗಿ ಮೀಸೆಯಂ ಕಡಿದು

---

[1] ಸ್ವೀಪಾ=(ಮ) ; ಲ್ಲೊಗೆದ (ನ, ಅ). [2] ನ್ನುಮಣಂ (ನ, ಅ), ಮಗ್ಗಿದುದಿನ್ನೆಲ್ಲಿಮೊಳಂ (ಮ). [3] ವಳಕ್ಕೇ (ನ), ನದಕ್ಕೇ (ಮ), ವಧಕ್ಕೇ (ಅ). [4] ಸ್ವೀಪಾ=(ಮ) ; ಭೀಮಂ ಭವತ್ಕಾರ್ಯಮಂ (ನ, ಅ). [5] ಸ್ವೀಪಾ=(ಮ, ಅಷ), ನುಚ್ಚುನುಱಿಮಾ (ನ), ನುಚರ್ಚ . . . (ಅ೧). [6] ಗದಾ (ನ), ಗದ್ಗದಾ (ಅ). ಧಗಧಗೀ (ಮ).

ಮೀಱಿದ ಪಗೆವನ ಪಟ್ಟಂ
[1]ಪಾ[1]ಱಿಸುವೆನೊ ಮುನ್ನಮಮರರುಂಡಮೃತಮನೇಂ |
ಕಾಱಿಸುವೆನೊ ಖಚರರನಡ-
ರ್ದೇಱಿಸುವೆನೊ ಮೇರುಗಿರಿಯ ತೊಱಲ ತುದಿಯಂ || ೨

ಎತ್ತುವೆನೊ ಮಂದರಾದ್ರಿಯ-
ನೊತ್ತುವೆನೊ ರಸಾತಳಕ್ಕೆ ನೆಲನಂ ದೆಸೆಯಂ |
ಪತ್ತುವೆನೊ ಪಗೆಯ ಬೆನ್ನಂ
ಪತ್ತುವೆನೊ ದಿಶಾಗಜಂಗಳಂ ತುತ್ತುವೆನೋ || ೩

ದಾಂಟುವೆನೊ ಕುಲನಗಂಗಳ-
ನೀಂಟುವೆನೊ ಚತುಸ್ಸಮುದ್ರಮಂ ರವಿಶಶಿಯಂ |
ಮೀಂಟುವೆನೊ ಗಗನತಳ[2]ದಿಂ[2]
ಗಂಟಲನೊತ್ತುವೆನೊ ಸಕಲದಿಕ್ಪಾಲಕರಂ || ೪

ಎಂದು ಕುರುಕುಲಕೃತಾಂತಕಂ ಅಂತಕನಂತೆ ಮಾಮಸಕಂ ಮಸಗಿ ಪ್ರಳಯಕಲ್ಪಸಂಕಲ್ಪಂಗೆಯ್ದು

ರಸೆಗಿೞಿದನೊ ಮೇಣ್ ನಾಲ್ಕುಂ
ದೆಸೆಗಳ ಕೋಣೆಗಳೊಳುಳಿದನೋ ಖಳನಿಲ್ಲೀ |
ವಸುಮತಿಯೊಳ್ ಗಾಂಧಾರಿಯ
ಬಸಿಱಿಂ ಮೇಣ್ ಮಗುೞೆ ಪೋಗಿ ಪೊಕ್ಕಿರ್ದಪನೋ || ೫

ಚರಮಚರವೆಂಬ ಜಗದಂ-
ತರದೊಳ್ ಖಳನೆಲ್ಲಿ ಪೊಕ್ಕೊಡಂ ತದ್ಭುಜಪಂ- |
ಜರದೊಳಗಿರ್ದೊಡೆ ಹರಿಹರ-
ಹಿರಣ್ಯಗರ್ಭರ್ಕಳಲ್ಲಿಯುಂ ಕೊಲ್ಲದಿರೆಂ || ೬

---

[1] ಸ್ವೀಪಾ = (ಮ) ; ಬಾ (ನ, ಅ). [2] ಸ್ವೀಪಾ = (ಮ) ; ಮಂ (ನ, ಅ).

ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್ ತಾತ ಮಾ-
ರುತ ಕೇಳ್ ಮಾರುತಮಾರ್ಗ ಕೇಳ್ ಪಗೆವನಂ ಕೊಂದೆನ್ನ ಕೋಪಾಗ್ನಿ ಗಾ-|
ಹುತಿ ಮಾಳ್ಪೆಂ ಕೊಲಲಾಱದಂದು ತಱಿಸಂದಾಸೆನ್ನ [1]ಸಂ[1]ದಗ್ನಿ ಗಾ-
ಹುತಿಮಾಳ್ಪೆಂ ಗ[2]ಡಿ[2]ಮೆಂದು ಪೂಣ್ದೊದಱಿದಂ ಕೌರವ್ಯಕೋಳಾಹಳಂ || ೭

ಅಂತು ಪಂಚಭೂತಸಾಕ್ಷಿಯೊಳ್ ಪೂಣ್ದು ನುಡಿದು ಅಜಾತಶತ್ರುಗೆ ಕುರುಕುಲಪ್ರಧಾನಶತ್ರುವೆನಿಸಿದ ಸಾಹಸಭೀಮಂ ಸಾಷ್ಟಾಂಗನಮಸ್ಕಾರಂಗೆಯ್ದು ಇಂತೆಂದಂ

ಎನಿತಂ ದ್ರೌಪದಿ ಮುಕ್ತಕೇಶಿ ನಮೆವಳ್ ತದ್ದುಃಖಮಂ ಕಂಡುಕಂ-
ಡೆನಿತಂ ಸೈರಿಪೆನಾಸುಮೆನ್ನನುಜ[3]ರುಂ[3] ಪಾಂಚಾಲಿಯಂ ನೋಡಿ ನೀಂ |
ಮನದೊಳ್ ಸೋವುದುಮಿಲ್ಲ ನಿಷ್ಕರುಣಿಯಯ್ ನೀ[4]ನಿಂ[4]ತಿರಾನನ್ನೆಗಂ
ಮುನಿಸಂ ತೀರ್ಚಿ ನರೇಂದ್ರವೈರಿತರುವಂ ನಿರ್ಮೂಲನಂ ಮಾಡುವೆಂ || ೮

ಆನುಂ ವಿಧೇಯನಲ್ಲಂ
ನೀನುಂ ಗುರುವಲ್ಲಮಿಂದಿನೊಂದೆವಸದೊಳು-|
ರ್ವೀನಾಥ ಪರಿಯ ಬಿಡ ಕುರು-
ಸೂನುವನಿರದಿಕ್ಕಿ ಮೆಟ್ಟಿ ಡೊಕ್ಕರಿಸಿದಪೆಂ || ೯

ಮುಂದಲೆಯಂ ಪಿಡಿದೆನ್ನಯ
ಮುಂದೆಳೆದನಲಜೆಯನುಯ್ದು ಪರಿಭವಿಸಿಯೆ ದ-|
ಳ್ಳೆಂದುರಿದು ಸೊರ್ಕಿದವನಂ
ಕೊಂದೆಂ ಕುರುಪತಿಯುಮಂ ಕೊಲಲ್ ತಡೆದಪೆನೇ || ೧೦

ಎಂದು ಕುರುಕುಲಾಂತಕಂ ಮಾಮಸಕಂ ಮಸಗಿ ಕುರುಕುಲಪ್ರಳಯಕಾಲದಂಡಮೆನಿಪ ನಿಜವಿಜಯಗದಾದಂಡಮನೆತ್ತಿಕೊಂಡು

---

[1] ನಿಂ (ಕಾವ್ಯಾವ, ೧೨೭). [2] ಸ್ವೀಪಾ = (ಕಾವ್ಯಾವ, ೧೨೭) ; ಡ (ನ, ಅ, ಮ).
[3] ನುಂ (ನ, ಅ೧), ರಂ (ಮ). [4] ಸ್ವೀಪಾ = (ಮ) ; ವಿಂ (ನ, ಅ).

ಕುರುಕುಲಕದಳೀಕಾನನ-
ಕರಿಕಳಭಂ ಶತ್ರುಶಲಭಸಂಪಾ[1]ತನ[1]ವಿ-|
ಸ್ಫುರಿತಪ್ರದೀಪನಾ ಕುರು-
ಧರೆಯೊಳ್ ಕುರುಪತಿಯನಱಸಿದಂ ಪವನಸುತಂ || ೧೧

ಗುರು ಲಕ್ಷ್ಯಸಿದ್ಧಿ[2]ಯಿಲ್ಲೆನೆ[2]
ಪರಿವಂಬಂ ಪರಿದು [3]ಪಿಡಿದು ಬೇಗಂ ತರ್ಪಂ-|
ತಿರೆ ಪವನಜವದೆ ಪವನಜ
ಪರಿದಂ ಮಾಣ್ದಿರದೆಯಲ್ಲಿಯಿದಿರಂ[3] ಬಟಿಯಂ || ೧೨

ಅಂತಿದಿರಂ ಬಟಿಯಂ ಪಾಸುಂ ಪೊಕ್ಕುಂ ದುಗುಣಮುಂ ತಿಗುಣಮುಂ ಅಡ್ಡಮುಂ ತಿಗಟಮುಂ ಪರಿದು ವೈಯಾಕರಣನಂತೆ ಶಬ್ದಮನಾಲಿಸಿಯುಂ ಬೇಂಟೆಕಾಱನಂತೆ ಅಡಿವಜ್ಜೆಯನಱಸಿಯುಂ ಗರುಡನಂತೆ ಪಾವಿನ ಪಱವಿಗೆಯ ನಾರಯ್ದು ನೋಡಿಯುಂ ವೈದ್ಯನಂತೆ ಅಹಿತಗದಾನ್ವೇಷಣಂಗೆಯ್ದು ನೋಡಿಯುಂ ಮುನ್ನಂ ಪರಶುರಾಮನೀ ನೆಲದೊಳುಳ್ಳರಸುಮಕ್ಕಳೆಲ್ಲರುಮಂ ಇರ್ಪತ್ತೊಂದು ಸೂೞ್ವರೆಗಂ ಪಿಳ್ಳೆ ಪೆಸರಿಲ್ಲದಂತು ಕೊಂದವಂದಿರ ನೊರೆನೆತ್ತರೊಳ್ ತೀವಿ ತನ್ನ ತಾಯ್ಗೆ ನೀರಿಟ[4]ಯ[ಲುಂ][4] ತಂದೆಗೆ ನೀರ್ಗುಡಲುಂ ಎಂದು ಮಾಡಿದ ಸಮಂತಪಂಚಕಂಗಳೆಂಬ ಪೆಸರ ಪೆರ್ಮಡುಗಳೊಳಗೆ ಮೂಡಿ ಮುೞ್ಕಾಡಿ ನೋಡಿಯುಂ ನಾಲ್ವತ್ತೆಣ್ಗಾವುದ ಪರಿಪ್ರಮಾಣ ಕುರುಕ್ಷೇತ್ರದೊಳೆಲ್ಲಿಯುಂ ದುರ್ಯೋಧನನನಱಸಿ ಕಾಣದೆ ವಿಸ್ಮಯಂಬಟ್ಟು ಅವನ ಬಿಟ್ಟ ಬೀಡಿಂಗೆ ನಿಟ್ಟುರಿಗೊಂಡು

ಜತುಗೃಹದೊಳ್ ಸುಡಲ್ ಬಗೆದನೆಲ್ಲಿದನಿಕ್ಕಿ ವಿಷಾನ್ನಮಂ ಮರು-
ತ್ಸುತನನುಪಾಯದಿಂ ಕೊಲಲೊಡರ್ಚಿದನೆಲ್ಲಿದನಾ ದುರೋದರ-|

[1] ಸ್ವೀಪಾ = (ಅ) ; ತಿತ (ನ, ಅ೧ಪಾ). [2] ಸ್ವೀಪಾ = (ಮ, ಅ೩) ; ಯಲ್ಲಿಯೆ (ನ), ಯಲ್ಲಿಯ (ಅ೧). [3] ವೇಡಿಪಬ ××× ದಂ ಮಾಣ್ದಿರದೆ ಮರುಜ್ಜವದಿಂದಂ ಮರುತ್ಸುತಂ ಪರಿವನಾಗರಿಪಾರುಂ (ಮ). [4] ಯಂಬಂ (ನ), ಯವುಂ (ಅ).

ವ್ಯತಿಕರದೊಳ್ ಪರಾಭವಿಸಿ ಕೃಷ್ಣೆಯನುಯ್ದು ಪರಾಧಿಯೆಲ್ಲಿದಾ
ಕೃತಕಸಭಾಪ್ರವೇಶಕರನೆಲ್ಲಿದನೆಲ್ಲಿದನೋ ಸುಯೋಧನಂ || ೧೩

ಭರತಕುಲೇಂದುಕಲಂಕಂ
ಭರತಾನ್ವಯರಾಜಭವನ ರಾಜಕಪೋತಂ |
ಕುರುಕೇತುವೆಲ್ಲಿದಂ ತ-
ತ್ಕುರುಕುಲಲಯಕೇತು ಭೀಮಸೇನಂ ಬಂದಂ || ೧೪

ಎಂದು ಸಿಂಹಗರ್ಜನೆಯಿಂ ಗರ್ಜಿಸಿ ಕುರುರಾಜದ್ವಾರೋಪಾಂತಮನೆಯ್ದೆವಂದಾಗಳ್

ದೆಸೆಯಂ ತೆಕ್ಕನೆ ತೀವಿ ಪರ್ವಿ ಗಗನಂ ಕೂಡಿಟ್ಟವೋಲ್ ಸೀಳ್ದಗು-
ರ್ವಿಸೆ ಬಾಹುಭ್ರಮಿತಾಭ್ರವಿಭ್ರಮಗದಂ ಕೌರವ್ಯರಂ ತಿಂದ ರ-|
ಕ್ಕಸನೋ ಈತನೊ ಭೀಮಸೇನನೆನುತುಂ ಗಾಂಧಾರಿ ಬಳ್ಕುತ್ತೆ ಬೆ-
ಕ್ಕಸಮುತ್ತಳ್ ಬರೆ ಕಂಡು ಪಾಂಡವಬಲಪ್ರಾಕಾರನಾಕಾರಮಂ || ೧೫

ಅಂತು ಕಂಡು ಬಿಲ್ಲುಂಬೆಱಗುವಾಗಿ

ಎನ್ನಾತ್ಮಜರಂ ನೂರ್ವರು-
ಮಂ ನುಂಗಿದ ತೆಱದೆ ನುಂಗೆ ಬಂದಂ ಭರದಿಂ |
ಪನ್ನಗಕೇತನನುಮನಿಂ-
ತೆನ್ನೆಯಮಾಯ್ತೆಂದು ಪಿರಿದುಮುಮ್ಮಳಿಸುತ್ತುಂ || ೧೬

[ಇರ್ಪ]ನ್ನೆಗಂ ಕಯ್ವೆಸರದಿಂ ಗುರುಜನಕ್ಕೆ ಸಮುಚಿತಾಚಾರಮಂ ಮೆಱೆದು ಭೀಮಂ ಭೀಮನಾದಮಂ ನೆಗಟ್ಟಿ

ಧೃತರಾಷ್ಟ್ರಕ್ಷಿತಿಪಾಲ ಕೇಳ್ ಜನನಿ ಕೇಳ್ ಗಾಂಧಾರಿ ಕೊಂದೆಂ ಭವ-
ತ್ಸುತರಂ ನೂರ್ವರುಮಂ ಗದಾಪ್ರಹತಿಯಿಂ ದುಶ್ಶಾಸನೋರಃಸ್ಥಳ-|
ಕ್ಷತಜಾಸೃಗ್ಜಲಸೇಕದಿಂ ತಣಿಪಿದೆಂ ಕೋಪಾಗ್ನಿಯಂ ಬಂದೆನು-
ದ್ಧತನಂ ಕೋಪಕೃತಾಪರಾಧಶತನಂ ನುಂಗಲ್ಕೆ ಪಿಂಗಾಕ್ಷನಂ || ೧೭

ಎಂಬುದುಂ ಗಾಂಧಾರಿ ಜರಾಸಂಧಾರಿಗೆ ಬದ್ಧಾಂಜಲಿಯಾಗಿ

ಅನಿಬರ್ ತನಯರ ದುಃಖಮ-
ನನುಭವಿಸಿಯುಮಣಮೆ ಪೋಗವೆಮ್ಮಸುಗಳ್ ನೀ-|
ನಿನಿತನೆಮಗೊಳ್ಳಿಕಯ್ ಭೀ-
ಮ ನುಂಗು ಮುನ್ನೆಮ್ಮನೆಮ್ಮ ಸುತನಂ ಬಱಿಯಂ ‖ ೧೮

ಎಂಬುದುಂ ಅನ್ನೆಗಮಿತ್ತ ತ್ವರಿತಗತಿಯಿಂ [1]ವಿಂಧ್ಯಕನೆಂಬ ಕಿರಾತ ದೂತಂ[1] ಬಂದು ದೂರಪ್ರಣತನಾಗಿ ದೇವಾ ದುರ್ಯೋಧನನಂ ಕುರುಕ್ಷೇತ್ರ ದೊಳೆಲ್ಲಿಯುಮಱಸಿಯುಂ ರೂಪುಗಾಣದೆ ಮಧ್ಯಂದಿನಸಮಯದೊಳ್ ತಪನ ತಾಪದಿಂ ತೃಷ್ಣಾಭಿಭೂತನಾಗಿ ಸಕಲಜ[2]ನಾಪ್ಯಾಯ[2]ನಕಾರಿಯಪ್ಪ ವೈಶಂ ಪಾಯನಸರೋವರಕ್ಕೆ ನೀರ್ಗುಡಿಯೆ ಪೋಗಿ ಹಲ ಕುಲಿಶ ಕಮಲ ಶಂಖ ಚಕ್ರ ಲಾಂಛನಮಪ್ಪ ಅಡಿವಜ್ಜೆಯಂ ಕೊಳದ ತಡಿಯೊಳ್ ಕಂಡೆಂ ಅಲ್ಲಿ ಪೊಱಮಟ್ಟ ಪಜ್ಜೆಯಲ್ಲದೆ ಪೊಕ್ಕ ಪಜ್ಜೆಯಂ ಕಾಣೆನೆನೆ ಪವನತನಯನವನ ನೊಡಗೊಂಡು ಬಂದು ಧರ್ಮತನಯಾದಿಗಳ್ಗೆ ತದ್ವೃತ್ತಾಂತಮನೆಲ್ಲಮನಱಿಪೆ ಯುಕ್ತಿಯುಕ್ತ[3]ಮ[3]ಪ್ಪ ದೂತನ ಮಾತಂ ಸಕಲಜಗದುತ್ಪತ್ತಿಸ್ಥಿತಿಪ್ರಳಯ [4]ಭಾವನನೆ[4]ನಿಸಿದ ವಿಷ್ಣು ಕೇಳ್ದು ಮನದೊಳ್ ನಿಶ್ಚಯಿಸಿ

ದ್ಯುನದೀಜಂ ಕುಡೆ ತೋಯಮಂತ್ರಬಲದಿಂ ಪೊಕ್ಕಿರ್ದಪಂ ಕಾಲವಂ-
ಚನೆಗೆಯ್ಯಲ್ ಕೊಳನಂ ಹಲಾಯುಧಕೃಪಾಶ್ವತ್ಥಾಮರುಂ ನಾಗಕೇ-|
ತನನೊಳ್ ನಾಳೆಯೆ ಕೂಡಿ ಬರ್ಪರವರಿನ್ನುಂ ಬಾರದನ್ನಂ ಸುಯೋ-
ಧನನಂ ಮುನ್ನಮೆ ಕಯ್ಗೆ ಮಾಳ್ಪುದು ಬಱಿಕ್ಕಾಗರ್ಗಂ ಗೆಲಲ್ ಬರ್ಕುಮೇ ‖

ಅದಱಿಂದೀಗಳೆ ಪೋಗಿ ಪೂಗೊಳನಂ ಮುತ್ತಿ ದುರ್ಯೋಧನನಂ ಪೊಱ ಮಡಿಸಿ ಪಗೆಯಂ ಪಱಿವಡಿಪುದೆಂದು ಅರವಿಂದನಾಭಂ ಧರ್ಮನಂದನಾದಿ

---

[1] ಸ್ತ್ರೀಪಾ=(ಅ೧) ; ವಿದ್ಯಕನೆಂಬ (ನ), ಜಾಲಕಂ ವಿಂದಕನೆಂಬ ಕಿರಾತದೂತರು (ಮ), ವಿಂಧ್ಯಕಜಾಲಕರೆಂಬ ಕಿರಾತದೂತರ್ (ಅ೩). [2] ಸ್ತ್ರೀಪಾ = (ಮ) ; ಗತ್ಪಾವ (ನ, ಅ೧). [3] ನ (ನ, ಅ೧). [4] ಪ್ರಭುವೆ (ಮ, ಅ೩).

ಗಳನೊಡಗೊಂಡು ಬಂದು ಕಿರಾತದೂತಸಂ[1]ಸೂಚಿತಮಪ್ಪ[1] ಅಡಿವಜ್ಜೆಯಂ ಕಂಡು ಸುಯೋಧನನಡಿವಜ್ಜೆಯಪ್ಪುದಂ ತಪ್ಪಿಲ್ಲದಱಿದು ನಿಸ್ಸಂದೇಹಚಿತ್ತರಾಗಿ

ಭರತಜರೊಳ್ ಮುನ್ನಿಲ್ಲದ
ಪರಿ[2]ಭಾಷೆಯ[2]ನುಂಟುಮಾಡಿ ಪೆಱಗಡಿಯಿಟ್ಟಂ |
ಕುರುರಾಜನೆಂದು ಲಜ್ಜಾ-
ಭರದಿಂದಂ ತಲೆಯನೆಱಗಿದಂ ಧರ್ಮಸುತಂ ‖ ೨೦

ಎಂದು ದುರ್ಯೋಧನನ ಮನದ ಧೈರ್ಯಕ್ಷತಿಗೆ ಮನಃಕ್ಷತನಾಗಿ ಸಿಗ್ಗಾಗಿ ತಲೆಯಂ ಬಾಗಿ ಧರ್ಮನಂದನನಿರೆ

ವಿರುವತ್ಸಾರಸರಾಜಹಂಸರವದಿಂದೇವಂದಿ[3][ರೀ][3] ಬನ್ನಿಮಿಂ-
ತಿರಿಮೆಂದಾದರಿಪಂತುಟಾಯ್ತು ಪವನೋದ್ಧೂತೋತ್ತರಂಗಾಂಬುವಿಂ |
ತರದಿಂ ಕಾಲ್ಗೆಱಪಂತುಟಾಯ್ತು ವಿಕಚತ್ಪಂಕೇಜದಿಂ ಪಂಕಜಾ-
ಕರಮರ್ಘ್ಯಂಗುಡುವಂತುಟಾಯ್ತು ನಿಲಜಂಗಭ್ಯಾಗತಪ್ರೀತಿಯಿಂ ‖ ೨೧

ಮೀಂಗುಲಿಗವಕ್ಕಿ ಕೊಳನೊಳ್
ಮೀಂಗೆಱಗುವ ತೆಱದಿನೆಱಗಿ ನೋಡಿಲ್ಲಿರ್ದಂ |
ಪಿಂಗಾಕ್ಷನೆಂದು ಪವನಸು-
ತಂಗಿರ್ಪೆಡೆದೋರ್ಪ ತೆಱದಿನೇಂ ಸೊಗಯಿಸಿತೋ ‖ ೨೨

ಒಳಗಾದಂ ಪಗೆವಂ ಸರೋವರದೊಳಿರ್ದಿನ್ನೆತ್ತ ಪೋಪಂ ಸರೋ-
ಜಲಮಂ ಮುಂ ತವೆ ಪೀರ್ದು ಪೀರ್ವೆನಸುಹೃದ್ರಕ್ತಾಂಬುವಂ ತೋರ್ಪೆನೆ- |
ನ್ನಳವಂ ಮತ್ಪತಿಗೆಂದು ಸಂತಸದೆ ಬಾಹಾಸ್ಫಾಲನಂಗೆಯ್ದು ದಿ-
ಗ್ವಲಯಂ ಮಾರ್ದನಿ[4]ಯಿಟ್ಟು[4]ಪೋಲ್ ಗಜಱಿದಂ ಚಾಳುಕ್ಯಕಂಠೀರವಂ ‖ ೨೩

ಆಗಳಾ ಕೊಳನಂ ಬಳಸಿ ಬಂದು ನಿರ್ಭರಮಾಗಿ ಬೊಬ್ಬಿಱಿ[5]ದಾರ್ದಬ್ಬರಂ[5]ಗೆಯ್ದು ಪಲತೆಱದ ಪಱೆಗಳಂ ಪೊಯ್ಸಿಯುಂ ಶಂಖಂಗಳಂ ಪೂರೈಸಿಯುಂ

---

1 ಸ್ವೀಪಾ = (ಅ) ; ಕೇತನನಪ್ಪ (ನ). 2 ಹಾಸಮ (ಮ). 3 ರೇ (ನ, ಅ).
4 ಗೆಯ್ವು (ಅ೧), ಯಪ್ಪ (ಮ). 5 ದಾರ್ದಂಬರಂ (ನ), ದಬ್ಬರಂ (ಮ, ಅ೩), ದಾರ್ದು ಭರಂ (ಅ೧, ಅ೩ಪಾ).

ಭೇರಿಗಳಂ ತಾಟಿಸಿಯುಂ ಕಾಹಳೆಗಳಸೊತ್ತಿಸಿಯುಂ ಪಂಚಮಹಾ[1]ಶಬ್ದಂ[1]ಗಳಂ ಬಾಜಿಸಿಯುಂ ಎಂತುಂ ಪೊಱಮಡಿಸಲಾಱದೆ ಸುಯೋಧನನಂ ಪೆಸರ್ಗೊಂಡು ನಕುಲನಾಸ್ಫೋಟಿಸಿ

ಅಂಕದ ಕಲಿ ಕುರುವಂಶ ಶ-
ಶಾಂಕನೆ ದುರ್ಯೋಧನಾಂಕನೆನೆ ನೆಗಟ್ದಯಶಃ-|
ಪಂಕದೊಳಮಿಾ ಸರೋವರ-
ಪಂಕದೊಳಂ ನೀನೆ ನಿನ್ನ ಸಿಂತರ್ದುವುದೇ || ೨೪

ಇಱುವ ಬೆಡಂಗನೊಳಿಱಿಯಲ್
ನೆಱೆಯಯ್ ನಿನಗಾನೆ ಸಾಲ್ವೆನೆಕ್ಕತುಳಕ್ಕಂ |
ನೆಱೆದಿರ್ದೆ ನಿರದೆ ಕೊಳನಂ
ಪೊಱಮಡು ತೋಱಿದಪೆನೆನ್ನ ಕೊಂತದ ಸವಿಯಂ || ೨೫

ಎನೆ ಸಹದೇವನುತ್ಕಟಿಸಿ

ಜವನ ಮಗನಿರ್ಕೆ ಸುಭಟರ
ಜವನಿರ್ಕೆ ಸಿತಾಶ್ವನಿರ್ಕೆ ನಕುಲನುಮಿರ್ಕ-|
ಣ್ಮುವೊಡೆನ್ನ ಬಾಳ ಸವಿಯಂ
ಸವಿ[2]ನೋಡಿ ಬಟಿ[ಕ್ಕೆ][2] ನೀರ ಸವಿಯಂ ನೋಡಾ || ೨೬

ಎಂಬುದುಂ ಅರ್ಜುನಂ ವಿಜೃಂಭಿಸಿ

ಮಾನಧನನೆನಿಸಿ ನಿನ್ನಭಿ-
ಮಾನಕ್ಷತಿ ಮಾಡಿದಯ್ ಸುಯೋಧನ [3]ನೀಂ [ಮ][3]-|
ತ್ತೀ ನೀರೊಳಗೆ[4]ಸಡಿ[4]ರ್ಕುಂ
ಮೀನಿರ್ಕುಂ ಕಪ್ಪೆಯಿರ್ಕುಮಿರ್ಪರೆ ಗಂಡರ್ || ೨೭

---

[1] ಸ್ವೀಪಾ =(ನ) ; ವಾದ್ಯಂ (ಅ ಗ), ವಾದ್ಯ (ಅಖ). [2] ಸವಿನಯದಿಂ ನೋಡಿ (ನ, ಅಗ), ನೋಡಿ ಬಟಿಕ (ಮ, ಅಖ). [3] ಸ್ವೀಪಾ =(ಟ) ; × ಮು (ನ), ನೀಂ ಮು (ಅ), ××× (ಮ). [4] ಸ್ವೀಪಾ =(ನ, ಟ) ; ಸದಿ (ಅಗ), ಸೆದಿ (ಅ ಖ), ××× (ಮ).

ಕುಮರಂಕರಾಮನೃಪನೊಳ್
ಸಮರಂ ನಿನಗರಿದು ತಕ್ಕುದೆನಗಂ ನಿನಗಂ |
ಸಮರಂ ನಿನ್ನಂ ನುಂಗ-
ಲ್ಕ ಮೋಘಶರಮಿರ್ದುವಿವಱ ಸವಿಯಿಂ ನೋಡಾ ‖ ೨೯

ಎಂಬುದುಂ ಧೃತರಾಷ್ಟ್ರನಂದನಂ ಮುನ್ನ ಗೆಯ್ದ ಅಧರ್ಮಮಂ ನೆನೆಯದೆ ಕುಲಕ್ರಮಯುಕ್ತಮಪ್ಪ ನಿರ್ಮಲಕ್ಷತ್ರಧರ್ಮಮನೆ ಬಗೆದು ಧರ್ಮನಂದನ ನಿಂತೆಂದಂ

ಭರತಾನ್ವಾಯದೊಳಂ[1]ದಿನಿಂದಿನೆಡೆಯೊಳ್[1] ಸಾಪ[2]ತ್ನ್ಯ[ದೊ][2]ಳ್
ಬದ್ಧಮ-
ತ್ಸರ[3]ಮಿಲ್ಲೆ[3]ಮ್ಮ ಸಕಾರಣಂ ಕದಡಿದಯ್ ಸಾವೆಯ್ದಿದಯ್ ನಷ್ಟಸೋ-|
ದರನಾಯಿತ್ತೆನಗಂ ಸ್ವಗೋತ್ರವಧೆಯಪ್ಪಾ ಪಾತಕಂ ಕೌರವೇ-
ಶ್ವರ ನೀಂ ಸಂಧಿಗೊಡಂಬ[4]ಡಿಂತು[4] ಕೊಳನಂ ಪೊಕ್ಕಿರ್ಪುದೇಂ ತಕ್ಕುದೇ ‖

ಎಂಬುದುಂ ಆ ನುಡಿಗೆ ಸೈರಿಸದೆ ಈ ಬೂತು ಎನ್ನ ಸರಂಗೇಳ್ದೊಡಲ್ಲದೆ ಪೊಱಮಡುವನಲ್ಲಂ ಇವಂಗಾನೆ [5]ಬಲ್ಲೆ[5]ನೆಂದು ಭೀಮಸೇನನುದ್ದಾಮ ಕೋಪಾಟೋಪ[6]ವಿರಚಿತ[6]ಬದ್ಧಭ್ರುಕುಟಿಯಾಗಿ

ಭವದನುಜನರುಣಜಲಮಂ
ಸವಿನೋಡಿದೆನಿಂತು ನಿನ್ನ ಬಲಜಲನಿಧಿಯಂ |
ಸವಿನೋಡಿದೆನೀ ಕೊಳನಂ
[7]ತವೆ ಪೀರ್ದು[7] ಬೞಿಕ್ಕೆ ನಿನ್ನ ಸವಿಯಂ ನೋೞ್ಪೆಂ ‖ ೩೦

---

[1] ಸ್ವೀಪಾ = (ನ, ಅ೧) ; ದಂದುವಿಂದುವರೆಗಂ (ಮ), ಳಂದಿನಿಂದು (ಅ೩).
[2] ತ್ನರೊ (ನ, ಅ), ತ್ನ್ಯರೊ (ಮ). [3] ಸ್ವೀಪಾ = (ಮ) ; ದಿಂದೆ (ನ, ಅ).
[4] ಸ್ವೀಪಾ = (ಮ); ಡಿನ್ನು (ನ, ಅ). [5] ಸ್ವೀಪಾ = (ಮ) ; ಪಂಪಭಾ, ೧೩. ೭೬ ವ. ಹೋಲಿಸಿ ; ಸಾಲೆ (ನ), ಸಾಲ್ವೆ (ಅ). [6] ಸ್ವೀಪಾ = (ಮ) ; ಚಿತ್ತದಿಂ (ನ, ಅ).
[7] ಸವಿನೋಡಿ (ಮ).

ಸ್ವರಮಂ ಕೇಳಲ್ಕೆನ್ನು-
ಗ್ರರೂಪಮಂ ನಿಂದು ನೋಡಲಣ್ಮದೆ ಸಮರಾ-|
ಕರಮುಂ ಬಿಸುಟ್ಟು ಕಮಲಾ-
ಕರಮಂ ಪೊಕ್ಕೆಲವೊ ಮರುಳೆ ಬರ್ದುಕಲ್ ಬಗೆವಾ ‖ ೩೧

ಜಳದೊಳ್ ಮಿಾನಿರ್ಪವೊಲ್ ನೀಂ ಕೊಳದೊಳೆ ಮುಳುಗಿರ್ದಕ್ಕಟಾ ಕೋಡ ಸೇಡಿಂ-
ಗೊಳಗಾದಯ್ ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ ತೋಱಿದಯ್ ನಿ-|
ನ್ನಳವಂ ಚೀ ಸ[1]ತ್ತರೇಂ[1] ಪುಟ್ಟರೆ ಪೊಱಮಡು ನೀಂ ಕಯ್ದುಗೊಳ್ ಕೌರವೇಂದ್ರಾ-
ಚಳವಜ್ರಂ ಬಂದನೀ[2]ಶಂ[2] ಕುರುಕುಲಮಥನೋದ್ಭೀಕರಂ ಭೀಮಸೇನಂ ‖

ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರಮೆಲ್ಲಿತ್ತೊ ಕೃಷ್ಣಾಂ-
ಬರಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ ಕೌಂತೇಯರಂ ಮ-|
ಚ್ಚರದಿಂ ಕಾಂತಾರದೊಳ್ ತಿಱ್ರನೆ ತಿರಿಪಿದ ಸೊರ್ಕೀಗಳೇನಾದುದೆಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮಸುದ್ದಾಮಭೀಮಂ ‖

ಎಂದು ಮತ್ತಮಿರದೆ

ಒಡೆಯಲಜಾಂಡಂ ಕುಲಗಿರಿ
ಕೆಡೆಯಲ್ ಪಿಱಿಯಲ್ಕೆ ಧಾತ್ರಿ ದಿವಿಜರ್ ನಡುಗ-|
ಲ್ಕೊಡರಿಸು[3]ವಿ[ನಂ][3] ಜಟಾಸುರ-
ಹಿಡಿಂಬಬಕವೈರಿ ಸಿಂಹನಾದಂಗೆಯ್ದಂ || ೩೪

ಅನಿಲತನೂಜನ ಸಿಂಹ-
ಧ್ವನಿಯಂ ಕೇಳ್ದಳ್ಕಿ ತತ್ಸರೋವರ[4]ದೆರ್ದೆ[4] ಪ-|

[1] ಸ್ವೀಪಾ — (ಮ, ಅ೩) ; ತ್ತೊಡೇಂ (ನ, ಅ೧). [2] ಗಳ್ (ಮ, ಅ೩). [3] ವಿಗೆಗ (ನ, ಅ೧ಪಾ), ವಿನೆಗ (ಅ), ವನ್ನೈ (ಮ). [4] ದಸು (ಮ).

ವ್ವನೆ ಪಾಱುವಂತೆ ಪಾಱಿದು-
ವನಾಕುಳಂ ಕೊಳದೊಳಿರ್ದ ತದ್ವಿಹಗಕುಳಂ || ೩೫

ಅಳುರ್ದು ಕೊಳೆ ಭೀಮಕೋಪಾ-
ನಳನೆಸರ್ವೊಯ್ದಿಟ್ಟ ಜಲದವೊಲ್ ಮಱುಗಿದುದಾ |
ಕೊಳದ ಜಲಮೆಯ್ದೆ ಕಾಯ್ದೆ ಸ-
ರೊಳೆ ಕೂಡ್ ಕುದಿವಂತೆ ಕುದಿದುವನಿಮಿಷತತಿಗಳ್ || ೩೬

ಅಂತು ಜಲಚರಜೀವರಾಶಿಗಳೆಲ್ಲವಸುಂಗೊಳೆ ಗೋೞುಂಡೆಗೊಳೆ ಕೂಱುಗದಿಗೊಳೆ ಮಹೋತ್ತುಂಗ[1][ಸಿಂಹ]ಕೇತನಂ[1] ಸಿಂಹನಾದಂಗೆಯ್ಯೆ

ಆ ರವಮಂ ನಿರ್ಜಿತಕಂ-
ಠೀರವರವಮಂ ನಿರಸ್ತಘನರವಮಂ ಕೋ-|
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ || ೩೭

ಅಂತು ಬೆಮರ್ತುಮ್ಮಳಿಸಿ ಸೈರಿಸಲಾಱದೆ ಜಲಮಂತ್ರಮನೇನುಮಂ ಬಗೆಯದೆ ಕೋಪೋದ್ರೇಕಮನೆ ಬಗೆದು

ಸಲಿಲಸ್ತಂಭನವಿದ್ಯಾ-
ಬಲಮನಪೇಕ್ಷಿಸಿದನೆನ್ನದುರಗಪತಾಕಂ |
ಬಲಹಾನಿಯಾಗಿ ಕೊಳ[2]ದೊಳ-
ಗುಳಿದಿರ್ದಪನೆಂದು ನಗರೆ ಕೂರದರೆನ್ನಂ || ೩೮

ತೃಣವಲ್ಲಘುಜೀವಿತರ-
ಕ್ಷಣಾರ್ಥದಿಂ ಕುಲದ ಛಲದ [3]ಚಾಗಮನಾಂತುಂ |
ಗುಣಹಾನಿಯಾಗಿ ಪುರುಷರ
ಗಣನೆಗೆ ವಂದೆನ್ನನಾನೆ ಲಘುಮಾಡುವೆನೇ[3] || ೩೯

---

[1] ಸಂಗಕೇತನಂ (ಮ); (ನ, ಅ) ಗಳಲ್ಲಿ ಏನೂ ಇಲ್ಲ. [2] ಸ್ವೀಪಾ = (ಮ); ದೊಳು ಮುಳುಗಿ (ನ), ದೊಳ್ ಮುಱುಗಿ (ಅ). [3] ಗುಣಗೌರವಮಂ ಗುಣಿಯಿಸೆಯು ××× (ಮ).

ಮುನಿವಂ ಮೂದಲಿಸಿಯುಮಿ-
ನ್ನೆನಿತಂ ಪೊಕ್ಕಿರ್ಪನೆಂದು ಚಿತ್ತಕ್ಷೋಭಂ |
ತನಗಾಗೆ ಜಲಚರಕ್ಷೋ-
ಭನಿನಾದಂ [1]ಪೊಕ್ಕು ಪೊಣ್ಮೆ ವಿ[ಬುಧ]ಕ್ಷೋಭಂ[1] || ೪೦

ಆಗಳಾ ಜಲಸ್ತಂಭಮಂತ್ರಮೆಲ್ಲಂ ಪರಿಣಾಮರಮಣೀಯವಾಗದೆ ಕಿಡೆಯುಂ ಅಹಂಕಾರಂಗಿಡದೆ

ನಿಜಮಕುಟಸ್ಫುರನ್ಮಣಿಗಣಚ್ಛವಿಯಿಂ ಸುರಚಾಪಲೀಲೆ ಪಂ-
ಕಜವನದೊಳ್ ಮನಂಗೊಳಿ[2]ಸೆ[2] ತನ್ನಯ ಮೇ[3]ಗೊಗೆ[3]ದಿರ್ದ ನೀಲನೀ- |
ರಜವನದಿಂ ಕಱಂಗಿ ಕಮಲಾಕರದಿಂ ಪೊಱಮಟ್ಟ[4]ನುನ್ನತೋ-
ದ್ಭು[4]ಜಯುಗತೋರಣಾಯಿತ ಗದಾಪರಿಘಂ ಫಣಿರಾಜಕೇತನಂ ‖ ೪೧

ರಸೆಯಿಂ ಕಾಲಾಗ್ನಿ ರುದ್ರಂ ಪೊಱಮಡುವವೊಲಂತಾ ಸರೋಮಧ್ಯದಿಂ ಸಾ-
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟೆಲ್ಲಿದಂ ಭೀಮನೆ[5]ಂದೆ- |
ಣ್ದೆ[5]ಸೆಯಂ ನೋಡುತ್ತೆ ಮತ್ತದ್ಭುತಸಟಸಿಟಿಲಾಲೋಲಕೀಲಾಕ್ಷಿವೊಲ್ ದ-
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ ‖

ಅಂತು ನಿಜಭುಜಗದೆಯಂ ತೂಗುತ್ತುಮಿರ್ದ ದಂದಶೂಕಪತಾಕನ ಸೆರಗಿಲ್ಲದ ಮೆಯ್ಗಲಿತನಕ್ಕೆ ಮೆಚ್ಚಿ ತಲೆಯಂ ತೂಗಿ ನಿಜಭುಜಪ್ರತಾಪ ನಿರ್ಜಿತನಿಖಿಲಭೀಮಸೇನಂ ಭೀಮಸೇನಂ ಕೌರವನಿದಿರ್ಗೆ ವಂದು

ನಿನ್ನನುಜನರುಣಜಲಮಂ
ಮುನ್ನಂ ತವೆ ಪೀ[6]ರ್ದೊಡಂಜಿ ನೀಂ ಪುಗೆ ಕೊಳನಂ[6] |
ಬೆನ್ನನೆ ಬಂದಾತಂ ಶೌ-
ರ್ಯೋನ್ನತನೀಯಿರ್ದನಲ್ತೆ [7]ಕೌರವಮಲ್ಲಂ[7] || ೪೩

---

[1] ಪೊಣ್ಕೆ ಪೊಣ್ಮ ವಿಭುವಕ್ಷೋಭಂ (ನ), ಪೊಕ್ಕು ಪೊಣ್ಮ (ಅ), ಪೊಣ್ಮೆ ಪೊ ××× (ಮ). [2] ಸ್ತ್ರೀಪಾ =(ಅ); ಸಿ (ನ, ಮ). [3] ಲಿಸೆ (ನ, ಅ), ಗೊಗ (ಮ). [4] ಸ್ತ್ರೀಪಾ = (ಮ); ನಾಗಳುಂ ಭು (ನ, ಅ). [5] ಸ್ತ್ರೀಪಾ = (ಮ, ಅ೩); ದಿರ್ದೆ (ನ, ಅ೧). [6] ರ್ದನೆನ್ನ ನರಸುತ್ತೀಗಳ್ (ಮ). [7] ಸಾಹಸಭೀಮಂ (ಮ).

ಎಂದು ನೆಱನನುಂಟುಮಾಡಿ ಮೂದಲಿಸಿ ನುಡಿಯೆ ದುರ್ಯ್ಯೋಧನಂ ಅತಿ ಕ್ರೋಧಾನಲನಾಗಿ

ಯಮರಾಜಪ್ರಿಯಸೂನುಗಂ ನಿನಗಮಾ ಗಾಂಡೀವಧನ್ವಂಗಮಾ
ಯಮಳರ್ಗಂ ಪ್ರಿಯೆಯಪ್ಪ ಕೃಷ್ಣೆಯ ಕಚಪ್ರಾರಂಭಮಂ ಬಾಹುವಿ-|
ಕ್ರಮಿ ದುಶ್ಯಾಸನ[1]ನಂದು[1] ಮುಂದೆ ತೆಗೆವಂ[2]ದೆಲ್ಲಿರ್ದೆಯೋ[2] ಗಂಡಗ-
ರ್ವಮುಮಂದೆಲ್ಲಿಗೆ ಪೋಯ್ತು [3]ಷಂಡ[3] ನಿನಗಿಂ[4]ದೀ[4] ಗಂಡನಾರ್ ಮಾಡಿದರ್ ||

ಅಸುರಂ ವಸುಧಾತಳಮಂ
ರಸಾತಳಕ್ಕುಯ್ಯೆ ಹರಿ ತರಲ್ ಪೊಕ್ಕವೊಲೀ |
ವಸುಮತಿಯನೆತ್ತಿ ನಿನ್ನಯ
ದೆಸೆ[5]ಯಿಂ ತರೆ[5] ಪೊಕ್ಕನಂಜಿ ಪೊಕ್ಕನೆ ಕೊಳನಂ || ೪೫

ನಾ[6]ಟ್ಕಡೆ[6]ಗಳೆದುಱಿ ಬೇರಂ
ಬಿಟ್ಕೆಯುಮಂ ತಿಂದು ವನದೊಳಡಗಿರೆ [7]ನೀಮುಂ |
ನೀಟ್ಕರಿಸಿ ನಿಂದುವೀಗಳ್[7]
[8][ಪೇೞ್ ಕಮ್ಮೃಸುವರೆ][8] ಬಿರುದುಮಂ ಬೀರಮುಮಂ || ೪೬

ಪುಟ್ಟಂ ಸಟ್ಟುಗಮಂ ಕೊಂ-
ಡಟ್ಟಾಱಿಸಿ ಬೋನ[9]ಮಿಟ್ಟು[9] ಒಂದೆಯೊ ಗದೆಗೊಂ-|
ಡೊಟ್ಟೈ[1)]ಸಿ ಕಾದುವಂತುಟು[10]
ತೊಟ್ಟನೆ ಕೊಳೆ ನಿನಗೆ ಗಂಡಗರ್ವಮುಮಾಯ್ತೇ || ೪೭

---

[1] ಸ್ವೀಪಾ = (ಮ) ; ನಿನ್ನ (ನ, ಅ). [2] ತ್ತಲ್ಲಿತ್ತೊ ಪೋ (ಮ). [3] ಸಂದ (ಅಗಪಾ, ಮ.) [4] ಸ್ವೀಪಾ = (ಮ) ; ತೀ (ನ, ಅ). [5] ಸ್ವೀಪಾ = (ಅ) ; ಯಂ ತವೆ (ನ), ಯಂ ತರೆ (ಮ). [6] ಸ್ವೀಪಾ = (ಅ) ಳ್ಕಡಿ (ನ), ಲ್ಕಡಿ (ನ). [7] ನಿಮ್ಮಂ ಕೀಳ್ಕರಿಸಿ ತಾರಸಿಸಿತುಂ (ಮ). [8] ಸ್ವೀಪಾ = (ಅ); ಪೇಳ್ಕುಂ ಪೊಸಱಿಸಲು (ನ ಅಗಪಾ), ಬೀಳ್ಕುಮೆ ಷಂ ××× ಪಲು (ಮ). [9] ವೆತ್ತಿ (ಮ). [10] ಸ್ವೀಪಾ = (ಮ) ; ಸುವಂತುಟಾದುದೆ , ಅ).

ಎಸ್ಯನಿಡುವಕ್ಕಿಗರ್ಚುವ
ಬೆಸನಂ ಕಯ್ಗೆಱೆವ ಕಂಚುಗರ್ಚುವ ಬೆಸನಂ |
ಬೆಸ[1]ನಕ್ಕ[ಂ] ಮತ್ಸ್ಯನ [1]ಬಾ-
ಣಸಿಗಂ ಚಾರಿತ್ರರೆಲವೊ ನಿನಗೀ ಬೆಸನಂ ‖ ೪೮

ಎಂದು ಮುಟ್ಟೆ ಝೂದಲಿಸಿ ನುಡಿಯೆ ಭೀಮಸೇನಂ ಮುಗುಳ್ನಗೆ ನಕ್ಕು

ಪಿರಿಯಣ್ಣನ ನನ್ನಿಯನಾ-
ದರದಿಂ ಕಾಯಲ್ಕೆ ಪೆಱರ್ಗೆ ಬಾಣಸುಗೆಯ್ದೆಂ |
ಕುರುವಂಶಜ ಕೇಳ್ ನಿನ್ನೀ
ಶರೀರಮಾಂಸದೊಳೆ ಮರುಳ್ಗೆ ಬಾಣಸುಗೆಯ್ವೆಂ ‖ ೪೯

ಜತುಗೇಹಾನಲದಾಹದಿಂ ವಿಷವಿಶೇಷಾ[2]ಲಿಪ್ತ[2]ಗುಪ್ತಾನ್ನದಿಂ
ಕೃತಕದ್ಯೂತವಿನೋದದಿಂ ದ್ರುಪದಜಾಕೇಶಾಂಬರಾಕೃಷ್ಟಿಯಿಂ |
ಧೃತರಾಷ್ಟ್ರಾತ್ಮಜ ಪಾಂಡುರಾಜಸುತರಂ ಮುನ್ನಂ ಕೊಲ[3][ಲ್ಕೊಡ್ಡಿ][3]ದಯ್
ಗತಕಾಲಂ ಲಯಕಾಲಮಾಯ್ತು ನಿನಗಿನ್ನಾಯ್ತಂತ್ಯಕಾಲಂ ಗಡಾ ‖ ೫೦

ಎಂದು ಮಮೋದ್ಘಾಟನಂಗೆಯ್ದು ಮೂದಲಿಸಿದನಿತಱೊಳೆ ನಿಂದುರಗ
ಧ್ವಜಂ ಮುನಿದನಿಬರ ಕೊಗಮಂ ನೋಡಿ

*ಇರಲಿಂತೀ ಮಾರ್ತ್ರಿಪುತ್ರರ್ ಬ[ಡವು]ಗಳವರೇಗೆಯ್ದಪರ್ ಧರ್ಮಪುತ್ರಂ
ಬೆರಸೀಗಳ್ ಬರ್ಕೆ ಭೀಮಂ ಹರಿಸುತಸೊಡನೀ ಮೂವರುಂ

ಬರ್ಕೆ ಮೇಣ- |

---

[1] ಬೆಸನಕ್ಕು ಮತ್ಸ್ಯಗೃಹ (ನ, ಅ೧); ಬೆಸನಲ್ಲದೆ ಮತ್ಸ್ಯನ ಬಾ (ಮ, ಅ೩).
[2] ಸ್ವೀಪಾ=(ಮ, ಅ೩); ಸೀಕ (ನ, ಅ೧). [3] ಲ್ಕಾದಿ (ನ), ಲ್ಕೋಡಿ (ಮ), ಲ್ಕೋಱು (ಅ). * ಈ ಪದ್ಯ (ನ, ಅ)ಗಳಲ್ಲಿ ಅರ್ಧಸಮವೃತ್ತವೂ (ಮ)ದಲ್ಲಿ ಮಹಾಸ್ರಗ್ಧರಾ ವೃತ್ತವೂ ಆಗಿದೆ. ಯಾವ ಮಾತೃಕೆಯ ಪಾಠವೂ ತೃಪ್ತಿಕರವಾಗಿಲ್ಲ. ಗತ್ಯಂತರವಿಲ್ಲದೆ, (ಮ)ವನ್ನು ಮುಖ್ಯವಾಗಿ ಅವಲಂಬಿಸಿ, (ನ)ದಿಂದ ಅಲ್ಲಲ್ಲಿ ಸೂಚನೆ ಪಡೆದು, ಮೇಲಿನ ಪಾಠವನ್ನು ತಾತ್ಕಾಲಿಕವಾಗಿ ಕೂಡಿಸಿದೆ.

ಯ್ವರು[ಮೀ] ಬರ್ಕೆ ಕೃತಾಂತಾತ್ಮಜಪವನಜಗಾಂಡೀವಧನ್ವರ್ಕಳೀ ಮೂ-
ವರೊಳೊರ್ಬಂ ಬರ್ಕೆ ಕೃಷ್ಣಂ ತೊಡರ್ದಸಿಬರೊಳಂ ಬರ್ಕೆ ಮೇಣ್ ಬನ್ನ-
ಮೀವೆಂ ‖ ೫೧

ಎನೆ ಧರ್ಮನಂದನಂ ಧೃತರಾಷ್ಟ್ರನಂದನಂ ಮುನ್ನೆ ಗೆಯ್ದ ಅಧರ್ಮಮಂ ನೆನೆಯದೆ ನಿರ್ಮಲಕ್ಷತ್ರಧರ್ಮಮಂ ನೆನೆದು

ಆಗದು ಸಮರಂ ಗುಣಯುತ-
ನಾಗು ಮಹಾಭೋ[1]ಗಭಾಗಿ[1] ನಿನ್ನಾಳ್ವ ಮಹೀ-|
ಭಾಗಮುಮಂ ಸಕಲಮಹೀ-
ಭಾಗಮುಮಂ ನೀನೆ ಕೊಂಡು ಸುಖಮಿರಲಾಗಾ || ೫೨

* ಧರಣೀಚಕ್ರಮನೊಪ್ಪುಗೊಳ್ ಬಗೆಯದಿರ್ ವಿದ್ವೇಷಮಂ ನಮ್ಮ ನ-
ಯ್ವರನಿನ್ನಾಳ್ವೆಸಕಯ್ಸಿಕೊಳ್ ನೆನೆಯದಿರ್[2]ಕಿಡ್ಪೊಕ್ಕಿನೊಳ್ ತೊಟ್ಟುಕೊಂ-|
ಡಿರದೆಮ್ಮೊಂಬು[2]ದನಿಂಬುಕಯ್ ಮನ[3]ದೊಳೊಳ್ಪಿಂ ಶಾಂತಿ ವಿಶ್ರಾಂತಿ ಸೋ-
ದರ[3]ನೆಂಬಂತುಪಶಾಂತಿಯಂ ಕುರುಕುಲಕ್ಷ್ಮಾಪಾಲಚೂಡಾಮಣೀ || ೫೩

ಎನೆ ಹರಿಯೆಂದಂ ದುರ್ಯೋ-
ಧನ ಧರ್ಮತನೂಜನೊಳ್ಳಿತಂ ಪೇಳ್ದಪನಾ-|
ತನ ಪೇಳ್ದುದೆಸಗಿ ನೀನರ-
ಸನಾಗಿ ವಸುಮತಿಯನಾಳ್ವುದಾವುದು ದೋಷಂ || ೫೪

ಎಂಬುದುಂ ಭೀಮಸೇನನಿಂತೆಂದಂ

ನೀನಯ್ದು ಬಾಡದೊಳ್ ಸಂ-
ಧಾನಂ ಮಾಡಲ್ಕೆ ಪೋದೊಡೊಲ್ಲ[4][ದ]ನಿ[4]ನ್ನೀ |

---

[1] ಗಿಯಾಗು (ಮ, ಟ). * ಈ ಪದ್ಯದಲ್ಲಿ (ಮ)ಪಾಠ ಕೆಲಮಟ್ಟಿಗೆ ಬೇರೆಯಾಗಿದೆ ಮತ್ತು ತ್ರುಟಿತವಾಗಿದೆ; ಪ್ರಾಸವೇ ಬೇರೆಯಾಗಿದೆ. [2] ಕೆಂಪೊಕ್ಕೆಯೆಂದೆಂಬ ತನ್ನುವ ನೆಮ್ಮೆಂದು (ಮ). [3] ದಿಕ್ಕೈವಿ ××× ಂತಿ ××× ನೀನಾದನ (ಮ). [4] ದೆ ಮು (ನ, ಅ೩), ದೆನಿ (ಮ), ದ ಮು (ಅ೧).

ಮಾನಧನನೆಯ್ದೆ ನಿಜತನು-
ಜಾನುಜರಟ್ಟಾಡೆ ಸಂಧಿಯಂ ಮಾಡುವನೇ || ೫೫

ಎನೆ ದುರ್ಯೋಧನಂ ಭೀಮಸೇನನ ನುಡಿಯನೆ ಸಮರ್ಥಿಸಿ

ಇನತನಯನ [1]ನೇರ್ಪಿಂ[1]ಗ-
ರ್ಜುನನಂ ಮುಂ ಕೊಲ್ವೆನೆನ್ನ ತಮ್ಮನ [1]ನೇರ್ಪಿಂ[1]-|
ಗನಿಲಜನಂ ಕೊಲ್ವೆಂ ಕಮ-
ಲನಾಭ [1]ನೇರ್ಪಿಂ[1]ಗೆ ನೇರ್ಪುಗೊಳ್ಳದೆ ಮಾಣೆಂ || ೫೬

* [2][ತಾಂ][2] ಗಡ ಮಧ್ಯಸ್ಥಂ ನುಡಿ-
ವಂ ಗಡ ಪುದುವಾಳ್ಕೆಯೆನಗಮವರ್ಗಂ ಸಂಧಾ|
ನಂ ಗಡ ಸಂಧಿಯ ಮಾತಂ
ಲಂಘಿಸಿದೆಂ ಮುನ್ನಮಿನ್ನೊಡಂ[3][ಬಟ್ಟಪೆನೇ][3] || ೫೭

ವನವಾಸಮಲಿನನಂ ಯಮ-
ತನಯನನುಜ್ಜ್ವಳಿಸಿ ಗೋತ್ರಧವಳನನೆನ್ನಂ|
ಘನಮಲಿನಂ ಮಾಡಿದೆ ಕೃ-
ಷ್ಣ ನಿನ್ನ ವೋಲ್ ಶ್ವೇತಕೃಷ್ಣಕಾರಕರೊಳರೇ || ೫೮

ಯದುಕುಲಜಲನಿಧಿಯೊಳ್ ಪು-
ಟ್ಟಿ[4][ದಿರ]ಮರ್ದುಂ[4] ಸಂಜುವೊಡನೆ ಪುಟ್ಟುವ ವೋಲಂ-|
ಕದ ಹಳಿಯುಂ [5]ನೀನುಂ ಬಲ-
ನದರ್ಕೆ ಗುಣಿಯಾದ[ನಿತ್ತ][5] ನೀಂ ನಿರ್ಗುಣಿಯಯ್ || ೫೯

---

[1] ನಣ್ಪಿಂ (ಮ). * ಈ ಪದ್ಯದಲ್ಲಿ (ಮ)ದ ಪಾಠ ಕೆಲಮಟ್ಟಿಗೆ ಭಿನ್ನವಾಗಿದೆ.
[2] ×× (ನ), [ನೀಂ] (ಅ), ನಾಂ (ಮ). [3] ಸ್ತೀಪಾ — (ಅಗ); ಬ ××× (ನ)
[4] ್ಯಯುಮರ್ದಂ (ನ), ದೆಯುಮರ್ದಂ (ಅ), ದೆಮಧುವುಂ (ಮ). [5] ನಿನ್ನನು ಬಲನದಕ್ಕೆ ಗುಣಿಯಾದ ಮತ್ತೆ (ನ), ನೀನುಂ ಬಲ . . . (ಅ), ನೀನುಂ ಪುಟ್ಟಿದರವನುಂಗುಣಾಯುಮಾದ (ಮ).

ಎಂಬನ್ನೆಗಮಾ ಪ್ರಸ್ತಾಪದೊಳ್

ಹಲಮುಸಲಪಾಣಿ ಮಧುಪಾ-
ಟಲನೇತ್ರಂ ನೀಲವಸನನಾ ಧವಳಾಂಗಂ |
ಬಲನೇಕಕುಂಡಲಂ ಕುರು-
ಕುಲನೊಳ್ ಕೂಡಲ್ಕೆ ತಾಳಲಕ್ಷ್ಮಂ ಬಂದಂ ‖ ೬೦

ಅಂತು ಸುಯೋಧನಂಗೆ ಸೈಪು ಬರ್ಪಂತೆಯುಂ ಜಂಗಮಹಿಮಾಚಲಮೆ ಬರ್ಪಂತೆಯುಂ ಸಂಕರ್ಷಣಂ ಬಂದು ತಮ್ಮನಿಬರೊಂದಾಗಿ ಗೊಂದಣಿಸಿ ನಿಂದ ಪಾಂಡುನಂದನರುಮಂ ಏಕಾಕಿ[1]ಗನಾಗಿ ಸಾವಿಯ[1] ದೇಸಿಗನಾಗಿ ನಿಂದ ಕುರುಕುಲಸ್ವಾಮಿಯುಮಂ ಕಂಡು ದೇವಕೀನಂದನನ ವದನಾರವಿಂದಮಂ ನೋಡಿ ವಿಸ್ಮಯಾಕ್ರಾಂತಚಿತ್ತನಾಗಿ ಮನದೊಳ್ ಕಟ್ಟು[2][ಕ][2]ಡೆದು ತನಗೆಱಗಿದ ಫಣಿರಾಜಕೇತನನಂ ಮನದೆಱಕದಿಂ ಪರಸಿ ಗರುಡಕೇತನನುಮಂ ಪಾಂಡವರುಮಂ ಪರಸಲೊಲ್ಲದೆ ಮುಳಿದು ತಮ್ಮ[3][ನಂ ಅ][3]ಯ್ವರುಮಂ ನೋಡಿ ಕೌರವಕುಲಚೂಡಾಮಣಿಯೊಳೇನನಾಳೋಚಿಸಿದಯ್ ಎಂದು ಸುಡಿದ ಹಲಾಯುಧನ ನುಡಿಗೆ ಚಕ್ರಾಯುಧನಿಂತೆಂದಂ

ಎನಗಭಿವಂದಿತಾರ್ಥರವಧಾರಿಸು ಚಿತ್ತದೊಳಗ್ರಜಾತ ನೀಂ
ಮುನಿಯದೆ ಪಾಂಡುನಂದನರ್ಗೆ ಬಾಡಮನಯ್ದನೆ ಬೇಡಿ ಪೋಗೆ ದ್ರೋ-|
ಣನ ಧೃತರಾಷ್ಟ್ರಸಿಂಧುಸುತರೆಂದುದ[4]ನಾಡ[ನೆ][4] ನೀವಿದಂ ಸುಯೋ-
ಧನನೊಳೆ ಕೇಳ್ದು ಸಂಬುವುದೆರಬ್ದುಡಿಯಂ ಫಣಿರಾಜಕೇತನಂ ‖ ೬೧

ಎನೆ ದುರ್ಯೋಧನನೆಂದನೇಕೆ ಮುನಿವಿರ್ ನಿರ್ದೋಷಿಗಳ್ ಪಾಂಡುನಂ-
ದನರಾನೊಲ್ಲೆನೆ ಮುನ್ನಮೆಂತುಮಿವರೊಳ್ ಸಂಧಾನಮಂ ಪೇಟ್ದ್ವೆ[5]ನೊಂ|
ದ[5]ನೆ ಸತ್ತರ್ ತನುಜಾನುಜರ್ ಪಲಬರುಂ ತದ್ದುಃಖಮಂ ಸೈರಿಸ-
ಲ್ಕೆನಸುಂ ಬಂದಪು[6][ದಿಲ್ಲ] ಬರ್ಕೆ[6] ಪಗೆವರ್ ಸನ್ನದ್ಧನಾಗಿರ್ದಪೆಂ ‖ ೬೨

---
[1] ಯಾಗಿರ್ದ (ಮ). [2] ವ (ನ, ಅ). [3] (ನ, ಅ೧) ರಲ್ಲಿ ಇಲ್ಲ ; [ನನವರ] (ಅ೩).
[4] ವಾದೆ (ನ), ನೆನ್ನದೆ (ಮ), ನಾಡದೆ (ಅ೧), ಮಾಡದೆ (ಅ೩, ಅ೧ಪಾ). [5] ಸ್ವೀಪಾ = (ನ) ; ನೆಂದೆ (ಅ). [6] ದೆಂದಿಲ್ಲಿ ಬರ್ಕೆ (ನ), ದೆಂದೊಡಿರ್ಕೆ (ಅ).

ಇವರೆನ್ನನುವರಮಂ ನೋ-
ಡುವುದಲ್ಲದೆ ಬೇಱೆ ಪೆಱವು ಮಾತಿಂಗೆಡೆಯಿ-।
ಲ್ಲವಧಾರಿಪುದೆಂದೊಡೆ ಕೌ-
ರವೇಂದ್ರನಂ ಮುಸಲಪಾಣಿ ಮನದೊಳ್ ಪೊಗೞ್ದಂ ॥ ೬೩

ಅಂತು ಪೊಗೞ್ದು ರಾಜರಾಜನ ನಿರ್ವ್ಯಾಜಶೌರ್ಯಕ್ಕೆ ಸಂಕರ್ಷಣನಾಶ್ಚರ್ಯಂಬಟ್ಟು ಪೆಱತೇನುಮನೆನಲಱಿಯದೆ ಧರ್ಮನಂದನಾದಿಗಳ ಮೊಗಮಂ ನೋಡಿ ನಿಮ್ಮಯ್ವರೊಳಾರಾಗಿಯುಂ ಈತನೊಳೊರ್ವನೆ ಕಾದುವುದು ಕಾದಿ ಗೆಲ್ದಂಬಳಿಕ್ಕೆ ದುರ್ಯೋಧ[1]ನಂ ನೆಲನನಾಳ್ವಂ[1] ಆತಂಗುಱಿದ ನಾಲ್ವರ್ ಬೆಸಕಯ್ದುಬಾೞ್ವಿರ್ ಎಂದು ನುಡಿಯೆ ಭೀಮಸೇನನಿದಿರ್ಗೆ ವಂದು

ಅಱಿಮಗನಿರ್ಕರ್ಜುನನಿ
ರ್ಕಱಿಕೆಯ ಮಾದ್ರೀಸುತರ್ಕಳಿರ್ಕಟಿವಗೆಯಂ।
ಪಱಿಪಡಿಸಲ್ಕೆ ಹಲಾಯುಧ
ನೆಱೆದಿರ್ದಪೆನೆನಗೆ ತೋಱಿ ಬಿಡು ಕೌರವನಂ ॥ ೬೪

ಅಂತು ಮರುನ್ನಂದನಂ ರೋಹಿಣೀನಂದನಂಗೆ ನುಡಿದು ಧರ್ಮನಂದನಾದಿಗಳ ಮೊಗಮಂ ನೋಡಿ

ಪಗೆಗೆ ಮೊದಲಿಗನೆ[2]ನಾನಿ[2]ಡು-
ವಗೆ ಕೌರವನಂತದರ್ಕೆ ನೀಮೆಲ್ಲಂ ದಾ-।
ಯಿಗತನಮನಿಲ್ಲಿ ತೋಱಲ್
ತಗದೀತಂ ಮುನ್ನಮೆನಗೆ ದೊರೆಯಾಗಿರ್ದಂ ॥ ೬೫

ಎಂಬುದುಂ ಮಾರುತಿಗಂ ಫಣಿರಾಜಕೇತನಂಗಂ ಧರ್ಮನಂದನಾದಿಗಳಿರ್ದು ಧರ್ಮಯುದ್ಧಮನೆ ಸಮಕಟ್ಟಿದಾಗಳ್

---

ಸ್ವೀಪಾ=(ನ); ಪಂಪಭಾ, ೧೩.೯೦ ವ. ಹೋಲಿಸಿ; ನನಾಳ್ಗೆನೆಲನಂ (ಅ).
[2] ನಾಂಗಿ (ನ), ನಾಂ ನಿ (ಅ).

ವನರುಹನಾಭನ ಬಲದೇ-
ವನ ಸಾಕ್ಷಿಯೊಳಿರ್ದು ಕೌರವೇಶ್ವರನಾ ಭೀ-|
ಮನ ಕಯ್ವೊಯ್ದೊಡೆ ತದ್ದೇ-
ವನಿಕಾಯಂ ಪೊಗೞ್ದರದಟುಮಂ ಕುರುಪತಿಯಾ ‖ ೬೬

ಅಂತು ಧರ್ಮಯುದ್ಧಮಂ ಕಯ್ವೊಯ್ದಾಗಳ್

ಎನಿತು ಕುರುಕ್ಷೇತ್ರದೊಳೆಡೆ-
ಯನಿತುಂ ಬಱಿದಿಲ್ಲದಂತು ಶವಶತದಿಂ ತೆ-|
ಕ್ಕನೆ ತೀವೆ ರಣೋತ್ಸವದಿಂ-
ದನಿಲಸುತಂ ತಾನೆ ಸವಱಿದಂ ಕೊಳ್ಗುಳಮಂ ‖ ೬೭

ಪುದುವೆತ್ತೆಕ್ಕಟಿಗಾಳೆಗಂ ಸಮನಿಸಿತ್ತೆಮ್ಮಿಮ್ಮಾ ಗದಾಯುದ್ಧಮಂ
ತ್ರಿದಶರ್ ನೋಡಲೆ ಕೌತುಕಂ ಬೆರಸಿ ಬಂದಿರ್ದರ್ ನಭೋಭಾಗದೊಳ್ |
ಮದವದ್ವೈರಿಯನಿಕ್ಕಿ ಭೂವಳಯಮಂ ನಿಷ್ಕಂಟಕಂ ಮಾಡ್ಪೆನೆಂ-
ಬುದನೆಂದಾಹವಲಂಪಟಂ ಮಸಗಿದಂ ಚಾಳುಕ್ಯಕಂಠೀರವಂ ‖ ೬೮

# ೮. ಗದಾಯುದ್ಧಂ

ಶ್ರೀರಮಣಿಗೆ ಸಲೆ ತನ್ನಯ
ಪೇರುರಮಂ ಮಾಡ್ಪೆನೆಂಬ ಬಗೆ ಮಿಗೆ ಸಮರ-|
ಪ್ರಾರಂಭದೆ ಪೂಣ್ದಿರ್ದಂ
ಕೌರವಕುಲವಿಲಯಕೇತು ಸಾಹಸಭೀಮಂ ‖ ೧

ಅಂತು ಸಮರೋತ್ಸುಕಚಿತ್ತನಾಗಿ ಸಾಹಸಭೀಮಂ ದ್ರೋಣಾಚಾರ್ಯಂಗೆ ಮನದೊಳ್ ನಮಸ್ಕಾರಂ ಮಾಡಿ ದುರ್ಯೋಧನಂ ಬಲದೇವಂಗೆ ನಮಸ್ಕಾರಂ ಮಾಡಿ ಕನಕರಜತವಿಚಿತ್ರಾಲಂಕೃತಸ್ವರೂಪಸಮನ್ವಿತಂಗ[ಳ]ಪ್ಪ ಗದೆಗ[ಳ]ನಿರ್ವರುಂ ಆಯ್ದುಕೊಂಡು ವೈಶಾಖಸ್ಥಾನದೊಳ್ ನಿಂದು

ಸ್ಥಿರಬದ್ಧಮತ್ಸರರ್ ಭೀ-
ಕರ ಬದ್ಧಭ್ರುಕುಟಿಘಟಿತರದ್ಭುತರಟ್ಟಾ-|
ಸುರರಧಿಕಕೋಪಪಾಟಳ-
ಪರುಷೇಕ್ಷಣರೆನಿಸಿ ದೃಷ್ಟಿಯುದ್ಧಂಗೆಯ್ದರ್ ‖ ೨

ದೆಸೆದೇವತೆಗಳ್ಗೆ ಜಪಾ-
ಪ್ರಸೂನಮಂ ರಕ್ತಬಲಿಯುಮಂ ತಾಂ ಕುಡುವಂ-|
ತೆಸೆದಿರ್ದರೊ ಕಡೆಗಣ್ಗೊಳ್
ಪಸರಿಸೆ ಕಡುಗೆಂಪು [1]ಸಿಂಹಭುಜಗಧ್ವಜ[1]ರಾ ‖ ೩

ಉರಿಯನುಗುಳ್ವಂತೆ ಬಿಸುನೆ-
ತ್ತರನೆತ್ತಂ ಸೂಸುವಂತೆ ಬಿಚ್ಚನೆ ಬಿಟ್ಟ-|
ರ್ದೆರಡುಂ ಕಣ್ಗಳೊಳವರೊ-
ರ್ಬರನೊರ್ಬರ್ ನುಂಗುವಂತೆ ನೋಡಿದರೆನಸುಂ ‖ ೪

---

[1] ಸ್ವೀಪಾ=(ಮ) ; ಭೀಮದುರ್ಯೋಧನ (ನ, ಅ).

ಉದಯಾದ್ರಿಯುಮಸ್ತಾದ್ರಿಯು-
ಮುದಗ್ರಕೋಪೋತ್ಕರಂಗಳಿರ್ಪಂತಿರೆ ನೀ- |
ಳ್ದೊದವಿದರುನ್ನತಮೂರ್ತಿಗ-
ಳೊದವಿ ಗದಾಯುಧದೆ ಭೀಮಭುಜಗಧ್ವಜರುಂ ‖ ೫

ಕಿಱುಕಿಱುದೆ ಮೆಟ್ಟಿ ಮುಂದಂ
ಕಿಱುಕಿಱುದನೆ ಸಾರ್ಚಿ ತಮ್ಮ ಗದೆಗಳನಾಗಳ್ |
ಕಿಱುಕಿಱುದೆ ತಿರಿಪಿ ಮಾಣದೆ
ಕಿಱುಕಿಱುದನೆ ತೂಂಕಿ ತೂಂಕಿ ನೂಂಕಿದರೆನಸುಂ ‖ ೬

ಎಡದಡಿಯಂ ಪುಗಿಸುವ ಬಲ-
ದಡಿಯಂ ಪೊಱಗಿಡುವ ದಂಡೆಯಂ ನಿ[1]ಳ್ಕು[1]ವ ಕಯ್- |
[2]ನಡುಗದೆ ಗದೆಯಂ ಬೀಸುವ[2]
ಬೆಡಂಗು ರಂಜಿಸಿತು ಭೀಮದುರ್ಯೋಧನರಾ ‖ ೭

ದಪ್ಪರಿದಟ್ಟುಂ ಪೊಟ್ಟನೆ
ದೊಪ್ಪಧೊಗಪ್ಪೆನೆ ದಿಧಿಲ್ ಬುಧಿಲ್ಲೆನೆ [3]ಮೆಯ್ಗಳ್[3] |
ಸೊಪ್ಪುಸೊವಡಪ್ಪಿನಂ ಸೂೞ್
ತಪ್ಪದೆ ಕಡುಕಯ್ದು ಪೊಯ್ದರೊರ್ವರನೊರ್ವರ್ ‖ ೮

ಪಗಲುಳ್ಕ ಮುಳ್ಕುವಂದದಿ-
ನೊಗೆವ ಗದಾ[4][ಶ][4]ಲ್ಕಮುಳ್ಕೆ ಕಣ್ಣಂ ಮುಚ್ಚಲ್ |
ಬಗೆಯೆ ದಿವಿಜರ್ ಗದಾ[5]ಹ[ವ]-[5]
ಮಗುರ್ವುಮದ್ಭುತಮುಮಾಯ್ತು ಕುರುಪಾಂಡವರಾ ‖ ೯

---

[1] ಕ್ಕು (ನ, ಅ೧), ಟ್ಕು (ಅ೩). [2] ಸ್ತ್ರೀಪಾ=(ಅ೩); ನಡುಗದೆಯಂ ತಿರುವುವ ಕಡು (ನ, ಅ೧, ಅ೩ಪಾ). [3] ಗದೆಗಳ್ (ಅ೩). [4] ಶು (ನ, ಅ). [5] ಸ್ತ್ರೀಪಾ = (ಅ); ×× (ನ), ಹಳ (ಮ).

ಗದೆ ಗದೆಯಂ ಘಟ್ಟಿಸೆ ಪು-
ಟ್ಟಿದ ಕೆಂಡದ ಕಿಡಿಯ [1]ತಂ[1]ಡವೆಂಟುಂ ದೆಸೆಯಂ |
ಪುದಿಯೆ ಪದಧೂಳಿ ಗಗನದೊ-
ಳೊದವೆ ಸುರರ್ [2]ಬೆ[2]ದಱೆ ಕಾದಿದರ್ ಕಡುಗಲಿಗಳ್ || ೧೦

[3]ವಾರಣರಕ್ತಸಿಕ್ತ[3]ಮೃಗರಾಜಯುಗಕ್ಕೆ ನವಪ್ರಸೂನ[4]ರಾ
ಗಾ[ರುಣ][4]ಕಿಂಶುಕದ್ರುಮಯುಗಕ್ಕೆ ಸಧಾತುಕುಭೃದ್ಯುಗಕ್ಕೆ ಸಿಂ-|
ದೂರಿತಗಂಧಸಿಂಧುರಯುಗಕ್ಕೆಣೆಯೆಂಬಿನಮಣ್ಮಿ ಕಾದಿದರ್
ಕೌರವರಾಜನುಂ ಕುರುಕುಲಾಂತಕನುಂ ರುಧಿರಾ[5]ಕ್ತ[5]ಮೂರ್ತಿಗಳ್ || ೧೧

ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್ ಮತ್ಸಹೋ-
ದರರಂ ಕೋಪಪೆ ತಿಂದುದರ್ಕೆರಡುಗೊಳ್ ದುಶ್ಶಾಸನೋರಃಸ್ಥಳ-|
[6]ಕ್ಷರ[ದಸ್ರಾಂ][6]ಬುವನಾರ್ದು ಪೀರ್ದ ಮುಳಿಸಿಂಗಂ ಮೂಱುಗೊಳ್ಳೆಂದು ಮ-
ತ್ಸರದಿಂದೋವದೆ ಪೊಯ್ದನೆತ್ತಿ ಗದೆಯಂ ದುರ್ಯೋಧನಂ ಭೀಮನಂ || ೧೨

ಎಂದು ಮುಟ್ಟಿ ಮೂದಲಿಸೆ

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡಜೂದಿಂ-
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಳೋಕನಭ್ರಾಂತಿಗೆಂದೋ-|
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗ[7]ಲು[7]ರಮಂ ಕೆನ್ನೆಯಂ ನೆತ್ತಿಯಂ ಕೋ-
ಪದಿನಯ್ದುಂ ದುರ್ನಯಕ್ಕಯ್ದೆಡೆಯನುರುಗದಾದಂಡದಿಂ ಭೀಮಸೇನಂ ||

---

[1] ಸ್ಪೀಪಾ=(ಅ೧, ಅ೩ಪಾ); ಕುಂ (ನ, ಅ೩). [2] ಚಿ (ನ); [ಚಿ]? [3] ಸ್ವೀಪಾ = (ಮ); ದಾರುಣರಕ್ತವಕ್ತ್ರ (ನ, ಅ). [4] ಕಾಂತಾರದ (ನ, ಅ೧), ಕಾಂತಾರಕ (ಅ೩), ರಾಗಾ ××× (ಮ). [5] ಸ್ವೀಪಾ = (ಅ೩); ದ್ರ್ಯ (ನ, ಅ೧), ರ್ತ (ಅ೧ಪಾ). [6] ಸ್ವೀಪಾ = (ಅ); ಕ್ಷತಜಾತಾಂ (ನ, ಅ೧ಪಾ), ಕ್ಷರಜಸ್ತ್ರ (ಮ). [7] ಸ್ವೀಪಾ = (ನ, ಮ); ಲ್ದು (ಅ).

ಚರಣಾಕ್ರಾಂತಂ ಮಹೀಮಂಡಲಮದಿರೆ ಭುಜಾಕ್ರಾಂತಮಾಶಾ
ಗಜೇಂದ್ರೋ
ತ್ಕರಮಾಶಾಭಿತ್ತಿಯಿಂದಂ ಪೆಱಡೆಗೆಯೆ ಗದಾಕ್ರಾಂತಮುದ್ಭ್ರಾಂತವಿದ್ಯಾ-|
ಧರಚಕ್ರಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ ಭೈರವಾಡಂ-
ಬರಮಾ ಕಲ್ಪಾಂತಕಾಲಂ ನೆಗೞ್ದುದು ಸಮರಂ ಭೀಮದುರ್ಯೋಧನೀಯಂ ||

ನೆಲಸಿದ ಬಿನ್ನಣಂ ಸೆಣಸಿ ಬಿನ್ನಣಮಂ ಗೆಲೆ ಕಾಣ್ಕೆ ಕಾಣ್ಕೆಯಂ
ಗೆಲೆ ಜವಮಂ ಜವಂ ಗೆಲೆ ಬಲಂ ಬಲಮಂ ಗೆಲೆ ದಂಡೆ ದಂಡೆಯಂ |
ಗೆಲೆ ಮುಳಿಸುಣ್ಮಿ ಪೊಣ್ಮಿ ಮುಳಿಸಂ ಗೆಲೆ ಸತ್ವದಳುರ್ಕೆ ಸತ್ವಮಂ
ಗೆಲೆ ಗೆಲಲಾರ್ತರಿಲ್ಲ ಕುರುಪಾಂಡುತನೂಭವರೊರ್ವರೊರ್ವರಂ || ೧೫

ಅಂತು ನೆಟಿಲೊಳ್ ಪೋರ್ಕುಳಿಯಾಡುವಂತೊರ್ವರೊರ್ವರಂ ಗೆಲಲ್ ನೆಱೆಯದಿರೆ ದುರ್ಯೋಧನಂ ಕರಂ ಮುಳಿದು

ಕುರುರಾಜಂ ವಿದ್ಯಾಧರ-
ಕರಣದೆ ನೆಗೆದಂಬರಕ್ಕೆ ಗದೆಯಂ ಕ್ರಮದಿಂ |
ತಿರಿಪೆ ಧರಾಚಕ್ರಂ [1][ಕೋ]-
ವರಚಕ್ರಂ[1] ತಿರಿವ ತೆಱದೆ ತಿರಿದತ್ತೈನಸುಂ || ೧೬

ಅಂತು ಮೂದಲಿಸದೆ ಇಱಿವುದು ಕುಟಿಲಾಯ್ತುಮಲ್ಲೆಂದು ಮುಟ್ಟೆ ಮೂದಲಿಸಿ

ತೆಱಪಂ ನಿಟ್ಟಿಸಿ ಕುರುಪತಿ
ಬಱಸಿಡಿಲೆಱಗುವವೊಲೆಱಗಿ ಪೊಯ್ಯಲೊಡಂ ಮೆಯ್-|
ಮಱೆದು ಪವನಜನದೇಕೆಂ-
ದಱ[2]ಯೆಂ[2] ಮತಿವಿಕಳನಾಗಿ ಮೂರ್ಛೆಗೆ ಸಂದಂ || ೧೭

---

[1] ಸ್ವೀಪಾ = (ಅ) ; (ನ) ದಲ್ಲಿ ಏನೂ ಇಲ್ಲ ; ಕುರುವರಚಕ್ರಂ (ಮ). [2] ಸ್ವೀಪಾ = (ನ, ಅ೧) ; ಪಂಪಭಾ, ೮. ೪೧ ಹೋಲಿಸಿ; ಯದೆ (ಮ, ಅ೩).

ಅಂತು ಕುಲಿಶಾಭಿಘಾತದೊಳ್ ಸೀಲಾಚಲಮೆ ಕೆಡೆವಂತೆ ಕೆಡೆದು ಮೂರ್ಛಾಗತನಾಗಿರ್ದ ಭೀಮಸೇನನಿರವಂ ಕಂಡು ಗಾಂಡೀವಿ ಕೋಪಾತುರಾಟೋಪಮಂ ತಾಳ್ದಿ

ಎಲ್ಲಿಯ ಬಲದೇವಂ ಮ-
ತ್ತೆಲ್ಲಿಯ ಸತ್ಯವ್ಯವಸ್ಥೆ ದುರ್ಯೋಧನನಂ |
ಕೊಲ್ಲದಿರೆನೆಂದು ಭಾರತ-
ಮಲ್ಲಂ ಗಾಂಡಿವಕೆ ಸೇಱಿದಂ [1][ನೆಱೆ] ತಿರುವಂ[1] || ೧೮

ಮುಳಿದೇವಂ ಹಲಿ ಕೃಷ್ಣಂ
ಮುಳಿದೇವಂ ಧರ್ಮನಂದನಂ ಮುಳಿದೇವಂ |
ಮುಳಿದರನಿಕ್ಕುವೆ[2]ನೆಂ[2]ದು-
ಮ್ಮಳಿಸಿದರೞಿಯಲ್ಕೆ ನಕುಲಸಹದೇವರ್ಕಳ್ || ೧೯

ಅರಿಗಿಂಬಾಯ್ತುಟಿವಾದುದು
ಮರುತ್ಸುತಂಗರ್ಜುನಾದಿಗಳ್ ಮುಳಿದರ್ ಮೂ- |
ವರುಮೆನ್ನ ಸನ್ನಿಗೇಗಳೆ
ಪರಿಭವಮಾಯ್ತೆಂದು ಧರ್ಮಜಂ ಚಿಂತಿಸಿದಂ || ೨೦

ಅಲರ್ದ ಹಲಧರನ ಮೊಗಮುಂ
ತಲೆಯುಂ ಬಾಗಿರ್ದ ಧರ್ಮತನಯನ ಮೊಗಮುಂ |
ಜಲರುಹನಾಭಂ ಕಂಡೆರ್ದೆ
ಕಲಂಕಿ ಕಣ್ಜರ್ಬು ಜರ್ಬಿದಂ ಗಾಂಡಿವಿಯಂ || ೨೧

ಆ ಪ್ರಸ್ತಾವದೊಳ್ ಧಾತುನಿರ್ಝರಗಿರಿ ಕೆಡೆವಂತು ಕೆಡೆದಿರ್ದ ಪಗೆಯಂ ನೋಡಿ ಧರ್ಮಯುದ್ಧಮಂ ನೆನೆದು

---

1 ನಿಜತಿಱುರವಂ (ನ, ಅ೩ಪಾ), [ನೆಱೆ' ತಿಱುವಂ (ಅ೧), ಕರತಳಮಂ (ಮ, ಅ೩).

2 ಸ್ವೀಪಾ = (ನ, ಅ೧ಪಾ) ; ವೆಂ (ಅ).

ಇಱಿಯೆಂ ಬಿೞ್ದನೆಂಬೀ
ಬಿಱುಬಿಂದಂ ಬೀಸೆ ಗದೆಯ ಗಾಳಿಯ ಕೋಳೆ-|
ೞ್ಚಱಿಸಿದುದು ಭೀಮನಂ ಮೆಯ್-
ಮಱೆದವನಂ ತಂದೆ ಸುತರ್ಗೆ ಕೂರದರೊಳರೇ || ೨೨

ಅಂತು ಮೂರ್ಛೆಯಿಂ ಮಾರುತಿಯೆೞ್ಚತ್ತಾಗಳ್

ಪೊಡೆಯಲರಾತಂ ರಾಗದೆ
ತೊಡೆಯಂ ಪೊಯ್ದಾರ್ವ ನೆವದೆ ನೆಱನೀತಂಗೀ-|
ಯೆಡೆಯೆಂದು ತೋಱಿ ಕುಡೆ ಪೊಲ-
ಗಿಡದಱಿದಂ ಪರಮಪಂಡಿತಂ ಪವನಸುತಂ || ೨೩

ತಿಳಿದಾಗಳ್ ನೆಱನಿಂತುಟೆಂದು ನೆಲನಂ ಮಾಱುದ್ದಿ ಕಯ್ಯಿಂ ಧರಾ-
ತಳದೊಳ್ [1][ಸೂ][1]ಸಿದ ತನ್ನ ತೀವ್ರಗದೆಯಂ ಕಂಡೆತ್ತಿಕೊಂಡಂಬರ-|
ಸ್ಥಳದಿಂದಂ ಸಿಡಿಲೇೞ್ಗೆಯಿಂದೆಱಗಿ ಪೊಯ್ವಾಗಳ್ ಗದಾದಂಡದಿಂ
ಮುಳಿದಿಟ್ಟಂ ಕಲಿ ಸತ್ತ್ರಿಗಂ ಕುರು[2]ಕು[ಭೃಚ್ಚಂಡೋ]ರು[2]ದಂಡಂಗಳಂ || ೨೪

ಇಡೆ ತೊಡೆಯನುಡಿದು ನೆಟ್ಟನೆ
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ |
ಬಿಡೆನೆಂಬ ತೆಱದೆ ಕುಲಗಿರಿ
ಕೆಡೆವಂದದೆ ಕೆಡೆದು ಕೌರವೇಂದ್ರಂ ಮಡಿದಂ || ೨೫

ಅಂತು ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಂ ಕುರುಕುಲ ಮಹೀಶನ ಕದಳೀಸ್ತಂಭಂಗಳನನುಕರಿಸುವ ತೊಡೆಗಳನುಡಿದು ಅಶ್ರಮದೊಳ್ ಪುಡಿಯೊಳ್ ಪೊರಳ್ಚಿ ತನ್ನ ಮುನ್ನ ನುಡಿದೂರುಭಂಗಪ್ರತಿಜ್ಞೆಯಂ ತೀರ್ಚಿ ಮಕುಟಭಂಗಪ್ರತಿಜ್ಞೆಯಂ ತೀರ್ಚಲೆಂದು ಕುರುಕುಲಾಂತಕಂ ಮಾಮಸಕಂ ಮಸಗಿ

---

[1] ಸಾ (ನ, ಅ೩), ಪಾ (ಅ೧), ಧರಿ (ಮ). [2] ಸ್ವೀಪಾ=(ಅ); ಕುಭಕಂಡೂ (ನ, ಅ೧ಪಾ), ನೃಪಾಕಾಂಡೋ (ಮ).

ಇದು ಭುವನಾಧಿಪತ್ಯಸವನೋದಕದಿಂ ಗಡ ಪೂತಮಾದುದಿಂ-|
ತಿದು ಧವಳಾತಪತ್ರದ ನೆೞಲ್ಗೆ ಗಡಂ ಗುಱಿಯಾದುದಾರ್ಗಮಿಂ-|
ತಿದು ಗಡ ಬಾಗದೀ ತಲೆಗೆ ತಕ್ಕುದನೀಗಳೆ ಮಾೞ್ಪೆನೆಂದು ಕೋ-
ಪದಿನೊದೆಯಲ್ಕೆ ಸಾರ್ತರೆ [1]ಹ[ತೋ]ರುಸಪತ್ನಕಿರೀಟ[ಶೃ]ಂಗಮಂ[1] ‖ ೨೬

ಬಲದೇವಾದಿಗಳಾಗದಾಗದೊದೆಯಲ್ಕೇಕಾದಶಾಕ್ಷೋಹಿಣೀ-
ಬಲಲಕ್ಷ್ಮೀಪತಿಯಂ ಪರಾಭವಿಸದಿರ್ ಚಿಃ ತಕ್ಕುದಲ್ಲೆಂದು ಮಾ-|
ರ್ಕೊಳಲುಂ ಮಾಣದೆ ಭೀಮಸೇನನೊದೆದಂ ವಾಮಾಂಘ್ರಿಯಿಂ ರತ್ನಮಂ-
ಡಲರಶ್ಮಿಪ್ರಕಟಜ್ವಲನ್ಮಕುಟಮಂ ಕೌರವ್ಯರಾಜೇಂದ್ರನಾ || ೨೭

ಅಂತು [2]ಗುಣರತ್ನಾರ್ಣವಂ [ತೀರ್ಣ]ಪ್ರತಿಜ್ಞಾರ್ಣವ[2]ನುಮಾ[ಗೆ]

ಸುರತರುಕುಸುಮೋತ್ಕರಮಂ
ಸುರಿಯೆ ಸುರಾಂಗನೆಯ[3]ರೆ[ಸೆಯೆ][3] ಸುರದುಂದುಭಿಗಳ್ |
ಪರಮಾಶೀರ್ವಚನ ಪರಂ-
ಪರೆಯಿಂದಂ ಮೆಚ್ಚಿ ಪರಸಿದರ್ ಸತ್ತ್ರಿಗನಂ || ೨೮

ಬಳದೇವಂ ಭೀಮನ ಭುಜ-
ಬಳದೇವಂ ಮನಮುನಲೆಯೆ ಕುರುಪತಿಯಂ ಮಾ-|
ರ್ಕೊಳೆ ಪರಿಭವಿಸಿದನೆಂದೆಂ-
ದ[4]ಳವ[4]ಲ್ಲದೆ ಮುಳಿದು ಕೆಳರ್ದು ಕಿರ್ಚೆದಾರ್ಗಳ್ ‖ ೨೯

ಅಂತು ಮುಳಿದಿರ್ದು ತನ್ನ ತಮ್ಮನಂ ನೋಯಿಸಲಾಱದೆಯುಂ ದುರ್ಯೋಧನಂಗಾದವಸ್ಥೆಯಂ ನೋಡಲಾಱದೆಯುಂ ಬಲದೇವಂ ದ್ವಾರಾವತಿಗೆ ಪೋದಂ ಅನ್ನೆಗಮಿತ್ತಲ್

---

[1] ಸಪತ್ನಹಶೋರುಕಿರೀಟಭಂಗಮಂ (ನ, ಅ೧), ಭಂಗಿತಂ (ಅ೩), ಸಪತ್ನನರ ಕೋಟಿ ಕಿರೀಟಭಂಗಮಂ (ಮ). [2] ಪ್ರತಿಜ್ಞಾಪೂರ್ಣ (ನ, ಅ೧), ಗುಣರತ್ನಾರ್ಣವನುಂ ಪ್ರತಿಜ್ಞಾರ್ಣವ (ಮ). [3] ರೆಲ್ಲ (ನ, ಅ೧ಪಾ), ರೈದೆ (ಮ), [ರುಲಿಯೆ] (ಅ). [4] ಸ್ವೀಪಾ = (ಮ) ; ಲಿರ (ನ), [ಳವಿ] (ಅ).

ಧಾತ್ರೀಪತಿ[1]ಗಱಿಪಿ[1] ಮರು-
ತ್ಪುತ್ರಂ ಬೞಿಯಟ್ಟಿ [2]ಕರಸಿ ತೋಱಲ್ಕೇ[2]ಕ-।
ಚ್ಛ[3]ತ್ರ[ಧೃತಭುವನ]ಮ[3]ಹಿತ-
ಕ್ಷತ್ರಿಯಕುಳಕಾಳರಾತ್ರಿಯಂ ದ್ರೌಪದಿಯಂ ॥ ೩೦

ಮುಳಿಸಿಂ ನಂಜಿಕ್ಕಿ[4]ಕೊಲ್ವಂ[4]ದಿನ ಜತುಗೃಹದೊಳ್ ಸು[5]ಟ್ಟು ಕೊ[ಲ್ವಂ]ದಿನು[5]ರ್ವೀ-
ತಳಮಂ ಜೂದಾಡಿ ಗೆ[6]ಲ್ವಂ[6]ದಿನ ನಿಜಕಬರೀ[7]ನೀವಿಬಂಧಂಗಳಂ ದೋ-।
ರ್ವಳದಿಂದಾ[7] ತಮ್ಮನಿಂದಂ ತೆಗೆಯಿಸಿ [8]ನಡೆ[ಸೋೞ್ವಂ]ದಿನಾ[8] ದ್ರೋಹನಾ ಸಂ-
ಚಳನಾ ಚಾಂಡಾಲನಾ ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ ॥ ೩೧

ಅರಸಂ ದೀಕ್ಷಿತನಿಲ್ಲಿ ಋತ್ವಿಜರುಮೆಮ್ಮೀ ನಾಲ್ವರುಂ ಸಂಗರಾ-
ಧ್ವರದೊಳ್ ತಾನುಪದೇಶಕಂ ಮುರಹರಂ ನೀನುಂ ಗೃಹೀತವ್ರತಾ-।
ಚರಣವ್ಯಾಪಿಕೆಯುಂ ಭವತ್ಪರಿಭವಂ ಸಂಚಾರಕಂ ಕೌರವೇ-
ಶ್ವರನೀತಂ ಪಶುವಾಗೆ ಬೇಳ್ದೆನಿವನಂ ಕೋಪಾಗ್ನಿಯಿಂದಗ್ನಿಜೇ ॥ ೩೨

ಸುಹುತಂ ಕೌರವ್ಯ ಕ್ರ-
ವ್ಯಹವ್ಯದಿಂದೆನ್ನ ಕೋಪಹವ್ಯವಹಂ ದು-।
ರ್ವಹ ದುರ್ಯೋಧನದೇಹ-
ಪ್ರಹರಣಲೋಹಿತದಿನಾದುದವಭೃಥಸವನಂ ॥ ೩೩

---

[1] ಗೆರಗಿ (ಮ). [2] ನುಡಿದನೀನ್ನಿನ್ತೇ (ಮ). [3] ತ್ರಕೃತಂಜಗಮ (ನ), ತ್ರಕೃತ ಜಘನೆಯಂ (ಮ), ತ್ರೀಕೃತಜಗದ (ಅ). [4] ಸ್ವೀಪಾ=(ನ); ಕೊಂದಂ (ಮ, ಅ). [5] ಟ್ಟಕಾ ×× ನು (ನ), ಟ್ಟುಕೊಲ್ಗಂದಿನು (ಮ), ಟ್ಟ [ಕೌಟಿಲ್ಯ]ದು (ಅ). [6] ಸ್ವೀಪಾ =(ನ); ಲ್ದಂ (ಮ, ಅ). [7] ಸ್ವೀಪಾ=(ನ); ದಿಂದಂ (ಅ), ಬಂಧಮಂ ತನ್ನಸತ್ತ್ವೋಜ್ವಲದಿಂದಂ (ಮ). [8] ನಡೆನೆ ××× ದಿನು (ನ), ಧ ××× ಚಿನಾ (ಮ), ನಡ[ದಾ ನೀಚನಾ] (ಅ).

ಎಂದು ಭೀಮಸೇನಂ [1]ಯಾಜ್ಞಸೇನಿ[1]ಗೆ ಆದಿತ್ಯನ ಸಾರಥಿಯಿರ್ಪಂತೆ ನಿಜೋರುಯುಗಳವಿಕಳನಾಗಿರ್ದ ದುರ್ಯ್ಯೋಧನನಂ ತೋಱಿ

ಪಗೆ ಮಡಿದುದು ಮುಡಿಯೆನೆ ನಗೆ-
ವೊಗದಿಂ ಪಾಂಚಾಳಿ ಮಱೆದೆನಾಂ ಪಲಕಾಲಂ।
ವಿಗತಾಭ್ಯಾಸದೆ ಸತ್ತಿಗ
ಪಗೆಯಂ ಮಡಿಯಿಸಿ[2][ದ][2] ನೀನೆ ಮುಡಿಯಲ್ವೇೞ್ಕುಂ ॥ ೩೪

ಎಂದು ತನ್ನ ಕಯ್ಯಂ ಪಿಡಿದು ತೆಗೆವುದುಂ ಅಂತೆ ಗೆಯ್ವೆನೆಂದುಂ ಆಕೆಯ ವೇಣೀಸಂಹಾರಮಂ ತಾನೆ ಮಾಡಿ

ಇದಱೊಳ್ ಮೂರ್ಧಾಭಿಷಿಕ್ತರ್ ಮಣಿಮಕುಟಧರರ್ ಕೃಷ್ಣೆ ಬಾಹಾಬಳಾಗ್ರ್ಯರ್
ಕದನಪ್ರೋಚ್ಚಂಡದಂಡಕ್ರಮವಿಜಿತರಿಪುಕ್ಷತ್ರಿಯರ್ ವೀರಲಕ್ಷ್ಮೀ-।
ಸದನರ್ ಸೋಮಾಮೃತಾಸ್ವಾದನ[3]ಶುಚಿವದ[3]ನರ್ ಮುನ್ನಮಟ್ಟಾಡಿದರ್ ನೋ-
ಡಿದು ನಿನ್ನೀ ಕೇಶಪಾಶಂ ಕುರುಕುಲಪತಿಗಾಯ್ತಲ್ತೆ ಕೀನಾಶಪಾಶಂ ॥ ೩೫

ಎಂದು ಪೊಗೞ್ದು ಮಾಂಗಲ್ಯಮಾಲಾಲಂಕೃತಂ ಮಾಡೆ

ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳಾ ಶೃಂಗಾರಮಾ ಭಾವಮಾ
ಪರಿಜಾ ವಿಭ್ರಮಮಾ ಬೆಡಂಗು ನೆಗೞ್ದಾ ಸೌಂದರ್ಯಮಾ ಬಿಂಕಮಾ।
ತರಳಾಪಾಂಗವಿಲಾಸಮಾ ಲಟಹಮಾ ಲಾವಣ್ಯಮಾ ಪುಣ್ಯಮಾ
ದರಹಾಸಾಮೃತಮೇಂ ಮನಂಗೊಳಿಸಿತೋ ಚಾಳುಕ್ಯಕಂದರ್ಪ[4][ನಂ][4] ॥

ಪನ್ನೆರಡು ಬರಿಸಮಲಸದೆ
ಬನ್ನದ ಕೂಱುಂಡು ಬರ್ದ[5]ಬಲ್ ಪಿಂಗಲೊಡಂ[5]।

---

[1] ಸ್ವೀಪಾ = (ಅ) ; ಯಜ್ಞಸೂನು (ನ, ಅ೧ಪಾ), ಯಜ್ಞಸೇನಿ (ಮ). [2] ದೆ (ನ, ಅ). [3] ರುಚಿವಚ (ನ), ಶುಚಿವಚ (ಮ), ರುಚಿವದ (ಅ). [4] ನಾ (ನ, ಅ). [5] ಸ್ವೀಪಾ = (ಮ, ಅ೩) ; (ನ)ದಲ್ಲಿ ಕೆಲಮಟ್ಟಿಗೆ ಗ್ರಂಥಪಾತವಿದೆ ; ಇದು [ಕಾರಣದಿಂ] (ಅ೧).

ತನ್ನಿಂ ಕಾಳಿಕೆ ಪಿಂಗಿದ
ಪೊನ್ನಂತಾ ಕಾಂತೆ ಕಣ್ಗೆ ಕರಮೆಸೆದಿರ್ದಳ್ ‖ ೩೭

ಅಂತಿರ್ದ ಜಾತವೇದೋಜಾತೆಯ ಕೋಮಲಕರತಳಸ್ಪರ್ಶನದೊಳಂ ಕಟಾಕ್ಷಚ್ಛಟಾಚ್ಛೋಟನದೊಳಂ ಅಪಗತಸಮರಪರಿಶ್ರಮನಾಗಿ ಇಱಿವ ಬೆಡಂಗಂ ಗುರುಪಾದಾಂಬುರುಹಕ್ಕೆ ಪೊಡೆವಟ್ಟು

ಹರಿ ಕೇಳ್ ಧರ್ಮಜ ಕೇಳ್ ಸುರೇಂದ್ರಸುತ ಕೇಳ್ ಮಾದ್ರೀಸುತರ್ ಕೇಳಿಮಿ-
ರ್ಬರುಮಿಂತೆಯ್ದಿದುದಲ್ತೆ ಕೌರವಹತಿವ್ಯಾಪಾರದೊಳ್ ದ್ರೋಹದು-|
ರ್ಧರದುಶ್ಶಾಸನರಕ್ತಪಾನವಿಧಿ ಪಾಂಚಾಲೀಕಚೋತ್ತಂಸನಂ
ಕುರುರಾಜೋರುಕಿರೀಟಭಂಗಮಿನಿತುಂ ಭೀಮಪ್ರತಿಜ್ಞಾಕ್ಷರಂ ‖ ೩೮

ಎಂದು ಭೇರಿಯಂ ತಾಟಿಸಿದಂತೆ ಗಂಭೀರಧ್ವನಿಯಿಂ ಗರ್ಜಿಸೆ

ಹರಿಯುಂ ಧರ್ಮಜನುಂ ಸುರೇಂದ್ರಸುತನುಂ ಮಾದ್ರೀಜರುಂ ಕೃಷ್ಣೆಯುಂ
ಪರಮಾನಂದದೆ ಕರ್ಚಿ ತೀರ್ಥಜಲದಿಂ ಕಸ್ತೂರಿಕಾಚಂದನಾ-|
ಗರುಕಾಶ್ಮೀರಜಪಂಕದಿಂ ತೊಡೆದು ಕೇಯೂರಾದಿಯಂ ಭೂಷಣೋ-
ತ್ಕರಮಂ ನೇರ್ಪಡೆ ಕಟ್ಟಿ ಪೂಜಿಸಿದರಾ ದೋರ್ದಂಡಮಂ ಭೀಮನಾ ‖ ೩೯

ಆ ಪ್ರಸ್ತಾವದೊಳ್ ಸಾಹಸಭೀಮಂ ಗದಾದಂಡಮಂ ಉತ್ಸಾಹದಿಂ ತಾನೆ ಪೂಜಿಸಿದಂ ಅಂತು ಭುಜಾದಂಡಮುಮಂ ಗದಾದಂಡಮುಮಂ ಪೂಜಿಸಿ

ವಿವಿಧಾತೋದ್ಯರವಂ ಪೊದಳ್ದಖಿಳದಿಕ್ಚಕ್ರಂಬರಂ ಕೂಡೆ ಪೊ-
ಣ್ಮುವಿಸಂ ಮಂಗಳಗೀತಮಂಗಳರವಂ ಕರ್ಣಾಮೃತಸ್ಯಂದಿಯುಂ-|
ಣ್ಮುವಿಸಂ ದೇವನಿನಾದಮುಣ್ಮುವಿಸಮುತ್ಯುತ್ಸಾಹದಿಂ ಪೊಕ್ಕನು-
ತ್ಸವಬದ್ಧಸ್ವನರಮ್ಯ[1]ಮಂ ಶಿ[1]ಬಿರಮಂ ಚಾಳುಕ್ಯಕಂಠೀರವಂ ‖ ೪೦

---

[1] ಸ್ವೀಪಾ = (ಮ) ; ತಚ್ಛಿ (ನ, ಅ).

# ೯ ದುರ್ಯೋಧನಾವಸಾನಂ

ಅನ್ನೆಗಂ ಚಕ್ರಿ ಅಸಮಸಾಹಸೋದ್ದಾಮನಪ್ಪ ಅಶ್ವತ್ಥಾಮನ ಬರವ ನಱಿದು ಅನಾಗತಬಾಧಾಪರಿಚ್ಛೇದಮಂ ಮಾಡಲೆಂದು ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯೂತ್ತಮೌಜಸರುಮಂ ಶ್ರುತಸೋಮಕ ಪ್ರಮುಖರಪ್ಪ ಪಾಂಡವಸೂನುಗಳಪ್ಪ ಪಂಚಪಾಂಡವರುಮಂ ಬೀಡಿಂಗೆ ಕಾಪುವೇೞ್ದು ಹಸ್ತ್ಯಶ್ವರಥಪದಾತಿಬಲಂ ಬೆರಸು ಹಸ್ತಿನಪುರಕ್ಕೆ ಕಟಿಪಿ ಪಾಂಡವರಯ್ವರುಮನೊಡಗೊಂಡು ನೀಳಾಚಳಕ್ಕೆ ನೀಲಾಂಗಂ ಪೋದಂ ಅನ್ನೆಗಮಿತ್ತ ಗಾಂಗೇಯನಱಿಪೆ ಕೌರವೇಶ್ವರನಿರ್ದೆಡೆಯಂ ಅಶ್ವತ್ಥಾಮನಱಿದು [ಬರ್ಪಾಗಳ್]

ಕನತ್ಕನಕಚಾಮರಂ [1]ಧವಳ[ಪದ್ಮಮುಂ][1] ಕಯ್ಗಳೊಳ್
ಮನಂ[2][ಗೊಳಿ][2]ಸೆ ಮಾಸಿ ತಾಱಿದ ಕುರುಳ್ಗಳುಂ ತನ್ನ ಬಿ-|
ನ್ನನಿರ್ದ ಮೊಗ[3]ದಿಂ[3] ತವಿಲ್ದ ರ ವಿಲಾಸಮುಂ ಮುಂದೆ ಕಂ-
ಡನಲ್ಲಿ ಕಮಳಾಕ್ಷಿಯಂ ವೃಷಭಲಕ್ಷಣಂ ಲಕ್ಷ್ಮಿಯಂ ‖ ೧

ಅಂತು ಕುಂಭಸಂಭವಸಂಭವಂ ಅಮೃತಾಬ್ಧಿಸಂಭವೆಯಂ ಕಂಡು ನೀನಾರ್ಗೆ ಎತ್ತಣಿಂದಂ ಬಂದೆ ಎಲ್ಲಿಗೆ ಪೋದಪೆ ಎಂದು ಬೆಸಗೊಳೆ

* ಅಮೃತಪಯೋಧಿಮಂಥನದೆ ಪುಟ್ಟಿದ ಪದ್ಮವನಾಂತರಾಳದೊಳ್
ರಮಿಯಿಪ ಪದ್ಮನಾಭನುರದೊಳ್ ನೆಲಸಿರ್ಪ ಮಹಾನುಭಾವೆಯೆಂ |
ಕಮಲೆಯೆನಿನ್ನೆಗಂ ಕುರುಮಹೀಪತಿಯೊಳ್ ನೆಲಸಿರ್ದೆನೀಗಳು-
ತ್ತಮ ಪುರುಷೋತ್ತಮಂ ಬೆಸಸೆ ಪಾಂಡವರೊಳ್ ನೆಲಸಲ್ಕೆ ಪೋದಪೆಂ ‖ ೨

ಎಂಬುದುಂ ದ್ರೋಣನಂದನಂ ನಾರಾಯಣಂ ಬೆಸಸೆ ಪೋದಪೆನೆಂದ ಲಕ್ಷ್ಮಿಯ ಮಾತನವಧಾರಿಸಿ ಮುಗುಳ್ನಗೆ ನಕ್ಕು

---

[1] (ನ) ದಲ್ಲಿ ಏನೂ ಇಲ್ಲ ; ಧವಳಚಾಮರಂ (ಅ) ; ಪಂಪಭಾ, ೧೩.೯೮ ವ. ಹೋಲಿಸಿ ; ಧವಳ[ತಾ]ಮರಂ ? [2] ಚಲಿ (ನ, ಅ). [3] ಮುಂ (ಅ೩). * ಈ ಪದ್ಯದಲ್ಲಿ, ಸ್ವೀಪಾ=(ಕಾವ್ಯಾವ, ೯೧೨) ; (ನ, ಮ, ಅ) ಪಾಠಗಳು ಸ್ವಲ್ಪಮಟ್ಟಿಗೆ ಭಿನ್ನವಾಗಿವೆ.

ಛಳಮತಿಯಾದೆ ನೀಂ ಜಲಧಿಸಂಭವೆಯಪ್ಪುದಱಿಂ ಸರೋಜಸಂ-
ಕುಳರಜದಿಂದೆ [1]ನೀಂ ಪೊರೆದು ರಾಜಸದೊಳ್ ನೆಲಸಿರ್ಪೆ[1] ಗೋವುಗಾ-|
ದಳವಟಿದಿರ್ದ ಕೃಷ್ಣನೊಡನಿರ್ದುದಱಿಂದವೆ ಗೋವಿಯಾದೆ ಯ-
ಗ್ಗಳದ ವಿವೇಕಮಿಲ್ಲ ನಿನಗೆತ್ತಱಿವಾ [2]ಪುರುಷಾಂ[2]ತರಂಗಳಂ ॥ ೩

ಕಲಿ ಪಂದೆಯೆಂದು ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ ತರುಣಂ |
ಸಲೆ ವೃದ್ಧನೆಂದು ಬಗೆಯದೆ
ನೆಲಸುವೆ ನಿನ್ನಿಂ ನಿಕೃಷ್ಟರೆಂಬರುಮೊಳರೇ ॥ ೪

ಇಱಿಯಿಸುವೆ ತಂದೆಮಕ್ಕಳ-
ನಿಱಿಯಿಸುವಯ್ ಸೋದರರ್ಕಳಂ ತಮ್ಮೊಳ್ ತ-|
ಳ್ತಿಱಿಯಿಸುವಯ್ ಗುರುಶಿಷ್ಯರ-
ನಱಗುಲಿ ನಿನ್ನಿಂ ನಿಕೃಷ್ಟರಾದರುಮೊಳರೇ ॥ ೫

ಎಂದು ಲಕ್ಷ್ಮಿಯಂ ವಿಡಂಬಸಂಗೆಯ್ದು

ಪೋ ಮಾಣ ಧರ್ಮಜಂ ಗಡ
ಭೀಮಂ ಗಡ ಫಲ್ಗುಣಂಗ[3][ಡಮಳ್ಗಳ್][3] ಗಡ ಸಂ-|
ಗ್ರಾಮದೊಳವಂದಿರಶ್ವ-
ತ್ಥಾಮಂಗಾ[4]ಪೋಶಸಂ[4]ಗೊಳಲ್ ನೆಱೆದಪರೇ ॥ ೬

ನಿನ್ನ ಮುರವೈರಿಯುಳವುಮ-
ನೆನ್ನಳವುಮನೆಲಗೆ ಕಾಣ್ಬೆ ಕುರುಪತಿಯಿಂದಂ |
ಮುನ್ನಂ [5]ತ್ವ[5]ತ್ಪತಿಯಿಂದಂ
ನಿನ್ನ ಸಗಲ್ಬಲ್ಕೆ ಕಪಟಗೋಪಂ ಪ್ರಭುವೇ ॥ ೭

---

[1] ಸ್ತ್ರೀಪಾ = (ಅ೩); (ಮ) ಇದಕ್ಕೆ ಪೋಷಕವಾಗಿದೆ; ಮುಂ ಪೊರೆಮ ಪುಟ್ಟಿ ಸರೋ ××× ರ್ದ (ನ, ಅ೧). [2] ಸ್ತ್ರೀಪಾ = (ಮ, ಅ೩); ಪ ××× (ನ, ಅ೧). [3] ಡಮಳರ್ (ನ, ಅ), ಡ ಯಮಳರ್ (ಮ). [4] ಸ್ತ್ರೀಪಾ = (ಅ೩); ××× (ನ, ಅ), ಪೋಷಣಂ (ಮ). [5] ತ (ನ), ಮ (ಮ).

ಕುರುರಾಜಂ ರಾಜರಾಜಂ ಸಕಲವಸುಮತೀಕಾಂತನಿರ್ದಂತೆ ಯು[1]ದ್ಧ-
[ಸ್ಥಿರನೀತಂ][1] ಸಾಹಸಾಂಕಂ ಕುರುಕುಳಪತಿಯಿರ್ದಂತೆ ವೆಟ್ಟಿಟ್ಟು ದಾವೋ-|
ದರನೆಂದೀ [2]ಕಜ್ಜದೊ[2]ಳ್ ನೀಂ ತೊಡರ್ದು ಮರುಳೆ ಬೆಂಡಾಗದಿರ್ ಪೋಗು
ನೀಂ ಚೆ-
ಚ್ಚರಮತ್ತಿನ್ನೆತ್ತ ಪೋಪೌ ಪರಿ[3]ಹರಿ[3]ಸಿದಪೆಂ ನಿನ್ನನಿಂ ಕಾವನಾವೊಂ || ೮

ಎಂದು ಅಶ್ವತ್ಥಾಮನುಂ ಉದ್ದಾಮಕೋಪಾಟೋಪಬದ್ಧಭ್ರುಕುಟಿ[ಯುಂ] ತರಳತಾಮ್ರಲೋಚನನುಂ ಆಗೆ

ಅತ್ತಲಸುರಾರಿ ಬೆಸಸಿದ-
ನಿತ್ತಲ್ ರುದ್ರಾವತಾರನೆಬೆದುಯ್ದಪನೆಂ-|
ದತ್ತ ಪುಲಿಯಿತ್ತ ದರಿಯೆಂ-
ದತ್ತಿತ್ತಡಿಯಿಡದೆ ಲಕ್ಷ್ಮಿ ತಳವೆಳಗಾದಳ್ || ೯

ಅಂತು ತಳವೆಳಗಾದ ಲಕ್ಷ್ಮಿಯ ಚಳದಳಿವಿನೀಳಕುಟಿಲಕುಂತಳಂಗಳಂ ತಳವಾರೆ ತೆಗೆದು ಕುರುಕುಲಕುಟುಂಬನ ಘಟಚೇಟಿಯಂ ಕೊಂಡು ಪೋಪಂತೆ ಮಗುಟಿ ಕೊಂಡು ಪೋಗಿ ಭೀಮಸೇನನ ಗದಾಘಾತದೊಳೂರುಭಂಗಮುಂ ಪದಾಘಾತದೊಳ್ ಮಕುಟಭಂಗಮುಂ ಆಗಿ ಸುರುಳ್ದು ತೆರಳ್ದು ಸುಯೋಧನನಿರೆ

ಕುರುರಾಜಂ ತೊಡೆವೇಸಗೆ
ನರಳನೆ ಕುಱುವಾದ ತೊಡೆಯ ಬೇನೆಗೆ [4]ಗಂ[4]ಡರ್ |
ನರ[5]ಳ[ಲ್] ತಕ್ಕುದೆ ಅರಸಂ
ವಿರೋ[ಧಿಯಿಂ]ವಾದ[5] ಮಾನಹಾನಿಗೆ ನೊಂದಂ || ೧೦

---

[1] ದ್ಧ ××× ನೀ (ನ, ಅ೧), ಯುದ್ಧಾ[ಧರ]ನೀ (ಅ೩) ; (ಮ) ದಲ್ಲಿ ಪಾಠ ಬೇರೆ ಯಾಗಿದೆ. [2] ಸ್ವೀಪಾ=(ಮ, ಅ೩) ; ಚ್ಛಿಯೊ (ನ), ಯಿಚ್ಛೆಯೊ (ಅ೧). [3] ಸ್ವೀಪಾ =(ನ, ಅ೩ಪಾ), ಛವಿ (ಮ, ಅ). [4] ಸ್ವೀಪಾ=(ಮ) ; ಕಂ (ನ, ಅ). [5] ×××ದೆಯ ರಸಂ ವಿರೋಧದಿಂದಾದ (ನ), ಳ್ವಂತೆ ನರಳದರಸಂ . . (ಅ), ಳರ್ ತಕ್ಕುದೆ ನರಳೆಂ ಶಿರೋರ್ಥಿಯಂ ಮಾಡೆ (ಮ).

ಅಂತಿರ್ದ ಕುರುನಂದನನಂ ಗುರುನಂದನಂ ನೋಡಿ

ಕುಳಿಕನ ಪಲ್ಗಳಂ ಮುಱಿಯೆ ವೋದಿದರಾರ್ [1]ಪಿಡಿದೊತ್ತಿ[1] ಸಿಂಹಮಂ
ಮುಳಿಯಿಸಿ [2]ದಾಡೆಯಂ[2] ಪಿಡಿದು ಕಿೞ್ತವರಾರ್ ಮದಹಸ್ತಿಯಂ [3]ನೆ[ೞಂ][3]-|
ಗೊಳೆ ನೆಲಕಿಕ್ಕಿ ಕೋಡೆರಡುಮಂ ಕುಸಿಯೊತ್ತಿದರಾರ್ ಸುರಾದ್ರಿನಿ-
ಶ್ಚಳನಿಬಿಡೋರುಮಂಡಲಮನಾರುಡಿದರ್ ಫಣಿರಾಜಕೇತನಾ || ೧೧

ಹಾ ಕುರುವಂಶಮಹಾಕಮ-
ಲಾಕರಕಲಹಂಸ ಹಾ ಸಮುದ್ರಾಂತಧರಿ-|
ತ್ರೀಕಾಂತ ಹಾ ಫಣೀಂದ್ರಪ-
ತಾಕಾ ವಿಧಿವಶದೆ ನಿನಗಮಿಾ ಪರಿಯಾಯ್ತೇ || ೧೨

ಎಂದು ಗುರುನಂದನಂ ವಿಪ್ರಳಾಪಂಗೆಯ್ದು ತನ್ನ ಮೇಲುದದ ಸೆಱಂಗಿಂ ದಾತನ ತಲೆಯ ಮೇಲೆ ಕೆದಱಿರ್ದ ಭೀಮಸೇನನ ಚರಣರಜಮಂ ತೊಡೆದು ಕಳೆದು ಮನದೊಳ್ ಕಟ್ಟುಕಡೆದು

ಎನ್ನಂ ವಂಚಿಸಿ ಬಂದುದ-
ಱಿಂ ನಿನಗಿನಿತಾಯ್ತುವಸ್ಥೆ ಕುರುಪತಿ [4]ಕೇಳ್ ನೀ-|
ನಿನ್ನಂ[4] [5][ಪ್ರತಿಕಾರ][5]ಮನಱಿ-
[6][ಪಿ][6]ನ್ನಂ ನೋಡೆನ್ನ ಶಕ್ತಿಯಂ ಭಕ್ತಿಯುಮಂ || ೧೩

ಎಂದು ನುಡಿದ ಭಾರದ್ವಾಜತನೂಜನ ನುಡಿಗೆ ರಾಜರಾಜನವಧಾರಿಸಿ

ಹತದೇಹ ಹತಭುಜದ್ವಯ
ಹತೋರು ಹತಜೀವ ಹತಕಿರೀಟಂ ಹತಹೃತ್ |
[7][ಪ್ರತಿಕಾರ][7]ಮೆಂಬುದುಂಟೇ
ಗತಿಯಂ ಸಾಧಿಸುವುದಲ್ತೆ ತಾಂ ಪ್ರತಿಕಾರಂ || ೧೪

---

[1] ಕಡುಪಿಂದೆ (ಮ, ಅಕ್ಷ). [2] ಸ್ವೀಪಾ = (ಮ); (ನ) ದಲ್ಲಿ ಗ್ರಂಥಪಾತವಾಗಿದೆ; ಪಲ್ಗಳಂ (ಅ). [3] ಭಯಂ (ನ, ಅ), ನೆರಂ (ಮ). [4] ಯೇ ನೀ ತನ್ನಿಂ (ಮ), ಯನಿತಂ ತನ್ನಿಂ (ಅಕ್ಷ), ನೀ ನಿಂದೆನ್ನಿಂ (ಟ). [5] ಸ್ವೀಪಾ=(ಟ); ಪತಿಕಾರ್ಯ (ನ, ಮ, ಅ). [6] ಸ್ವೀಪಾ =(ಟ); ದಿ (ನ, ಮ, ಅ). [7] ಸ್ವೀಪಾ =(ಟ); ಪತಿಕಾರ್ಯ (ನ, ಅ).

ಅರಿಚರಣಪಾಂಸು ಪತ್ತಿರೆ
[1]ಶರೀರಮಂ[1] ತೊಡೆದು ಕಳೆದೆ ವಸ್ತ್ರಾಂಚಲದಿಂ |
ಕುರುನಂದನ ನೀನೆನ್ನೀ
ಪರಿಭವಪಾಂಸುವನದೆಂತು ಪೇೞ್ ಕಳೆದಪೆಯೋ ‖ ೧೫

ಎಂದು ಪರಮನಿರ್ವೇಗಪರಾಯಣನಾಗಿ ನುಡಿದು

ಹರಿಯನುಬಲದಿಂ ಪಾಂಡವ-
ರರಿಯರ್ ಗೆಲಲೀಶ್ವರಾಂಗನಶ್ವತ್ಥಾಮಂ |
ಪರಬಲ[2]ಕಜೇಯನೆಂದಂ[2]-
ತರನುಂ ನೃಪನಂತರಂಗದೊಳ್ ಚಿಂತಿಸಿದಂ ‖ ೧೬

ಇದುವಂ ನೋಡುವೆನಿನ್ನು ಮೆನ್ನೊಡಲೊ[3]ಳೆ[3]ನ್ನೀ ಪ್ರಾಣಮುಳ್ಳನ್ನವೋ-
ವದೆ ಕೌಂತೇಯರನಿಕ್ಕಿ ಪಂದಲೆಗಳಂ [4]ತಂದೆನ್ನ ಮುಂದಿಕ್ಕು[4] ಕೂ-|
ರ್ಗದ ದಾಯಾದರ ಮಿಕ್ಕ ಪಂದಲೆಗಳಂ ಕಣ್ಣಾರೆ ಕಂಡೆನ್ನ ಚಿ-
ತ್ತ[5]ದೊಳೊಂದುಂ ತೊಡಳಿ[5]ಲ್ಲದೆನ್ನ ಸುಗಣಕ್ಕುತ್ಕ್ರಾಂತಿಯಂ ಮಾಡುವೆಂ ||

ಎಂಬುದುಂ ಅದಾವ ಗಹನಂ ಅಂತೆ ಗೆಯ್ವೆನೆಂದು ಪೂಣ್ದು ಮಹೀ
ಕಾಂತೆಯುಮಂ ಶ್ರೀಕಾಂತೆಯುಮಂ ಕಣ್ಗಿಡೆ ಜಡಿ[ಯೆ]

ಉರಗೇಂದ್ರಫಣಾಮಣಿ ನೂ-
ಪುರಮಣಿ ಜಲರಾಶಿ ರತ್ನ[6]ಮೇಖಲೆ [ಮೆಱೆವಾ][6] |
ಕುರುಧರೆ ನಿಜರೂಪದೆ ಬಂ-
ದಿರದಾ ಗುರುಸೂನುಗಳ್ಕಿ ಬೆಸನೇನೆಂದಳ್ ‖ ೧೮

---

[1] ಸ್ವೀಪಾ = (ಮ) ; ಕರಾಜದಿಂ (ನ), ಕರಾಗ್ರದಿಂ (ಅ). [2] ಕಜೆಂ ××× (ನ), ಕಜೀಯ ××× (ಅ೧), ನಜೀಯನೆಂದಂ (ಮ, ಅ೩). [3] ಸ್ವೀಪಾ = (ಮ) ; ಳಿ (ನ, ಅ). [4] ಸ್ವೀಪಾ = (ಮ) ; ತಂದಿಕ್ಕು ಮುನ್ನೆನ್ನ (ನ, ಅ). [5] ಸ್ವೀಪಾ = (ಅ) ; ××× ದುಂ ತೊದಳಿ (ನ), ದೊಳೆಂತುಂ ತಡವಿ (ಮ). [6] ಮೆ ××× ಪಾ (ನ), ಮೇಖಲಿ ಮರೆಭೂ (ಮ), ಮುಡೆವಣೆಯೆನಿಪಾ (ಅ೧), ಮೇಖಲೆಯೆನಿಪಾ (ಅ೩).

ಒರ್ವಳ್ ಕೊಡೆವಿಡಿವ್ರುದು ಮ-
ತ್ತೊರ್ವಳ್ ಚಮರಜಮನಿಕ್ಕುತಿರ್ಪುದು ಕುರುವಂ-।
ಶೋರ್ವೀಪತಿಗಾಂ ಬರ್ಪಿನ-
ಮಿರ್ವರುಮಿಂತಿರ್ಪುದೆಂದನಶ್ವತ್ಥಾಮಂ ॥ ೧೯

ಅಂತವರಂ ನಿಯೋಜಿಸಿ ನೇಸಱ್ ಪಡುವಿನಮಿರ್ದು ನಿಜಪತಿಯಂ ಬೀಳ್ಕೊಂಡು ಪಯಣಂಬೋಗಿ ಹಸ್ತಿನಪುರಮಂ ಪೊಕ್ಕು ಅಲ್ಲಿ

ಕಂಜವನದಂತೆ ಲಕ್ಷ್ಮೀ-
ರಂಜಿತ[1]ಮುಂ ಚಿತ್ರಪತ್ರಮುಂ ಚಕ್ರಾಂಕ-[1]।
ವ್ಯಂ[2]ಜಿತಮುಮ[2]ಪ್ಪ ಬೀಡಂ
ಮಂಜಿಱುವಂತಿರುಳೊಳಿಱುದನಶ್ವತ್ಥಾಮಂ ॥ ೨೦

[3]ಅಂತಿಱುವಾಗಳ್ ಪಲವು ದಿವಸಂ ಕಾದಿ ಪಿರಿದುಂ ಪಯಣಂ ಬಂದು ಬಬಲ್ದು ಕೋರ್ವೈಸಿ ನಿದ್ರೆಗೆಯ್ದುವರ್ ತೊಟ್ಟನೆ ನಿದ್ರೆಯಿಂದೆಚ್ಚತ್ತು ಮುಟ್ಟಿ ವಂದಾಗಳಾ ಕಳಕಳಮಂ ಕೇಳ್ದು[3] ಕರತಳದಿಂ ಕಣ್ಣಂ ಪೊಸೆಯುತ್ತುಮೆೞ್ದು ತಂತಮ್ಮ ತಲೆದೆಸೆಯೊಳಿರ್ದ ಕರವಾಳಂ ಕೊಂಡು ನಿಂದ ನೆ[4][ಲೆ][4]ಯೊ[5]ಳ್ [ತ್ರ][5]ಳರದಿರ್ದ ತಲೆಗಾಪಿನಾಳುಕ್ಕಡದಾಳಮೇಲಿಕ್ಕಿ ಉಕ್ಕಡದಾಳ್ [6][ಘ][6]ರವಟ್ಟಿಗೆಯಾಳ ಮೇಲಿಕ್ಕಿ [7][ಘ][7]ರವಟ್ಟಿಗೆಯಾಗೆ ಮಾಮುಸಕಂ ಮುಸಗಿ ಜವಂ ನೇಱು ಬರ್ಚಿದಂತೆ ಪೆಂಡಿರ್ ಮಕ್ಕಳೆನ್ನದೆ ನಿವಳಿವಟ್ಟಮಪ್ಪಿನಂ ಒಂದಕ್ಕೋಹಿಣೀಬಲಮೆಲ್ಲಮಂ ಪೇಡೆ ಪೆಸರ್ಗಿಲ್ಲವೆಂಬಂತೆ ಕೊಂದು ತನಗೆ ಕಟ್ಟಿದಿರೊಳಿರ್ದ ಧೃಷ್ಟದ್ಯುಮ್ನನುಮಂ ಮುಟ್ಟಿ ಮೂದಲಿಸಿ ತಮ್ಮಯ್ಯನಂ ಪರಿಭವಿಸಿದ ಪಗೆಯಂ ಕೊಂದು ದೆಸೆವಲಿಗೆಯ್ದು ಶಿಖಂಡಿ ಚೇಕಿತಾನಕ ಯುಧಾಮನ್ಯೂತ್ತಮೌಜಸ

[1] ಸ್ತ್ರೀಪಾ = (ಮ, ಅ೩) ; ××× ಕೃತಂ ಮನೋಹರ ಕೋಟಾ (ನ, ಅ೧).
[2] ಸ್ತ್ರೀಪಾ = (ಅ೩) ; ಜಿತವೆನಿ (ನ, ಅ೧), ಜನಮುಮ (ಮ). [3] ಸ್ತ್ರೀಪಾ = ಮುಃಖ್ಯವಾಗಿ (ಅ೩) ; (ಮ) ಇದಕ್ಕೆ ಪೋಷಕವಾಗಿದೆ, ಆದರೆ ಅದರಲ್ಲಿ ಬಲುಮಟ್ಟಿಗೆ ಗ್ರಂಥಪಾತವಿವೆ ; (ನ, ಅ..) ಕೆಲಮಟ್ಟಿಗೆ ಬೇರೆಯಾಗಿವೆ. [4] ದೆ (ನ), ಱೆ (ಅ).
[5] ಳ (ನ, ಅ). [6] ಪು (ನ, ಅ), ಘು (ಅ೧ಪಾ). [7] ಪು (ನ, ಅ).

ಪ್ರಭೃತಿಗಳುಮನಿಕ್ಕಿ ಪಾಂಡವರ ಶಂಕೆಯಿಂ ಶ್ರುತಸೋಮಕ ಪ್ರಭೃತಿಗಳಪ್ಪ ಪಂಚಪಾಂಡವರ ತಲೆಗಳಂ ಕೊಂಡು ಥಳಥಳನೆ ನೇಸಱ್ ಮೂಡುವಾಗಳ್ ಒಂದು ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಿವೆಯೆಂದು ದುರ್ಯೋಧನನ ಮುಂದಿಕ್ಕಿದೊಡೆ ಆ ಮಹಾನುಭಾವನಾ ತಲೆಗಳಂ ನೀಡುಂ ಭಾವಿಸಿ ನೋಡಿ

ಪವನಜನಾಸ್ಯಮಲ್ತಿದವನಾನನಮುಪ್ಪೊಡೆ ಮಟ್ಟಮಿರ್ದು ನೋ-
ಡುವುದೆ ಮದೀಯವಕ್ತ್ರಮನೆ ಕೆಮ್ಮನೆ ಪೋಯ್ತುಱಿವಿಲ್ಲದಾಯ್ತು ಪಾಂ-|
ಡವರ ಶಿರಂಗಳಲ್ಲವಿವು [1]ಪಾಂ[ಡವ]ಸೂನು[1]ಗಳಪ್ಪ ಪಂಚಪಾಂ-
ಡವರ ಶಿರಂಗಳಂ [2]ನೆಱಿ ವಿಚಾರಿಸದ[2]ಕ್ಕಟ ಕೊಂಡು ಬರ್ಪುದೇ ‖ ೨೧

ಪರಮೇಶ್ವರಾವತಾರನೆ
ಪರಮ[3]ಜ್ಞಾನಿಯೆ[3] ವಿವೇಕವಿಕಳರ ಪೋಲ್ ಬಾ-|
ಲರ ತಲೆಯನರಿದು ತಂದೆಯೊ
ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ ‖ ೨೨

ಅದುಕಾರಣ[ಂ] ರೌದ್ರಪ್ರಾಯಶ್ಚಿತ್ತಪ್ರವರ್ತನಾರ್ಥಂ ಹಿಮವತ್ಪರ್ವತಕ್ಕೆ ಪೋಪು[ದೆಂದು] ಚಿತ್ತಸಮಾಧಾನಂಗೆಯ್ದು [4][ಅ]ಜಿತನಂ[4] ಸ್ಮರಿಯಿಸಿ ಸುರಲೋಕಮಂ ಸಾಧಿಸುವೆನೆಂದು ಅಶ್ವತ್ಥಾಮಾದಿಗಳಂ ವಿಸರ್ಜಿಸಿ ತದ್ದಿನಾವಸಾನದೊಳ್ ದುರ್ಯೋಧನಂ ಪ್ರಾಣವಿಸರ್ಜನೋನ್ಮುಖನಾದಂ

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ-
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತುಮಿ[5]ರ್ಪ[5] ಚ|
ಕ್ರಾಂಕಮುಗಲ್ವಿನಂ ಕ್ರಮದಿನಂಬರಮಂ ಬಿಸುಟ[6]ರ್ಪಿಗಂ[6]ಧಕಾ-
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ‖ ೨೩

---

[1] ××× ಮ (ನ), ಪಾಂಡುಸೂನು (ಮ), [ಕೃಷ್ಣೆಯ ಸೂನು] (ಅ); ಪಂಪಭಾ, ೧೩.೧೦೭ ವ. ಹೋಲಿಸಿ. [2] ಶಿಶುಶಿರಂಗಳನ (ಮ). [3] ಸ್ವೀಪಾ = (ಮ, ಅ೩); ಜ್ಞಾನಿ× (ನ), ಜ್ಞಾನೆ ನೀಂ (ಅ೧). [4] ಜಿತನಂ (ನ, ಅ೧ಪಾ), ಚಿತ್ತಬಾಂಧವನಂ (ಮ) ಚಿತನಂ (ಅ೧), ಚಿತಮಂ (ಅ೩). [5] ಸ್ವೀಪಾ = (ಮ, ಅಪಾ); ಪ್ಪ (ನ), ರ್ದು (ಅ). [6] ಸ್ವೀಪಾ = (ಮ), ರ್ಬಿಗಂ (ನ), ರ್ಬಿನಂ (ಅ).

# ೧೦. ಭೀಮಸೇನಪಟ್ಟಬಂಧಂ

*ಜಯಲಕ್ಷ್ಮೀಪ್ರಿಯನೊಳ್ ಪರಾಕ್ರಮಕೃತಾಲಂಕಾರನೊಳ್ ಸತ್ಯವಾ-
ದಿಯೊಳರ್ಥಿಪ್ರಿಯನೊಳ್ ಧರಾಪ್ರಣಯಿ[1]ಯೊಳ್ [ನಿರ್ದ್ವೇಷಿ][1]ಯೊಳ್
ಪಂಡಿತಾ-
ಶ್ರಯನೊಳ್ ರಾಜಿತರಾಜಚಿಹ್ನ[2]ಸಹಿತಂ[2] ಶ್ರೀಕಾಂತೆಯುಂ ಭೂಮಿದೇ-
ವಿಯುಮುತ್ಸುತ್ಸವದಿಂದೆ ಬಂದು ನೆರೆದರ್ ಚಾಳುಕ್ಯಕಂದರ್ಪನೊಳ್ || ೧

ಶ್ರೀಗೆ ಜಯಶ್ರೀಗೆ ವಚಃ-
ಶ್ರೀಗೆ ಮನೋರಮಣನೆನಿಸಿ ಸಕಲಧರಿತ್ರೀ-|
ಭಾಗ[3]ದೊ[ಳಂ] ನೆಗಳ್ದಂ[3] ದಿ
ಗ್ಭಾ[4]ಗದೊಳೆಸೆಯಲ್ಕೆ[4] ಕೀರ್ತಿ ಸಾಹಸಭೀಮಂ ||

ಆಗಳ್ ಮುರಾಂತಕಂ ಸಾಹಸಭೀಮನ ಸಾಹಸಕ್ಕೆ ಮೆಚ್ಚಿ ಧರ್ಮ ನಂದನಾದಿಗಳ ಮೊಗಮಂ ನೋಡಿ

ಕುರುಧರೆಯಂ [5]ನಿಜೋಗ್ರಗದೆಯೇರ್ಗಳಿನುಬ್ಬು ಸಮಸ್ತ[5]ವೈರಿಭೂ-
ಪರ ರುಧಿರಾಂಬುವಿಂದೆ ಬೆದೆಮಾಡಿಯೆ ಘಟ್ಟಿತಕುಂಭಿಮುಕ್ತಭಾ-|
ಸುರನವಮೌಕ್ತಿಕಪ್ರಕರಬೀಜಮನೋಳಿಯೆ [6]ಸೂಸಿ[6] ತಾರಭೂ-
ಧರಸಿತಕೀರ್ತಿಯೆಂಬ ಬೆಳಸಂ ಬೆಳೆದಂ ಪರಸೈನ್ಯಭೈರವಂ || ೨

ಎಂದು ಪೊಗಳ್ದು ಮುರಾಂತಕಂ ಕುರುಕುಲಾಂತಕನ ಮೊಗಮಂ ನೋಡಿ

---

* ಈ ಪದ್ಯದಲ್ಲಿ, ಸ್ವೀಪಾ=ದುಃಖುವಾಗಿ (ಅಃ); ಇದಕ್ಕೆ (ಮ) ಪೋಷಕವಾಗಿದೆ; (ನ) ದಲ್ಲಿ ಕೆಲಮಟ್ಟಿಗೆ ಗ್ರಂಥಪಾತವಿದೆ. [1] ನಿಸ್ಸಂದೇಸಿ (ನ, ಅ೧); ಯೊಳ್ ××× (ಮ). [2] ಸ್ವೀಪಾ=(ಮ); ××× (ನ), ಯುತನೊಳ್ (ಅ). [3] ದೆ ನೆಗಟ್ಟಿರ್ದಂ (ನ,ಅ), ದೊಳುಂ ನೆಗಳ್ದ (ಮ). [4] ಸ್ವೀಪಾ=(ಮ, ಅಃ); ಗಂ ದಿಗ್ವಲಯ (ನ, ಅ೧). [5] ಜಾಗ್ರಚರಣಾಗ್ರದೊಳುಳ್ತು (ನ), [ಗಜಾಶ್ವ]ಚರಣಾಗ್ರದೊಳುಬ್ಬು [ಕಡಂಗಿ] (ಅ೧), ನಿಜೋಗ್ರಗದೆಯೇರ್ಗಳಿಗಿತ್ತು ಸಮಸ್ತ (ಮ), . . ಳಿನುತ್ತುಗಿಯುತ್ತೆ (ಅಃ). [6] ಬಿತ್ತಿ (ಮ), ಯೆತ್ತಿ (ಅಃ).

ಮುನಿಯಿಸಿದರಾತಿಯಂ ಕೊ-
ಲ್ವೆನೆಂದು ಪೂಣ್ದಂತೆ ಪೂಣ್ಕೆ ತಪ್ಪದೆ ಕೊಲಲೇಂ |
ನಿನಗಲ್ಲ[1]ದೆ ತೀರ್ಗುಮೆ ಗೆ-
ಲ್ವೆನೆಂದು ನುಡಿದಂತೆ ಗೆಲವ್ರಮಿ[1]ಱುವ ಬೆಡಂಗಾ || ೪

ಪೆಱರಾಳ ಪೆಱರ ಕುದುರೆಯ
ಪೆಱರಾನೆಯ ಪೆಱರ ರಥದ ಪೆರ್ಬಲದಿಂದಂ |
ಇಱಿವರ್ ಪೆಱರೇಕಾಂಗದಿ-
ನಿಱಿವವರಾರ್ ನಿನ್ನ ತೆಱದಿನಿಱಿವ ಬೆಡಂಗಾ || ೫

ಎಂದು ನಾರಾಯಣಂ ಚಾಳುಕ್ಯನಾರಾಯಣನಂ ವರ್ಣಿಸುತಿರ್ಪಿನಂ ಆ ಪ್ರಸ್ತಾವದೊಳ್ ದುರ್ಯೋಧನನ ಜನನೀಜನಕ[ರ]ಪ್ಪ ಗಾಂಧಾರಿಯುಂ ಧೃತರಾಷ್ಟ್ರನುಂ [ಬರೆ] ಆತನ ಮಹಾದೇವಿಯ[ರ]ಪ್ಪ ಭಾನುಮತಿಯುಂ ಚಂದ್ರಮತಿಯುಂ ಮೊದಲಾದ ಶುದ್ಧಾಂತನಿತಂಬಿನೀಜನಂಗಳುಂ ತಂತಮ್ಮ ಜೀವಿತೇಶ್ವರರಂ ಸಂಗ್ರಾಮಭೂಮಿಯೊ[ಳ]ಱಸುತ್ತುಂ [ಬಂದು ಕಾಣದೆ] ಗಾಂಧಾರೀಧೃತರಾಷ್ಟ್ರರ ಕಾಲ ಮೇಲೆ ಕವಿದು ಬಿಡ್ದು

ಎಲ್ಲಿದನೆಲ್ಲಿದಂ ಕುರುಮಹೀಪತಿಯೆಲ್ಲಿದನೆಲ್ಲಿದಂ ಮಹೀ-
ವಲ್ಲಭನಿಂದುವಂಶತಿಲಕಾ[2]ಹ್ವ[2]ಯನೆಲ್ಲಿದನೆಲ್ಲಿದಂ ಲಸ- |
ತ್ಪಲ್ಲವಕೀರ್ತಿ ಚಾರುತರಮೂರ್ತಿ ಫಣೀಂದ್ರಪತಾಕನೆಲ್ಲಿ ತಾ-
ನೆಲ್ಲಿದನೆಲ್ಲಿದಂ [3][ಗಡ] ಮ[3]ನಃಪ್ರಿಯನೆಲ್ಲಿದನೋ ಸುಯೋಧನಂ || ೬

ಎಂದು ಕರುಣಾಕ್ರಂದನಂಗೆಯ್ವುದುಂ ಆಗಳದಂ ಕಂಡು ಧರ್ಮನಂದನಂ ಧೃತರಾಷ್ಟ್ರ[ಂಗಂ] ಗಾಂಧಾರಿ[ಗಮೆ]ಱಗಿ ಪೊಡೆವಟ್ಟು

ಈಯದೆ ಬಾಡಮುಯ್ದು ನೆಮಗೊಲ್ಲದೆ ಸಂಧಿಯ[4]ನಯ್ಯ[4] ನಿಮ್ಮ ಗಾಂ-
ಗೇಯರ ಮಾತುಗೇಳದಱಿದಂ ಕುರುರಾಜನದರ್ಕೆ ದುಃಖದಿಂ |

[1] ಸ್ವೀಪಾ = (ಮ) ; ದಿಂತು ತೀರ್ಗುಮೆ ಅನುನಯದಿಂ ನುಡಿದ ಬಲ್ಮೆಯಿ (ನ, ೮).
[2] ಸ್ವೀಪಾ = (ಅ) ; ನ್ವ (ನ, ಅ೧ಪಾ). [3] ಸ್ವೀಪಾ = (ಅ) ; ಮನ್ಕ (ನ). [4] ಸ್ವೀಪಾ = (ಮ) ; ನೆನ್ನ (ನ, ಅ).

ಬಾಯಟಿಯಲ್ಕೆವೇಡ ನಿಮಗಾಂ ಮಗನ[1][ಲ್ಲೆ][1]ನೆ ನೀಮೆ ತಂದೆಯುಂ
ತಾ[2]ಯುಮವೋಘ[2]ಮಿನ್ನೆ ನಗೆ ಪಾಂಡುಮಹೀಪತಿಯಿಂದಮಗ್ಗಳಂ || ೭

ನಿಮಗೆ ಬೆಸಕಯ್ವೆ[3]ಮಯ್ವರ್[3]
ಕ್ರಮ[4]ದಿಂ ಬೆಸಕಯ್ಸಿ[4]ಕೊಂಡು ನೆಲಸಂ ಪೂರ್ವ-|
ಕ್ರಮದಿಂದಾಳ್ವುದು [5][ನೀಂ ನಿ-
ಮ್ಮ][5] ಮಕ್ಕಳಂ ಮಱೆ[6]ವುದೆಮ್ಮುಮಂ ನೋಡಿನಿಸಂ[6] || ೮

ಎಂದು ಧರ್ಮನಂದನಂ ನುಡಿಯೆ ಧೃತರಾಷ್ಟ್ರನವಧಾರಿಸಿ

[7]ಎಮಗಿನ್ನುಂ ಮಾನಸವಾ-
ಟ ಮೋಹಮಿ[ಲ್ಲಿಂ]ದು ನಿನ್ನ ನಿನಿತಂ [ಬೇಡ್ಪಂ][7] |
ಯಮನಂದನ [8][ಅಸುವೊ][8]ಸರ್ದರ-
ಸುಮಕ್ಕಳಂ ಕುಡುವುದವರ ವನಿತೆಯರ್ಗೀಗಳ್ || ೯

ಎನೆ ಇದಾವ ಗಹನಂ ಅವರ್ಗಳ್ಗಂ ಸಂಸ್ಕಾರವಿಧಿಯಂ ಮಾಡ್ವೆನೆಂದಾಗಳ್

[9][ಅಳುರ್ವತಿ][9]ಶೋಕಾನಲನಿಂ
ಜಳಜಾಸನೆ ನೊಂದು ಬೆಂದು ನೆನೆದಲ್ಲಿಯೆ ಕಂ-|
ಡಟಲುಣ್ಮೆ ಶೋಕರಸದಿಂ
ಪಟಯಿಸಿದಳ್ ಕೊಂತಿ ತನ್ನ ಚೊಚ್ಚಿಲ ಮಗಸಂ || ೧೦

---

[1] ಲ್ಲ (ಸ). [2] ಸ್ವೀಪಾ = (ಮ); ಯೆನಲಕ್ಕು (ನ, ಅ). [3] ಸ್ವೀಪಾ = (ಮ); ನೆಮ್ಮಂ (ನ), ವೆಮ್ಮಂ (ಅಃ), ವೆವ್ವಿಂ (ಅಞ). [4] ದೆವ್ವಿಂ ಕೂಡಿಕೊಂಡು (ಮ). [5] ಸ್ವೀಪಾ = (ಅ); ಮಿಂನಿಂ (ನ, ಅಃಪಾ). [6] ಸ್ವೀಪಾ = (ನ); ದೆಮ್ಮು (ಅಪಾ), ದುನೋಡಿಮೆಮ್ಮುಮನಿನಿಸಂ (ಅ). [7] ನಿಮಗೆಮಗಿನ್ನುಂ ಮಾನಸವಾಳ ಮೋಹವಿಲ್ಲೆ ಮಗಮೆಯ್ದ್ದ ನೀ ನಿನಿತಂ ಕೇಳ್ (ನ); ಯೆಮಗಿನ್ನುಂ ಮಾನಸವಾಳಮೋಘ ಮಿಲ್ಲೆಂದು ನಿನ್ನ ನಿನಿತಂ ಭೇದಂ (ಮ); (ಅ) ಬಲುಮಟ್ಟಿಗೆ (ನ) ದಂತೆ. [8] ಸ್ವೀಪಾ = (ಅಞ); ವ (ನ), ××× ವ (ಅಗ), ××× (ಮ). [9] ಗಳಯಿಸೆ (ನ, ಅ); (ಮ) ದಲ್ಲಿ ಪದ್ಯ 'ತನುಶೋಕಾನಳನಳುರಲ್ ದಿನೇಶಸುತನಂ' ಇತ್ಯಾದಿಯಾಗಿ ಇದೆ.

ಅಂತು ಕರ್ಣನ ಕಳೇಬರಮಂ ತಪ್ಪೈಸಿ ಪೞಯಿಸುವ ನಿಜಜನನಿಯಂ ಧರ್ಮನಂದನಂ ಇವನಾರ್ಗೆಂದು ಬೆಸಗೊಳ್ವುದುಂ

ವನಜಾತಪ್ರಿಯಬಂಧುಗಂಗಪತಿಯಂ ಧರ್ಮಂಗೆ ನಿನ್ನಂ ಹುತಾ-
ಶನಮಿತ್ರಂಗೆ ಬಕಾರಿಯಂ ಕುಲಿಶಿಗಂ ಗಾಂಡೀವಿಯಂ ಪೆತ್ತೆನೀ |
ದಿನಕೃನ್ನಂದನನೆನ್ನ ಚೊಚ್ಚಿಲ ಮಗಂ ನಿಮ್ಮಗ್ರಜಂ ಕರ್ಣನಾ-
ನಿತಂ ನಿಮ್ಮಯ ಮೋಹದಿಂದುಸಿರದಿರ್ದೆಂ ಕೊಂದೆಸಯ್ ಧರ್ಮಜಾ || ೧೧

ಎಂಬುದುಂ ಮಕ್ಕಳತ್ಯಂತದುಃಖಿತರಾಗಿ

* ಕರಮಿಂ[1]ತೊಂದ[1]ವಿವೇಕಮಂ ನೆಗೞ್ದಿರಂದೇಕಿಂತುಟಂ ಪೇೞದಿ-
[2]ರ್ದ[ರೊ] ಮುಂ ಪೇೞ್ದೊ[ಡಿ][2]ದೇಕೆ ಕೂಡಿದಪುದೆಮ್ಮಣ್ಣಂಗೆ ಕರ್ಣಂಗೆ ಯು- |
ರ್ವರೆಯಂ ಕೊಟ್ಟವನಾಳ್ದನಾಗೆ ಬಟಿಕಾವಾಳಾಗಿ ಸೌದರ್ಯ[3]ದಿಂ
ದಿರೆ[ವೇ][3] ಪೊಲ್ಲದುಗೆಯ್ದಿರೆಂದು ಜಡಿದರ್ ಕುಂತೀಸುತರ್ ಕೊಂತಿಯಂ ||

ಎಂಬುದುಂ ನಾರಾಯಣಂ ಕ್ಷತ್ರಿಯಧರ್ಮಮಿಂತುಟೆ [ವಲಂ] ಮನಃಕ್ಷತಂಬಡಲ್ವೇಡಿಂ ಸಂಸಾರಸ್ವರೂಪಮುಸಱಿದು ಸೈರಿಸುವುದೆಂದವರಂ ವಿಗತಶೋಕರ್ ಮಾ[ಡೆ] ದುರ್ಯೋಧನಪ್ರಭೃತಿಗಳ ಪೆಣಂಗಳನೊಂದೆಡೆಯೊಳಿಟ್ಟು ದ್ವಿಜರಿಂ ಸಂಸ್ಕಾರಕರ್ಮ[ಮಂ ನಿರ್ವರ್ತಿಸಿ] ಕರ್ಣನ ಕಳೇಬರಮಂ ಬ್ರಾಹ್ಮಣರಿಂ ತಾವೆ ಸಂಸ್ಕಾರಮಂ ಮಾಡಿ ಸಮಸ್ತರ್ಗಂ ಜಲದಾನಕ್ರಿಯೆಗಳಂ ನಿರ್ವರ್ತಿಸಿ ತದನಂತರಂ ಕೊಂತಿಯುಂ ಗಾಂಧಾರಿಯುಂ ಧೃತರಾಷ್ಟ್ರನುಂ ಕುರುನರೇಂದ್ರನರಸಿಯರ್ ಮೊದಲಾಗೆಲ್ಲರುಂ ಅನಶನದೀಕ್ಷೆಯಂ ಕೈಕೊಂಡುತ್ತಮಮೋಕ್ಷಮುಂ ತಾಳ್ದಿದರ್

ಇತ್ತಲ್ ಧರ್ಮನಂದನಂ ಮುಕುಂದಂಗೆ ಕಯ್ಯಂ ಮುಗಿದು

---

* ಈ ಪದ್ಯದಲ್ಲಿ (ಮ) ಪಾಠ ಕೆಲವುಟ್ಟುಗೆ ಬೇರೆಯಾಗಿದೆ. [1] ತಬ್ಬಿ (ನ). [2] ರ್ದರು ಪೇಳ ××× ಮಿ (ನ), ರ್ದರೆ [ಪೇೞ್ದಿರ್ದೊಡೆ] (ಅ); 'ದಿರಿ ಮುಂ ಪೇಳ್ದೊಡಾ ಇತ್ಯಾದಿ (ಮ). [3] ××× (ನ, ಅ೧), ದಿಂದಿರೆನೇ (ಮ), [ದಾಯಿರವಂ] (ಅ೩).

ಇನಿತೊಂದುಗ್ರಸಮಸ್ತಭಾರತಮಹಾಭಾರಾತಿಯುದ್ಧಂ ಮುಕುಂ-
ದ ನಿಜಾನುಗ್ರಹದಿಂದಮಾಯ್ತು ಕಿಱಿಯಂ ಪಾರ್ಥಂ ಮಹೀಮೋ-|
ಹಮಿಲ್ಲೆನಗೀತಂ ಕುರು[1][ಯುದ್ಧ]ಲಬ್ಧಜಯಸೀ[1] ಭೀಮಂಗೆ ಸೀಂ ಪಟ್ಟಬಂ-
ಧನಮಂ ಮಾಳ್ಪುದದರ್ಕೆ ಹಸ್ತಿನಪುರಪ್ರಸ್ಥಾನಮಂ ಮಾಡುವಂ || ೧೩

ಎಂಬುದುಂ ಭೀಮಂಗೆ ಪಟ್ಟಬಂಧಮಂ ಮಾಳ್ಪುದೆಂದು ವಾಸುದೇವಂ ಮುಂತಾಗಿ ಸಹದೇವಂ ನಿರೂಪಿಸಿದ ಶುಭಮುಹೂರ್ತದೊಳ್ ಹಸ್ತಿನಪುರಮಂ ಪೊಕ್ಕು

ದೆಸೆಯಂ ತೆಕ್ಕನೆ ತೀವೆ ತಾಟಿತಮಹಾಭೇರೀರವಂ ವಿಪ್ರರೆ-
ಣ್ದೆಸೆಯೊಳ್ ವೇದನಿನಾದದಿಂ ಪರಸೆ ಪಂಕೇಜಾಕ್ಷಿಯರ್ ಕೂಡಿ ಸಂ-|
ತಸದಿಂ ಸೇಸೆಯನಿಕ್ಕೆ ಪಾಂಡವಬಲಪ್ರಾಕಾರವೀರಂಗೆ ಸಾ-
ಹಸಭೀಮಂಗೆ ಮನೋಮುದಂ ಬೆರಸು ಕೃಷ್ಣಂ ಕಟ್ಟಿದಂ ಪಟ್ಟಮಂ ||

* ಶ್ರೀಯಂ ಕುರುಭೂಭೃದ್ಬಲ-
ತೋಯಧಿಯೊಳ್ ಕಡೆದು ಪಡೆದು ಭುಜಮಂ[2][ದರ][2]ದಿಂ |
ದಾಯಾದಮಲ್ಲನೆನಿಸಿದ-
ಜೇಯಂ ಭುಜಬಲವಿಭಾಸಿ ಸಾಹಸಭೀಮಂ || ೧೪

---

[1] ವಂಶಲಬ್ಧಜಯಸೀ (ನ, ಅ), ವೃದ್ಧಮದ್ಘತಮುವಿಾ (ಮ). * ಇದು ಮೂಲದಲ್ಲಿ ೨ ನೆಯ ಆಶ್ವಾಸದ ಮೊದಲನೆಯ ಪದ್ಯ. [2] ಡಲ (ನ, ಅ).

# ಟಿಪ್ಪಣಿಗಳು

## ೧. ಅವತರಣಿಕೆ

೧. ಇದು ಕಾವ್ಯಪ್ರಾರಂಭದ ಮಂಗಳಪದ್ಯಗಳಲ್ಲಿ ಮೊದಲನೆಯದು. ಇಲ್ಲಿ ರನ್ನನು ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವನ್ನೂ ("ನಾರಾಯಣ") ತನ್ನ ಪ್ರಭುವನ್ನೂ ("ಚಳುಕ್ಯನಾರಾಯಣ") ಶ್ಲೇಷೆಯಿಂದ ಒಟ್ಟಿಗೆ ಸ್ತುತಿಸಿದ್ದಾನೆ.

ಶ್ರೀ°—(೧) ಲಕ್ಷ್ಮಿ, (೨) ಸಂಪತ್ತು. ಬಲ°—(೧) ಬಲರಾಮ, (೨) ಸೈನ್ಯ. ಬಲಿದರ್ಪಹರಂ—(೧) ಬಲಿಚಕ್ರವರ್ತಿಯ, (೨) ಬಲಶಾಲಿ (ಗಳಾದ ಶತ್ರು)ಗಳ, ಗರ್ವವನ್ನು ಮುರಿದವನು. ಜಿತಾರಿದೈತೇಯಂ—(೧) ತನ್ನ ಶತ್ರುಗಳಾದ ದೈತ್ಯರನ್ನು, (೨) ಶತ್ರುಗಳೆಂಬ ದೈತ್ಯರನ್ನು, ಗೆದ್ದವನು. ಅನಂತಭೋಗನಿಲಯಂ—(೧) ಆದಿಶೇಷನ ಹೆಡೆಯಲ್ಲಿ, (೨) ಕೊನೆಯಿಲ್ಲದ ಭೋಗಗಳಲ್ಲಿ, ನೆಲೆಗೊಂಡವನು. ಪ್ರತಿಪಾಲಿತಧರ್ಮಚಕ್ರಂ—(೧) ಧರ್ಮರಾಯನ ರಾಜ್ಯವನ್ನು, (೨) ಧರ್ಮಸಾಮ್ರಾಜ್ಯವನ್ನು, ಕಾಪಾಡಿದವನು. ಅಬ್ಜಾಯತ°—(೧) ಕಮಲವೆಂಬ ವಿಶಾಲವಾದ, (೨) ಕಮಲದಂತೆ ವಿಶಾಲವಾದ. ಆದಿಪುರುಷಂ—(೧) ಜಗತ್ತಿಗೆ ಮೊದಲಿಗ, (೨) ತನ್ನ ರಾಷ್ಟ್ರಕ್ಕೆ ಮೊದಲಿಗ. °ದೇವಂ ಈಗೆ ಎಮಗೆ—°ದೇವನು ನಮಗೆ ದಯಪಾಲಿಸಲಿ.

ರನ್ನನು ಜೈನಮತದವನಾದರೂ, ತನ್ನ ಒಡೆಯನು ವೈದಿಕಸಂಪ್ರದಾಯದವನಾದ ಕಾರಣ ಅವನ ಪ್ರಶಂಸಾಪರವಾದ ಈ ಕಾವ್ಯದ ಮೊದಲಲ್ಲಿ ವಿಷ್ಣು, ಶಿವ, ಬ್ರಹ್ಮ, ಸೂರ್ಯ ಮೊದಲಾದ ದೇವತೆಗಳನ್ನು ಸ್ತುತಿಸಿದ್ದಾನೆ. (ನಮ್ಮ ಸಂಗ್ರಹದಲ್ಲಿ ವಿಷ್ಣುಪರವಾದ ಪದ್ಯವನ್ನು ಮಾತ್ರ ಉಳಿಸಿಕೊಂಡಿದೆ.) ಈ ಪದ್ಧತಿಯನ್ನೂ ಇಲ್ಲಿರುವಂತೆ ದೇವತಾಸ್ತುತಿ ರಾಜಸ್ತುತಿಗಳ ಸಂಮಿಳನವನ್ನೂ ರನ್ನನಿಗೆ ಪ್ರೇರಕವಾದ ಪಂಪಭಾರತದಲ್ಲೇ ಕಾಣಬಹುದು. ಪಂಪನಿಗೂ ಹಿಂದೆಯೇ ಮೊದಲನೆಯ ಗುಣವರ್ಮನು (ಕ್ರಿ.ಶ. ಸು. ೯೦೦) ಈ ಮಾರ್ಗದಲ್ಲಿ ಹೆಜ್ಜೆಯಿರಿಸಿದ್ದನೆಂದು ಹೇಳಲು ಅವಕಾಶವುಂಟು.

೨. ಈ ಪದ್ಯದಲ್ಲಿ 'ಕೂರ್' ಎಂಬುದರ ವಿವಿಧಾರ್ಥಗಳನ್ನು ನೋಡ ಬಹುದು. ಕೂರಿಸಿ—ಒಲಿಸಿ ; ತನ್ನ ಶೌರ್ಯದಿಂದ ವೀರಲಕ್ಷ್ಮಿಯನ್ನು ಒಲಿಸಿ ಕೊಂಡು ; ಕೂರ್—ಪ್ರೀತಿಸು. ಕೂರದರಂ—ಅಪ್ರಿಯರನ್ನು, ಶತ್ರುಗಳನ್ನು. ಕೂರಸಿ—ಹರಿತವಾದ ಕತ್ತಿ (ಕೂರಿತ್ತು ಅಸಿ). ಕಂಠೀರವವಾಹನೆ—ಸಿಂಹ ವಾಹನೆಯಾದ ದೇವಿ, ದುರ್ಗೆ. ಚಳುಕ್ಯಕಂಠೀರವನಾ ಕೂರಸಿಯೊಳ್ ನೆಲಸುಗೆ—ಎಂದು ಅನ್ವಯ.

೩. ಕಾವ್ಯಕ್ಕೆ ರಸಗಳೂ ಅಲಂಕಾರಗಳೂ ಬೇಕಾದವು ; ಸ್ತ್ರೀಯರಲ್ಲೂ ಇವು ಇರತಕ್ಕವು. ಇವುಗಳ ವಿಷಯದಲ್ಲಿ ಸ್ತ್ರೀಸಾಮಾನ್ಯಕ್ಕಿಂತ ವಾಗ್ದೇವಿ ಮಿಗಿಲೆಂಬುದನ್ನು ರನ್ನನು ಲೆಕ್ಕಮಾಡಿ ತೋರಿಸಿ, ತನ್ನ ಕಾವ್ಯಸಿದ್ಧಿಗಾಗಿ ಆಕೆಯ ಸಾನ್ನಿಧ್ಯವನ್ನು ಕೋರುತ್ತಾನೆ.

ಸ್ತ್ರೀಯರ ಅಲಂಕಾರಗಳು ಹದಿನಾರು : ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ (ಕಾಡಿಗೆ), ನಾಸಾಭೂಷಣ, ಮಕರಪತ್ರ (ಕೆನ್ನೆಗಳ ಮೇಲೆ ಚಿತ್ರಿಸಿಕೊಳ್ಳುವ ವರ್ಣವಿನ್ಯಾಸ), ಕುಂಡಲ, ಹಾರ, ಕೇಯೂರ (ಭುಜಗಳ ತೊಡಿಗೆ), ಮಣಿಭೂಷಣ, ಅಂಗುಲೀಯಕ, ಕಾಂಚೀ ದಾಮ (ಒಡ್ಯಾಣ), ನೂಪುರ (ಕಾಲಂದುಗೆ), ಅಲಕ್ತಕ (ಅರಗಿನ ರಸದ ಲೇಪನ). ಕಾವ್ಯದೇವಿಯ ಅಲಂಕಾರಗಳು ಹದಿನಾರಲ್ಲ, ಮೂವತ್ತಾರು. ಈ ಮೂವತ್ತಾರು ಯಾವುವು ಎಂಬುದು ಸ್ಪಷ್ಟವಾಗಿಲ್ಲ. ರನ್ನನ ಕಾಲಕ್ಕೆ ಪ್ರಚುರವಾಗಿದ್ದ ಭಾಮಹನ ಕಾವ್ಯಾಲಂಕಾರ, ದಂಡಿಯ ಕಾವ್ಯಾದರ್ಶ, ಕನ್ನಡದ ಕವಿರಾಜಮಾರ್ಗ ಈ ಮೊದಲಾದ ಅಲಂಕಾರಗ್ರಂಥಗಳಲ್ಲಿ ನಲ ವತ್ತಕ್ಕೆ ಮೇಲ್ಪಟ್ಟು ಅಲಂಕಾರಗಳು ಉಕ್ತವಾಗಿವೆ. ಭರತನ ನಾಟ್ಯಶಾಸ್ತ್ರ ದಲ್ಲಿ ಮೂವತ್ತಾರು 'ಲಕ್ಷಣ'ಗಳನ್ನು ಹೇಳಿದೆ ; ಇವೇ ರನ್ನನ 'ಅಲಂಕಾರ' ಗಳಾಗಿರಬಹುದೆ ? ಒಂದಿದ—ಹೊಂದಿಕೆಯಾದ (ಧಾ. ಒಂದು). ಸ್ತ್ರೀಯರಿಗೆ ಹೊಂದತಕ್ಕದ್ದು ಪ್ರೇಮಾತ್ಮಕವಾದ ಶೃಂಗಾರರಸವೊಂದೇ ಎಂದು ರನ್ನನ ಅಭಿಪ್ರಾಯ. (ಪ್ರಾಚೀನರನೇಕರ ಅಭಿಪ್ರಾಯವೂ ಹಾಗೆಯೇ. ಇದನ್ನು ಒಪ್ಪಬಹುದೆ ಎಂಬುದರ ವಿಚಾರ ಇಲ್ಲಿ ಅಪ್ರಸಕ್ತ.) ಒಂದಿದ ಶೃಂಗಾರಂ ಅದು ಅಲ್ಲಂ ಒಂದೆ ರಸು ; ಒಂಬತ್ತು ಎಯ್ದೆ ಒಡಂಬಟ್ಟುವು—ಎಂದು ಪದ

ವಿಭಾಗ. ಕಾವ್ಯರಸಗಳು ಒಂಬತ್ತು : ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ.

೪. ಕಯ್ಗೆ ಎಯ್ದೆ ಬಂದತ್ತು—ಕೈಸೇರಿ ಬಂದಿತು. (ವಾಕ್ಯಸಂಧಿಯಲ್ಲಿ ಬಕಾರಕ್ಕೆ ವಕಾರಾದೇಶ.) ಕಯ್ವತ್ತಿ = ಕಯ್ + ಪತ್ತಿ—ಕೈಗೆ ಹತ್ತಿಕೊಂಡು. ದಿಶಾದಂತಿಗಳ್ ಬರೆಗಂ—ದಿಗ್ಗಜಗಳ ವರೆಗೂ. ಬಳೆ—ಬೆಳೆ; ಹಳಗನ್ನಡದಲ್ಲಿ 'ಬೆಳೆ ಎಂಬುದು ಸಸ್ಯಗಳಿಗೂ, 'ಬಳೆ' ಎಂಬುದು ಸಸ್ಯೇತರ ವಸ್ತುಗಳಿಗೂ ಅನ್ವಯಿಸುತ್ತದೆ.

ಕಥಾನಾಯಕನಾದ ಇಱುವಬೆಡಂಗ ಸತ್ಯಾಶ್ರಯನು ತಾಯ ಗರ್ಭಕ್ಕೆ ಒರುತ್ತಲೂ ಅವನ ತಂದೆಯಾದ ತೈಲಪರಾಜನ ಕೈಗೆ ಶತ್ರುಗಳ ವಸ್ತು ವಾಹನಗಳು ವಶವಾಗಿ ಬಂದುವೆಂದೂ, ಅವನು ಹುಟ್ಟುತ್ತಲೂ ಇವನಿಗೆ ಚಕ್ರವರ್ತಿವೈಭವವು ಹುಟ್ಟಿತೆಂದೂ (ಎಂದರೆ, ಇವನು ರಾಷ್ಟ್ರಕೂಟರನ್ನು ರಣದಲ್ಲಿ ಸೂರೆಗೊಂಡು ಚಕ್ರವರ್ತಿಯಾದನೆಂದೂ), ಅವನು ಕೈಹಿಡಿದು ಎದ್ದು ನಿಂತುಕೊಳ್ಳುವಂತಾಗುತ್ತಲೂ ಮಹೀಮಂಡಲವೆಲ್ಲ ಇವನಿಗೆ ಕೈಹತ್ತಿ ತೆಂದೂ, ಅವನು ಬೆಳೆಯುತ್ತಲೂ ಇವನ ಕೀರ್ತಿ ದಿಗಂತದವರೆಗೂ ಬೆಳೆಯಿ ತೆಂದೂ ಇಲ್ಲಿಯ ಕಲ್ಪನೆ.

೫. ಈ ಪದ್ಯದಲ್ಲಿ 'ನೆಱೆ' ಎಂಬುದನ್ನು ರನ್ನನು ಚಮತ್ಕಾರವಾಗಿ ಪ್ರಯೋಗಿಸಿದ್ದಾನೆ. ನೆಱೆ—ಪೂರ್ಣತೆ, ಸಮೃದ್ಧಿ. ನಾರಾಚಂ—(ಇಱುವ ಬೆಡಂಗನ) ಬಾಣ. ನೆಱೆಗೊಂಡುದು—(ಶತ್ರುಗಳನ್ನು) ಪೂರ್ಣವಾಗಿ ನಾಟಿತು. ಹೀಗಾದರೂ ಕೂಡ, ನೆಱೆಗಾಣಲ್ಕೆ ಆರ್ತುದಿಲ್ಲ—(ಆ ಬಾಣ ಪರಂಪರೆಯ) ತುಂಬುನೆಲೆಯನ್ನು ನೋಡಲು ಸಾಧ್ಯವಾಗಲಿಲ್ಲ. ಆರ್ತುದು : ಧಾ. ಅಱು—ಶಕ್ತನಾಗು. ಬೀರ—ವೀರತನ. ಬೀಯ—ದಾನ (ಸಂ. ವ್ಯಯ). ಆರ್ ದೊರೆ—ಯಾರು ಸಮಾನರು? ಇಱುವ ಬೆಡಂಗಂ : ಇಱಿಯುವುದರಲ್ಲಿ ಬೆಡಗನ್ನುಳ್ಳವನು, ಎಂದರೆ ಆಯುಧಪ್ರಯೋಗದಲ್ಲಿ ಸೊಬಗನ್ನು, ವೈಖರಿ ಯನ್ನು ಮೆರೆಯತಕ್ಕವನು. (ಇದು ರನ್ನನ ಒಡೆಯನ ಹೆಸರೋ ಬಿರುದೋ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ). ಅನೆವೆಡಂಗಂ, ಗಜವೆಡಂಗಂ, ಬೀದಿ ವೆಡಂಗಂ—ಈ ಮೊದಲಾದ ಬಿರುದುಗಳನ್ನು ಹೋಲಿಸಿ. ಇಱುವಬೆಡಂಗನ

ಬಾಣಸಮೃದ್ಧಿಯ ಕೊನೆಯನ್ನಾಗಲಿ ದಾನಸಮೃದ್ಧಿಯ ಕೊನೆಯನ್ನಾಗಲಿ ಕಾಣಲು ಇತ್ತ ಶತ್ರುವೃಂದಕ್ಕೂ ಅತ್ತ ಯಾಚಕವೃಂದಕ್ಕೂ ಸಾಧ್ಯವೇ ಇಲ್ಲ ಎಂದು ತಾತ್ಪರ್ಯ.

**೬.** ಸೊಡರ್—ದೀಪ. ಪಜ್ಜಳಿಸು—ಪ್ರಜ್ವಲಿಸು. ಜಗಮೆಲ್ಲಂ ಕೊಳಲುಂ ತವದೆ—ಲೋಕದವರೆಲ್ಲರೂ ಕೊಂಡುಹೋದರೂ (ತನ್ನ ಐಶ್ವರ್ಯ) ಕ್ಷಯಿಸದೆ ಇರಲು ; ತವು—ಕ್ಷಯಿಸು.

**೭.** ಎನಿಸಿದ—(ಮೇಲೆಲ್ಲ ವರ್ಣಿಸಿರುವ ಮೇರೆಗೆ) ಹೆಸರುಗೊಂಡ. ತನ್ನ ಪ್ರಭುವನ್ನು ಭೀಮನಿಗೆ ಉದ್ದಕ್ಕೂ ಹೋಲಿಸಿ, ಅಷ್ಟೇಕೆ, ಇಬ್ಬರಿಗೂ ಅಭೇದವನ್ನೇ ಕಲ್ಪಿಸಿ, ರನ್ನನು ಈ ಕಾವ್ಯವನ್ನು ರಚಿಸಿದ್ದಾನೆ. ಇಲ್ಲಿ ಇಱುವ ಬೆಡಂಗನೂ ಸಾಹಸಭೀಮನೂ ಅಭಿನ್ನರು.

**೮.** ನೆಗಟ್ದ—ಪ್ರಸಿದ್ಧವಾದ. ಕೃತಿಗೆ ಈಶ್ವರ—ಕೃತಿಗೆ ನಾಯಕನಾದವನು ; ಇಲ್ಲಿ 'ಈಶ್ವರ' ಎಂಬ ಪ್ರಥಮಾವಿಭಕ್ತಿಯ ರೂಪಕ್ಕೆ ಅಂತ್ಯಬಿಂದುವಿಲ್ಲದಿರುವುದು ಗಮನಾರ್ಹ. ಕೃತಿಯಂ ವಿರಚಿಸಿದಂ ಅಲಂಕೃತಿಯಂ—(ಸಾಹಿತ್ಯಕ್ಕೆ) ಅಲಂಕಾರಪ್ರಾಯವಾದ ಕಾವ್ಯವನ್ನು ರಚಿಸಿದವನು. ಏವಣ್ಣಿಪುದೋ—ಏನೆಂದು ವರ್ಣಿಸುವುದೋ !

ಇಲ್ಲಿ ಕಥಾನಾಯಕನನ್ನು ಚಕ್ರವರ್ತಿ ಎಂದೇ ವಿಶೇಷಿಸಿರುವುದರಿಂದ, ರನ್ನನು ಈ ಕಾವ್ಯವನ್ನು ತೈಲಪಚಕ್ರವರ್ತಿಯ ಕಾಲಾನಂತರ, ಇಱುವ ಬೆಡಂಗನ ಆಳಿಕೆಯಲ್ಲಿ ಬರೆದಿರಬೇಕೆಂದು ಊಹಿಸಬಹುದು.

**೯.** ಅಂಕದ—ಬಿರುದುಳ್ಳ, ಪ್ರಖ್ಯಾತಿಹೊಂದಿದ. ಜಯೋದ್ದಾಮಂ ಎಂಬುದು ಎಂಬಂತೆ—ವಿಜಯದಿಂದ ನೆಲೆಮೀರಿದವನು ಎಂದು ಹೇಳುವಂತೆ. ವಸ್ತುಯುದ್ಧಂ—ಯುದ್ಧನಿರೂಪಣೆಯೇ ಪ್ರಧಾನವಸ್ತುವಾದ ಕಾವ್ಯ (?) ('ವಸ್ತುಕೃತಿ,' 'ವಸ್ತುಕಾವ್ಯ ಎಂಬ ಹೆಸರುಗಳನ್ನು ಹೋಲಿಸಿ.) ಭೀಮನು ದುರ್ಯೋಧನನನ್ನು ಧರ್ಮಯುದ್ಧದಲ್ಲಿ ಕೊಂದನೆಂದು ರನ್ನನು ಹೇಳುತ್ತಾನೆ ; ಇದು ವಿಚಾರಣೀಯವಾದ ಅಂಶ.

**೧೦.** ಇನ್ನು ಮುಂದಿನ ಪದ್ಯಗಳಲ್ಲಿ ರನ್ನನ ಪ್ರಶಸ್ತಿ.

ಸಾವಂತರಿಂ ಇನಿಸು ಉದಿತೋದಿತನಾಗಿ—ಸಾಮಂತರಾಜರ ಆಶ್ರಯದಲ್ಲಿ ಕ್ರಮಕ್ರಮವಾಗಿ ಕೆಲಮಟ್ಟಿಗೆ ಏಳಿಗೆಹೊಂದಿ. ಮಂಡಲೇಶ್ವರ—ಇಲ್ಲಿ, ಗಂಗಮಂಡಲಾಧಿಪತಿ ; ಗಂಗರಾಜರ ಮಂತ್ರಿಯೂ ಶ್ರವಣಬೆಳ್ಗೊಳದ ಗೋಮಟೇಶ್ವರ ಮೂರ್ತಿಯನ್ನು ಕಡೆಯಿಸಿದವನೂ ಆದ ಚಾವುಂಡರಾಯನು ರನ್ನನಿಗೆ ಆಶ್ರಯಕೊಟ್ಟಿದ್ದನು. ಚಕ್ರಿಯಿಂ—ಚಾಳುಕ್ಯಚಕ್ರವರ್ತಿಯಾದ ತೈಲಪನಿಂದ. ರನ್ನನಿಗೆ ಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟವನು ಈತನೇ ; ಮುಂದಿನ ಪದ್ಯವನ್ನು ನೋಡಿ.

**೧೧.** ಪಡೆಯೆಡೆಯ ಕಡೆಯ ಬಡವರ್—ಸೈನ್ಯದ ಕೆಳ ಅಂತಸ್ತಿನ ದರಿದ್ರರು ; ಇಂಥವರಿಂದಲ್ಲ ರನ್ನನು ಬಿರುದು ಪಡೆದದ್ದು

**೧೨.** ಆರಾತೀಯ°—ಪ್ರಾಚೀನ. ಮುನ್ ಆರ್ತರಿಲ್ಲ—ಹಿಂದೆ ಸಮರ್ಥರಾಗಲಿಲ್ಲ ; ಧಾ. ಆಱು. ಸಾರಸ್ವತಂ—ಸರಸ್ವತಿಗೆ ಸ್ವಕೀಯವಾದದ್ದು, ಎಂದರೆ ಕಾವ್ಯಪ್ರಪಂಚದಲ್ಲಿ ಉತ್ಕೃಷ್ಟವಾದದ್ದು.

ರನ್ನನ ಕವಿತಾಶಕ್ತಿಯನ್ನು ನೋಡಿದರೆ, ವಾಗ್ದೇವಿಯ ಭಂಡಾರದ ಮುದ್ರೆಯನ್ನು ಒಡೆದು ಅದರೊಳಗಿನ ಭಾವರತ್ನಗಳನ್ನು ಸೂರೆಗೊಂಡನೆಂಬ ಕೆಚ್ಚಿನ ಪ್ರಶಂಸೆ ಅತ್ಯುಕ್ತಿಯೆಂದೇನೂ ತೋರುವುದಿಲ್ಲ. ಆದರೆ ಹಿಂದಿನ ಕವೀಶ್ವರರಲ್ಲಿ ಯಾರಿಗೂ ಇದು ಸಾಧ್ಯವಾಗಿರಲಿಲ್ಲವೆಂಬ ಹೇಳಿಕೆ ಮಾತ್ರ ಉದ್ಧತವೆನ್ನಬೇಕಾಗುತ್ತದೆ.

**೧೩.** ತನ್ನ ಕನ್ನಡವು ಎರಡಱುನೂಱಱ ಕನ್ನಡ, ತನ್ನ ಸಂಸ್ಕೃತವು ಮಧುರವ್ಯೋತ್ಪನ್ನ ಎಂದು ರನ್ನನೆ ಮೆಚ್ಚಿಕೆಯ ಮಾತು. "ಎರಡೂ ಸೇರಿ ಆರುನೂರಾಗುವ ಪ್ರದೇಶದ ಕನ್ನಡವು ತಿರುಳ್ಗನ್ನಡ . . . ರನ್ನನು ಹೇಳುವ ಎರಡು ಎಂಬುದು ಬೆಳ್ವೊಲ ಮುನ್ನೂರಿಗೂ ಪುಲಿಗೆರೆ ಮುನ್ನೂರಿಗೂ ಅನ್ವಯಿಸುತ್ತದೆ. ." (ರಾ. ನರಸಿಂಹಾಚಾರ್ಯ : ಕವಿಚರಿತೆ, III, ಪು. xxi—xxii.) ಈ ಅಭಿಪ್ರಾಯವು ಅಸಮಂಜಸವೆಂದೂ ಪುಲಿಗೆಱೆನಾಡು ಬೆಳ್ವೊಲನಾಡು ಇವಕ್ಕೆ ಪೂರ್ವದಿಕ್ಕಿನಲ್ಲಿರುವ ಕೊಪಣನಗರದ ನಾಡು

ಎರಡಱುನೂಱುನಾಡು ಎಂದೂ ನಾ. ಶ್ರೀ. ರಾಜಪುರೋಹಿತರು ಅಭಿಪ್ರಾಯ ಪಡುತ್ತಾರೆ (ಪರಿಷತ್ಪತ್ರಿಕೆ, ೧೫.೪: 'ಎರಡಱುನೂಱಱ ನಾಡು ಯಾವುದು?'). ಆದರೆ ಎರಡಱುನೂಱಱ ನಾಡಿನಲ್ಲಿ ಪುಲಿಗೆಱೆ ಅಡಕವಾಗಿತ್ತೆಂದು ಹೇಳಲು ಶಾಸನಗಳಲ್ಲಿ ಆಧಾರವಿರುವುದರಿಂದ, ರಾ. ನರಸಿಂಹಾಚಾರ್ಯರ ಅಭಿಪ್ರಾಯವನ್ನೇ ಒಪ್ಪಬಹುದೆಂದು ತೋರುತ್ತದೆ. ಪುಲಿಗೆಱೆ ಎಂಬುದು ಧಾರವಾಡ ಜಿಲ್ಲೆಯ ಈಗಿನ ಲಕ್ಷ್ಮೇಶ್ವರ. ಪುಲಿಗೆಱೆಯ ಕನ್ನಡ ತಿರುಳ ಕನ್ನಡವೆಂಬುದು ನೃಪತುಂಗ ಪಂಪರ ಕಾಲದಿಂದಲೂ ಪ್ರಸಿದ್ಧವಾದ ವಿಷಯ. ಮಧುರಮ್ಯೋತ್ಪನ್ನಂ: ಜೇನುತುಪ್ಪದಂತೆ ರಮ್ಯವಾದ ಉತ್ಪತ್ತಿಯುಳ್ಳದ್ದು ಎಂದು ಈ ಮಾತಿನ ಅರ್ಥವೆ? ಇಲ್ಲಿ ಪಾಠದೋಷವೇನಾದರೂ ಉಂಟೋ? ಉಭಯ ಕವಿತೆ—ಕನ್ನಡ ಸಂಸ್ಕೃತಗಳೆಂಬ ಎರಡು ಭಾಷೆಗಳಲ್ಲಿ ಕಾವ್ಯರಚನೆ. ಎರಡರಲ್ಲೂ ತಾನು ಸಮರ್ಥನೆಂದು ರನ್ನನ ಹೇಳಿಕೆ. ರನ್ನನ ಸಂಸ್ಕೃತ ಕೃತಿಗಳಲ್ಲಿ ಯಾವುವನ್ನೂ ಕಾಲಪುರುಷನು ಉಳಿಸಿಕೊಟ್ಟಿಲ್ಲ.

**೧೪.** ಕೃತಿರತ್ನಪರೀಕ್ಷಕನೆನ್ ಎಂದು—ಕಾವ್ಯರತ್ನವನ್ನು ಪರೀಕ್ಷಿಸಿ ನೋಡುವ ವಿಮರ್ಶಕನು ನಾನು ಎಂದು. ಇಲ್ಲಿ -ಎನ್ ಎಂಬ ಉತ್ತಮಪು. ಏಕವ. ಆಖ್ಯಾತಪ್ರತ್ಯಯವು ಪರೀಕ್ಷಕಂ ಎಂಬ ನಾಮಪದಕ್ಕೆ ಹತ್ತಿದೆ; ಈ ಬಗೆಯ ಪ್ರಯೋಗ ಹಳಗನ್ನಡದಲ್ಲಿ ಸಾಮಾನ್ಯ. ಫಣಿಪತಿ—ಸರ್ಪಗಳ ದೊರೆ, ಆದಿಶೇಷ. ಫಣಾ°—ಹೆಡೆ. ಎಂಟೆರ್ದೆಯೇ—ಎಂಟು ಎದೆಗಳು ಉಂಟೇ, ಎಂದರೆ, ಅವನಿಗೆ ಅಷ್ಟು ಕೆಚ್ಚು ಉಂಟೇ? ಈ ಕೆಲಸಕ್ಕೆ ಕೈಹಾಕುವವನಿಗೆ ಒಂದು ಎದೆ ಸಾಲದು ಎಂದು ಭಾವ. "ಪಂಚಗುಂಡಿಗೆಯ ಮನುಷ್ಯ" ಎಂಬ ಉಕ್ತಿಯನ್ನು ಹೋಲಿಸಿ. ತನ್ನ ಕೃತಿ ಆದಿಶೇಷನ ಹೆಡೆಯ ರತ್ನದಂತೆ ಉಜ್ಜ್ವಲವಾದದ್ದು, ಅದರಷ್ಟೇ ಪರೀಕ್ಷೆಗೆ ಅಸದಳವಾದದ್ದು. ಇದನ್ನಾಗಲಿ ಅದನ್ನಾಗಲಿ ಮುಟ್ಟಲು ಯಾರಿಗೆ ತಾನೆ ಧೈರ್ಯ! ದೂರದಿಂದ ಮೆಚ್ಚಿ ಗೌರವಿಸಬೇಕು!

**೧೫.** ಈ ಗದಾಯುದ್ಧದೊಳ್ ಅಂತು ಒಳಕೊಂಡತ್ತು ಎನೆ—ಎಂದು ಪದವಿಭಾಗ. ಸಿಂಹಾವಳೋಕನಕ್ರಮ: ಸಿಂಹವು ಆಹಾರಕ್ಕಾಗಿ ಅರಣ್ಯದಲ್ಲಿ ಸಾಗುತ್ತಿರುವಾಗ ಆಗಾಗ ಹಿಂದಿರುಗಿ, ಏನನ್ನಾದರೂ ಬಿಟ್ಟಿದ್ದೇನೆಯೋ

ಎಂದು ಒಂದೇ ನೋಟದಲ್ಲಿ ಗ್ರಹಿಸುತ್ತದೆಯಂತೆ; ಬಳಿಕ ಮುಂದು ವರಿಯುತ್ತದೆಯಂತೆ. ಈ ಗದಾಯುದ್ಧಕಾವ್ಯ ಪ್ರಾರಂಭವಾಗುವ ವೇಳೆಗೆ ಭಾರತಯುದ್ಧದಲ್ಲಿ ಶಲ್ಯವಧೆ ಕೂಡ ಮುಗಿದು, ದುರ್ಯೋಧನನೊಬ್ಬನು ಉಳಿದಿರುತ್ತಾನೆ. ಇನ್ನು ಮಿಕ್ಕಿರುವ ಕಥಾಭಾಗ ಅತ್ಯಲ್ಪ. ಇದನ್ನು ನಿರೂಪಿಸುವಾಗಲೇ, ಹಿಂದಿನ ಕಥಾಸಂಗತಿಯನ್ನು ಸಮಯೋಚಿತವಾಗಿ ಸಂಗ್ರಹವಾಗಿ ಅಲ್ಲಲ್ಲಿ ಸೂಚಿಸಿ, ಒಟ್ಟು ಭಾರತದ ಕಥೆ ಇಲ್ಲಿ ಒಳಕೊಳ್ಳುವಂತೆ ರಚನೆಮಾಡಿದ್ದೇನೆ; ಸಿಂಹಾವಲೋಕನಕ್ರಮವನ್ನು ಇಲ್ಲಿ ಅನುಸರಿಸಿದ್ದೇನೆ ಎಂದು ರನ್ನನ ಆಶಯ.

**೧೬.** ಪುರಾಣಕವಿಪುಂಗವರ್ ಒಳ್ಳಿದರ್—ಹಿಂದೆ ಆಗಿಹೋದ ಕವಿಶ್ರೇಷ್ಠರು ಒಳ್ಳೆಯವರು. ಎನಲ್ಕೆ ವೇಡ—ಎನ್ನಬೇಡ. ಅವರ ಪೋದೊಡೆ—ಅವರು ಗತಿಸಿದ ಮಾತ್ರಕ್ಕೆ; ಪ್ರಥಮಾವಿಭಕ್ತಿಯ ಅರ್ಥದಲ್ಲಿ ಷಷ್ಠೀವಿಭಕ್ತಿಯ ಪ್ರಯೋಗ. ಕಬ್ಬ—ಸಂ. ಕಾವ್ಯ. ನಿಕಷ—ಒರೆಗಲ್ಲು. ಬುಧರ್—ವಿದ್ವಾಂಸರು.

ಹಳೆಯ ಕವಿಗಳನ್ನು ಹೊಗಳುವುದೂ, ಹೊಸ ಕವಿಗಳನ್ನು ಅಲ್ಲಗಳೆಯುವುದೂ ಎಲ್ಲ ಕಾಲದಲ್ಲೂ ಕಾಣಬರುವ ಪರಿಸ್ಥಿತಿ. ರನ್ನನೂ ಈ ಬಗೆಯ ಮಾತನ್ನು ಕೇಳಿ ಕೆರಳಿರಬೇಕು. ಪರೀಕ್ಷೆಮಾಡಿ ನಿರ್ಣಯಿಸಿ; ಹಿಂದಿನವರು ತೀರಿಹೋಗಿದ್ದರೂ ಅವರ ಕಾವ್ಯಗಳು ಇನ್ನೂ ಉಳಿದಿವೆಯಲ್ಲ; ಅವನ್ನೂ ಇಂದಿನವನ್ನೂ ಒರೆ ಹಚ್ಚಿ ನೋಡಿ; ನಿಜವಾದ ಯೋಗ್ಯತೆ ಆಗ ಗೊತ್ತಾಗುತ್ತದೆ—ಎಂದು ವಿದ್ವಾಂಸರನ್ನು ಸ್ವಸಾಮರ್ಥ್ಯದಲ್ಲಿ ತುಂಬುನಂಬಿಕೆಯುಳ್ಳ ರನ್ನನು ಆಹ್ವಾನಿಸುತ್ತಾನೆ. ಕಾಳಿದಾಸನ ಮಾಲವಿಕಾಗ್ನಿಮಿತ್ರನಾಟಕದ ಪ್ರಸ್ತಾವನೆಯಲ್ಲಿ ಇಂಥದೇ ಒಂದು ಪದ್ಯವುಂಟು. ಇದು ರನ್ನನ ನೆನಪಿನಲ್ಲಿದ್ದಿರಬಹುದು :

ಪುರಾಣಮಿತ್ಯೇವ ನ ಸಾಧು ಸರ್ವಂ | ನ ಚಾಪಿ ಕಾವ್ಯಂ ನವಮಿತ್ಯವದ್ಯಂ ||
ಸಂತಃ ಪರೀಕ್ಷ್ಯಾನ್ಯತರದ್ಭಜಂತೇ | ಮೂಢಃ ಪರಪ್ರತ್ಯಯನೇಯಬುದ್ಧಿಃ || (೧.೨)

**೧೭.** ವಾಕ್‌ಶ್ರೀಯುತಂ—ವಾಕ್‌ಸಂಪನ್ನ, ವಿದ್ವಾಂಸ.

ಶ್ರೀಮಂತನಿಗೆ ಔದಾರ್ಯವಿರುವುದಿಲ್ಲ, ವಿದ್ವಾಂಸನಿಗೆ ನಿರ್ಮತ್ಸರತ್ವವಿರುವುದಿಲ್ಲ. "ಬೋದ್ಧಾರೋ ಮತ್ಸರಗ್ರಸ್ತಾಃ" ಎಂಬ ಭರ್ತೃಹರಿಯ ವಾಕ್ಯವನ್ನು ಹೋಲಿಸಿ. ಕವಿಗಳಿಗೆ ಹಣ ಬೇಕು, ಮೆಚ್ಚಿಕೆ ಬೇಕು. ಉದಾರನೇ ಶ್ರೀಮಂತನಾದರೆ, ನಿರ್ಮತ್ಸರನೇ ವಿದ್ವಾಂಸನಾದರೆ, ಹುಟ್ಟುಗುಣಗಳು ಅಳಿಸಿಹೋಗುವುದಿಲ್ಲವಾದಕಾರಣ, ಅವರ ಬಳಿ ಕವಿಗಳ ಇಷ್ಟ ಕೈಗೂಡುತ್ತದೆ. ಹಾಗಾಗುವ ತನಕ ಕವಿಗಳು ಹಂಬಲಿಸುತ್ತಲೇ ಇರಬೇಕು!

---

## ೨. ಭೀಮಸೇನಪ್ರತಿಜ್ಞೆ

**೧.** ಕುರುಭೂಭೃತ್—ಕುರುರಾಜನ, ಬಲ—ಸೈನ್ಯವೆಂಬ, ತೂಲ—ಹತ್ತಿಗೆ, ಕಾಲಪವನಂ—ಪ್ರಳಯಕಾಲದ ವಾಯುವಿನಂತೆ ಇರುವವನು, ಎಂದರೆ ಅದನ್ನು ತೂರಿಬಿಡತಕ್ಕವನು. ಕೌರವ್ಯ—ಕುರುವಂಶದವರೆಂಬ, ಗಂಧೇಭ—ಮದದಾನೆಗಳಿಗೆ, ಕೇಸರಿ—ಸಿಂಹದಂತೆ ಇರುವವನು. ದುಶ್ಶಾಸನನ ರಕ್ತದಿಂದ, ರಕ್ತ—ಕೆಂಪಾದ, ವದನವುಳ್ಳವನು. ದುರ್ಯೋಧನನ, ಊರು—ತೊಡೆಗಳೆಂಬ, ಕ್ಷಮಾಧರ—ಬೆಟ್ಟಗಳಿಗೆ, ವಜ್ರಾಯುಧದಂತೆ ಇರುವವನು. ಕುರುರಾಜನ ರತ್ನಖಚಿತವಾದ, ಮಕುಟ—ಕಿರೀಟದ, ಉತ್ಕೂಟ—ಉನ್ನತವಾದ ಶೃಂಗವನ್ನು, ಅಂಘ್ರಿಸಂಘಟ್ಟ—ತನ್ನ ಪಾದಗಳಿಂದ ಘಟ್ಟಿಸುವುದೆಂಬ, ಸಂಗರಂ—ಪ್ರತಿಜ್ಞೆಯುಳ್ಳವನು. ಎಂದೆಂದು—ಹೀಗೆಂದು ಹೀಗೆಂದು. ರಣಯಶಸ್ಸೆಂಬ, ಶ್ರೀ—ರಮಣಿಗೆ, ರಾಮನಂ—ಮನೋಹರನಾದ, ಎಂದರೆ ಯುದ್ಧದಲ್ಲಿ ಅತಿಶಯ ಕೀರ್ತಿಯನ್ನು ಪಡೆದಿರುವ ಭೀಮನನ್ನು.

**೨.** ಖಳ ದುಶ್ಶಾಸನನ, ಕೃಷ್ಣ—ಕಪ್ಪಾದ, ಲೋಹಿತಜಲ—ರಕ್ತದಿಂದ, ಆಶ್ಲಿಷ್ಟಂ—ಆಲಿಂಗಿಸಲ್ಪಟ್ಟವನು, ಎಂದರೆ ಆ ರಕ್ತದಿಂದ ಮೈಯೆಲ್ಲ ಮೆತ್ತಿಹೋಗಿರುವವನು. ಕುರುವ್ರೋದ್ಭವ—ಕುರುವಂಶದಲ್ಲಿ ಹುಟ್ಟಿದವರಿಗೆ, ಪ್ರಳಯಜ್ವಾಲಿ—ಪ್ರಳಯಕಾಲದ ಅಗ್ನಿಯಂತೆ ಇರುವವನು. ಸುಯೋಧನನ ಊರು ಮಕುಟಗಳನ್ನು, ಉದ್ಘಟ್ಟ—ತುಳಿದು ಕುಟ್ಟುವುದೆಂಬ, ಪ್ರತಿಜ್ಞಾಕ್ಷರಾವಳಿಯ

ವಿನ್ಯಾಸವನ್ನುಳ್ಳ ಸ್ಥಿರವಾದ ಶಿಲಾಸ್ತಂಭದಂತಿರುವವನು, ಎಂದರೆ ಶಿಲಾಶಾಸನದಲ್ಲಿ ಕೊರೆದಿರುವ ಮಾತಿನಂತೆ ಈ ಪ್ರತಿಜ್ಞೆಯನ್ನು ತಪ್ಪದೆ ನಿರ್ವಹಿಸುವವನು. °ಉಗ್ರಾಂತಕನಂತೆ—ಭೀಷಣಯಮನಂತೆ. ಅಗುರ್ವಂ—ಭಯಂಕರತೆಯನ್ನು. "ಹಿಡಿಂಬಾಂತಕಂ" ಎಂಬ ವಿಶೇಷಣದಿಂದ, ಹಿಡಿಂಬಾಸುರನನ್ನೇ ಕೊಂದ ಭೀಮನಿಗೆ ಈ ಪ್ರತಿಜ್ಞೆಗಳನ್ನು ಸಾಧಿಸುವುದು ಏನೇನೂ ಅಗಾಧವಲ್ಲವೆಂದು ಸೂಚಿತವಾಗುತ್ತದೆ.

ಮೇಲಿನ ಪದ್ಯಗಳಲ್ಲಿ, ಭೀಮನು ಇದುವರೆಗೆ ತೆಗೆದುಕೊಂಡ ಆಹುತಿಯನ್ನೂ ಇನ್ನೂ ನಿರ್ವಹಿಸಬೇಕಾಗಿರುವ ಪ್ರತಿಜ್ಞಾಭಾರವನ್ನೂ ತಿಳಿಸಿ, ಕವಿ ಮುಂದಿನ ಕಥೆಗೆ ಪ್ರವೇಶವನ್ನು ಕಲ್ಪಿಸಿದ್ದಾನೆ. ವಿಷಯದ ರೌದ್ರತೆಗೆ ಪೋಷಕವಾಗಲೆಂದು ಕ್ಲಿಷ್ಟಾಕ್ಷರನಿಬಿಡವಾದ ದೀರ್ಘಸಂಸ್ಕೃತಸಮಾಸಗಳನ್ನು ಎರಡು ಪದ್ಯಗಳ ತುಂಬ ಕೂಡಿಸಿದ್ದಾನೆ.

**೨ ವ.** ಸಂಸ್ಕೃತನಾಟಕಗಳಲ್ಲಿ ಬರುವ ಅರಮನೆಯ ಕಂಚುಕಿಗಳು ಪುರುಷರು; ಇಲ್ಲಿ ರನ್ನನು ಹೆಣ್ಣುಕಂಚುಕಿಯನ್ನು ಪ್ರವೇಶಗೊಳಿಸಿದ್ದಾನೆ. ಮೇಳದ ಕೆಳದಿ—ನಾಟ್ಯಸಂಗೀತಗಳಲ್ಲಿ ಜೊತೆಗಾತಿ. ಬೆರಸು—ಜೊತೆಗೂಡಿ; ಇದು ಒಂದು ಅವ್ಯಯ. ಕರಗ—ಗಡಿಗೆ, ನೀರಿನ ಗಡಿಗೆ (ಸಂ. ಕರಂಕ, ಕರಕ). °ಧಾರಾಪೂರ—(ನೀರಿನ) ಧಾರೆಯ ಪ್ರವಾಹದಿಂದ, ಪರಿವಾರಿತ°—ಸುತ್ತುಗಟ್ಟಲ್ಪಟ್ಟ; ಪರಿವಾ[ಹಿ]ತ (=ಕೋಡಿ ಹರಿದ) ಎಂದು ಇಲ್ಲಿಯ ಮೂಲಪಾಠವಿದ್ದಿರಬಹುದೆ? ಅಸಹ್ಯ—ಸಹಿಸಲು ಅಶಕ್ಯವಾದ, ಪರಿಭವಾನಲ—ಅಪಮಾನಾಗ್ನಿಯಿಂದ, ದಂದಹ್ಯಮಾನ—ಅತಿಶಯವಾಗಿ ಉರಿಯುತ್ತಿರುವ, ಗಾತ್ರೆಯುಂ—ಶರೀರವುಳ್ಳವಳೂ.

ದೇವಾಸುರ ಎಂಬಂತೆ: ದೇವತೆಗಳಿಗೂ ಅಸುರರಿಗೂ ಯುದ್ಧ ನಡೆಯಲೆಂಬ ಉದ್ದೇಶದಿಂದ ಕರಗವನ್ನು ತಲೆಯಮೇಲೆ ಧರಿಸಿದಂತೆ ದ್ರೌಪದಿ ಇದ್ದಳೆಂದು ಇಲ್ಲಿ ಕವಿ ಉತ್ಪ್ರೇಕ್ಷಿಸಿದ್ದಾನೆ; ಇದೇ ಬಗೆಯ ಉಕ್ತಿ ಗದಾಯುದ್ಧಕಾವ್ಯದಲ್ಲಿ ಇನ್ನೂ ಒಂದು ಕಡೆ ಬರುತ್ತದೆ: "ದೇವಾಸುರಯುದ್ಧಕ್ಕೆ ಕರಗಂಬೊತ್ತ ಡಾವರಡಾಕಿನಿಯೆನಿಸಿದ ಪಾಂಚಾಲಿಯುಂ" (ಗದಾಶಮೂ, ೨. ೮ ವ). ಇದನ್ನು ನೋಡಿದರೆ, ದೇವಾಸುರಯುದ್ಧವಾದರೆ ಅದರಲ್ಲಿ ತಮಗೆ

ಅಪರಿಮಿತವಾದ ರಕ್ತಮಾಂಸಗಳು ದೊರೆಯುವುವೆಂಬ ಆಸೆಯಿಂದ ಆ ಯುದ್ಧ ನಡೆಯಲೆಂದು ಡಾಮರಡಾಕಿನಿಯರು ಹಾರೈಸಿ ವ್ರತವನ್ನು ಆಚರಿಸುವಂತೆ, ದ್ರೌಪದಿಯೂ ಅಂಥದೇ ಒಂದು ಅಪೇಕ್ಷೆಯಿಂದ, ಎಂದರೆ ದೇವಾಸುರ ಯುದ್ಧಸದೃಶವಾದ ಭೀಮದುರ್ಯೋಧನರ ಯುದ್ಧವು ನಡೆಯಲೆಂಬ ಉತ್ಕಟೇಚ್ಛೆಯಿಂದ, ಕರಗವನ್ನು ಹೊತ್ತವಳಂತೆ ತೋರುತ್ತಿದ್ದಳೆಂದು ಇಲ್ಲಿ ಕವಿಯ ಕಲ್ಪನೆ. ಆದರೆ ಈ ಕರಗ ಹೊರುವ ವ್ರತದ ಸ್ವರೂಪವೇನೆಂದು ನಿರ್ದಿಷ್ಟವಾಗಿ ತಿಳಿಯುವುದಿಲ್ಲ. ವಿಶೇಷೋತ್ಸವಗಳಲ್ಲೂ ದೊಡ್ಡವರನ್ನು ಎದುರುಗೊಳ್ಳುವುದರಲ್ಲೂ ಸುವಾಸಿನಿಯರು ಕಳಶ ಕನ್ನಡಿಗಳನ್ನು ಹಿಡಿದು ಬರುವುದುಂಟು ; ಆದರೆ ಈ ಸಂದರ್ಭಕ್ಕೆ ಇದು ಅನ್ವಯಿಸುವುದಿಲ್ಲ. "ಅನವರತ . . . ನೇತ್ರೆಯುಂ, ಅಸಹ್ಯ ಗಾತ್ರೆಯುಂ" ಎಂಬ ವಿಶೇಷಣಗಳನ್ನು ಗಮನಿಸಿದರೆ, ತನಗೆ ಆದ ಅಪಮಾನವನ್ನೂ ತನ್ನ ದ್ರೋಹಿಗಳು ಇನ್ನೂ ನಿಶ್ಶೇಷವಾಗಲಿಲ್ಲವಲ್ಲಾ ಎಂಬುದನ್ನೂ ನೆನೆದು ದ್ರೌಪದಿ ಸಂತತವೂ ಸುರಿಸುತ್ತಿದ್ದ ಕಣ್ಣೀರೂ, ಅವಳ ಮೈಯನ್ನು ನಿರಂತರವಾಗಿ ದಹಿಸುತ್ತಿದ್ದ ಅಪಮಾನದ ಬೇಗೆಯೂ ಈ ಕರಗದ ವ್ರತಕ್ಕೇ ಸಂಬಂಧಿಸಿರುವಂತೆ ಭಾಸವಾಗುತ್ತದೆ. ಈಗಲೂ ಕೆಲವು ಕಡೆ ದೇವತೋತ್ಸವಗಳಲ್ಲಿ ಭಕ್ತರು ನೀರುತುಂಬಿದ ಕರಗವನ್ನು ಹೊತ್ತು ಅಗ್ನಿಕುಂಡವನ್ನು ಹಾಯುವುದು ಉಂಟಂತೆ. ಇತ್ತ, ಬೆಂಗಳೂರು ಮೊದಲಾದ ಕೆಲವು ಊರುಗಳಲ್ಲಿ ಕರಗಶಕ್ತ್ಯುತ್ಸವವೆಂಬುದು ವಿಶೇಷವಿಜೃಂಭಣೆಯಿಂದ ನಡೆಯುತ್ತದೆ. ಇದನ್ನು ನಡಸುವ ವಹ್ನಿಕುಲಕ್ಷತ್ರಿಯರು ಪಾಂಡವರ ಭಕ್ತರು ; ಇಲ್ಲಿ ಕರಗಶಕ್ತಿ ದ್ರೌಪದಿಯೆಂದೇ ಹೇಳುತ್ತಾರೆ. ಕರಗವನ್ನು ಧರಿಸುವ ಪೂಜಾರಿ ಆ ವೇಳೆಯಲ್ಲಿ ಸ್ತ್ರೀಯಂತೆ ಅಲಂಕರಿಸಿಕೊಳ್ಳುತ್ತಾನೆ. ಆದರೆ ಕರಗದಲ್ಲಿ ನೀರಿರುವುದಿಲ್ಲ ; ಅವನು ಬೆಂಕಿಯನ್ನು ಹಾಯುವುದೂ ಇಲ್ಲ.

ಯಜ್ಞವೇದೀಸಂಭವೆ—ದ್ರುಪದನ ಯಜ್ಞವೇದಿಕೆಯಲ್ಲಿ (ಅವನು ವಿಶೇಷೋದ್ದೇಶದಿಂದ ಮಾಡಿದ ಯಾಗದ ಫಲವಾಗಿ) ಜನಿಸಿದವಳು. ಯಾಜ್ಞಸೇನಿ : ಇದು ದ್ರೌಪದಿಯ ಹೆಸರುಗಳಲ್ಲೊಂದು. ದ್ರುಪದ . . . ವೈಜಯಂತಿಯುಂ—ದ್ರುಪದರಾಜನ ಉದ್ಯಾನದ ಜಯಪತಾಕೆಯಂತೆ ಇರುವವಳು. ಪವಮಾನತನೂಜ—ವಾಯುಪುತ್ರ, ಭೀಮ.

೩. ಈ ಪದ್ಯದ ಪಾಠ ಅನಿಶ್ಚಿತವಾಗಿಯೇ ಉಳಿದಿದೆ. ದನುಜವಿರೋಧಿ—ಕೃಷ್ಣ. ದಲ್—ನಿಶ್ಚಯವಾಗಿ. ಸೈಪು—ಪುಣ್ಯ. ಕೃಷ್ಣನು ಪ್ರಯತ್ನ ಮಾಡಿದರೂ ನನ್ನ ಮತ್ತು ನಿನ್ನ ಪುಣ್ಯದಿಂದ ಸಂಧಿ ಕೈಗೂಡದೆ, ಯುದ್ಧವೇ ಒದಗಿ, ಶತ್ರುಸೇನೆಯಲ್ಲಿ ಈಗ ದುರ್ಯೋಧನನೊಬ್ಬನೇ ಉಳಿದಿದ್ದಾನೆ ಎಂದು ಪದ್ಯದ ಪೂರ್ವಾರ್ಧದ ಅಭಿಪ್ರಾಯ. ಆದರೂ ಇನ್ನೂ ಸಂಧಿಯ ಭಯ ತಪ್ಪಿಲ್ಲ! ಇರ್ದು ಒರೆಯೆ—ಇದ್ದುಕೊಂಡು ಹೇಳಿದ ಪಕ್ಷದಲ್ಲಿ. ನಮ್ಮ ಅರಸಂ—ನಮ್ಮ ದೊರೆ ಧರ್ಮರಾಯನು. ಮರಳ್ದು—ಮತ್ತೆ. ಇಂಬುಕಯ್ಗುಂ—ಒಪ್ಪಿಕೊಳ್ಳುವನು. ಅನುಶಯ—ವ್ಯಥೆ.

೪. °ಉಚ್ಚಲತ್°—ಮೇಲಕ್ಕೆ ಹಾಯುತ್ತಿರುವ. ಕೋಪಾನಳನಂ ಮಗ್ಗಿಸಿ—(ನಿನ್ನ) ಕೋಪಾಗ್ನಿಯನ್ನು ಮಗ್ಗಿಸಿ, ಶಮನಗೊಳಿಸಿ. ಗಳಾ—ಗಡಾ, ಅಲ್ಲವೆ! ಗಳಿತಕೋಪಂ—ಕೋಪ ಇಳಿದುಹೋದವನು. ಮುಖ್ಯಶತ್ರು ಇನ್ನೂ ಬದುಕಿರುವಾಗ, ದುಶ್ಶಾಸನನ ರಕ್ತವನ್ನು ಹೀರಿದ ಮಾತ್ರಕ್ಕೇ ನಿನ್ನ ಕೋಪಾಗ್ನಿಯೆಲ್ಲ ನಂದಿಹೋಯಿತೆ ಎಂದು ಭಾವ.

೫. ಸಮವಾಯಂ ಅಹಿತರೊಳ್—ಶತ್ರುಗಳೊಡನೆ ಹೊಂದಿಕೆಯೆ? ಎಂದರೆ, ಇಷ್ಟೆಲ್ಲ ಆದಮೇಲೂ ಅವರೊಡನೆ ಸೇರಿಕೊಳ್ಳುವುದೆ? ಸಮವಾಯ—ನಿತ್ಯಸಂಬಂಧ. ಶರಣ್—ಆಶ್ರಯ. ಭೀಷ್ಮಾದಿಗಳ ದಾಕ್ಷಿಣ್ಯಕ್ಕೆ ಸಿಕ್ಕಿ ಧರ್ಮರಾಜನು ಸಂಧಿಮಾಡಿಕೊಂಡರೆ, ಅದರ ಫಲವಾಗಿ, ಕಾಡಿನಲ್ಲಿ ಹುಟ್ಟಿದ ನೀವು ಮತ್ತೆ ಕಾಡುಪಾಲಾಗುವುದು ಖಂಡಿತ. ಈಸಲ ನಾನು ಮಾತ್ರ ನಿಮ್ಮ ಹಿಂದೆ ಬರುವುದಿಲ್ಲ. ನಾನು ಬೆಂಕಿಯಲ್ಲಿ ಹುಟ್ಟಿದವಳು; ಬೆಂಕಿಯನ್ನೇ ಪ್ರವೇಶಿಸುತ್ತೇನೆ.

೫ ವ. ಮರುನ್ನಂದನ—ವಾಯುಪುತ್ರ. ದರಹಸಿತ°—ಅರೆನಗೆಗೂಡಿದ.

೬. ಕುರುರಾಜಾನುಜ—ದುಶ್ಶಾಸನ; ಪಿಡಿದುಂ, ಪರಿಭವಿಸಲ್ ಎಂಬ ಕ್ರಿಯಾವಾಚಿಗಳಿಗೆ ಇದು ಕರ್ತೃ; ೧.೮ ರಲ್ಲಿರುವಂತೆ ಇಲ್ಲಿಯೂ ಅಂತ್ಯ ಬಿಂದುವಿಲ್ಲದಿರುವುದನ್ನು ಲಕ್ಷಿಸಬೇಕು. °ವಿಲುಳಿತ—ತಿರುಚಿದ, ನೀಲಕಬರಿಭರಮಂ—ಹೊರವಾದ ಕಪ್ಪುತುರುಬನ್ನು. ಪರಿಭವಿಸು—ಅಪಮಾನಗೊಳಿಸು.

**೬ ವ.** ಉಪಲಕ್ಷಿಸು—ನೋಡು, ಗಮನಿಸು.

**೭.** ಧಾತ್ರಿಯುಮಂ—ಭೂಮಿಯನ್ನೂ. ಹುತಾಶನಪುತ್ರಿಯುಮಂ—ಅಗ್ನಿಪುತ್ರಿಯಾದ ದ್ರೌಪದಿಯನ್ನೂ. ಧಾತ್ರಿಯುಮಂ=ಧಾತ್ರಿ+ಉಂ+ಅಂ. ಇಲ್ಲಿ ಪ್ರಕೃತಿಗೂ ದ್ವಿತೀಯಾವಿಭಕ್ತಿಪ್ರತ್ಯಯಕ್ಕೂ ನಡುವೆ -ಉಂ ಎಂಬ ಸಮುಚ್ಚಯ ಸೇರಿಕೊಂಡಿದೆ; ಇದು ಹಳಗನ್ನಡದ ವಿಶೇಷಪ್ರಯೋಗ; °ಪುತ್ರಿಯುಮಂ ಎಂಬಲ್ಲಿಯೂ ಹೀಗೆಯೇ. ಜೂದಿಂ—ದ್ಯೂತದಲ್ಲಿ. ತನ್ನ ಕ್ಷಾತ್ರತೇಜಸ್ಸನ್ನೂ ಆಗಲೇ ಧರ್ಮರಾಯನು ಸೋತು ಶತ್ರುವಿಗೆ ಒಪ್ಪಿಸಿ ಕೊಟ್ಟಿರಬೇಕು; ಇಲ್ಲವಾದರೆ ತನ್ನ ಪತ್ನಿಯ ಅಪಮಾನದಂಥ ಅವಹೇಳನೆಯನ್ನು ಸಹಿಸಿಕೊಂಡು ಸುಮ್ಮನಿರುತ್ತಿದ್ದನೆ!

**೮.** ಪರಾರ್ಜಿತಪ್ರಾಣರ್—ಶತ್ರುಗಳು ವಶಪಡಿಸಿಕೊಂಡ ಪ್ರಾಣವುಳ್ಳವರು. ನೋಡುತ್ತಿರಲ್ ಅಕ್ಕುಮೆ—ನೋಡಿಕೊಂಡು ಸುಮ್ಮನೆ ಇರಲು ಆಗುತ್ತಿತ್ತೆ!

**೯.** ಬಗೆಯೆವೆ—ಆಲೋಚಿಸದೆ ಹೋದೆವಲ್ಲಾ! ಅಣ್ಣನ ಮಾತನ್ನು ಕೇಳುವುದು ವಿನಯವಾದರೆ, ಹೆಂಡತಿಗೆ ಅಪಮಾನಮಾಡಿದವರ ಮೇಲೆ ಸೇಡುತೀರಿಸಿಕೊಳ್ಳುವುದು ವಿಕ್ರಮ. ಎನಗಂ ಸಂಮೋಹನಂ ಆದುದು ಅಕ್ಕುಂ—ಅರ್ಜುನನ ಪಿಷಯ ಹೇಗಾದರೂ ಇರಲಿ, ದ್ರೌಪದಿಯ ಪರಮ ವಲ್ಲಭನಾದ ಸನಗೆ ಕೂಡ ಮರುಳು ಕವಿದಿರಬೇಕೆಂದು ತೋರುತ್ತದೆ. ಸೂನೃತವಚನ—ಪ್ರಿಯವೂ ಸತ್ಯವೂ ಆದ ಮಾತು.

**೯ ವ.** °ವಿಳಯಜ್ವಾಲೆ—ಪ್ರಳಯಕಾಲದ ಉರಿ.

**೧೦.** "ಗಳಿತಕೋಪನಿರ್ಪ ತೆಱದಿಂದಿರ್ದಯ್" ಎಂಬ ದ್ರೌಪದಿಯ ಮೂದಲಿಕೆಗೆ ಭೀಮನು ಇಲ್ಲಿ ಉತ್ತರಕೊಡುತ್ತಾನೆ. ಗಳಿಯಿಸು—ಗಳಿತವಾಗು, ಜಾರಿಬೀಳು. ನೀನಿರೆ—ನೀನು ಹೀಗಿರಲು. ನಿನ್ನ ಮುಡಿಯೂ ಕಣ್ಣೀರೂ ಇನ್ನೂ ಇಳಿದುಬೀಳುತ್ತಿರುವಾಗ, ನನ್ನ ಕೋಪ ಹೇಗೆ ಇಳಿದುಹೋದೀತು? ದುರ್ಯೋಧನನನ್ನು ಕೊಂದು, ನಿನ್ನ ಮುಡಿಯನ್ನು ಕಟ್ಟಿ ಕಣ್ಣೀರನ್ನು ತೊಡೆದಲ್ಲದೆ ನನ್ನ ಕೋಪ ಶಮನವಾಗುವುದಿಲ್ಲ.

೧೧. ಕುರು . . . ಭಂಗಮಮಂ—ಕುರುಪತಿಯ ಊರುಗಳ ಮತ್ತು ಕಿರೀಟದ ಭಂಗವನ್ನು. ಮುಯ್—ಪ್ರತಿಫಲ, ಪ್ರಯೋಜನ. ಆಂಪನೆ—ತಳೆಯುತ್ತಾನೆಯೆ, ಹೊಂದುತ್ತಾನೆಯೆ ? ಧಾ. ಆನ್. ಇವೆರಡನ್ನೂ ಮಾಡಿ ತನ್ನ ಪ್ರತಿಜ್ಞೆಯನ್ನು ಸತ್ಯವಾಗಿಸಿದಲ್ಲದೆ, ಸತ್ಯಾಶ್ರಯ ಎಂಬ ಹೆಸರು ಭೀಮನಿಗೆ ಸಾರ್ಥಕವಾಗುವುದಿಲ್ಲ ಎಂದು ಅರ್ಥ. ಸತ್ಯಾಶ್ರಯ ಎಂಬುದು ರನ್ನನ ಪ್ರಭುವಿನ ಹೆಸರು ; ಆತನಿಗೂ ಭೀಮನಿಗೂ ಈ ಕಾವ್ಯದಲ್ಲಿ ಅಭೇದವೆಂಬುದನ್ನು ನೆನಪು ಮಾಡಿಕೊಳ್ಳಬೇಕು.

೧೨. °ತನೂಭವನೆನ್ ಆನ್ ಅಣಂ—ಎಂದು ಪದವಿಭಾಗ. ಅಣಂ—ಅಧಿಕವಾಗಿ (ಸ್ವಲ್ಪವಾಗಿ, ಸ್ವಲ್ಪವೂ ಎಂಬ ಅರ್ಥವೂ ಇದಕ್ಕೆ ಸಮಯೋಚಿತವಾಗಿ ಉಂಟು). ಅನಲಾನಿಲಸಂಯೋಗಂ—ಬೆಂಕಿಗಾಳಿಗಳ ಸಂಯೋಗ. ಉರಿಪದೆ—ಉರಿಸದೆ, ಸುಡದೆ. ಅಗ್ನಿಯೂ ವಾಯುವೂ ಜೊತೆಗೂಡಿದರೆ ವಸ್ತುಗಳನ್ನು ಸುಟ್ಟುಬಿಡುವಂತೆ, ಅಗ್ನಿಪುತ್ರಿಯಾದ ನೀನೂ ವಾಯುಪುತ್ರನಾದ ನಾನೂ ಒಂದು ಮನಸ್ಸಿನಿಂದ ನಡೆಯುವಾಗ ಶತ್ರುಗಳು ಧ್ವಂಸವಾಗುವುದೇ ನಿಶ್ಚಯ.

೧೩. ಕಾಳಹಸ್ತ—ಯಮನ ಕೈ. ಕೇಶಹಸ್ತ—ಕೇಶಸಮೂಹ; ಕೇಶವಾಚಕಶಬ್ದದ ಮುಂದೆ ಪಾಶ, ಪಕ್ಷ, ಹಸ್ತ ಎಂಬುವುಗಳಲ್ಲಿ ಒಂದು ಬಂದಾಗ ಕಲಾಪ, ಸಮೂಹ ಎಂಬ ಅರ್ಥವನ್ನು ಕೊಡುತ್ತದೆ. ಪರಾಭವ . . . ಕೃಷ್ಣಂ—ಅವಮಾನವೆಂಬ ಉರಿಯ ಹೊಗೆಯಿಂದ ಕಪ್ಪಾದ. ಇದು ಕೇಶಪಾಶವಲ್ಲ ; ಕುರುಕುಲದವರ ಜೀವಗಳನ್ನು ಸೆಳೆಯುವುದರಲ್ಲಿ ಪರಿಣತಿಹೊಂದಿದ ಯಮಹಸ್ತ ಎಂದು ಭೀಮನು ಕಲ್ಪಿಸಿ, ದ್ರೌಪದಿಯ ಬಿಚ್ಚಿದ ಮುಡಿಯ ಮಹತ್ತ್ವವನ್ನು ಸೂಚಿಸುತ್ತಾನೆ. (ಪಂಪಭಾ, ೧೨. ೧೫೬ ನ್ನೂ ಗದಾಸಂ, ೮. ೩೫ ನ್ನೂ ಹೋಲಿಸಿ.) ಇಲ್ಲಿಯ ಕಲ್ಪನೆಗೆ ಹಸ್ತಶಬ್ದದ ಪ್ರಯೋಗ ಪುಷ್ಟಿ ಕೊಡುತ್ತದೆ.

೧೪. ಕುರುಶಾಬಾನುಜ—ಕುರುಪುತ್ರನಾದ ದುರ್ಯೋಧನನ ತಮ್ಮ, ಎಂದರೆ ದುಶ್ಶಾಸನ; ಶಾಬ—ಮರಿ. ಪೂಣ್ದ—ಪ್ರತಿಜ್ಞೆಮಾಡಿದ; ಧಾ. ಪೂಣ್. ತೀರ್ಚು—ತೀರಿಸು, ಮುಗಿಸಿಬಿಡು.

**೧೫.** ಉಡಿ—ಮುರಿ. ಕೌರವಪರಿವೃಢ—ಕೌರವರ ಒಡೆಯನಾದ ದುರ್ಯೋಧನ. ವೇಣೀಸಂಹಾರ—(ದ್ರೌಪದಿಯ) ಜಡೆಯನ್ನು ಒಟ್ಟುಗೂಡಿಸಿ ಕಟ್ಟುವುದು ; 'ವೇಣೀಸಂಹಾರ' ಎಂಬುದು ಇದೇ ವಿಷಯವನ್ನು ಕುರಿತ ಭಟ್ಟನಾರಾಯಣಕವಿಯ ಸಂಸ್ಕೃತನಾಟಕದ ಹೆಸರು. ಅದಱಿಂ ಭಾವಂ : ಈ ವಾಕ್ಯದ ಅನ್ವಯ ಸಮರ್ಪಕವಾಗಿ ತಿಳಿಯುವುದಿಲ್ಲ ; "ಅದ [ಙಾ]. . . ಭಾ[ರ]ಂ" ಎಂದು ಮೂಲಪಾಠವಿದ್ದಿರಬಹುದೆ? ನನಗೆ ಈಗ ಒದಗಿರುವ ಅಪಮಾನದ ಭಾರಕ್ಕಿಂತಲೂ ಈ ಎರಡು ಪ್ರತಿಜ್ಞೆಗಳನ್ನು ನಿರ್ವಹಿಸುವ ಭಾರ ಹೆಚ್ಚಿನದಲ್ಲ ಎಂದು ಇಲ್ಲಿಯ ಅರ್ಥವಾಗಿರಬಹುದು.

**೧೬.** ಕುರು . . . ತಳಂ—ಕುರುವಂಶೀಯನಾದ ದುರ್ಯೋಧನನ ರಕ್ತದಿಂದ ಲೇಪಿಸಿರುವ ಪಾದಕಮಲವುಳ್ಳ (ಭೀಮನು), ಎಂದರೆ ದುರ್ಯೋಧನನನ್ನು ಕೆಡಹಿ ತುಳಿದು ಅವನ ರಕ್ತದಿಂದ ಮತ್ತಷ್ಟು ಕೆಂಪಾಗಿರುವ ಅಂಗಾಲುಗಳುಳ್ಳವನು. ತಳೋದರಿ—ಒಂದು ಹಿಡಿಯಷ್ಟು ಉದರವುಳ್ಳವಳು, ಕೃಶೋದರಿಯಾದ ದ್ರೌಪದಿ. ಕಚಬಂಧಬಂಧುರತೆ—ಮುಡಿಯನ್ನು ಕಟ್ಟಿದ್ದರಿಂದ ಉಂಟಾಗುವ ಮನೋಹರತ್ವ. ಆತನ ಪೂಣ್ದ ಪ್ರಥಮಾವಿಭಕ್ತಿಯ ಅರ್ಥದಲ್ಲಿ ಷಷ್ಠಿಯ ಪ್ರಯೋಗ. ಪೂಣ್ಕೆ—ಪ್ರತಿಜ್ಞೆ; ಧಾ. ಪೂಣ್. ಶಿಳಾತಳಾಕ್ಷರಂ—ಕಲ್ಲಮೇಲೆ ಕೊರೆದ ಅಕ್ಷರ, ಎಂದರೆ ಶಿಲಾಲಿಪಿಯಂತೆ ಸತ್ಯವಾದದ್ದು. ಈ ಪದ್ಯ ನವನಳಿನ ವೃತ್ತದಲ್ಲಿದೆ ("ನವನಳಿನಂ ಮೆಱೆಗುಂ ನಜಂಜಭರಂ ಬರಲ್").

**೧೭.** ಅಱನ ಮಗಂ—ಯಮಧರ್ಮನ ಮಗ, ಧರ್ಮರಾಯ ; ಅಱ—ಧರ್ಮ. ಬಾಂದೊಱೆಯ ಮಗಂ—ದೇವನದಿಯ, ಎಂದರೆ ಗಂಗೆಯ, ಮಗ, ಭೀಷ್ಮ. ಮಱುಗುವೆ—(ನೀನು) ಕುದಿದು ವ್ಯಥೆಪಡುತ್ತಿದ್ದೀಯೆ ; ಹಳಗನ್ನಡದಲ್ಲಿ ಮಱುಗು ಎಂದರೆ ಕುದಿ ಎಂದು ಅರ್ಥ. ಪೆಱಗೆ ಇಕ್ಕು—ಹಿಂದಕ್ಕೆ ತಳ್ಳು, ಅಲಕ್ಷ್ಯಮಾಡು. ಮಾಣ್ಬೊಡಂ—ನಿಲ್ಲಿಸಿದರೂ, ತಡೆದರೂ. ಈಯೆಂ—(ಸಂಧಿಗೆ) ಅವಕಾಶಕೊಡುವುದಿಲ್ಲ.

**೧೭ ವ.** °ನಿರ್ವ್ಯಾಜನಿಬಿಡೋರುದ್ವಯ°—ಯಾವ ವಕ್ರತೆಯೂ ಇಲ್ಲದೆ ದೃಢವಾಗಿ ತುಂಬಿಕೊಂಡಿರುವ ತೊಡೆಗಳ ಜೋಡಿ. ಫಣಿ. . ಕೇತು—ಸರ್ಪಧ್ವಜನಾದ ದುರ್ಯೋಧನನಿಗೆ ಕೇಡನ್ನೊಡ್ಡುವ ಧೂಮಕೇತುವಿನಂತೆ

ಇರುವವನು. °ಪ್ರಾಕಾರ—(ರಕ್ಷಿಸುವ) ಸುತ್ತುಗೋಡೆ. °ವಿಘಟನ—ಒಡೆದ ವನು. ಅಮ್ಮನ ಗಂಧವಾರಣ—ತಂದೆಯ ಮದದಾನೆ, ತನ್ನ ತಂದೆಯ ಕಾರ್ಯದಲ್ಲಿ ಮದಿಸಿದ ಆನೆಯಂತೆ ಮುಂದೆ ನುಗ್ಗುವವನು; ಇದು ಸತ್ಯಾಶ್ರಯನ ಒಂದು ಬಿರುದು; ಹಳಗನ್ನಡದಲ್ಲಿ ಅಮ್ಮ ಎಂದರೆ ತಂದೆ ಎಂದು ಅರ್ಥ. ಆರೂಢ ಕೋಪ—ಕೋಪವೇರಿದವನು.

೧೮. ಸಮದ—ಮದಿಸಿದ, ಇಭ—ಆನೆಯ, ಕುಂಭ—ನೆತ್ತಿಯನ್ನು, ಭೇದನ—ಸೀಳುವುದೆಂಬ, ಸಮಯ—ಪ್ರತಿಜ್ಞೆಯನ್ನು ಹಿಡಿದ, ಉಗ್ರ ನಖಾಗೆ—ಭೀಕರವಾದ ಉಗುರುಗಳುಳ್ಳ. ಹರಿಗೆ—ಸಿಂಹಕ್ಕೆ. ಮೃಗರಿಪು ವೆಸರ್—ಜಿಂಕೆಗಳ ಶತ್ರುವೆಂಬ ಹೆಸರು. ಉತ್ತಮಿಕೆಯೆ—ಹೆಚ್ಚುಗಾರಿಕೆಯೆ? ಆನೆಯ ನೆತ್ತಿಯನ್ನೇ ಸೀಳಿಹಾಕುವ ಸಿಂಹವನ್ನು ಮೃಗರಿಪುವೆಂದು ಕರೆಯುವುದರಲ್ಲಿ ಯಾವ ಹಿರಿಮೆಯಿದೆ? ಭೀಮನ ವಿಷಯವೂ ಹಾಗೆಯೇ. ಜರಾಸಂಧನಂಥ ಪ್ರಚಂಡನನ್ನೇ ಕಡ್ಡಿಯನ್ನು ಸೀಳುವಂತೆ ಸೀಳಿ ಬಿಸುಟವ ನಿಗೆ ಕೌರವರನ್ನು ಕೊಲ್ಲುವುದು ಯಾವ ಲೆಕ್ಕ? ಆ ಸುಲಭಕಾರ್ಯದಿಂದ ಅವನ ಹಿರಿಮೆಯನ್ನು ಸ್ಥಾಪಿಸಬೇಕಾಗಿಲ್ಲ.

೧೯. ಭೀಮನ ಪ್ರತಿಜ್ಞೆಯನ್ನು ಕೇಳಿದ ಹರ್ಷದಲ್ಲಿ ಅವನ ಹೊಗಳಿಕೆಯ ವಿಶೇಷಣಗಳು ದ್ರೌಪದಿಯ ಬಾಯಿಂದ ಸಾಲುಸಾಲಾಗಿ ಹೊರಡುತ್ತವೆ! °ಗದಾಪರಿಘ°—ಲಾಳಮುಂಡಿಗೆಯಂತಿರುವ ಗದೆ. ಪಱುವಱಿಯಾಗಿ—ಕತ್ತರಿಸಿ ಚೂರುಚೂರಾಗಿ. ಪುಣ್ಮವೆಣನಾಗಿ: ಇಲ್ಲಿ ಪು[ಣ್ಣು]ವೆಣನಾಗಿ ಎಂದು ಪಾಠವಿದ್ದಿರಬೇಕೆಂದು ತೋರುತ್ತದೆ. "ಅಣ್ಮಿದರುಂ ಅಂಜಿದರುಂ ಪುಣ್ಣುಂ ಪೆಣನುಮಾಗಿ" ಎಂಬ ಪ್ರಯೋಗವನ್ನು (ಶಾಂತಿಪು, ೪. ೩೦ ವ) ಹೋಲಿಸಿ. ಪುಣ್ಣುಂಪೆಣ> ಪುಣ್ಣುವೆಣ (=ಹುಣ್ಣಾಗಿರುವ ಹೆಣ). ಮರುಳ್ಗೆ ಉಣಿ ಸಾಗಿ—ಭೂತಗಳಿಗೆ ಆಹಾರವಾಗಿ. ಕುಱುದಱಿಯಾಗಿ—ಕುರಿಗಳಂತೆ ಕತ್ತರಿಸಿ ಹೋಗಿ.

೨೦. ಒಡವೆ—ವಸ್ತು, ಸಂಪತ್ತು. ಕಸವರ—ಹೊನ್ನು, ಧನ. ಜಸ—ಸಂ. ಯಶಸ್ಸು. ಮಾಱುಗುಡು—ಪ್ರತಿಯಾಗಿ ಕೊಡು, ವಿನಿಮಯವಾಗಿ

ಕೊಡು. ನಶ್ವರವಾದ ಪದಾರ್ಥವನ್ನು ಮಾರಿ ಅದಕ್ಕೆ ಪ್ರತಿಯಾಗಿ ಶಾಶ್ವತವಾದ ಪದಾರ್ಥವನ್ನು ಕೊಳ್ಳುವುದು ಜಾಣ್ಮೆ. ಎಂದಿದ್ದರೂ ಅಳಿಯುವ ದೇಹವನ್ನು ಯುದ್ಧದಲ್ಲಿ ಒಡ್ಡಿ, ಧನವನ್ನು ದಾನಮಾಡಿ, ಆ ಮೂಲಕ, ಎಂದೆಂದಿಗೂ ನಿಲ್ಲುವ ಯಶಸ್ಸನ್ನು ಗಳಿಸುವುದೇ ಯುಕ್ತ.

**೨೧.** ಕೊಟ್ಟು ಪೆಂಡಿರ್ ಒಲ್ವರೆ—(ಆಭರಣಗಳನ್ನು) ಕೊಟ್ಟದ್ದರಿಂದ ಪತ್ನಿಯರು ಒಲಿಯುತ್ತಾರೆಯೆ? ಮೆಃಱೆವುದು—ತೋರ್ಪಡಿಸಬೇಕು. ಶಸ್ತ್ರವ್ರಣ—(ಶತ್ರುಗಳ) ಆಯುಧಗಳಿಂದ ಆದ ಗಾಯ. "ನಿನ್ನಂತೆ" ಎಂಬ ಉಬ್ಬಿಸುವ ಮಾತನ್ನು ಇಲ್ಲಿ ಲಕ್ಷಿಸಬೇಕು.

ಮೇಲಿನ ಪದ್ಯಗಳಲ್ಲಿ ಬಂದಿರುವುದು ವೀರರಮಣಿಯ ಉಕ್ತಿ. ಇಲ್ಲಿ ದ್ರೌಪದಿ ಭೀಮನನ್ನು ಹೊಗಳಿ ಹುರಿದುಂಬಿಸುತ್ತಾಳೆ, ಕೆಣಕಿ ಕೆರಳಿಸುತ್ತಾಳೆ.

**೨೧ ವ.** ನರ್ಮಸಚಿವ—ವಿನೋದಗಳಲ್ಲಿ ಜೊತೆಗಾರ. ಭೀಮನು ಯುದ್ಧೋದ್ಯುಕ್ತನಾಗಿರುವುದನ್ನು ಅವನ ಆಪ್ತಮಿತ್ರನಾದ ವಿದೂಷಕನು ಸ್ಪಷ್ಟಪಡಿಸುತ್ತಾನೆ. ಅಗುರ್ವಾಗೆ—ಭಯಂಕರವಾಗುವಂತೆ.

**೨೨.** ಇನ್ ಅರೆಬರುಮಂ—ಇನ್ನೂ (ಉಳಿದ) ಕೆಲವರನ್ನೂ. ದ್ರೌಪದಿಗಾಗಿಯೇ ಇಷ್ಟೆಲ್ಲ ಕೊಲೆ ನಡೆದಿರುವುದರಿಂದ, ಇನ್ನೂ ನಡೆಯಬೇಕಾಗಿರುವುದರಿಂದ, ಅವಳು ಒಬ್ಬ ರಾಕ್ಷಸಿಯೆಂದೇ ವಿದೂಷಕನು ಭಾವಿಸುತ್ತಾನೆ. ಹೀಗೆ ತನ್ನನ್ನು ಎರಡನೆಯ ಹಿಡಿಂಬೆಯೆಂದು ಕರೆದದ್ದಕ್ಕೆ ದ್ರೌಪದಿಗೆ ಕೋಪವಿಲ್ಲ, ತನ್ನ ಇಷ್ಟಾರ್ಥ ಕೈಗೂಡುವುದೆಂದು ನಗುಮೊಗವಾಗುತ್ತಾಳೆ.

**೨೨ ವ.** ಹಿಂದಿನ ಪದ್ಯದಲ್ಲಿ ಹಿಡಿಂಬೆ, ರಕ್ಕಸಿ ಎಂದು ಕರೆದು ಇಲ್ಲಿ "ಚಾರುಹಾಸಿನಿ" ಎಂದು ನಿರ್ದೇಶಿಸಿರುವುದರ ಸೊಗಸನ್ನು ಪರಿಭಾವಿಸಬೇಕು.

## ೩. ಸಂಜಯವಚನಂ

**೧ ವ.** ಅನ್ನೆಗಂ—ಅಷ್ಟರಲ್ಲಿ. ಆಹವಭೀಷ್ಮ—ಯುದ್ಧದಲ್ಲಿ ಭಯಂಕರನಾದವನು. ಬಿಲ್ಲ ಜಾಣ—ಧನುರ್ವಿದ್ಯೆಯಲ್ಲಿ ಚದುರ. ಜಯದ್ರಥ—ಸೈಂಧವರಾಜ, ದುರ್ಯೋಧನನ ತಂಗಿ ದುಶ್ಶಳೆಯ ಗಂಡ. ಪಂಚತ್ವಪ್ರಪಂಚ—ಮರಣದ ವಿಸ್ತಾರವಾದ ಸಂಗತಿ (ಗದಾಸಂ, ೫.೨೩ನ್ನು ನೋಡಿ). ಅಣುಗದಮ್ಮ—ಪ್ರೀತಿಯ ತಮ್ಮ; ಅಣುಗಾಳ್—ಪ್ರೀತಿಯ ಬಂಟ; ಹಳಗನ್ನಡದಲ್ಲಿ ಅಣುಗ ಎಂದರೆ ಪ್ರೀತಿಪಾತ್ರ ಎಂದು ಅರ್ಥ. ಶಲ್ಯ : ಶಲ್ಯನು ಮಾದ್ರಿಯ ಸಹೋದರನಾದ ಕಾರಣ ನ್ಯಾಯವಾಗಿ ಪಾಂಡವರ ಪಕ್ಷದಲ್ಲೇ ಇರಬೇಕಾಗಿದ್ದರೂ, ದುರ್ಯೋಧನನ ಆಹ್ವಾನ ಅವನಿಗೆ ಮೊದಲು ಬಂದದ್ದರಿಂದ ಯುದ್ಧದಲ್ಲಿ ಅವನ ಪಕ್ಷವನ್ನೇ ಸೇರಬೇಕಾಯಿತು. ಪನ್ನಗಪತಾಕ—ಸರ್ಪಚಿಹ್ನೆಯನ್ನು ಧ್ವಜದಲ್ಲಿ ಉಳ್ಳವನು. ಕನಕಲತಾಲಾಂಛಿತ—ಚಿನ್ನದ ಬಳ್ಳಿಯ ಕೆತ್ತನೆಕೆಲಸಮಾಡಿರುವ, ಉತ್ತುಂಗ—ಉನ್ನತವಾದ, ಗದಾಯುಧವನ್ನುಳ್ಳವನು. ದಿವ್ಯಮುನಿವರಾಪರಾಧನುಂ : ದ್ಯೂತದಲ್ಲಿ ಸೋತು ಅರಣ್ಯದಲ್ಲಿದ್ದ ಪಾಂಡವರನ್ನು ನೋಡಿಕೊಂಡು ಮೈತ್ರೇಯನೆಂಬ ಋಷಿ ಹಸ್ತಿನಾವತಿಗೆ ಬಂದು, ಪಾಂಡವರೊಡನೆ ಶಾಂತಿಯಿಂದ ಇರಬೇಕೆಂದು ದುರ್ಯೋಧನನಿಗೆ ಬೋಧಿಸುತ್ತಾನೆ. ಮೈತ್ರೇಯನನ್ನು ಅಲಕ್ಷ್ಯಮಾಡಿ ದುರ್ಯೋಧನನು ಏನೂ ಮಾತಾಡದೆ ನಕ್ಕು ತನ್ನ ತೊಡೆಯನ್ನು ತಟ್ಟಿಕೊಳ್ಳುತ್ತಾನೆ. ಈ ಅಪರಾಧದಿಂದ ಋಷಿಗೆ ತುಂಬ ಕೋಪ ಕೆರಳಿ, "ಯುದ್ಧದಲ್ಲಿ ಭೀಮನು ಗದೆಯ ಪೆಟ್ಟಿನಿಂದ ನಿನ್ನ ತೊಡೆಯನ್ನು ಮುರಿಯುವನು" ಎಂದು ವಿಧಿಪ್ರೇರಣೆಯಿಂದ ಶಾಪಕೊಡುತ್ತಾನೆ (ಮಹಾಭಾ, ೩.೧೧). "ತನಗೆ ಮುನ್ನಂ ಮೈತ್ರೇಯರ್ ಕೊಟ್ಟ ಶಾಪಮಂ" (ಗದಾಸಂ, ೫.೭ ವ), "ನಿನಗಂ ಮೈತ್ರೇಯರ್ ಕೊಟ್ಟ ಊರುಭಂಗಶಾಪಂ ಅನಿವಾರಿತಂ" (ಪಂಪಭಾ, ೧೩.೬೫ ವ)—ಈ ಉಕ್ತಿಗಳನ್ನು ಹೋಲಿಸಿ. ರಾಧೇಯ°—ರಾಧೆಯೆಂಬ ಸೂತಪತ್ನಿಯ ಸಾಕುಮಗನಾದ ಕರ್ಣ. ಛಲದಂಕಮಲ್ಲ : ಛಲದ—ಹಠದ, ಅಂಕ—ಬಿರುದನ್ನುಳ್ಳ, ಮಲ್ಲ—ಜಟ್ಟಿ, ಎಂದರೆ ಹಿಡಿದ ಪಟ್ಟನ್ನು ಬಿಡದ ಹಠವೀರ. ಅಭಿಮಾನಧನ—(ತನ್ನ

ಗೌರವದಲ್ಲಿ ಮತ್ತು ತನ್ನವರಲ್ಲಿ) ಅತಿಶಯವಾದ ಅಭಿಮಾನಸಂಪತ್ತನ್ನುಳ್ಳವನು. ಚಿಂತಾಕ್ರಾಂತನಾಗಿ: ಎಲ್ಲರನ್ನೂ ಕಳೆದುಕೊಂಡು ಈಗ ದುರ್ಯೋಧನ ನೊಬ್ಬನೇ ಉಳಿದಿದ್ದಾನೆ (ಜೊತೆಗೆ ಇರುವವನು ಸಂಜಯ ಮಾತ್ರ); ನಚ್ಚಿದ ಅಶ್ವತ್ಥಾಮನು ಕೂಡ ಸಹಾಯಕ್ಕೆ ಒದಗಲಿಲ್ಲ; ಇದೆಲ್ಲದರಿಂದ ಚಿಂತೆ.

೧. ಅಶ್ವತ್ಥಾಮನು ಸಮಯಕ್ಕೆ ಸರಿಯಾಗಿ ಶಸ್ತ್ರತ್ಯಾಗಮಾಡಿದನೆಂದು ದುರ್ಯೋಧನನು ಇಲ್ಲಿ ಆಕ್ಷೇಪಿಸುತ್ತಾನೆ. ದ್ರೋಣನು ಶಸ್ತ್ರಸಂನ್ಯಾಸಮಾಡಿ ಮಡಿದ ಬಳಿಕ, ತನಗೆ ಸೇನಾಪತಿಪಟ್ಟವನ್ನು ಕಟ್ಟದೆ ಕರ್ಣನಿಗೆ ಮಾತು ಕೊಟ್ಟನೆಂದು ಅಶ್ವತ್ಥಾಮನು ದುರ್ಯೋಧನನ ಮೇಲೆ ಕೋಪಗೊಂಡು ಕರ್ಣನೊಂದಿಗೆ ಜಗಳವಾಡಿ, ಕರ್ಣನು ಹತನಾಗುವ ತನಕ ಶಸ್ತ್ರ ಹಿಡಿಯುವುದಿಲ್ಲವೆಂದು ಪ್ರತಿಜ್ಞೆಮಾಡಿ ತನ್ನ ಕತ್ತಿಯನ್ನು ಬಿಸುಡುವನೆಂದು ವೇಣೀಸಂಹಾರನಾಟಕದಲ್ಲಿ ಉಕ್ತವಾಗಿದೆ (ಅಂಕ ೩). ಇದನ್ನೇ ರನ್ನನು ಇಲ್ಲಿ ಅನುಸರಿಸಿದ್ದಾನೆ. ಪಂಪಭಾರತದ ಮೇರೆಗೆ, ಅಶ್ವತ್ಥಾಮನು ಜಗಳವಾಡಿದರೂ ಶಸ್ತ್ರವನ್ನು ತೊರೆಯುವುದಿಲ್ಲ; ಮಹಾಭಾರತದಲ್ಲಾದರೆ, ಕರ್ಣನನ್ನು ಸೇನಾಪತಿಯಾಗಿ ಮಾಡಬೇಕೆಂದು ಅಶ್ವತ್ಥಾಮನೇ ದುರ್ಯೋಧನನಿಗೆ ಸಲಹೆ ಕೊಡುತ್ತಾನೆ; ಶಸ್ತ್ರತ್ಯಾಗದ ಮಾತಿಗೇ ಇಲ್ಲಿ ಅವಕಾಶವಿಲ್ಲ.

ಅಸುಹೃತ್‌ಸೇನೆಗೆ ಸಾಲ್ವಂ ಒರ್ವನೆ ಗಡಂ—ಶತ್ರುಸೈನ್ಯವನ್ನು ಮುರಿಯಲು ಇವನೊಬ್ಬನೇ ಸಾಕಾಗುವನಂತೆ! ರುದ್ರಾವತಾರಂ: ಅಶ್ವತ್ಥಾಮನು "ತ್ರಿಣೇತ್ರನ ಅಂಶ"ದಿಂದ ಹುಟ್ಟಿದವನೆಂದು ಪಂಪಭಾರತದಲ್ಲಿ (೨. ೪೩ ವ) ಹೇಳಿದೆ. ಮಹಾಭಾರತದಲ್ಲಿಯೂ ಇದಕ್ಕೆ ಆಧಾರವಿರುವಂತೆ ತೋರುತ್ತದೆ; ಕ್ಷೇಮೇಂದ್ರನ ಭಾರತಮಂಜರಿಯಲ್ಲಿ (೭. ೭೯೪) ಬಂದಿರುವ "ದ್ರೌಣೇತ್ವಮಪಿ ರುದ್ರಾಂಶಃ" ಎಂಬ ವಾಕ್ಯವನ್ನು ಗಮನಿಸಬೇಕು. ನೊಸಲೊಳ್ ಕಣ್ ಗಡಂ—(ಇವನಿಗೆ) ಹಣೆಯಲ್ಲಿ ಕಣ್ಣು ಉಂಟಂತೆ! ತಾನ್ ಅಕ್ಕೆ ತಮ್ಮ ಅಮ್ಮಂ ಅಕ್ಕೆ—ತಾನಾಗಲಿ ತನ್ನ ತಂದೆಯಾಗಲಿ. ಇಸಲ್ ಅಂಬಂ ತಿರುವಾಯ್ಗೆ ತಂದು ಅಱಿವರೇ—ಪ್ರಯೋಗಮಾಡುವುದಕ್ಕಾಗಿ ಬಾಣವನ್ನು ಬಿಲ್ಲಿನ ಹದೆಗೆ ಹೂಡಿಯಾದರೂ ಬಲ್ಲರೆ? ಅವರಿಬ್ಬರೂ ಬಿಲ್ಲಿಗೆ ಬಾಣವನ್ನು ಸೋಕಿಸಲೇ ಇಲ್ಲ. ಇಸು—ಬಾಣಪ್ರಯೋಗಮಾಡು; ತಿರುವಾಯ್

—(ತಿರು + ಬಾಯ್) ಹೆದೆಯ ಮಧ್ಯಭಾಗ. ತಮ್ಮಿರ್ವರುಂ—ತಾವಿಬ್ಬರೂ. ಕಯ್ದು—ಆಯುಧ. ಜೋಳದ ಪಾಟಿ: ಪ್ರಭುವಿನಿಂದ ಜೀವನಕ್ಕಾಗಿ ಜೋಳವನ್ನು (ಎಂದರೆ ಭತ್ಯವನ್ನು, ವೇತನವನ್ನು) ಪಡೆದದ್ದಕ್ಕೆ ಪ್ರತಿಯಾಗಿ ಬಂಟನು ಸಲ್ಲಿಸಬೇಕಾದ ಸೇವಾಕ್ರಮ; ಅನ್ನದ ಹಂಗು, ಉಪ್ಪಿನ ಋಣ. ಪಾಟಿ—ಕ್ರಮ. ದ್ರೌಣಿ—ದ್ರೋಣಪುತ್ರ. ಅವರು ಉತ್ಸಾಹದಿಂದ ಯುದ್ಧ ಮಾಡದಿದ್ದರೆ ಹೋಗಲಿ, ಕರ್ತವ್ಯವನ್ನು ಕೂಡ ಪಾಲಿಸಲಿಲ್ಲ ಎಂದು ದುರ್ಯೋಧನನ ಆಕ್ಷೇಪಣೆ.

೨. ಪದುಳಂ ಕುಳ್ಳಿರ್ದು—(ತಾನು) ನೆಮ್ಮದಿಯಾಗಿ, ತೆಪ್ಪಗೆ, ಕುಳಿತಿದ್ದು. ಆಯ—ಶೌರ್ಯ. ತಗುಳೆ—ಮುಟ್ಟುವಂತೆ, ತಗುಲುವಂತೆ; ಧಾ. ತಗುಳ್. ಗಟಪಿ—ಹರಟೆಕೊಚ್ಚಿ. ಸಂದಿರ್ದ ಅದಟರೊಳ್—ಪ್ರಸಿದ್ಧರಾದ ಶೂರರ ಸಂಗಡ. ಇಱಿದು ಅಱಿಯಂ—ಯುದ್ಧಮಾಡಿ ಅರಿಯನು. ಬಿಲ್ಲೋಜ—ಬಿಲ್ಲಿನ ವಿದ್ಯೆಯನ್ನು ಕಲಿಸುವ ಗುರು, ದ್ರೋಣ. ಓಜ (=ಒವಜ)—ಸಂ. ಉಪಾಧ್ಯಾಯ. ಕಮ್ಮಱಿಯೋಜ: ಬಾಯಲ್ಲಿ ಹೇಳಿ ಕೈಯಲ್ಲಿ ಮಾಡದವನು, ಹೆರರಿಗೆ ಉಪದೇಶಮಾಡಿ ತಾನು ಅದರಂತೆ ನಡೆಯದವನು ಎಂದು ಈ ಶಬ್ದಕ್ಕೆ ಅರ್ಥವಾಗುತ್ತದೆ. ಇಲ್ಲಿ ಕೆಳಗೆ ಕೊಟ್ಟಿರುವ ಪಂಪಭಾರತದ ಪದ್ಯವನ್ನೂ ಆದಿಪು, ೨. ೬೧ನ್ನೂ ಚಂದ್ರಪ್ರಭಪುರಾಣ, ೧೦. ೧೨೪ನ್ನೂ ಹೋಲಿಸಿ. ಇದರ ಮೂಲಾರ್ಥ ಕಮ್ಮಾರಕೆಲಸದವನು ಎಂದಿರುವಂತೆ ತೋರುತ್ತದೆ (ಕಮ್ಮಱಿ + ಓಜ). ಓಜ ಎಂಬುದು "ವಾಜ" ಎಂಬ ರೂಪದಲ್ಲಿ ಬಡಗಿ, ಕಮ್ಮಾರ ಮೊದಲಾದ ಅರ್ಥಗಳಲ್ಲಿ ಮೈಸೂರ ಕಡೆ ಈಗಲೂ ರೂಢಿಯಲ್ಲಿದೆ; ಬೈಚೋಜ, ಗಂಗಾಚಾರಿ ಎಂಬಲ್ಲಿರುವಂತೆ, ಓಜ, ಆಚಾರಿ (<ಆಚಾರ್ಯ) ಮೊದಲಾದ ಶಬ್ದಗಳನ್ನು ಶಿಲ್ಪಿವರ್ಗದವರು ತಮ್ಮ ಹೆಸರ ಮುಂದುಗಡೆ ಕೂಡಿಸಿಕೊಳ್ಳುವ ಪದ್ಧತಿ ಹಿಂದೆಯೇ ಇತ್ತು. ಮಾತುಕೊಟ್ಟು ಕೆಲಸಮಾಡಿಕೊಡದೆ ಕಾಲತಳ್ಳುವ ಪ್ರವೃತ್ತಿಯ ಫಲವಾಗಿ ಕಮ್ಮಱಿಯೋಜ ಎಂಬುದಕ್ಕೆ ನಿಂದಾರ್ಥ ಬಲು ಹಿಂದಿನಿಂದಲೂ ಅಂಟಿತೋ ಏನೋ. ಮೇಲೆ ಕೊಟ್ಟಿರುವ ನಿಷ್ಪತ್ತಿಗೆ ಆಕ್ಷೇಪಣೆಯೂ ಇಲ್ಲದಿಲ್ಲ. ಕಮ್ಮಱ (ಸಂ. ಕರ್ಮಕಾರ) ಎಂಬುದು ಅಕಾರಾಂತ; ಇಲ್ಲಿ ಇಕಾರಾಂತ ಹೇಗಾ

ಯಿತು; ಆದಿಪುರಾಣ ಚಂದ್ರಪ್ರಭಪುರಾಣಗಳಲ್ಲಿ ಕಮ್ಮರಿ ಎಂಬುದು ಸಾಮಾನ್ಯರೇಫದೊಡನೆ ಅಚ್ಚಾಗಿದೆಯಲ್ಲ—ಇದಕ್ಕೆಲ್ಲ ಸಮಾಧಾನವೇನು ಎಂಬ ಪ್ರಶ್ನೆ ಏಳುತ್ತದೆ. ಕಮ್ಮರಿ ಎಂಬುದು ಕರ್ಮಾರಿ ಎಂಬುದರ ತದ್ಭವ ವಾಗಿರಬೇಕು; ಕಮ್ಮರಿಯೋಜ ಎಂದರೆ ಕೆಲಸಕ್ಕೆ ಹಗೆಗಳ, ಸೋಮಾರಿಗಳ ಗುರು ಎಂದು ಅರ್ಥವೆಂಬುದಾಗಿ ಇನ್ನೊಂದು ಅಭಿಪ್ರಾಯವುಂಟು. ಅಂತೂ ಈ ವಿಷಯದಲ್ಲಿ ಇನ್ನೂ ವಿಚಾರ ಮಾಡಬೇಕಾಗಿದೆ.

ದ್ರೋಣನು ನಮಗೆಲ್ಲ ಶೌರ್ಯವನ್ನು ಬೋಧಿಸಿ ತಾನು ತೆಪ್ಪಗೆ ಕುಳಿತಿದ್ದನು; ಶತ್ರುಗಳ ಮೇಲೆ ಯುದ್ಧಮಾಡಲೇ ಇಲ್ಲ. ಅವನು ಉಪದೇಶದಲ್ಲಿ ಮಾತ್ರ ಗಟ್ಟಿಗ; ಹೇಳಿದ್ದನ್ನು ಕಾರ್ಯತಃ ಮಾಡಿ ತೋರಿಸುವವನಲ್ಲ ಎಂದು ದುರ್ಯೋಧನನ ಭಾವ.

ರನ್ನನ ಪದ್ಯಕ್ಕೆ ಪಂಪಭಾರತದ ಈ ಕೆಳಗಿನ ಪದ್ಯ ಪ್ರೇರಕ:

ಬವರಂದೊಳೇಂ ಬಲ್ಲಂ ಕರ-
ಮೊವಜುಗೆಯಲ್ ಪೆಱರ್ಗೆ [ಕಂಡು] ತನಗಱಿಯನದಂ- |
ತುವೊ ನುಡಿ ತಪ್ಪದು ಕಮ್ಮಱಿ-
ಯೊವಜಂ ಬಿಲ್ಲೊವಜನೆಂಬುದಂ ಮಾಡುವನೇ || (೧೨. ೩)

ಆದರೆ ಅಲ್ಲಿ ಇದನ್ನು ದ್ರೋಣನೇ ಹೇಳಿಕೊಂಡು ಯುದ್ಧಮಾಡಿ ತನ್ನ ಶೌರ್ಯವನ್ನು ಪ್ರದರ್ಶಿಸುತ್ತಾನೆ.

**೩.** ಶರಣ್‌ಬುಗೆ ಕಾಯಲ್—(ಯಾರಾದರೂ ತಮ್ಮ) ಮರೆಹೊಕ್ಕರೆ (ಅವರನ್ನು) ರಕ್ಷಿಸಲು. ಬ್ರಹ್ಮಣ್ಯರ್—ಬ್ರಾಹ್ಮಣರು. ಭೋಯೆನಲುಂ: ಭೋಃ ಎಂಬುದು ಒಬ್ಬರನ್ನು ಗೌರವದಿಂದ ಸಂಬೋಧಿಸುವಾಗ ಉಚ್ಚರಿಸುವ ಪದ. ಕೊಲೆ—(ಯಾರಾದರೂ ತಮ್ಮನ್ನು) ಕೊಲ್ಲಲು ಬಂದರೆ. ಧೋಯೆನಲುಂ: ಧೋ ಎಂಬುದು ಮೊರೆಯಿಡುವಾಗ ಉಚ್ಚರಿಸುವ ಪದ; "ಶಿವಧೋ" ಎಂಬುದನ್ನು ಹೋಲಿಸಿ. ಬ್ರಾಹ್ಮಣರು ಮಾತಿನಲ್ಲೂ ಮೊರೆಯಿಡುವುದರಲ್ಲೂ ನಿಪುಣರೇ ಹೊರತು, ದಾನ ಯುದ್ಧ ಶರಣಾಗತರಕ್ಷಣೆಗಳಲ್ಲಿ ಸಮರ್ಥರಲ್ಲ; ಇದಕ್ಕೆಲ್ಲ ಕ್ಷತ್ರಿಯರೇ ಸರಿ ಎಂದು ಅಭಿಪ್ರಾಯ.

೪. ಓಜಂ ಗಡ—(ತಾನು) ಆಚಾರ್ಯನಂತೆ! ಗಡ ಎಂಬುದಕ್ಕೆ ಅಂತೆ, ಅಲ್ಲವೆ ಎಂಬ ಅರ್ಥಗಳುಂಟು. ಭಾರದ್ವಾಜ—ಭರದ್ವಾಜನ ಪುತ್ರ, ದ್ರೋಣ. ನಿರ್ವ್ಯಾಜಂ ಮಸುಳ್ದುವು—ನಿಷ್ಕಾರಣವಾಗಿ ಮಂಕಾದುವು; ಎಂದರೆ, ಅವನ ಕುಲಶೌರ್ಯಗಳ ಹಿರಿಮೆಯೆಲ್ಲ ಅನ್ಯಾಯವಾಗಿ ಕೆಟ್ಟುಹೋಯಿತು. ಪಾಂಡುತನೂಜರ ಪಕ್ಕದೊಳ್—ಪಾಂಡವರ ಪಕ್ಷವನ್ನು ವಹಿಸಿ. ಪಾಟಿಗಿಡೆ—ಕ್ರಮಕೆಡುವಂತೆ, ಸ್ವಾಮಿನಿಷ್ಠೆಗೆ ಭಂಗಬರುವಂತೆ. ನೆಗಟ್—ನಡೆ, ವರ್ತಿಸು.

೫. ತಪನಸುತ—ಸೂರ್ಯಪುತ್ರ, ಕರ್ಣ. ಕರ್ಣನು ಬೇರೆ, ನಾನು ಬೇರೆಯೆ? ಪೊಲ್ಲದಂ ನುಡಿದಂ—(ನನಗೆ ಆತ್ಮಸದೃಶನಾದ ಕರ್ಣನನ್ನು ಕುರಿತು ಅಶ್ವತ್ಥಾಮನು) ಕೆಟ್ಟಮಾತುಗಳನ್ನು ಆಡಿದನು. ಕರ್ಣನಿಗೆ ಸೇನಾಪತಿಪಟ್ಟವನ್ನು ಕಟ್ಟುವ ಮೊದಲಿನ ಪ್ರಸಂಗವನ್ನೂ, ಅದಕ್ಕೂ ಮಿಗಿಲಾಗಿ, ಕರ್ಣನು ತೀರಿಹೋದ ಮೇಲೆ ಅಶ್ವತ್ಥಾಮನಿಗೂ ತನಗೂ ನಡೆದ ಮಾತನ್ನೂ (ಪಂಪಭಾ, ೧೩.೨೫—೨೮) ಇಲ್ಲಿ ದುರ್ಯೋಧನನು ಸ್ಮರಿಸುತ್ತಿದ್ದಾನೆ. ಆವಗಂ—ಪೂರ್ಣವಾಗಿ. ರಕ್ಷಿಪ ಕಯ್ದುವಂ—(ನಮ್ಮ ಪಕ್ಷದವರನ್ನು) ರಕ್ಷಿಸಬೇಕಾಗಿದ್ದ ಆಯುಧವನ್ನು; ವೇಣೀಸಂಹಾರನಾಟಕದ ಮೇರೆಗೆ, ದುಶ್ಶಾಸನನ ರಕ್ತವನ್ನು ಭೀಮನು ಹೀರುವ ಸಮಯದಲ್ಲಿ, ಅಶ್ವತ್ಥಾಮನು ತನ್ನ ಶಸ್ತ್ರತ್ಯಾಗಪ್ರತಿಜ್ಞೆಯನ್ನು ನಿರ್ವಹಿಸುವ ಸಲುವಾಗಿ, ಮುಂದೆ ನುಗ್ಗಿ ನಿವಾರಿಸದೆ ನಿಂತುಬಿಡುತ್ತಾನೆ. ಮಱೆಯ ಪಾಂಡವಂ—ಪ್ರಚ್ಛನ್ನ ಪಾಂಡವ; ಪ್ರತ್ಯಕ್ಷವಾಗಿ ನಮ್ಮ ಕಡೆ ಇದ್ದುಕೊಂಡು, ಪರೋಕ್ಷವಾಗಿ ಪಾಂಡವರಿಗೇ ಸಹಾಯಮಾಡಿದವನು. ಬಗೆದು—ವಿಚಾರಿಸಿ.

೬. ಗೆಲಲ್ ಆರ್ಪೊಡೆ—ಗೆಲ್ಲಲು ಶಕ್ತನಾದರೆ; ಧಾ. ಆಱು. ಅಣ್ಮಿ—ಶೌರ್ಯ ತೋರಿಸಿ. ಆಳ್ಗೆ—ಬಂಟನಿಗೆ, ಪುರುಷನಿಗೆ. ತೊಲಗಿದೊಡೆ—(ಯುದ್ಧರಂಗದಿಂದ) ಜಾರಿದರೆ. ಸೆಗಳ್ತೆ . . . ಮೆಯ್ಯಂ—ಒಳ್ಳೆಯ ನಡತೆ ಅವನನ್ನು ಬಿಟ್ಟು ತೊಲಗುವುದಿಲ್ಲವೆ, ಎಂದರೆ ಅವನ ಚಾರಿತ್ರ್ಯಕ್ಕೆ ಕಳಂಕ ತಟ್ಟುವುದಿಲ್ಲವೆ?

೭. ಕರವಾಳ್—(ಲೋಹದ) ಕತ್ತಿ. ಮರವಾಳ್—ಮರದ ಕತ್ತಿ; ಬಾಳ್—ಕತ್ತಿ. ಕೂರಿತು ಅಕ್ಕುಮೆ—ಹರಿತವಾಗುತ್ತದೆಯೆ? ಕಲಿಯಂ ಪೊರೆದೊಡೆ—ಶೂರನನ್ನು ಪೋಷಿಸಿದರೆ. ಕೂರ್ಪು—ಶೌರ್ಯ. ಪಂದೆ—ಹೇಡಿ.

೮. ತುಱುಗೋಳ್—ಗೋಗ್ರಹಣ; ಕೋಳ್ ಎಂಬುದು ಕೊಳ್ ಧಾತುವಿನ ಭಾವನಾಮರೂಪ. ಪೆಣ್ಬುಯ್ಯಲ್—(ಪೆಣ್ + ಪುಯ್ಯಲ್) ಹೆಂಗಸರ ಆಕ್ರಂದನ. ಎಱೆವೆಸ—(ಎಱೆ+ಬೆಸ) ಪ್ರಭುವಿನ ಕಾರ್ಯ, ಸ್ವಾಮಿಕಾರ್ಯ. ಎಡಱು—ದಾರಿದ್ರ್ಯ, ಕೇಡು. ಊರ ಅೞಿವು—ಗ್ರಾಮದ ಹಾನಿ. ತಱಿಸಂದು—ನಿಶ್ಚಯಿಸಿ; ಧಾ. ತಱಿಸಲ್. ನೆಱಪದವಂ—ಪೂರ್ಣಗೊಳಿಸದವನು, (ತನ್ನ ಪೌರುಷವನ್ನು) ಪೂರ್ಣವಾಗಿ ಉಪಯೋಗಿಸಿ ಹೋರಾಡದವನು. ಷಂಡ—ನಪುಂಸಕ.

೮ ವ. ಪರುಷಂ—ಕಠಿನವಾಗಿ.

೯. ಗಡಂ=ಗಡ, ಗಡಾ. ಸೂತಜ—ಕರ್ಣ. ಕೈಪೆ—ಕಹಿ, ಅಪ್ರಿಯ. ಆಚಾರ್ಯಂಗೆ ಅಹಿಕೇತನಂಗೆ—ನಿವಾರಿಸಲು ಅಶಕ್ಯನಾದ, ಎಂದರೆ ಎಷ್ಟು ತಡೆದರೂ ತಾನು ಹಿಡಿದ ಪಟ್ಟನ್ನು ಬಿಡದ ದುರ್ಯೋಧನನಿಗೆ. ವಿಧಿವಿಳಸನ—ದೈವವಿಲಾಸ.

೧೦. ಬಾಹುರಕ್ಕೆ—ಭುಜರಕ್ಷೆ. ಸೀಸಕ—ಶಿರಸ್ತ್ರಾಣ, ತಲೆಕಾಪು (ಸಂ. ಶೀರ್ಷಕ). ದ್ರೋಣನೂ ಭೀಷ್ಮನೂ ಕರ್ಣನೂ ದುರ್ಯೋಧನನಿಗೆ ಮೈಜೋಡು ತೋಳ್ಮರೆ ತಲೆಕಾಪುಗಳಂತೆ ಇದ್ದು ರಕ್ಷಿಸುತ್ತಿದ್ದರು. ಆದಕಾರಣ ಈ ದೇಹಭಾಗಗಳನ್ನು ಮುಟ್ಟಲು ಸಾಧ್ಯವಿಲ್ಲದೆ, ಅವನ ತೊಡೆಯನ್ನು ಮುರಿಯುವೆನೆಂದು ಭೀಮನು ಹೇಳಿದನು ಎಂಬುದಾಗಿ ಸಂಜಯನು ಭೀಮಪ್ರತಿಜ್ಞೆಗೆ ವಿಶೇಷಕಾರಣವನ್ನು ಕಲ್ಪಿಸಿ, ದ್ರೋಣಾದಿಗಳ ಬೆಂಬಲ ದುರ್ಯೋಧನನಿಗೆ ಎಷ್ಟು ಮುಖ್ಯವಾಗಿತ್ತೆಂಬುದನ್ನು ಸೂಚಿಸುತ್ತಾನೆ.

೧೧. ಬಿರುದಿನ ಅಂಕಕ್ಕೆ—ಬಿರುದಿನ ಪ್ರಸಿದ್ಧಿಗೆ. ಭಾರ್ಗವನೊಳ್ ಪಡೆದು: ಬಡತನದಿಂದ ನರಳುತ್ತಿದ್ದ ದ್ರೋಣನು ಪರಶುರಾಮನ ಬಳಿಗೆ ಹೋದಾಗ, ಆತನು ಭೂಹಿರಣ್ಯಾದಿ ಸಮಸ್ತವನ್ನೂ ಆಗಲೇ ದಾನಮಾಡಿಬಿಟ್ಟಿದ್ದ ಕಾರಣ, ತನ್ನ ದಿವ್ಯಾಸ್ತ್ರಗಳನ್ನೇ ಇವನಿಗೆ ಕೊಟ್ಟನೆಂದು ಪೂರ್ವಕಥೆ (ಪಂಪಭಾ, ೨. ೪೪ ವ—೪೬ ವ ನೋಡಿ). ಗಾಂಡೀವಿ—ಗಾಂಡೀವವೆಂಬ ಧನುಸ್ಸನ್ನು ಧರಿಸಿದ ಅರ್ಜುನ. ಅವರ—ಅವರಿಬ್ಬರ; ಎಂದರೆ, ಒಬ್ಬರವೇ

ಲೊಬ್ಬರು ಪ್ರಯೋಗಿಸಿದ. ಶರಾಸಂಖ್ಯೆಯಂ—ಲೆಕ್ಕಕ್ಕೆ ಮೀರಿದ ಬಾಣ ಪರಂಪರೆಯನ್ನು. ಕಾಣಾ—ಕಾಣೆಯಾ ?

೧೨. ದಲ್—ದಿಟವಾಗಿ. ಪೋ—ಹೋಗು! ಇದೊಂದು ಅವ್ಯಯ. ದೋರ್ದಂಡಕಂಡೂಯನ—ಬಾಹುದಂಡಗಳ ನವೆ, ಯುದ್ಧಾಸಕ್ತಿ. ಕಲ್ತ—ಕಲಿತ; ಧಾ. ಕಲ್. ಬಿಲ್‌ಬಿನ್ನಣ—ಬಿಲ್ಲ ವಿದ್ಯೆಯ ವಿಜ್ಞಾನ. ಭೀಷ್ಮ ಈ ಶಬ್ದಕ್ಕೆ ಭಯಂಕರ ಎಂದು ಅರ್ಥ. ಸಂಗ್ರಾಮ . . . ಮತ್ತಂ—ಯುದ್ಧ ರಂಗದ ಉನ್ಮಾದದಿಂದ ಸೊಕ್ಕೇರಿದ (ಭೀಷ್ಮನು). ನೋಡೆ ಪಾರ್ಥಂ--ಅರ್ಜುನನೇ (ಈತನ ಶೌರ್ಯಕ್ಕೆ) ಸಾಕ್ಷಿಯಾಗಿರಲು. ಅದಟಂ—ಪರಾಕ್ರಮವನ್ನು.

೧೩. ಕಳಶನದೀಜರ್—ಕಳಶಜನಾದ ದ್ರೋಣನೂ ನದೀಜನಾದ ಭೀಷ್ಮನೂ. ಭಕ್ತಿಗೆ . ಎನಿಸಿ—ತಮ್ಮ ಸ್ವಾಮಿಭಕ್ತಿಗೆ ಕಳಶವಿಟ್ಟ ರೀತಿಯಲ್ಲಿ. ನೆಱಪಿದರ್—(ಯುದ್ಧಕಾರ್ಯವನ್ನು) ಪೂರ್ಣಗೊಳಿಸಿದರು, ನಿರ್ವಹಿಸಿದರು. ಅವರ ಒಂದು ಅಳವು ಅಲ್ತು: ಅರ್ಜುನಾದಿಗಳನ್ನು ಗೆಲ್ಲುವುದು ಅವರ ಸಾಮರ್ಥ್ಯಕ್ಕೂ ಮೀರಿದ್ದು. ಅಱಿಯಾ—ತಿಳಿಯೆಯಾ ?

೧೪. ಅರಣ್ಯವಾಸದಲ್ಲಿದ್ದ ಪಾಂಡವರೆದುರಿಗೆ ತನ್ನ ವೈಭವವನ್ನು ಮೆರಸಬೇಕೆಂದು ದುರ್ಯೋಧನನು ಹೋಗಿ ಚಿತ್ರಾಂಗದನೆಂಬ ಗಂಧರ್ವನ ಕೈಗೆ ಸಿಕ್ಕಿಕೊಂಡಾಗ ಬಿಡಿಸಲು ಅವನ ಕಡೆಯ ಯಾವ ಶೂರನ ಕೈಯಲ್ಲೂ ಆಗದಿರಲು, ದುರ್ಯೋಧನಪತ್ನಿ ಭಾನುಮತಿ ಧರ್ಮರಾಯನನ್ನೇ ಪತಿಭಿಕ್ಷೆ ಬೇಡಿದಳು. ಆಗ ಅಣ್ಣನ ಅಪ್ಪಣೆಯಂತೆ ಅರ್ಜುನನು ಗಂಧರ್ವರೊಡನೆ ಯುದ್ಧಮಾಡಿ ಜಯಿಸಿ ದುರ್ಯೋಧನನನ್ನು ಬಿಡಿಸಿಕೊಂಡು ಬಂದನು. ಈ ಸಂದರ್ಭವನ್ನು ಸಂಜಯನು ಅರ್ಜುನನ ಸಾಮರ್ಥ್ಯಾತಿಶಯಕ್ಕೆ ನಿದರ್ಶನವಾಗಿ ಜ್ಞಾಪಿಸುತ್ತಾನೆ.

ಉಪಯೋಗಾಸ್ತ್ರ : ಇದು ಯಾವ ಅಸ್ತ್ರವೆಂಬುದು ಸರಿಯಾಗಿ ಗೊತ್ತಾಗುವುದಿಲ್ಲ; ಮಹಾಭಾರತದಲ್ಲಾಗಲಿ ಪಂಪಭಾರತದಲ್ಲಾಗಲಿ ಈ ಹೆಸರು ಈ ಸಂದರ್ಭದಲ್ಲಿ ಬರುವುದಿಲ್ಲ. ಎಚ್ಚು—ಪ್ರಯೋಗಿಸಿ; ಧಾ. ಇಸು. ನಭ—ಆಕಾಶ. ಸರಿತ್‌ತನಯ-ಗಂಗಾಪುತ್ರ, ಭೀಷ್ಮ. ಹಮ್ಮದಂಬೋದರೇ—ಮೂರ್ಛೆಹೋಗಿದ್ದರೇ ?

**೧೫.** ಕಲಿ—ಶೂರ. ಅಕ್ಷೋಹಿಣಿ—ಸಂ. ಅಕ್ಷೌಹಿಣೀ; ೨೧,೮೭೦ ರಥಗಳೂ ಅಷ್ಟೇ ಆನೆಗಳೂ ಆ ಸಂಖ್ಯೆಗೆ ಮೂರರಷ್ಟು ಕುದುರೆಗಳೂ ಐದರಷ್ಟು ಕಾಲಾಳುಗಳೂ ಇರುವ ಸೇನೆ; ಪಂಪಭಾರತದಲ್ಲಿ ಈ ಲೆಕ್ಕವನ್ನು ಬೇರೆ ರೀತಿಯಾಗಿ ಹೇಳಿದೆ (೯. ೯೫). ಗೆಲಲ್ ಅರಿಯಂ—ಗೆಲ್ಲಲು ಅಸಾಧ್ಯನಾದವನು. ಅರಿಯಂ ಎಂಬುದು ಅರಿದು ಎಂಬ ಗುಣವಾಚಕದ ಪುಲ್ಲಿಂಗ ಏಕವ. ರೂಪ. ಗೋಗ್ರಹಣದ ಕಲಹ: ಪಾಂಡವರ ಅಜ್ಞಾತವಾಸಕಾಲದಲ್ಲಿ ವಿರಾಟನ ಗೋವುಗಳನ್ನು ಕೌರವರು ಹಿಡಿದಾಗ ನಡೆದ ಕದನ. ಏಕಾಂಗ ವಿಜಯ—ಅನ್ಯಸಹಾಯವಿಲ್ಲದೆ ತಾನೊಬ್ಬನೇ ವಿಜಯವನ್ನು ಸಾಧಿಸಿದವನು. ವಿಜಯ—ಅರ್ಜುನ.

**೧೬.** ಇನ್ನು ಮುಂದೆ ಭೀಮನ ಸಾಹಸಪ್ರತಾಪಗಳ ಪ್ರಶಂಸೆ. ಹಿಂದಿನ ಅನೇಕ ಪ್ರಸಂಗಗಳನ್ನು ಸಂಜಯನು ನೆನಪಿಗೆ ತರುತ್ತಾನೆ. ಉರಿ—ಅರಗಿನ ಮನೆಯ ಅಗ್ನಿ. ಕೊಳೆ—ಹಿಡಿಯಲು; ಧಾ. ಕೊಳ್. ಕೋಟ್ಮೃಗಂ—ಕೋಡುಳ್ಳ ಮೃಗ, ಖಡ್ಗಮೃಗ. ವಿಷಾಹಿಕುಳಂ—ವಿಷಸರ್ಪಸಂಕುಲ. ವರಾಹಸಿಂಧುರ—ಕಾಡುಹಂದಿಗಳ ಮತ್ತು ಆನೆಗಳ, ಖರ—ಕಠಿನವಾದ, ಶಯ್ಯೆಯೊಳ್—ಹಕ್ಕೆಯಲ್ಲಿ, ನೆಲೆಯ ಪ್ರದೇಶದಲ್ಲಿ.

**೧೭.** ಈ ಪದ್ಯದಲ್ಲಿ ಹೇಳಿರುವ ಬಲಶಾಲಿಗಳೆಲ್ಲರೂ ಭೀಮನಿಂದ ಬೇರೆ ಬೇರೆ ಸಂದರ್ಭಗಳಲ್ಲಿ ಹತರಾದವರು. ಬಲ್ಲಾಳ್—ಬಲಿಷ್ಠನಾದ ಪುರುಷ. ಕೇವಳನೇ—ಸಾಮಾನ್ಯನೇ?

**೧೮.** °ಶಂತನುಜ°—ಶಂತನುಪುತ್ರನಾದ ಭೀಷ್ಮ. ಭೀಮಾರ್ಜುನರ ಸಾಹಸವರ್ಣನೆಯ ಸಂದರ್ಭದಲ್ಲಿ ಭೀಷ್ಮನ ಬಾಣಪ್ರಯೋಗದ ಹೊಗಳಿಕೆಗೆ ಔಚಿತ್ಯ ಕಾಣಿಸುವುದಿಲ್ಲ. ಮುಂದಿನ ಪದದಲ್ಲಿಯೇ ಭೀಮನ ಗದೆಯ ಪ್ರಶಂಸೆ ಬರುತ್ತದೆ; ಅರ್ಜುನನ ಹೆಸರು ಪದ್ಯದಲ್ಲಿ ಇನ್ನೆಲ್ಲೂ ಬಂದಿಲ್ಲ. ಇದನ್ನು ನೋಡಿದರೆ, "ಶಂತನುಜ" ಎಂಬುದು ಮೂಲಪಾಠವಾಗಿರಲಾರದೆಂದೂ, ಅದಕ್ಕೆ ಪ್ರತಿಯಾಗಿ ಅಲ್ಲಿ ಅರ್ಜುನನ ಹೆಸರು ಇದ್ದಿರಬೇಕೆಂದೂ ತೋರುತ್ತದೆ; [ಶಕ್ರಸುತ] ಎಂದೋ [ಸಂಕಮಜ] ಎಂದೋ ಇದ್ದಿರಬಹುದೆ? "ಸಂಕಮ"

ಎಂಬುದಕ್ಕೆ ಇಂದ್ರ ಎಂಬ ಅರ್ಥವಿರುವಂತೆ ತೋರುತ್ತದೆ (ಪಂಪಭಾ, ೮. ೫೪ ರ ಪಾಠಾಂತರಗಳನ್ನು ನೋಡಿ). ಭೀಮಭೀಮ°—ಭೀಮನ ಭಯಂಕರವಾದ. °ಅನೀಕ—ಸೇನೆ. ಪಡಲ್ವಟ್ಟು—ಚೆಲ್ಲಾಪಿಲ್ಲಿಯಾಗಿ ಬಿದ್ದು. ಜೀರಗೆಯ ಒಕ್ಕಲ್ಗೆ ಎಣೆಯಾಗಿ—ಜೀರಗೆಯನ್ನು ಒಕ್ಕಿ ಉದುರಿಸಿದ್ದಕ್ಕೆ ಸಮಾನವಾಗಿ. ದಂತಿ—ಆನೆ. ಜವಂ ಉಂಡು ಕಾಱಿದವೋಲ್—ಯಮನು ತೃಪ್ತಿಮೀರಿ ಉಂಡು ಕಟ್ಟರೆಯಾಗಿ ಕಾರಿದಂತೆ, ಎಂದರೆ ಅಷ್ಟೊಂದು ಅಪರಿಮಿತವಾಗಿ. ಜವ—ಸಂ. ಯಮ.

೧೯. ಕಯ್ದುಗೊಳ್ವ—ಆಯುಧ ಹಿಡಿಯುವ. ಮಾರ್ಕೊಳ್ವ—ಪ್ರತಿಭಟಿಸುವ. ಅದಟರ್—ಪರಾಕ್ರಮಿಗಳು. ಭುವನ—ಲೋಕ.

೨೦. ಬಱ್ಜು : ಇದರ ಅರ್ಥ ಸರಿಯಾಗಿ ತಿಳಿದಿಲ್ಲ. "ಸುತಪಕ್ಷಪಾತದಿಂದಂ ಕೃತಾಂತನುಱೆ ಬಱ್ಜಿದಂತೆ ಕೊಂದಂ" (ಗದಾಮೂ, ೩. ೧೫), "ಜವಂ ನೇಱಿ ಬಱ್ಜಿದಂತೆ" (ಗದಾಮೂ, ೯. ೩೨ ವ=ಗದಾಸಂ, ೯. ೨೦ ವ) "ಪಾಂಡವಪತಾಕಿನಿಗೆ ಜವಂ ನೆಱೆ (ನೇಱಿ ?) ಬಱ್ಜಿದಂತೆ ಭೋರನೆ ಬಂದು" (ಕರ್ಣಪಾರ್ಯ : ನೇಮಿನಾಥಪುರಾಣ, ೧೨. ೮೮ ವ)—ಈ ಕಡೆಗಳಲ್ಲಿ ಇದೇ ಬಗೆಯ ಪ್ರಯೋಗ ದೊರೆಯುತ್ತದೆ. ಬಱ್ಜು ಎಂಬುದಕ್ಕೆ ಬಚ್ಚು (=ಹೊರಬೀಳು) ಎಂಬುದು ಮೂಲವಾಗಿರಬಹುದೆ? ಆ ಪಕ್ಷಕ್ಕೆ ಈ ಪ್ರಯೋಗಗಳಲ್ಲಿ, ಬಱ್ಜು—ಎರಗು, ಮೇಲೆಬೀಳು ಎಂದು ಅರ್ಥಮಾಡಬಹುದೆ? (ಬಱ್ಜಿಸು—ಬಣ್ಣದಿಂದ ಚಿತ್ರಿಸು; ಆದರೆ ಮೇಲಿನ ಸಂದರ್ಭಗಳಿಗೆ ಈ ಅರ್ಥವನ್ನು ಅನ್ವಯಿಸಲು ಸಾಧ್ಯವಿಲ್ಲ.) ಕುಱಿದಱಿದಱಿದಂ—ಕುರಿಗಳನ್ನು ಕತ್ತರಿಸುವ ಹಾಗೆ (ಲೀಲಾಜಾಲವಾಗಿ) ಕತ್ತರಿಸಿದನು. ಜವನಂ—ಯಮನನ್ನೂ. ಸುಭಟರ ಜವನಂ—ಶೂರರಿಗೆ ಮೃತ್ಯುವಿನಂತಿರುವ ಭೀಮನನ್ನೂ. ಮುಳಿಯಿಸಿ—ರೇಗಿಸಿ. ಬದುಂಕುವನ್ನರುಂ—ಬದುಕುವಂಥವರೂ. ಒಳರೇ—ಇದ್ದಾರೆಯೆ ; ಧಾ. ಉಳ್.

೨೧. ದಾನಕೊಡುವವನು ಜೊತೆಗೆ ಸವಿಯಾದ ಮಾತನ್ನೂ ಆಡುವುದು ಅಪೂರ್ವ ; ಹಾಗೆಯೇ, ಗರ್ವ ಬೆರೆಯದ ಜ್ಞಾನವನ್ನೂ ಕ್ಷಮೆ ಕೂಡಿದ

ಶೌರ್ಯವನ್ನೂ ಕಾಣುವುದು ಕಷ್ಟ. ಧರ್ಮರಾಯನಲ್ಲಾದರೆ ಈ ವಿರುದ್ಧ ಯುಗ್ಮಗಳಿಗೆ ಅಪೂರ್ವವಾದ ಹೊಂದಿಕೆಯಿತ್ತು ಎಂದು ತಾತ್ಪರ್ಯ. ಈ ಪದ್ಯಕ್ಕೆ ಅಮೋಘವರ್ಷ (ನೃಪತುಂಗ) ಚಕ್ರವರ್ತಿಯಿಂದ ಬಹುಶಃ ರಚಿತವಾದ 'ಪ್ರಶ್ನೋತ್ತರರತ್ನಮಾಲಿಕೆ'ಯ ಈ ಪದ್ಯ ಪ್ರೇರಕವೆಂದು ತೋರುತ್ತದೆ:

> ದಾನಂ ಪ್ರಿಯವಾಕ್ಸಹಿತಂ ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಂ |
> ತ್ಯಾಗಸಹಿತಂ ಚ ವಿತ್ತಂ ದುರ್ಲಭಮೇತಚ್ಚತುರ್ಭದ್ರಂ || (ಪ. ೬೭)

**೨೨.** ಅಮಳ್ಗಳ್—ಅವಳಿಜವಳಿಯವರು, ಎಂದರೆ ನಕುಲ ಸಹದೇವರು. ಇವರು ವಿನಯವಿಕ್ರಮಗಳ ಜೋಡಿಯಂತೆ ಇರುವರೆಂದು ಅರ್ಥ. ಅಮಳ್—ಸಂ. ಯಮಳ. ಅವರ್ ಮುಳಿಯೆ ಗಂಡರ್ ಇಲ್ಲ—ಅವರಿಗೇನಾದರೂ ಕೋಪಬಂದರೆ, ಎದುರಿಸುವ ವೀರರೇ ಇಲ್ಲ. ಇಳಿಸು—ತಿರಸ್ಕರಿಸು, ಅಲಕ್ಷ್ಯ ಮಾಡು. ಕುರು . . . ಭಾನೂ—ಕುರುವಂಶವೆಂಬ ಗಗನವನ್ನು ಸೂರ್ಯನಂತೆ ಬೆಳಗುವವನೇ, ದುರ್ಯೋಧನನೇ.

**೨೨ ವ.** ಸಂಜಯನು ಹೀಗೆ ಪಾಂಡವರನ್ನು ಬಾಯಿತುಂಬ ಹೊಗಳಿ ತನ್ನನ್ನು ಕಡೆಗಣಿಸಿದ್ದಕ್ಕೆ ದುರ್ಯೋಧನನು ಸಹಜವಾಗಿಯೇ ಉದ್ರೇಕಗೊಳ್ಳುತ್ತಾನೆ; ಪಾಂಡವರನ್ನೂ ಅವರ ಪಕ್ಷದವರನ್ನೂ ಇನ್ನು ಅಲ್ಲಗಳೆಯುತ್ತಾನೆ. ಸಿಡಿಲ್ದು—ಸಿಡಿಲಿನಂತೆ ಆಸ್ಫೋಟಿಸಿ.

**೨೩.** ಧರ್ಮರುಚಿ—ಧರ್ಮದಲ್ಲಿ ಆಸಕ್ತಿಯುಳ್ಳವನು. ಎಲ್ಲರ ಪೇಳ್ದ ಮಾತು: "ಎಲ್ಲರ" ಎಂಬ ಕಡೆ ಪ್ರಥಮಾವಿಭಕ್ತಿಯ ಅರ್ಥದಲ್ಲಿ ಷಷ್ಠಿಯ ಪ್ರಯೋಗ. ಕಾರ್ಮುಕಾಚಾರ್ಯನಂ—ತನಗೆ ಬಿಲ್ಲ ವಿದ್ಯೆಯನ್ನು ಹೇಳಿಕೊಟ್ಟ ದ್ರೋಣನನ್ನು. ತೊದಳ್ ನುಡಿದು—ಸುಳ್ಳು ಹೇಳಿ. 'ಮೃಷಾ ಪಾತಕಂ ಪರಂ'—ಸುಳ್ಳು ಮಹಾಪಾತಕ; ಇದೊಂದು ಸಂಸ್ಕೃತವಾಕ್ಯ. ಪಕ್ಕಾಗನೇ—ಗುರಿಯಾಗುವುದಿಲ್ಲವೆ?

**೨೪.** ಈ ದೊರೆಯ—ಈ ಯೋಗ್ಯತೆಯುಳ್ಳ, ಇಂಥ. ಅಱಿಮಗನುಂ—ಧರ್ಮಪುತ್ರನು ಕೂಡ. ಮೃಷವಾದಂ—ಸುಳ್ಳುಗಾರನಾದನು; ಮೃಷಂ+

ಆದಂ (?). ಸಂಸ್ಕೃತದಲ್ಲಿ "ಮೃಷಾ" ಎಂಬುದು ಅಕಾರಾಂತವಾದ ಅವ್ಯಯ ; "ಮೃಷ" ಎಂಬ ರೂಪವಿಲ್ಲ. ಧರ್ಮನಂ—ಯುಧಿಷ್ಠಿರನ ತಂದೆಯಾದ ಯಮಧರ್ಮನನ್ನು. ಅಱಸು—ಹುಡುಕು. ಮುಕ್ತಬಾಣ—ಬಾಣವನ್ನು (ಎಂದರೆ, ಶಸ್ತ್ರವನ್ನು) ತೊರೆದವನು. "ಅಶ್ವತ್ಥಾಮಾ ಹತಃ ಕುಂಜರಃ" ಎಂದು ಯುಧಿಷ್ಠಿರನು ದ್ರೋಣನಿಗೆ ಹೇಳುವಾಗ ಕೊನೆಯ ಪದವನ್ನು ಮಾತ್ರ ಅವ್ಯಕ್ತವಾಗಿ ಉಚ್ಚರಿಸಲು, ತನ್ನ ಮಗ ಅಶ್ವತ್ಥಾಮನು ತೀರಿಹೋದನೆಂದು ನಂಬಿ ದ್ರೋಣನು ಶಸ್ತ್ರವನ್ನು ಕೆಳಗಿಳಿಸಿ ಪ್ರಾಣವನ್ನು ತೊರೆದನಷ್ಟೆ. ಅವನು ಬ್ರಹ್ಮಪದವನ್ನು ಸೇರಿದನೆಂದು ಮಹಾಭಾರತದಲ್ಲಿ ಹೇಳಿದೆ. ಆದರೆ, ದ್ರೋಣನು ತನ್ನ ಪ್ರೀತಿಯ ಮಗನನ್ನು ಹುಡುಕಿಕೊಂಡು ಯಮಲೋಕಕ್ಕೆ ಹೋದನೆಂದು ಜನಜನಿತವಾದ ಕಥೆಯುಂಟು ; ಅದು ರನ್ನನ ಕಾಲಕ್ಕೇ ಪ್ರಚುರವಾಗಿದ್ದಿರಬೇಕು. ಇಲ್ಲಿ ಅದಕ್ಕೆ ಒಂದು ಹೊಸ ಅರ್ಥವನ್ನೇ ದುರ್ಯೋಧನನು ಕಲ್ಪಿಸುತ್ತಾನೆ.

೨೫. ವನಿತೆ—(ತಮ್ಮ) ಹೆಣ್ಣು, ದ್ರೌಪದಿ. ಗಂಡಂ ಆಗನೆ—ವೀರನಾಗದೆ ಹೋದನೆ; ಎಂದರೆ, ಅವನಲ್ಲಿ ಪೌರುಷವಿರುವ ಪಕ್ಷಕ್ಕೆ ಅಂಥ ಸಮಯದಲ್ಲಿ ಎಲ್ಲಿ ಹೋಗಿತ್ತು ? ಬರಿಯ ಎಲ್ವು ಉಡಿವನ್ನೆಗಂ—ಪಕ್ಕೆಯ ಎಲುಬು ಮುರಿಯುವ ತನಕ. ಭಗದತ್ತನ ಆನೆ . ಒತ್ತೆ : ಕೌರವಪಕ್ಷದ ಭಗದತ್ತನು ಏರಿದ್ದ ಸುಪ್ರತೀಕವೆಂಬ ಭಯಂಕರವಾದ ದಿಗ್ಗಜದೊಡನೆ ಭೀಮನು ಸೆಣಸುತ್ತಾನೆ ; ಆನೆ ಅವನನ್ನೂ ಅವನು ಆನೆಯನ್ನೂ ಒತ್ತಿ ಹೋರಾಡುತ್ತಾರೆ ; ಯಾರನ್ನು ಯಾರೂ ಸೋಲಿಸಲು ಆಗುವುದಿಲ್ಲ. ಕಡೆಗೆ ಅರ್ಜುನನು ಭೀಮನ ಸಹಾಯಕ್ಕೆ ಬಂದು ಭಗದತ್ತನನ್ನೂ ಸುಪ್ರತೀಕವನ್ನೂ ಸಂಹರಿಸುತ್ತಾನೆ. (ಪಂಪಭಾ, ೧೧. ೬೯—೮೨ ನೋಡಿ.) ಇಲ್ಲಿ ದುರ್ಯೋಧನನು ಭೀಮನ ಸಾಮರ್ಥ್ಯಕ್ಕೆ ಎಷ್ಟು ಬೆಲೆ ಕೊಡಬೇಕಾಗಿತ್ತೋ ಅಷ್ಟನ್ನು ಕೊಡದೆ ಅಲ್ಲಗಳೆದಿದ್ದಾನೆ. ಅಂಗಪತಿ—ಕರ್ಣ. ಕೋದು—ಚುಚ್ಚಿ ; ಧಾ. ಕೋ—ಪೋಣಿಸು. ಕೊಲಲೊಲ್ಲದೆ ಎಡೆವಲ್ಲಿ : ಭಾರತಯುದ್ಧದಲ್ಲಿ ಒಮ್ಮೆ, ದುರ್ಯೋಧನನ ಮೇಲೆ ಭೀಮನು ಇನ್ನೇನು ಬೀಳುವನೆಂಬಷ್ಟರಲ್ಲಿ ಕರ್ಣನು ಸಹಾಯಕ್ಕೆ ಬಂದು ಬಾಣಪರಂಪರೆಯನ್ನು ಕರೆಯುತ್ತಾನೆ; ಆಗ ಭೀಮನು ನಸು

ಮ್ಛೂರ್ಛೆಯಿಂದ ರಥದಲ್ಲಿ ಬೀಳುತ್ತಾನೆ. ಅವನ ಕೊರಳಿಗೆ ಕರ್ಣನು ತನ್ನ ಬಿಲ್ಲನ್ನು ಕೋದು ಎತ್ತುತ್ತಾನೆ; ಆದರೆ ತನ್ನ ತಾಯಿಗೆ ಕೊಟ್ಟಿದ್ದ ಮಾತನ್ನು ನೆನೆದು ಅವನನ್ನು ಕೊಲ್ಲದೆ ಬಿಡುತ್ತಾನೆ. (ಪಂಪಭಾ, ೧೧. ೧೪೨ ವ—೧೪೪ ನೋಡಿ.) ಕುರುಬಾಲ°—ಕುರುವಂಶದ ಬಾಲಕರು, ದುರ್ಯೋಧನನ ತಮ್ಮಂದಿರು. ಮಾರುತಿ—ವಾಯುಪುತ್ರ, ಭೀಮ.

**೨೬.** ಒಡವುಟ್ಟಿದರಂ ಕೊಂದು: ಕೌರವರೂ ಭೀಮನಿಗೆ ಸಹೋದರ ಸಮಾನವೇ ತಾನೆ. ಅಡಗು—ಮಾಂಸ. ಬಗಸೆರೆ= ಬೆಸಲಗೆ=ಬೆಲಗಸೆ—ಬೊಗಸೆ. ನಿಸ್ತ್ರಿಂಶತೆ—ನಿಷ್ಕರುಣತ್ವ. ಪೊರ್ದಿ—ಹೊಂದಿ, ಸೇರಿ; ಧಾ. ಪೊರ್ದು. ಸೋದರರನ್ನು ಕೊಂದು, ದುಶ್ಶಾಸನನ ರಕ್ತವನ್ನು ಹೀರಿ, ಮಾಂಸವನ್ನು ತಿಂದದ್ದು ನಿಜವಾಗಿ ರಾಕ್ಷಸಕೃತ್ಯ; ರಾಕ್ಷಸಿಯ ಕೈಹಿಡಿದೇ ಇದನ್ನು ಭೀಮನು ಕಲಿತಿರಬೇಕು ಎಂದು ತಾತ್ಪರ್ಯ.

**೨೭.** ಜೂದು—ಸಂ. ದ್ಯೂತ. ಗಂಡುದೊತ್ತು—ಗಂಡುತೊತ್ತು, ದಾಸ. ವಲ್ಕಲ°—ನಾರುಮಡಿ. ಬೆಳ್ತನ—ಮರುಳುತನ, ಬೆಪ್ಪು. ಪೇಡಿಯೆನೆ—ನಪುಂಸಕನೆನಿಸಿಕೊಂಡು. ಮತ್ಸ್ಯಾವಾಸ—ಮತ್ಸ್ಯದೇಶದ ರಾಜನಾದ ವಿರಾಟನ ಭವನ. ಬಾರದ ಭವಂ ಬಂದಂ—ಹೊಂದಬಾರದ ದುಃಸ್ಥಿತಿಯನ್ನು ಹೊಂದಿದನು. ಅರ್ಜುನನು ದಾಸನಾದದ್ದನ್ನೂ ಬೃಹನ್ನಳೆಯಾದದ್ದನ್ನೂ ಉಪಹಾಸಮಾಡುವುದು ಅನುಚಿತವಲ್ಲವೆನಿಸಿದರೂ, ದಿವ್ಯಾಸ್ತ್ರಪಡೆಯಲು ತಪಸ್ವಿಯಾದದ್ದನ್ನು ಇದೇ ಶ್ರೇಣಿಗೆ ಸೇರಿಸುವುದು ಕೆಲಮಟ್ಟಿಗೆ ವಿಲಕ್ಷಣವೆನಿಸುತ್ತದೆ.

**೨೮.** ಪ್ರೋಜ್ಝಿತಚಾಪ—ಬಿಲ್ಲನ್ನು ಬಿಸುಟವನು. ಧರ್ಮರಾಯನು "ಹುಸಿ" ಮಾತನ್ನು ಹೇಳುವುದು, ದ್ರೋಣನು ಶಸ್ತ್ರವನ್ನು ತೊರೆಯುವುದು, ಆತನ ಶವವನ್ನು ಧೃಷ್ಟದ್ಯುಮ್ನನು ಇರಿಯುವುದು—ಇದು ಘಟನೆಗಳು ನಡೆದ ಕ್ರಮ; ಈ ಪದ್ಯದ ಹೇಳಿಕೆಯಲ್ಲಿ ಸ್ವಲ್ಪ ವಿಪರ್ಯಾಸವಾಗಿದೆ. (ಗದಾಮೂ, ೩. ೩೧ ರಲ್ಲಿ, "ಗುರುವಂ . ಸಂಹರಿಸಿದ ಶಕ್ರಸುತಂಗೆ . . ." ಎಂದು ಹೇಳಿ ಆ ಕೃತ್ಯವನ್ನು ದುರ್ಯೋಧನನು ಅರ್ಜುನನಿಗೇ ಆರೋಪಿಸುತ್ತಾನೆ; ಇದು ಮಹಾಭಾರತ ಪಂಪಭಾರತಗಳ ಹೇಳಿಕೆಗೆ ವಿರುದ್ಧವಾಗಿದೆ.) ಕಱುತ್ತು—

ಕೋಪಗೊಂಡು, ಮತ್ಸರಿಸಿ; ಧಾ. ಕಟು. ಗುಱಿಯೆಚ್ಚ ಆ ಪೊಚ್ಚಱಂ—ಗುರಿಯಿಟ್ಟು ಹೊಡೆದ ಆ ಸ್ಫೂರ್ತಿಯನ್ನು. ಭಾರತಕಥೆಯಂತೆ, ಭೀಷ್ಮ ಶರಶಯ್ಯೆಯಲ್ಲಿ ಮಲಗಿದ್ದು ಅರ್ಜುನನು ಶಿಖಂಡಿಯ ಮರೆಯಿಂದ ತನ್ನ ಮೇಲೆ ಬಾಣಪ್ರಯೋಗ ಮಾಡಿದ ತರುವಾಯ. ವಿರಥಜ್ಯಾಯುಧಂ ಎನ್ನದೆ—ರಥವೂ ಬಿಲ್ಲುಬಾಣಗಳೂ ಇಲ್ಲದವನೆಂಬುದನ್ನು ಗಣನೆಗೆ ತಂದುಕೊಳ್ಳದೆ. ತಲೆಗೊಂಡ—ತಲೆಯನ್ನು ತೆಗೆದ, ಸಂಹರಿಸಿದ. ಸಾಹಸಧನಂ. ಬಲ್ಲನೇ: ಇಂಥ ಶೌರ್ಯಸ್ಫೂರ್ತಿಗಳನ್ನು ಪ್ರದರ್ಶಿಸುವುದು ತನಗೆ ಸಾಧ್ಯವಿಲ್ಲವೆಂದು ದುರ್ಯೋಧನನ ತಿರಸ್ಕಾರೋಕ್ತಿ.

೨೯. ಈಗ ಕ್ಷತ್ರಿಯರಂತೆ ಆಯುಧಗಳನ್ನು ಝಳಪಿಸುವ ಪಾಂಡವರು ವಿರಾಟನಗರದಲ್ಲಿ ಏನೇನನ್ನು ಕೈಯಲ್ಲಿ ಹಿಡಿದು ಯಾವ ಯಾವ ವೃತ್ತಿಗಳನ್ನು ಆಶ್ರಯಿಸಿ ಎಂಥ ದುರ್ಗತಿಗೆ ಇಳಿದಿದ್ದರೆಂಬುದನ್ನು ದುರ್ಯೋಧನನು ಸ್ಮರಿಸಿ ಉಪಹಾಸಮಾಡುತ್ತಾನೆ.

ಸೊಕಂ ಇರ್ಕೆ—ಸುಖವಾಗಿರಲಿ; ಸೊಕ—ಸಂ. ಸುಖ. ದರ್ಭಪಾಣಿ—ದರ್ಭೆಯನ್ನು ಕೈಯಲ್ಲಿ ಹಿಡಿದವನು, ಪುರೋಹಿತ. ದರ್ವೀಕರಂ—ಸೌಟನ್ನು ಹಿಡಿದವನು, ಅಡಿಗೆಯವನು. ಜರ್ಜರಹಸ್ತಂ—ಜರ್ಜರ ಎಂಬ ಹೆಸರುಳ್ಳ ಇಂದ್ರಧ್ವಜವನ್ನು ಹಿಡಿದವನು, ನಟ. ನಾಟ್ಯರಂಗದಲ್ಲಿ ಇಂದ್ರಧ್ವಜವನ್ನು ಸ್ಥಾಪಿಸಿ ಪೂಜಿಸುತ್ತಿದ್ದರು. ದಸ್ರಾತ್ಮಜರ್—ಅಶ್ವಿನೀದೇವತೆಗಳ ಮಕ್ಕಳು, ನಕುಲಸಹದೇವರು. ದಂಡಮುಷ್ಟಿಕರರ್—ಕೋಲಿನ ಹಿಡಿಯನ್ನು ಕೈಯಲ್ಲಿ ತಳೆದವರು, ದನಕಾಯುವ ಮತ್ತು ಕುದುರೆಕಾಯುವ ವೃತ್ತಿಯವರು. ವಿಡಂಬ—ಅನುಕರಣ, ಬೂಟಾಟಿಕೆ. ಏವುದು—ಯಾವುದು; ಏನು ಮಾಡುವುದು? ಶಸ್ತ್ರ

ಅವರ್ಗಂ—ಇಂಥವರಿಗೆಲ್ಲ ಶಸ್ತ್ರಧಾರಣೆಯ ಅನುಕರಣದಿಂದ ಏನು ಪ್ರಯೋಜನ? ಗಂಧದಾಯಕಿ—ಸುಗಂಧವನ್ನು (ಸಿದ್ಧಪಡಿಸಿ) ಕೊಡುವ ಸೇವಕಿ. ಮತ್ಸ್ಯ . . . ಪೊಲ್ಲದೇ—ವಿರಾಟನ ಅರಮನೆಯಲ್ಲಿ ಆದದ್ದಕ್ಕಿಂತ ನನ್ನಿಂದ ಆದ ನಿಗ್ರಹ ಕೆಟ್ಟದ್ದೇ? ವಿರಾಟನ ಮನೆಯಲ್ಲಿ ಅವರು ಪಟ್ಟ ಪರಿಭವ ತುಂಬ ಹೀನಾಯದ್ದು, ಅದೂ ತಾವಾಗಿಯೇ ಆರಿಸಿಕೊಂಡದ್ದು; ನಾನು ಕೊಟ್ಟ ಹಿಂಸೆ ಅದಕ್ಕಿಂತ ಕೆಟ್ಟದ್ದೇ ಎಂದು ಭಾವ.

**೩೦. ಪಂಚವಲ್ಲಭೆ:** ಈ ವಿಶೇಷಣದಿಂದ ದುರ್ಯೋಧನನ ತಿರಸ್ಕಾರ ಸುವ್ಯಕ್ತವಾಗುತ್ತದೆ. ಪೋದು—ಹೊಡೆ. ಮಿಳ್ಮಿಳನೆ—ಮಿಳಮಿಳ ಎಂದು, ಸುಮ್ಮನೆ ಕಣ್ಣುಬಿಟ್ಟುಕೊಂಡು. ಬಲ್ಲಾಳ್ಗಳ್—ಶೂರರು. ಭರಂಗೆಯ್ದಪರ್—ಜೋರು ಮಾಡುತ್ತಾರೆ. ಪೆರ್ಮಾತು—ಭಾರಿಯ ಮಾತು. ದ್ರೌಪದಿಗೆ ತನ್ನ ತಮ್ಮನೂ ತಾನೂ ಮಾಡಿದ್ದು ಅನ್ಯಾಯವೆಂದು ದುರ್ಯೋಧನನಿಗೆ ಅನ್ನಿಸುವುದಿಲ್ಲ!

**೩೧.** ಅಣುಗಾಳ್—ಪ್ರೀತಿಯ ಬಂಟ. ತ್ರಿಣಯನಾಂಶಂ: ರುದ್ರನ ಅಂಶವನ್ನುಳ್ಳವನು; ಅಂಜನಾದೇವಿ ರುದ್ರಾಂಶವನ್ನು ಧರಿಸಿದಳೆಂದೂ ಅದರಿಂದ ಹನುಮಂತನು ಹುಟ್ಟಿದನೆಂದೂ ಕೆಲವು ಪುರಾಣಗಳಲ್ಲಿ ಹೇಳಿದೆ (ಪುರಾಣನಾಮಚೂಡಾಮಣಿ: 'ಅಂಜನಾ', 'ಹನೂಮಂತ'—ಈ ಲೇಖನಗಳನ್ನು ನೋಡಿ). ಅಣುವ—ಸಂ. ಹನೂಮಾನ್. ಪಾಂಡವಕೇತುದಂಡದೊಳ್—ಅರ್ಜುನನ ಧ್ವಜದಂಡದಲ್ಲಿ; ಅರ್ಜುನನು ಕಪಿಧ್ವಜ. ಆವ ಅಗ್ಗಳಿಕೆ—ಯಾವ ಹೆಚ್ಚುಗಾರಿಕೆ, ಏನು ದೊಡ್ಡ ವಿಷಯ?

**೩೨.** ಅನುಜೆಯಂ—ತನ್ನ ತಂಗಿಯಾದ ಸುಭದ್ರೆಯನ್ನು. ಆತನ ತನಯಂಗೆ—ಅಭಿಮನ್ಯುವಿಗೆ. ತನ್ನ ಮಗಳಂ—ತನ್ನ ಅಣ್ಣ ಬಲರಾಮನ ಮಗಳಾದ ವತ್ಸಲೆ (ಶಶಿರೇಖೆ)ಯನ್ನು (?). ರಥಮಂ ಎಸಗಿ—(ಸಾರಥಿಯಾಗಿ) ತೇರನ್ನು ನಡಸಿ. ಕೃಷ್ಣನು ಯದುವಂಶದವನಾದ ಕಾರಣ (ಯಯಾತಿಯ ಶಾಪದಿಂದ) ಅವನಿಗೆ ರಾಜಪದವಿ ಇಲ್ಲ; ಆದರೆ ಅವನಿಗೆ ರಾಜ್ಯವಾಳುವ ಆಸೆ ತಪ್ಪಿಲ್ಲ. ಆದಕಾರಣ, ಅರ್ಜುನನೊಡನೆ ಬಾಂಧವ್ಯ ಭೃತ್ಯಭಾವಗಳನ್ನು ಬೆಳಸಿಕೊಂಡು, ಅಪನ ನೆವದಿಂದ ರಾಜ್ಯವಾಳುತ್ತಿದ್ದಾನೆ!

**೩೩.** ಪುರುಷರ್ ಮೂವರ್—ತ್ರಿಮೂರ್ತಿಗಳು, ಬ್ರಹ್ಮ ವಿಷ್ಣು ಮಹೇಶ್ವರರು. ಕರವೇಟಿ—(ಕರಂ+ಪೇಟಿ) ಅತಿಶಯವಾಗಿ ಹೇಡಿ (?).

**೩೪.** ಅನಿಮೇಷಾದಿ°—ಮತ್ಸ್ಯಾವತಾರವೇ ಮೊದಲಾದ. ಅನಿತಱೊಳ್ ಇರದೆ—ಅಷ್ಟರಲ್ಲೇ ತೃಪ್ತಿಪಟ್ಟುಕೊಂಡು ಇರದೆ; ಅವುಗಳಲ್ಲಿ ತಾನು ಅನುಭವಿಸಿದ ಬಗೆಬಗೆಯ ಕ್ಲೇಶಪರಿಭವಗಳೇ ಸಾಲದೆ.

**೩೪ ವ.** ಕಂಜೋದರ—ಪದ್ಮನಾಭ, ಕೃಷ್ಣ. ಮಾರ್ಕೊಂಡು—ಎದುರಿಸಿ ನಿಂತು.

**೩೫.** ಈ ಪದ್ಯದಲ್ಲಿ ಮೂಲಪಾಠವೇನಿತ್ತೆಂಬುದನ್ನು ಖಚಿತಪಡಿಸಲು ಸಾಧ್ಯವಾಗಿಲ್ಲ; ತಾತ್ಕಾಲಿಕವಾಗಿ ಸರಿಪಡಿಸಿಕೊಂಡಿದೆ. ಪ್ರತಿನೃಪರ್—ಎದುರುಪಕ್ಷದ ರಾಜರು, ಪಾಂಡವರು. ಅಸಹಾಯ . . . ಬಲರ್—ಬೇರೊಬ್ಬರ ಸಹಾಯವಿಲ್ಲದೆ ಪ್ರತಿಪಕ್ಷದ ಸೈನ್ಯವನ್ನು ಜಯಿಸಿದವರು. ಅನರ್ಥಕಂ ವಾಕ್ಯಾರ್ಥಂ: ಚರ್ಚೆಯಿಂದ, ಮಾತಿಗೆ ಮಾತನ್ನು ಬೆಳಸುವುದರಿಂದ, ಯಾವ ಪ್ರಯೋಜನವೂ ಇಲ್ಲ (?).

**೩೫ ವ.** ನಿರ್ವೆಗಿಸಿ—ಬೇಸರಗೊಂಡು; ಧಾ. ನಿರ್ವೆಗಿಸು (<ನಿರ್ವೇಗ+ಇಸು).

**೩೬.** ಪುರುಷಕಾರ—ಪುರುಷಪ್ರಯತ್ನ. ವಿಜಯ ದೈವದ ಕೈಯಲ್ಲಿದ್ದರೆ ಹೋರಾಟ ನಮ್ಮ ಕೈಯಲ್ಲೇ ಇದೆ. ಒಂದೆ ಮೆಯ್ಯೊಳ್—ಏಕಾಂಗದಿಂದ, ಒಬ್ಬನೇ. ಆಂತು ಇಱಿವೆಂ—ಪ್ರತಿಭಟಿಸಿ ಯುದ್ಧಮಾಡುತ್ತೇನೆ. ಛಲ ಎಂಬ ಶಬ್ದಕ್ಕೆ ವ್ಯಾಜ, ಕೃತ್ರಿಮ ಎಂದು ಸಂಸ್ಕೃತದಲ್ಲಿ ಅರ್ಥ; ಆದರೆ ಕನ್ನಡದಲ್ಲಿ ಹಠ, ಪಟ್ಟುಹಿಡಿಯುವುದು ಎಂಬ ಅರ್ಥವೇ ರೂಢಿಯಾಗಿದೆ.

**೩೭.** ಸುರಸಿಂಧೂದ್ಭವ . . . ಸಾಯೆ: ಭೀಷ್ಮನು ಇನ್ನೂ ಮೃತನಾಗಿಲ್ಲ. ಆದರೆ ಅವನು ಶರಶಯ್ಯೆಯಲ್ಲಿ ಮಲಗಿ ಯುದ್ಧಕ್ಕೆ ಒದಗುವಂತಿಲ್ಲದ ಕಾರಣ ಅವನನ್ನು ದುರ್ಯೋಧನನು ಸತ್ತ ವೀರರ ಪಂಕ್ತಿಗೇ ಸೇರಿಸುತ್ತಾನೆ. ಸೆರಗಂ ಪಾರ್ದಪಂ ಎಂಗುಂ ಈ ಧರೆ—(ದುರ್ಯೋಧನನು) ಸಹಾಯವನ್ನು ನಿರೀಕ್ಷಿಸುತ್ತಿದ್ದಾನೆ ಎಂದು ಈ ಭೂಮಿಯ ಜನಗಳು ಎನ್ನುವರು. ಸೆರಗು—ಸಹಾಯ; ಸೆಱಗು, ಸೆಱಂಗು—ವಸ್ತ್ರ ಮೊದಲಾದವುಗಳ ಅಂಚಲ. ಪಾರ್—ನೋಡು, ನಿರೀಕ್ಷಿಸು. ಸೆರವು—ಸಹಾಯ. ಇನ್—ಇನ್ನು.

**೩೮.** ಮದವತ್‌ಕರಿಗಳ—ಮದಿಸಿದ ಆನೆಗಳ. ಬಿದುವಂ—ಕುಂಭಸ್ಥಳವನ್ನು. ವಿದಾರಣಂಗೆಯ್ದು—ಸೀಳಿ. ಕಂಠೀರವ—ಸಿಂಹ. ಒಳರೇ—ಇದ್ದಾರೆಯೆ?

**೩೮ ವ.** ಕಾಲದಂಡ°—ಯಮದಂಡದಂತೆ.

**೩೯.** ಮಹಾರಥ—ಹತ್ತುಸಾವಿರ ಮಂದಿ ಬಿಲ್ಲಾಳುಗಳ ಮೇಲೆ ಒಬ್ಬನೇ ಯುದ್ಧ ಮಾಡುವ ಶಸ್ತ್ರಾಸ್ತ್ರಪ್ರವೀಣ. ಸಮರಥ—ಅತಿರಥ ಮಹಾರಥರಿಗಿಂತ ಕೆಳಗಿನ ದರ್ಜೆಯವನು; ಒಬ್ಬ ರಥಿಕನನ್ನು ಮಾತ್ರ ಎದುರಿಸಿ ಯುದ್ಧ ಮಾಡಬಲ್ಲವನು (?).

**೩೯ ವ.** ಪಿಂಗಾಕ್ಷ—(ಕೋಪದಿಂದ) ಪಾಟಲವರ್ಣವಾದ ಕಣ್ಣುಳ್ಳವನು, ದುರ್ಯೋಧನ. °ಪರುಷ°—ಕಠಿನ.

**೪೦.** ದುರ್ಯೋಧನನನ್ನು ಸಂಧಿಗೆ ಒಪ್ಪಿಸಬೇಕೆಂಬ ಉದ್ದೇಶದಿಂದ, ನಿನಗಿಂತ ಭೀಮನು ಅಧಿಕ ಎಂದ ಸಂಜಯನ ಮಾತಿಗೆ ದುರ್ಯೋಧನನ ಕೋಪ ಮತ್ತಷ್ಟು ಉಕ್ಕುತ್ತದೆ! ಅತಿರಥ—ಅಸಂಖ್ಯರಾದ ಭಟರ ಮೇಲೆ ಯುದ್ಧ ಮಾಡುವವನು. ಆತಂ: ಇದು ಅರ್ಜುನನನ್ನು ನಿರ್ದೇಶಿಸುವಂತೆ ತೋರುತ್ತದೆ; ಅರ್ಜುನನು ಅತಿರಥನೆಂದು ಈ ಹಿಂದೆ ಸಂಜಯನು ಹೇಳಿದ್ದನು (ಗದಾಮೂ, ೩.೫೦). ಬಲಯುತಂ ಆಂ ಸಮರಥನೆಂ—ಬಲಶಾಲಿಯಾದ ನಾನು ಸಮರಥ, ಅಲ್ಲವೆ! ಮಹಾರಥ ಎಂದರೆ ದೊಡ್ಡ ಗಾಲಿಯ ರಥದವನೆಂದು ಅರ್ಥವೋ ಎಂದು ದುರ್ಯೋಧನನ ಉಪಹಾಸ.

**೪೧.** ಕಿಱಿಯಂ ಮಾಡಿದಪೆ—ಚಿಕ್ಕವನನ್ನಾಗಿ, ಅಲ್ಪನನ್ನಾಗಿ ಮಾಡುತ್ತೀಯೆ. ಪೆಱಸೊರ್ವಂ—ಇನ್ನೊಬ್ಬ. ಬಗೆವೋ—(ಬಗೆವೆ+ಓ) ಆಲೋಚಿಸುತ್ತಿರುವೆಯೋ? ಈಗ ನೀನು ಮಾಡುತ್ತಿರುವಂತೆಯೇ, ದ್ರೋಣನೂ ಭೀಷ್ಮನೂ ನನ್ನ ಬಳಿಯಲ್ಲಿದ್ದುಕೊಂಡು ಹೆರರನ್ನು ಹೊಗಳಿ ನನ್ನನ್ನು ತೆಗಳುತ್ತಿದ್ದರು!

**೪೨.** ಈ ಪದ್ಯದ ಅನ್ವಯದಲ್ಲಿ ಸ್ವಲ್ಪ ಕ್ಲೇಶವಿದೆ. ಕಲಿಸಿದೊಡೆ ಅಂತು ಅನಿತು ಅನಿತು—ಎಂದು ಪದವಿಭಾಗ. ನೃಪನಂದನಂ—(ಧೃತರಾಷ್ಟ್ರ)ರಾಜನ ಪುತ್ರ, ದುರ್ಯೋಧನ. ಅಂತುಂ ಅಂತು—ಅಂತೂ ಹಾಗೆಯೇ. ಇಲ್ಲಿ, ಕರ್ಕಶತನು ಅಂತಃಶೂನ್ಯಂ ಉನ್ನತವಂಶಂ ಎಂಬುದು ನೃಪನಂದನಂ ಎಂಬುದಕ್ಕೆ ಶ್ಲೇಷೆಯಿಂದ ಉಪಮಾನವೂ ಆಗುತ್ತದೆ, ವಿಶೇಷಣವೂ ಆಗುತ್ತದೆ. ಬಿರುಸಾದ ಮೈಯುಳ್ಳ, ಒಳಗೆ ಟೊಳ್ಳಾಗಿರುವ, ಎತ್ತರವಾದ ಬಿದಿರು ಎಂಬುದು ಉಪಮಾನಾರ್ಥ; ದುರ್ಯೋಧನನಿಗೆ ಅನ್ವಯಿಸುವಂತೆ ವಿಶೇಷಣಾರ್ಥ ಸ್ಪಷ್ಟ

ವಾಗಿದೆ. ಎತ್ತರವಾಗಿ ಬೆಳೆದ ಬಿದಿರು ಎಷ್ಟೆಷ್ಟು ತಿದ್ದಿದರೂ ಹೇಗೆ ತನ್ನ ಸಹಜಸ್ವಭಾವವನ್ನು ಬಿಟ್ಟು ಬಾಗಲಾರದೋ, ಹಾಗೆಯೇ ಎಷ್ಟೆಷ್ಟು ಬುದ್ಧಿವಾದ ಹೇಳಿದರೂ ದುರ್ಯೋಧನನು ತನ್ನ ಹಠದ ಸ್ವಭಾವವನ್ನು ಬಿಡುವುದಿಲ್ಲ ಎಂದು ಆಶಯ.

**೪೨ ವ.** 'ಮೌನಂ ಸರ್ವಾರ್ಥಸಾಧನಂ'—ಮೌನದಿಂದ ಎಲ್ಲವನ್ನೂ ಸಾಧಿಸಬಹುದು. ಎಂಬುದು—ಎಂಬುದಾಗಿ ಉಕ್ತಿಯುಂಟು. ಸ್ವಚ್ಛಂದಾನುವೃತ್ತಿ—ತನ್ನ (ಇಲ್ಲಿ, ಈತನ) ಇಷ್ಟಕ್ಕೆ ಅನುಸಾರವಾಗಿ ವರ್ತಿಸುವವನು. ನೆಗಟ್ಟುದು—ಮಾಡಬೇಕು, ನಡೆಯಬೇಕು. 'ಆರಾಧ್ಯಂ ನ ಪ್ರಕೋಪಯೇತ್'—ತಾನು ಯಾರನ್ನು ಆರಾಧಿಸಬೇಕೋ, ಮೆಚ್ಚಿಸಬೇಕೋ, ಅವನನ್ನು ರೇಗಿಸಬಾರದು. ಮೋಸಂಗೊಂಡು—ಮೌನವನ್ನವಲಂಬಿಸಿ. ಕಿಱಿದು ಬೇಗಂ—ಸ್ವಲ್ಪಹೊತ್ತು. ಸ್ವಾಮಿಹಿತವ—ತನ್ನ ದಣಿಗೆ ಹಿತವನ್ನು ಬಯಸುವವನು. ಇಲ್ಲಿಯ ಮೂರು ವಿಶೇಷಣಗಳಲ್ಲಿ ಸಂಜಯನ ಸ್ವಭಾವವನ್ನು ರನ್ನನು ಚೆನ್ನಾಗಿ ಸಂಗ್ರಹಿಸಿದ್ದಾನೆ.

**೪೩.** ಬಲದೆ ಒಳಂ ಅಶ್ವತ್ಥಾಮಂ ಬಲಂ ಒಳಂ—ಸೈನ್ಯದಲ್ಲಿ (ಇನ್ನೂ) ಅಶ್ವತ್ಥಾಮನಿದ್ದಾನೆ, ಬಲರಾಮನಿದ್ದಾನೆ. ಆಸೆಗೆಯ್ಯದೆ–ಅಪೇಕ್ಷಿಸದೆ. ವಿದ್ಯಾಬಲದಿಂ–(ಮಂತ್ರ)ವಿದ್ಯೆಯ ಸಾಮರ್ಥ್ಯದಿಂದ. ಅಶ್ವತ್ಥಾಮನನ್ನೂ ಬಲರಾಮನನ್ನೂ ಕೂಡಿಕೊಂಡು ಮಂತ್ರವಿದ್ಯೆಯನ್ನು ಉಪಯೋಗಿಸಿಕೊಂಡು ನೀನು ಯುದ್ಧಮಾಡಬೇಕು; ಏಕಾಕಿಯಾಗಿ ಕೇವಲ ಭುಜಬಲದಿಂದ ಕಾದಿದರೆ ಜಯ ದೊರೆಯುವುದಿಲ್ಲ ಎಂದು ಸಂಜಯನು ಯುಕ್ತವಾದ ಸಲಹೆ ಕೊಡುತ್ತಾನೆ. (ಆದರೆ ನೊಂದು ಕೆರಳಿದ ಅಭಿಮಾನಿ ದುರ್ಯೋಧನನು ಅದನ್ನು ಒಪ್ಪುವುದಿಲ್ಲ.)

**೪೩ ವ.** ಕಯ್ಗೆ ಮಾಟ್ಪುದು—ವಶಕ್ಕೆ, ಅಧೀನಕ್ಕೆ, ತಂದುಕೊಳ್ಳಬೇಕು.

**೪೪.** ಕಜ್ಜ—ಸಂ. ಕಾರ್ಯ. ತ್ರಿದಶನದೀಸುತ—ಭೀಷ್ಮ. ಕಳಶಸಂಭವ—ದ್ರೋಣ. ಇನಜ—ಕರ್ಣ.

**೪೫.** ದುರ್ಯೋಧನನು ಈ ಪದ್ಯದಲ್ಲಿ ಅಶ್ವತ್ಥಾಮನನ್ನೂ ಮುಂದಿನ ಪದ್ಯದಲ್ಲಿ ಬಲರಾಮನನ್ನೂ ಆಕ್ಷೇಪಿಸಿ ಮಾತಾಡುತ್ತಾನೆ. ಒಳ್ಳಿಕಯ್ದಂ—

ಒಳ್ಳೆಯದನ್ನು ಮಾಡಿದನು, ಉಪಕಾರಮಾಡಿದನು ; ಸಮಯಕ್ಕೆ ಸರಿಯಾಗಿ ಶಸ್ತ್ರವನ್ನು ತೊರೆದನು ! ಅಪ್ಪ ಮಾಡಿದ್ದಾಯಿತು, ಇನ್ನು ಮಗ ಮಾಡುವುದು ಉಳಿದಿದೆ ! ಸಮರಕ್ಷೋಣಿಯೊಳ್ ಇನ್ ಅವನ ಆಸೆಯೆ : ಅಶ್ವತ್ಥಾಮನು ತಿರುಗಿ ಯುದ್ಧರಂಗಕ್ಕೆ ಬರುವನೆಂದು ನಿನಗೆ ಇನ್ನೂ ಆಸೆಯಿದೆಯೆ ! ಮಾಣೆ ಅಣಂ—(ನಿನ್ನ ಮಾತನ್ನು) ಸ್ವಲ್ಪವೂ ನಿಲ್ಲಿಸುವುದಿಲ್ಲವಲ್ಲ ! ಕಯ್ಪೆ ಮಿಡಿಯೇಂ—ಕಹಿಸೋರೆಯ ಕುಡಿಯೇನು ಹೀಚೇನು ! ಅದರಲ್ಲಿ ಹುಟ್ಟಿದ್ದು ಇದು ; ಎರಡೂ ಕಹಿಯೇ. ಹಾಗೆಯೇ ತಂದೆಯಂತೆ ಮಗ.

**೪೬.** ಹಲಿ—ಹಲಾಯುಧ, ಬಲರಾಮ. ಆಹವಕೋಲಾಹಲದಲ್ಲಿ—(ಈ ಕಡೆ) ಯುದ್ಧದ ಕೋಲಾಹಲ ಎದ್ದಿರುವಾಗ. ತೀರ್ಥಯಾತ್ರಾಚ್ಛಲದಿಂದಂ—ತೀರ್ಥಯಾತ್ರೆಯ ನೆವದಿಂದ ; ಛಲ—ನೆವ, ವ್ಯಾಜ. ದುರ್ಯೋಧನನಲ್ಲಿ ಬಲರಾಮನಿಗೆ ತುಂಬ ಅಭಿಮಾನವಿತ್ತು. ಆದರೆ, ನಂಟರೊಳಗೆ ಎರಡು ಪಕ್ಷದವರ ಸಂಗಡವೂ ಸಮಾನವಾಗಿ ವರ್ತಿಸಬೇಕೆಂಬ ನೀತಿಯನ್ನು ಪಾಲಿಸುವುದಕ್ಕಾಗಿ ಬಲರಾಮನು ಭಾರತಯುದ್ಧದಲ್ಲಿ ಭಾಗವಹಿಸಲೊಲ್ಲದೆ ತೀರ್ಥಯಾತ್ರೆಗೆ ಹೊರಟುಹೋದನು. ಭೀಮದುರ್ಯೋಧನರಿಬ್ಬರೂ ಬಲರಾಮನಲ್ಲಿ ಗದಾವಿದ್ಯೆಯನ್ನು ಕಲಿತ ಶಿಷ್ಯರು ; ಇಬ್ಬರಲ್ಲೂ ಒಂದೇ ಬಗೆಯ ಪ್ರೀತಿ ತನಗುಂಟೆಂದು ಅವನು ಹೇಳುತ್ತಾನೆ (ಮಹಾಭಾ, ೫. ೧೫೪).

**೪೭.** ಮಡಿವೊಡೆ—ಹತವಾಗುವುದಾದರೆ. ಪಗೆ—ಶತ್ರುವರ್ಗ. ಮೇಣ್—ಅಥವಾ. ಪೆಱಪೆಱರಿಂ—ಬೇರೆ ಬೇರೆಯವರಿಂದ, ಮಿಕ್ಕವರಿಂದ. "ಆನುಂ ದುಶ್ಶಾಸನನುಂ ನೀನುಂ ಮೂವರೆ ದಲ್" ಎಂಬ ದುರ್ಯೋಧನೋಕ್ತಿಯನ್ನು ಹೋಲಿಸಿ (ಗದಾಸಂ, ೫. ೨೯).

**೪೮.** ಕಡುಗೂರಿತು ಅಕ್ಕುಂ ಉಕ್ಕಿನೊಳ್ ಒಡಗೂಡಿದ ಪಚ್ಚೆ—ಸಹಜವಾಗಿ ಮಿದುವಾಗಿರುವ ಪಚ್ಚೆ(=ಹಸಿಯ)ಕಬ್ಬಿಣವು ಉಕ್ಕಿನೊಂದಿಗೆ ಬೆರೆದಾಗ ಹದಗೊಂಡು ತಾನೂ ಹರಿತವಾಗುತ್ತದೆ. ಬೇಱೆ ಕೂರ್ಪಿಲ್ಲ—ಅದಕ್ಕೇ ಸ್ವತಂತ್ರವಾದ ಹರಿತವಿಲ್ಲ. ಆರುಂ ತೊಡರ್ದು ಇಱಿವರ್ ಅರ್ಕನಂದನನೊಡನೆ—ಕರ್ಣನೊಡನೆ ಸೇರಿಕೊಂಡಾಗ ಯಾರು ಬೇಕಾದರೂ

ಶೌರ್ಯತೋರಿಸಿ ಕಾದುವರು. ಇಲ್ಲದೆ—(ಅವನ) ಬೆಂಬಲವಿಲ್ಲದೆ. ಕೂರಿದರ್—ಶೂರರು. ಕರ್ಣನು ಸ್ವಯಂ ಶೂರನೇ ಅಲ್ಲದೆ, ಸಾಮಾನ್ಯರಲ್ಲಿ ಕೂಡ ಶೌರ್ಯೋತ್ಪಾದನೆ ಮಾಡುವ ಮಹಾಮಹಿಮನೆಂದು ಸೂಚನೆ.

**೪೯.** ಕಾನೀನಂ—ಕನ್ಯಾಪುತ್ರ, ಎಂದರೆ ಕರ್ಣ. ಅಟಿದ ಇೞ ಬಟಿಕ್ಕೆ—ತೀರಿಹೋದ ಆ ಬಳಿಕ. ಪೆಱತು—ಬೇರೆ (ದಾರಿ). ಆನೆ—ನಾನೇ. ಕರ್ಣ ದ್ರೋಣ ಭೀಷ್ಮರು ಗತಿಸಿದ ಬಳಿಕ ನನಗೆ ಗತ್ಯಂತರವೇ ಇಲ್ಲ; ನಾನೇ ಸೇನಾಪತಿಯಾಗಬೇಕು. ಆದರೆ ನನಗೆ ಅಭಿಷೇಕ ಮಾಡುವವರು ಬೇರೆ ಯಾರಿದ್ದಾರೆ? ಮಡಿದವರಿಗಾಗಿ ನಾನು ಸುರಿಸುತ್ತಿರುವ ಕಣ್ಣೀರಿನಿಂದ ನನಗೆ ನಾನೇ ಸೇನಾಪತಿಪದವಿಯ ಅಭಿಷೇಕವನ್ನು ಮಾಡಿಕೊಳ್ಳುತ್ತೇನೆ!

**೫೦.** ಕರ್ಣದುಶ್ಶಾಸನರ ಮಾತು ಬಂದದ್ದರಿಂದ ದುರ್ಯೋಧನನ ಭಾವೋದ್ರೇಕ ಬೇರೆ ದಿಕ್ಕಿಗೆ ಹರಿಯುತ್ತದೆ. ಅತ್ಯಂತ ಪ್ರಿಯರಾದ ಇವರಿಗಾಗಿ ಅವನು ಶೋಕಿಸುತ್ತಾ ಮುಂದಿನ ಕೆಲವು ಪದ್ಯಗಳ ಸರಳವಾದ, ಆದರೆ ಆಳವಾದ, ನುಡಿಗಳಿಂದ ನಮ್ಮ ಹೃದಯವನ್ನು ಕರಗಿಸುತ್ತಾನೆ.

ಇರ್ವರುಂ: "ಯುವರಾಜನುಂ ಅಂಗರಾಜನುಂ." ಯುವರಾಜ—ದುಶ್ಶಾಸನ. ಕಣ್ಗಳನ್ನರೆ—ಕಣ್ಣುಗಳಂಥವರೇ ಸರಿ. ನನ್ನ ಬಲ ಅವರೇ, ನನ್ನ ಅರಿವು ಅವರೇ! ಪೋರೆನೆ: ಅವರನ್ನು ಕಳೆದುಕೊಂಡಮೇಲೆ ನಾನು ಯುದ್ಧ ಮಾಡದೆ ಮತ್ತೇನು ಮಾಡಲಿ? ಮಾನಸವಾಡೇ: (ಲೋಕರೂಢಿಯ) ಮನುಷ್ಯ ಜೀವನವನ್ನು ನಾನು ಇನ್ನು ಬಾಳಬಹುದೇ? ಮಾನಸ—ಸಂ. ಮಾನುಷ.

**೫೧.** ಕಟಿದಂ—ತೀರಿಹೋದನು. ತುಟಿಲಾಳ್ಗಳಂ—ಯುದ್ಧವೀರರನ್ನು. ಕಟಿಪಿ—ಕಳಿಸಿಕೊಟ್ಟು. ಕಟಿ ಧಾತುವಿಗೆ ದೂರಕ್ಕೆ ಹೋಗು, ತೀರಿಹೋಗು ಎಂಬ ಎರಡು ಅರ್ಥಗಳೂ ಉಂಟು. ನಂಬಿದಿರೇ—ನೀವು ನಂಬಿದಿರಾ?

**೫೨.** ಬೀಡು—ಸೇನೆಯ ವಸತಿ.

**೫೩.** ಇಱಿಸಿ—ಕೊಲ್ಲಿಸಿ. ನಮ್ಮ ಅಂಧನರೇಂದ್ರನ—ಧೃತರಾಷ್ಟ್ರನ. ಆವ ಮೊಗದೊಳೆ—ಯಾವ ಮುಖ ಇಟ್ಟುಕೊಂಡು.

**೫೩ ವ.** ಸರ್ವಾಂಗವಿಕಳರ್—ದೇಹದ ಆದ್ಯಂತವೂ ಶೋಕ ತುಂಬಿ ಸ್ವಸ್ಥತೆಯನ್ನು ಕಳೆದುಕೊಂಡವರು. ಮನಃಕ್ಷತಮಂ ಆಱಸಲ್ ಬೇೞ್ಪುದು—ಮನೋವ್ಯಥೆಯನ್ನು ಶಮನಮಾಡಬೇಕು.

**೫೪.** ಈ ಪದ್ಯಕ್ಕೆ ಪಂಪಭಾ, ೧೩. ೭ ಪದ್ಯ ನೇರವಾಗಿ ಪ್ರೇರಕವೆಂದು ಹೇಳಬಹುದು. ಸವಳದೆ—ಪ್ರಾತಃಕಾಲ; ಭಾರತಯುದ್ಧದ ದಿನಗಣನೆಯ ಪ್ರಕಾರ, ಅದೇ ದಿನದ ಪ್ರಾತಃಕಾಲವಲ್ಲ, ಅದರ ಹಿಂದಿನ ದಿನದ್ದು. ಗುರುಜನದಲ್ಲಿಗೆ—ತಂದೆತಾಯಿಗಳ ಬಳಿಗೆ.

**೫೫.** ಪತಿ . . . ಜನ—ಗಂಡಂದಿರನ್ನು ಕಳೆದುಕೊಂಡ ಶೋಕದಿಂದ ವಿಹ್ವಲರಾದ ರಾಜಸ್ತ್ರೀಯರು. ಎನ್ನ ಇರ್ಪ ಇರವಿಂದೆ—ನಾನು ಇರುವ ಸ್ಥಿತಿಯಲ್ಲಿ. ಲಜ್ಜಿತನೆಂ, ಅತಿದುಃಖಿತನೆಂ: ಇಲ್ಲಿ -ಎೞ ಎಂಬ ಆಖ್ಯಾತ ಪ್ರತ್ಯಯದ ಪ್ರಯೋಗವನ್ನು ಗಮನಿಸಿ.

**೫೫ ವ.** °ಬಲವಿಕಳನಾಗಿ—ಸೇನೆಯನ್ನು ಕಳೆದುಕೊಂಡು. ಸಪ್ತಾಂಗ ರಾಜ್ಯಸಮಾಲಿಂಗಿತನಾಗಿ—ರಾಜ್ಯದ ಸಪ್ತಾಂಗದಲ್ಲಿ ತಾನೊಬ್ಬನೇ ಉಳಿದು ಎಲ್ಲವೂ ತನ್ನಲ್ಲೇ ಸಮಾವೇಶವಾಗಿ (?). ಪ್ರಭು, ಅಮಾತ್ಯ, ಮಿತ್ರ, ಬೊಕ್ಕಸ, ರಾಷ್ಟ್ರ, ದುರ್ಗ, ಸೇನೆ—ಇವು ರಾಜ್ಯದ ಸಪ್ತಾಂಗಗಳು. ಆಪ್ತಚರರ್—ಆಪ್ತರಾದ ಚಾರರು. ಆರಯ್—ವಿಚಾರಿಸು.

**೫೬.** ಮೂರ್ಧಾಭಿಷಿಕ್ತನಯ್—ನೀನು ಶಾಸ್ತ್ರೋಕ್ತವಾಗಿ ರಾಜ್ಯಾಭಿಷೇಕ ಮಾಡಿಸಿಕೊಂಡವನು. ಮೂಱುಂ ಬೆಳ್ಗೊಡೆಯ—ಮೂರು ಶ್ವೇತಚ್ಛತ್ರಗಳ. (ಜಿನನಿಗೆ ಮೂರು ಶ್ವೇತಚ್ಛತ್ರಗಳುಂಟೆಂಬುದು ಪ್ರಸಿದ್ಧ ವಿಷಯ; ಚಕ್ರವರ್ತಿಗೂ ಉಂಟೇ ಎಂಬುದನ್ನು ವಿಚಾರಮಾಡಬೇಕಾಗಿದೆ.) ಹಿಂದೆ ನೀನು ಚಕ್ರವರ್ತಿಚಿಹ್ನೆಗಳಿಂದ ಕೂಡಿ ಎಷ್ಟು ದೂರದಿಂದಲಾದರೂ ಗೋಚರಿಸುತ್ತಿದ್ದೆ; ಈಗಲಾದರೆ, ಆ ವೈಭವ ಹೋಗಲಿ, ನೀನಿರುವ ಜಾಗ ಕೂಡ ನಮಗೆ ಗೊತ್ತಾಗದಂತೆ ಆಗಿಹೋಯಿತಲ್ಲ ಎಂದು ತಾಯಿತಂದೆಗಳು ಮರುಗುತ್ತಾರೆ.

**೫೬ ವ.** ಪಟಯಿಸು—ಪ್ರಲಾಪಿಸು. ಸರ—ಸಂ. ಸ್ವರ. ಉದ್ಧೃತ ಗೋತ್ರಾಭಿಮುಖಂ: ಇದಕ್ಕೆ ಸರಿಯಾಗಿ ಅರ್ಥವಾಗುವುದಿಲ್ಲ; ಪಾಠದೋಷ

ವಿರಬಹುದು. ಇಲ್ಲಿ ಶ್ಲೇಷವಿದೆ: ಗೋತ್ರ ಎಂದರೆ ವಂಶ ಎಂದೂ ಬೆಟ್ಟ ಎಂದೂ ಅರ್ಥ. ತನ್ನ ವಂಶದವರ, ಎಂದರೆ ಹಿರಿಯರ, ಹೆಸರನ್ನು ಎತ್ತುತ್ತಲೂ, ತಲೆಯೆತ್ತಿ ನಿಂತ ಬೆಟ್ಟಕ್ಕೆ ವಜ್ರಾಯುಧದ ಪೆಟ್ಟು ಬಿದ್ದರೆ ಹೇಗೋ ಹಾಗೆ, ದುರ್ಯೋಧನನು ನಾಚಿಕೆಯಿಂದ ತಲೆತಗ್ಗಿಸಿದನೆಂದು ಭಾವವೆಂದು ತೋರುತ್ತದೆ. ಸಿಗ್ಗಾಗಿ—ನಾಚಿಕೆಪಟ್ಟು.

೫೭. ಇಕ್ಕಿ—ಹೊಡೆದು ಬೀಳಿಸಿ. ಗೆಲ್ದ ಒಸಗೆ—ವಿಜಯಮಂಗಳ. ತೂರ್ಯಸ್ವನಂ ಪೊಣ್ಮೆ—ವಾದ್ಯವಿಶೇಷಗಳ ಶಬ್ದ ಹೊಮ್ಮಲು. ವಿಧಾತ್ರ—ಓ ವಿಧಿಯೆ; ಸಂ. ವಿಧಾತೃ. ಬೀೞುವ ಅಶ್ರುಮುಖರಂ—ಬೀಳುವ ಕಣ್ಣೀರಿನಿಂದ ಕೂಡಿದ ಮುಖವುಳ್ಳವರನ್ನು. ಬೀೞುವ: ಇದು ಹಳಗನ್ನಡದಲ್ಲಿ ಬೀೞ್ವ ಎಂದಾಗಬೇಕು; ಆದರೆ ರನ್ನನು ಬೀೞು ಎಂದು ಉಕಾರಾಂತವಾಗಿ ಧಾತುವನ್ನು ಪ್ರಯೋಗಿಸಿರುವುದಕ್ಕೆ ಇನ್ನೊಂದು ನಿದರ್ಶನವುಂಟು: "ಬೀೞುವಿನಂ ಕಣ್ಣುಳ್ಕೆ . . ." (ಅಜಿತಪು, ೬. ೪೬).

೫೮. ಎಲ್ಲಿದರ್—ಎಲ್ಲಿರುವವರು, ಎಂದರೆ, ಎಲ್ಲಿ? ಬೆಸಗೊಂಡೊಡೆ—ಕೇಳಿದರೆ. ಇಲ್ಲಿ 'ಕಂದ' ಎಂಬ ಅತಿಕೋಮಲವಾದ ಸಂಬೋಧನೆ ದುರ್ಯೋಧನನ ಶೋಕಕ್ಕೆ ಅತ್ಯಂತಪೋಷಕವಾಗಿ ಕರುಣರಸವನ್ನು ಉಕ್ಕಿಸುತ್ತದೆ. ಕೌಂತೇಯರ್ (= ಕುಂತಿಯ ಮಕ್ಕಳು) ಎಂಬ ಪದದ ಪ್ರಯೋಗವೂ ಅರ್ಥವತ್ತಾಗಿದೆ.

೫೯. ಮಿಗೆ—ಮಿತಿಮೀರಲು. ಅವಿರಳಬಾಷ್ಪೋದ್ರೇಕಂ—ಒತ್ತೊತ್ತಿ ಉಕ್ಕಿಬರುವ ಕಂಬನಿಯುಳ್ಳವನು. ಹಾ ದುಶ್ಶಾಸನ ಹಾ ಕರ್ಣಾ: ಇವರಿಬ್ಬರು ದುರ್ಯೋಧನನ ಹೃದಯವನ್ನು ಹೇಗೆ ತುಂಬಿದ್ದರೆಂಬುದಕ್ಕೆ ಗದಾಯುದ್ಧದಲ್ಲಿ ಹೆಜ್ಜೆ ಹೆಜ್ಜೆಗೂ ಮನೋವೇಧಕವಾದ ನಿದರ್ಶನಗಳಿವೆ.

## ೪. ಧೃತರಾಷ್ಟ್ರವಚನಂ

**೦ ವ.** ಶಿಶಿರೋಪಚಾರ°—ಶೈತ್ಯೋಪಚಾರ. ಅಳ್ಕಿ ಬಳ್ಕಿ—ಹೆದರಿ ಬೆದರಿ. ನನೆಕೊನೆವೋಗು, ನನೆಕೊನೆಯೇೞು—ಈ ಧಾತುಗಳಿಗೆ ಚಿಗುರು, ಚಿಗುರಿ ಮೊಗ್ಗಾಗು, ಪುಳಕಿಸು ಎಂದು ಅರ್ಥವಾಗುತ್ತದೆ (ಯಶೋಧರಚರಿತೆ, ೩.೩; ರಾಜಶೇಖರವಿಳಾಸ, ೪. ೬, ೪. ೮೩; ಪಂಪರಾಮಾಯಣ, ೫. ೫೦). ಪ್ರಕೃತ ಸಂದರ್ಭದಲ್ಲಿ, ನನೆಕೊನೆವೋಗಿ ಎಂದರೆ (ಅತಿಭಯದಿಂದ) ಮೈನವಿರೆದ್ದು ಎಂದು ಅರ್ಥಮಾಡಬೇಕಾಗುತ್ತದೆ.

**೧.** ವೃಗ        ವಲ್ಲಿಗೆ—ಚಂದ್ರವಂಶದ ಸಂಪತ್ತೆಂಬ ಬಳ್ಳಿಗೆ. ಅಡರ್ಪು—ಏರಲು ಆಸರೆ. ಲಯಕಾಲಭೀಮೋರಗಂ—ಪ್ರಳಯಕಾಲದ ಭಯಂಕರಸರ್ಪ; ಭೀಮನೇ ಆ ಸರ್ಪವೆಂದು ಇಲ್ಲಿಯ ಶಬ್ದಪ್ರಯೋಗದಿಂದ ಸೂಚಿತವಾಗುತ್ತದೆ. ದುರ್ಯೋಧನನು ಮೂರ್ಛೆಹೋಗಿರುವುದನ್ನು ಮರಣವೆಂದು ಭಾವಿಸಿ ಅವನ ತಾಯಿತಂದೆಗಳು ಶೋಕಿಸುತ್ತಾರೆ.

**೨.** ಅಂಧಯಷ್ಟಿ—ಕುರುಡರ (ಊರೆ)ಗೋಲು. ನೀನ್ ಉಳ್ಳೊಡೆ ಎಲ್ಲರ್ ಒಳರ್ ಎಂದು—ನೀನೊಬ್ಬನು ಬದುಕಿದ್ದರೆ, ಈಗ ತೀರಿಹೋಗಿರುವ ಮಕ್ಕಳೆಲ್ಲರೂ ಬದುಕಿದ್ದಹಾಗೆಯೆ ಸರಿ ಎಂದು. °ಅನಿಮಿತ್ತರಿಪು—ನಿಷ್ಕಾರಣವೈರಿ. ಪಾಶಪಾಣಿ—ಯಮ.

**೩.** ಪರಕೆ—ಹರಕೆ, ಆಶೀರ್ವಾದ. ಮೋನ—ಸಂ. ಮೌನ.

**೪.** ಇಲ್ಲಿ ಹೇಳಿರುವವರು ಧೃತರಾಷ್ಟ್ರ ಗಾಂಧಾರಿಗಳ ಇತರ ಮಕ್ಕಳಲ್ಲಿ ಕೆಲವರು.

**೪ ವ.** ಕವಿದು ಬಿೞ್ದು—ಮಗುಚಿಕೊಂಡು ಬಿದ್ದು.

**೫.** ಕಾಯ್ದು—ಕೋಪಿಸಿಕೊಂಡು; ಧಾ. ಕಾಯ್. ಮಾಯ್ದ—ಕೆಟ್ಟ.

**೫ ವ.** ವಿಪ್ರಲಾಪ—ರೋದನ. ಸಮಾಹಿತ°—ಸಮಾಧಾನಗೊಳಿಸಿದ.

**೬.** ಪರಿವೀಜನ—ಬೀಸಣಿಗೆಯಿಂದ ಬೀಸುವುದು. ದುರ್ಯೋಧನನನ್ನು ಎಚ್ಚರಗೊಳಿಸುವಲ್ಲಿ, ತಾಯಿತಂದೆಗಳ ಕಣ್ಣೀರೇ ಮೈಮೇಲೆ ಚಿಮುಕಿಸುವ

ನೀರಾಯಿತು, ಅವರು ನಿಟ್ಟುಸಿರು ಬಿಡುವುದೇ ಬೀಸಣಿಗೆ ಹಾಕುವುದಾಯಿತು; ಸಂಜಯನ ಶೈತ್ಯೋಪಚಾರಕ್ಕೆ ಏಳದವನು ತಾಯಿತಂದೆಗಳ ಶೋಕೋದ್ರೇಕದ ಬೇಗೆ ತಟ್ಟಿ ಎಚ್ಚತ್ತನು.

**೬ ವ.** ಶಿರಮಂ ಆನತಂ ಮಾಡೆ—ತಲೆ ತಗ್ಗಿಸಲು. °ಉತ್ತಮಾಂಗ—ಶಿರಸ್ಸು. ತೆಬ್ಬರಿಸು—ಚೇತರಿಸಿಕೊಳ್ಳುವಂತೆ ಮಾಡು. ಮನಃಕ್ಷತಶರೀರನಂ—ಮನೋವ್ಯಥೆಯಿಂದ ಕೂಡಿದ ಶರೀರವುಳ್ಳವನನ್ನು (?); ಕ್ಷತಮನಃಶರೀರನಂ ಎಂದು ಇಲ್ಲಿಯ ಮೂಲಪಾಠವಿರಬಹುದೆ? ಕಿಱಿದಾನುಂ ಬೇಗದಿಂ—ಸ್ವಲ್ಪ ಹೊತ್ತಿನಲ್ಲೇ. ವಿಗತ . . . ಮಾಡಿ—(ಗೋಪ್ಯದ ಮಾತನ್ನಾಡುವ ಉದ್ದೇಶದಿಂದ) ಪರಿವಾರದವರನ್ನೆಲ್ಲ ಅಲ್ಲಿಂದ ಕಳಿಸಿಬಿಟ್ಟು.

**೭.** ಇಂಬುಕಯ್ವಂ ಎಮಗೆ ಇನ್ನುಂ—ಇಂದಿಗೂ ಕೂಡ ನಮ್ಮ ಮಾತನ್ನು ಒಪ್ಪಿಕೊಳ್ಳುತ್ತಾನೆ. ಸಮಕೊಳಿಸಲ್ಕೆ—ನೇರ್ಪಡಿಸುವುದಕ್ಕೆ. ಅಟ್ಟುವೆ—(ನಾನು) ಕಳಿಸುತ್ತೇನೆ; ಇಲ್ಲಿ -ಎೞ್ ಎಂಬ ಉತ್ತಮವು. ಪ್ರತ್ಯಯದ ಅಂತ್ಯವರ್ಣ ಲೋಪವಾಗಿರುವುದನ್ನು ಗಮನಿಸಬೇಕು. ಕಾಲ್ವಿಡಿದು ಎಂಬುದೇ ಇಲ್ಲಿ ಸರಿಯಾದ ಪಾಠ; ಧೃತರಾಷ್ಟ್ರನ ಭಾವತೀವ್ರತೆಯನ್ನು ಅದು ತೋರಿಸುತ್ತದೆ. ಅಂಧನೃಪಾಲ: ಈ ಪ್ರಥಮಾವಿಭಕ್ತಿಯ ಪದದ ಅಂತ್ಯಬಿಂದು ಲೋಪವಾಗಿದೆ (ಗದಾಸಂ, ೧. ೮ ನ್ನು ಹೋಲಿಸಿ).

**೭ ವ.** ಅಭ್ಯರ್ಥಿಸಿ—ಪ್ರಾರ್ಥಿಸಿ.

**೮.** ಭೀಮನನ್ನು ಆಶ್ರಯಿಸಲು ಐಶ್ವರ್ಯಸಂಪತ್ತೂ ವಿಜಯಸಂಪತ್ತೂ ಸವತಿಯರಂತೆ ಹುರುಡಿಸುತ್ತಿವೆ; ಎಂದರೆ, ಎರಡೂ ಒಂದೇ ಬಗೆಯಾಗಿ ಅವನಲ್ಲಿ ಸಮೃದ್ಧಿಗೊಂಡಿವೆ ಎಂದು ಭಾವ. °ಅವಷ್ಟಂಭ—ಅವಲಂಬನ. ಜಯಾವಸಥ—ವಿಜಯಕ್ಕೆ ನೆಲೆಮನೆಯಾದವನು.

**೮ ವ.** ಸಮರಾನುಬಂಧ—ಯುದ್ಧಸಂಬಂಧ, ಯುದ್ಧಪ್ರಸಕ್ತಿ. ಎನ್ನ ಎಂಬುದಂ—ನಾನು ಹೇಳುವುದನ್ನು. ಸಮಭ್ಯರ್ಥಿಸಿ—ಸಮರ್ಥಿಸಿ.

**೯.** ಪರಿಣತವಯಸರೆಂ—ನಾವು ತುಂಬುವಯಸ್ಸಿನವರು. ಇರ್ಕಣ್ಣುಗ್ಗುರುಡರೆಂ—ನಾವು ಎರಡು ಕಣ್ಣೂ ಕುರುಡಾದವರು. ಧೃತರಾಷ್ಟ್ರನು

ಹುಟ್ಟುಗುರುಡ; ಪತಿಯನನ್ನು ಸರಿಸಿ ಗಾಂಧಾರಿಯೂ ತನಗೆ ಕಣ್ಣು ಕಾಣಿಸ ದಂತೆ ಬಟ್ಟೆಯನ್ನು ಕಟ್ಟಿಕೊಂಡಿದ್ದಳಂತೆ (' ಊರುಭಂಗ ', ೪೦ ನ್ನು ನೋಡಿ). ಗುರು ಎಂಬುದು—"ಗುರುಗಳ ಮಾತು ಮೀರತಕ್ಕದ್ದಲ್ಲ" ಎಂದು ಉಕ್ತಿಯುಂಟು. ಈ ಪದ್ಯ ಕಾವ್ಯಾವಲೋಕನದಲ್ಲಿ ಉದಾಹೃತವಾಗಿದೆ (ಪ. ೧೯೧).

**೧೦.** ಈ ಒಬ್ಬ ಮಗನನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ಮಿಕ್ಕೆಲ್ಲ ಮಕ್ಕಳ ಹಂಬಲನ್ನೂ ತೊರೆಯಲು ಗಾಂಧಾರಿ ಪ್ರಯತ್ನಿಸುತ್ತಾಳೆ; ಆದರೆ ದುಃಖ ಒತ್ತಿ ಬರುತ್ತದೆ (ಮುಂದಿನ ವಚನವನ್ನು ನೋಡಿ).

**೧೦ ವ.** ಮತ್ತಿನ—(ಈಗ ತೀರಿಹೋಗಿರುವ) ಇತರ. ಜಡಿ—ಗದರಿಸು.

**೧೧.** ಸಂತಯಿಸುವುದು ಅದುಗೆಟ್ಟು—(ನೀನು) ಸಂತೈಸಬೇಕು; ಅದನ್ನು ಬಿಟ್ಟು. ಗಳ=ಗಡಾ.

**೧೨.** ನೂರು ಮಂದಿ ವೀರರ ತಾಯಿ ಎಂದು ಹೆಸರು ಪಡೆದಿದ್ದ ಈ ಗಾಂಧಾರಿಗೆ ಈಗ ನೂರು ದುಃಖಗಳ ತಾಯಿ ಎಂದು ಹೆಸರು ಬಂದಿತು; ಒಬ್ಬೊಬ್ಬ ಮಗನೂ ಯುದ್ಧದಲ್ಲಿ ಮಡಿದು ಒಂದೊಂದು ದುಃಖವಾಗಿ ಪರಿಣಮಿಸಿದನು. ಹಾ ವೀರಶತಪ್ರಸವಿನೀ ಹತಗಾಂಧಾರೀ ದುಃಖಶತಂ ಪ್ರಸೂತಾ ನ ಪುನಃ ಸುತಶತಂ" ಎಂದು ವೇಣಿಸಂಹಾರದಲ್ಲಿ (ಅಂಕ ೫) ಬರುವ ಗಾಂಧಾರಿಯ ಮಾತನ್ನೂ, "ತನಯಶತಮಾದುದಲ್ತೆನಗನಿವಾರಿತ ದುಃಖಶತಮೆ ತಾನಾದುವು" ಎಂದು ಪಂಪಭಾರತದಲ್ಲಿ (೧೪. ೮) ಬರುವ ಧೃತರಾಷ್ಟ್ರನ ಮಾತನ್ನೂ ಹೋಲಿಸಿ.

**೧೩, ೧೪.** ಈ ಎರಡು ಪದ್ಯಗಳ ಪಾಠದಲ್ಲೂ ಕ್ಲೇಶಗಳುಂಟು; ತಾತ್ಕಾಲಿಕವಾಗಿ ಕೆಲವು ತಿದ್ದುಪಾಡುಗಳನ್ನು ಮಾಡಿಕೊಳ್ಳಲಾಗಿದೆ.

ಧೃತರಾಷ್ಟ್ರನು ಶೋಕವನ್ನು ಒತ್ತಟ್ಟಿಗಿರಿಸಿ, ಸಂಧಿಯ ಕಡೆಗೆ ದುರ್ಯೋಧನನನ್ನು ತಿರುಗಿಸಿಕೊಳ್ಳಲು ಇನ್ನು ಪ್ರಯತ್ನಿಸುತ್ತಾನೆ. ಭವದನುಜಕ್ಷಯಮಂ—ನಿನ್ನ ತಮ್ಮಂದಿರ ನಾಶವನ್ನು. ಧಾತ್ರಿವಲ್ಲಭಂ—ರಾಜ, ಧರ್ಮರಾಯ. ಶೋಕಾರ್ತಿವಹಂ—ಶೋಕದ ವ್ಯಥೆಯನ್ನು ತಾಳಿದವನಾಗಿ, ಶೋಕ

ಭಾರದಿಂದ ಕೂಡಿ. ಅವನ ಆ ಕೃತಕಪ್ರತಿಜ್ಞೆಯಂ—ಅವನು ಹೂಡಿರುವ ಆ ಪ್ರತಿಜ್ಞೆಯನ್ನು; ಕೃತಕ=ಕೃತ. ನಿನ್ನ ತಮ್ಮಂದಿರೆಲ್ಲರೂ ಯುದ್ಧದಲ್ಲಿ ಮಡಿದು ಹೋದದ್ದನ್ನು ಕಂಡು, ತನ್ನ ತಮ್ಮಂದಿರಿಗೂ ಎಲ್ಲಿ ಅದೇ ಗತಿ ಒದಗುವುದೋ ಎಂದು ಧರ್ಮರಾಯನಿಗೆ ಭಯ. ಅವರನ್ನು ಉಳಿಸಿಕೊಳ್ಳುವುದಕ್ಕಾದರೂ ಅವನು ಸಂಧಿಗೆ ಒಪ್ಪುತ್ತಾನೆ. ಅಲ್ಲದೆ, ತನ್ನ ತಮ್ಮಂದಿರಲ್ಲಿ ಯಾರೊಬ್ಬರು ಸತ್ತರೂ ತಾನು ಅಗ್ನಿಪ್ರವೇಶಮಾಡುವುದಾಗಿ ಅವನು ಪ್ರತಿಜ್ಞೆ ಹಿಡಿದಿದ್ದಾನೆ. ಸಮರದೊಳ್ ಅದೃಷ್ಟವಶದಿಂ ಸಮವಾಯಂ—ಯುದ್ಧ ನಡೆಯುವಲ್ಲಿ, ಒಬ್ಬರನ್ನೊಬ್ಬರು ಅಗಲದಿರುವುದು, ಎಂದರೆ ಎಲ್ಲರೂ ಬದುಕಿರುವುದು, ಅದೃಷ್ಟಾಧೀನ; ಮನುಷ್ಯನ ಆಲೋಚನೆಯಂತೆ ಅದು ನಡೆಯುವುದಿಲ್ಲ. ನಾಲ್ವರ್ ಅನುಜರೊಳ್ ಒರ್ವಂ ಸಾಯೆ ಯಮನಂದನಂ ಯಮಭವನಾತಿಥಿ ಅಪ್ಪಂ—ಎಂದು ಅನ್ವಯ. ಯಮಪುತ್ರನು ಯಮನ ಮನೆಯ ಅತಿಥಿ ಯಾಗುವನು, ಎಂದರೆ ಪ್ರಾಣತ್ಯಾಗಮಾಡುವನು. ಅದಱಿಂ . . . ಭಯಮೇ—ಆದಕಾರಣ ಅವನಿಗೂ (ಯುದ್ಧವಿಷಯದಲ್ಲಿ) ಅಂಜಿಕೆಯೇ ಉಂಟು.

**೧೫.** ನೃಪಪತಿಯುಕ್ತಂ ಇದಂ—ರಾಜೇಂದ್ರರಿಗೆ ತಕ್ಕದ್ದಾದ ಇದನ್ನು, ರಾಜನೀತಿಗೆ ಅನುಸಾರವಾದ ಈ ಸಲಹೆಯನ್ನು. "[ಉ]ಪಪ[ತ್ತಿ]ಯುಕ್ತ[ಮಂ] ನೀಂ" ಎಂದು ಇಲ್ಲಿಯ ಮೊದಲನೆಯ ಪಾದದ ಪಾಠವಿರಬಹುದೆ? ವೇಣೀಸಂಹಾರದಲ್ಲಿ (೫ನೆಯ ಅಂಕದಲ್ಲಿ) ಈ ಸಂದರ್ಭದಲ್ಲಿ ಬರುವ "ಜಾತ ಉಪಪತ್ತಿಯುಕ್ತಂ ಪ್ರತಿಪದ್ಯಸ್ವ ಪಿತುರ್ವಚನಂ" ಎಂಬ ಗಾಂಧಾರಿಯ ವಾಕ್ಯವನ್ನು ಹೋಲಿಸಿ. ಉಪಪತ್ತಿ—ಯುಕ್ತಿ. ನಿಮ್ಮಯ . . . ಸಿದ್ಧಾಂತಂ: ಪ್ರತಿಪಕ್ಷದವನು ಎತ್ತುವ ಆಕ್ಷೇಪಣೆಗೆ ಪೂರ್ವಪಕ್ಷವೆಂದೂ ಅದಕ್ಕೆ ಸಮಾಧಾನ ಹೇಳಿ ಕೊನೆಯಲ್ಲಿ ಮಾಡುವ ನಿರ್ಣಯಕ್ಕೆ ಸಿದ್ಧಾಂತವೆಂದೂ ಹೆಸರು. ನೀವು ಸಂಧಿಗೆ ಅನುಕೂಲವೆಂದು ಯಾವುದನ್ನು ಹೇಳುತ್ತೀರೋ ಅದೇ ಸಂಧಿ ಕೂಡದೆಂಬ ನನ್ನ ಸಿದ್ಧಾಂತಕ್ಕೆ ಅನುಕೂಲವಾಗುತ್ತದೆ ಎಂದು ದುರ್ಯೋಧನನ ಅಭಿಪ್ರಾಯ. ತನ್ನ ತಮ್ಮಂದಿರು ಯುದ್ಧದಲ್ಲಿ ಮಡಿಯ ಬಹುದೆಂದು ಹೆದರಿ ಧರ್ಮರಾಯನು ಸಂಧಿಗೆ ಒಪ್ಪುವನೆಂದೂ ಆದಕಾರಣ ಸಂಧಿಮಾಡಿಕೊಳ್ಳಲು ಇನ್ನೂ ಅನುಕೂಲವುಂಟೆಂದೂ ಧೃತರಾಷ್ಟ್ರನು

ಹೇಳಿದನು ; ಈ ಕಾರಣವೇ ನನ್ನ ಯುದ್ಧನಿಶ್ಚಯಕ್ಕೆ ಪುಷ್ಟಿಕೊಡುವುದೆಂದು ದುರ್ಯೋಧನನ ಉತ್ತರ. ಇದು ಹೇಗೆಂಬುದನ್ನು ಮುಂದಿನ ಪದ್ಯದಲ್ಲಿ ವಿಶದಪಡಿಸುತ್ತಾನೆ. ವಲಂ—ನಿಶ್ಚಯವಾಗಿ.

**೧೬.** ಪೆಸರ ನಾಲ್ವರೊಳ್—ಹೆಸರುವಾಸಿಯಾದ ನಾಲ್ಕು ಮಂದಿಯಲ್ಲಿ. ಒರ್ವರುಂ—ಒಬ್ಬನೇ ಕೂಡ; ಒಬ್ಬನು ಕೂಡ. ಅಟಿಯಾಸೆಯಂ—ವ್ಯರ್ಥವಾದ ಆಸೆಯನ್ನು. ಬಿಸುಡಿಂ—ನೀವು ಬಿಟ್ಟುಬಿಡಿ. ಎನ್ನವರ್ ಆದುದಂ ಆಗದಿರ್ಪೆನೇ—ನನ್ನವರಿಗೆ ಯಾವ ಗತಿ ಒದಗಿತೋ ಅದನ್ನೇ ನಾನೂ ಹೊಂದದೆ ಇರುತ್ತೇನೆಯೇ ?

**೧೭.** ಸಾದಿಸುವೆಂ—ಸಾಧಿಸುತ್ತೇನೆ, ಹೊರಕ್ಕೆ ಎಳೆದು ತೆಗೆಯುತ್ತೇನೆ. ಬಸಿಱಿಂ—ಹೊಟ್ಟೆಯಿಂದ. ಬಟಿಕ್ಕೆ—ಬಳಿಕ, ಆ ಮೇಲೆ. ಪುದುವಾೞ್ವೆಂ—ಒಂದುಗೂಡಿ ಬಾಳುತ್ತೇನೆ. ಕರ್ಣನನ್ನು ಕೊಂದವನು ಅರ್ಜುನ, ದುಶ್ಶಾಸನನನ್ನು ನುಂಗಿದವನು ಭೀಮ. ಇಬ್ಬರನ್ನೂ ಸೀಳಿ ಅವರ ಹೊಟ್ಟೆಯೊಳಗಿನಿಂದ ನನ್ನ ಪ್ರೀತಿಪಾತ್ರರನ್ನು ಹೊರಕ್ಕೆ ತೆಗೆಯುತ್ತೇನೆ, ಅವರ ಮರಣದ ಸೇಡನ್ನು ತೀರಿಸಿಕೊಳ್ಳುತ್ತೇನೆ. ಇದಾದ ಮೇಲೆ, ಯಾವ ತಪ್ಪನ್ನೂ ಮಾಡಿಲ್ಲದ ಧರ್ಮರಾಜನೊಂದಿಗೆ ರಾಜ್ಯವನ್ನು ಹಂಚಿಕೊಂಡು ಅನ್ಯೋನ್ಯವಾಗಿ ಬಾಳುತ್ತೇನೆ; ಅವನ ಮೇಲೆ ನನಗೆ ವೈರವಿಲ್ಲ. ಭೀಮಾರ್ಜುನರನ್ನು ಕೊಂದಹೊರತು ಸಂಧಿಯ ಮಾತಿಗೇ ಅವಕಾಶವಿಲ್ಲ ಎಂದು ದುರ್ಯೋಧನನ ತಾತ್ಪರ್ಯ.

**೧೮.** ಧರೆಯಂ ಪಚ್ಚು ಆಳ್ದಿರ್ ನೀಮುಂ—(ಆದಿಯಲ್ಲಿ) ನೀವೂ ಪಾಂಡುರಾಜನೂ ರಾಜ್ಯವನ್ನು ವಿಭಾಗಿಸಿಕೊಂಡು ಆಳಿದಿರಿ. ಪಚ್ಚು—ಧಾ. ಪಸು. ಕೈತವದಿಂದೆ—ಮೋಸದಿಂದ, ದ್ಯೂತದ ನೆಪದಿಂದ. ಅಯ್ವರ ಕಯ್ಯೊಳ್—ಐದುಮಂದಿ ಪಾಂಡವರ ಕೈಯಿಂದ. ಪುದುವಿತ್ತಪನೇ—ಹುದುವಾಗಿ ಅನುಭವಿಸಲು ಕೊಡುತ್ತಾನೆಯೇ ?

**೧೯.** ದುಃಖೋದ್ವೇಗದಲ್ಲಿ ದುರ್ಯೋಧನನು ತಂದೆಯ ಮೇಲೆ ಕೊನೆಯ ವಾಗ್ಬಾಣವನ್ನು ಎಸೆಯುತ್ತಾನೆ. ಅಂ ಮಗನಲ್ಲನೆ—ನಾನು ನಿಮ್ಮ ಮಗನಾದರೆ, ಧರ್ಮರಾಯನೂ (ಸಂಬಂಧದಲ್ಲಿ) ಮಗನೇ ಅಲ್ಲವೆ ? ಬಟಿಕ್ಕೆ—

(ಯುದ್ಧದಲ್ಲಿ ನಾನು ಮಡಿದ) ಬಳಿಕ. ನೀಮುಂ ತಾಮುಂ—ನೀವೂ ಅವರೂ. ನೇರ್ಪಡುಗಿಡದೆ—ಸರಿಹೊಂದಿಕೆ ಕೆಡದಂತೆ, ಎಂದರೆ ಅನ್ಯೋನ್ಯವಾಗಿ. ಮೊದಲಿಗೆ ನೀವೆಲ್ಲ ಹೊಂದಿಕೆಯಿಂದ ಇದ್ದಿರಿ; ನಡುವೆ ನಾನು ಬಂದು ಕಲಹವನ್ನೊಡ್ಡಿದೆನು; ಈ ತೊಡಕನ್ನು ತಂದಿಟ್ಟ ನಾನು ತೊಲಗಿದ ಮೇಲೆ, ನೀವೆಲ್ಲ ಮತ್ತೆ ಹೊಂದಿಕೊಂಡು ಹಿಂದಿನಂತೆ ಬಾಳಬಹುದು. ಅಂ ಬೆಸ ಕಯ್ವೆಂ—ನಾನು (ನಿಮ್ಮ) ಅಪ್ಪಣೆಯನ್ನು ನಡಸುತ್ತೇನೆ; ಎಂದರೆ, ನನಗೆ ಅಪ್ಪಣೆಕೊಡಬೇಕು, ನಾನು ಇನ್ನು ಹೊರಡುತ್ತೇನೆ ಎಂದು ಅರ್ಥ. ಬೀಳ್ಕೊಳ್ಳುವಾಗಿನ ಮಾತು ಇದು (ನಿಮ್ಮ ಅಪ್ಪಣೆಯ ಪ್ರಕಾರ ಸಂಧಿ ಮಾಡಿಕೊಳ್ಳುತ್ತೇನೆ ಎಂದು ಅರ್ಥವಲ್ಲ); ಗದಾಸಂ, ೬. ೧೮ ನ್ನು ಹೋಲಿಸಿ.

**೨೦.** ಬಿಡಿಂ ಎನ್ನಂ—ನನ್ನನ್ನು ಬೀಳ್ಕೊಡಿ. ತಡತಡವರೆ—ತಡೆತಡೆದು, ತೊದಲಿಕೊಂಡು ಬರಲು. ಇಲ್ಲೆಲ್ಲಾ ದುರ್ಯೋಧನನು ಆಡಿದ ಕಟೂಕ್ತಿ ಶೋಕೋದ್ರೇಕದಿಂದ ಬಂದದ್ದೇ ಹೊರತು ತಂದೆಯ ಮೇಲಿನ ಆಕ್ರೋಶ ದಿಂದ ಉದಿಸಿದ್ದಲ್ಲ.

**೨೦ ವ.** °ಅಪ್ಪಿನಂ—ಆದರೂ. ಇನಿತಂ ಒಳ್ಳಿಕಯ್ಯಲ್ ವೇಬ್ಪುದು—ಇಷ್ಟಾದರೂ ಉಪಕಾರಮಾಡಬೇಕು. ನಿಮ್ಮ ಅಜ್ಜನೊಳ್—ಭೀಷ್ಮನೊಡನೆ. °ಅನುಬಂಧ—ಸಂಬಂಧ. ಅಂತರಿಸಿರ್ದು—ಮರೆಯಾಗಿರಲು.

---

## ೬. ದುರ್ಯೋಧನವಿಲಾಪಂ

೧. ಉಡಿದಿರ್ದ ಕಯ್ದು—ಮುರಿದಿದ್ದ (ಕತ್ತಿ ಮೊದಲಾದ) ಆಯುಧಗಳು. ತಳ—ಪಾದತಳ. ಉರ್ಚು—ಭೇದಿಸು, ಚುಚ್ಚು. ಎಡೆವಡೆಯದೆ—ಅವಕಾಶ ಪಡೆಯದೆ. ದಡಿಗವೆಣ—ಭಾರಿಯ ಹೆಣ.

೨. ಹಲ ತಳಕೆ—(ಚಕ್ರವರ್ತಿಚಿಹ್ನೆಗಳಾದ) ನೇಗಿಲು, ಚಕ್ರ, ಅಂಕುಶ ಎಂಬ ರೇಖೆಗಳಿಂದ ಮೆರೆಯುವ (ದುರ್ಯೋಧನನ) ಅಂಗಾಲಿಗೆ. ಹಲಚಕ್ರಾಂಕುಶ—(ರಣಭೂಮಿಯಲ್ಲಿ ಮುರಿದು ಬಿದ್ದಿದ್ದ) ನೇಗಿಲು,

ಚಕ್ರ, ಅಂಕುಶ ಮೊದಲಾದ ಆಯುಧಗಳು; ಇಲ್ಲಿ ಪ್ರಥಮಾವಿಭಕ್ತಿಯ ಪದದ ಕೊನೆಯಲ್ಲಿ ಬಿಂದುವಿಲ್ಲದಿರುವುದನ್ನು ಗಮನಿಸಬೇಕು. ಮಾಡೆ ಪುನರುಕ್ತತೆಯಂ—(ಈ ಆಯುಧಗಳ ಚೂರುಗಳು ಚುಚ್ಚಿಕೊಂಡು) ಹಿಂದೆ ಇದ್ದ ಗುರುತುಗಳ ಜೊತೆಗೆ ಅದೇ ಗುರುತುಗಳನ್ನು ಇನ್ನೊಂದು ಬಾರಿ ಉಂಟು ಮಾಡಲು.

೨ ವ. ಮನ್ಯೂದ್ಗತ°—ದುಃಖ ಉಕ್ಕಿಬಂದ.

೩. ವಿನುತ—ಹೆಸರುಗೊಂಡ, ವಿರೋಧಿಮಂಡಳಿಕ—ಶತ್ರುಗಳ ಮತ್ತು ಸಾಮಂತರಾಜರ, ಮೌಳಿ—ಕಿರೀಟಗಳಿಂದ, ವಿಘಟ್ಟಿತ—ತಾಗಲ್ಪಟ್ಟ, ಪಾದಪೀಠದಲ್ಲಿ, ಕಾಂಚನಕಮಲಾಯಮಾನಂ—ಚಿನ್ನದ ಕಮಲಗಳಂತೆ ಇರುವ. ದುರ್ಯೋಧನನು ಸಿಂಹಾಸನದಲ್ಲಿ ಕುಳಿತು ಮುಂದಿನ ಪಾದಪೀಠದ ಮೇಲೆ ಚಿನ್ನದ ಕಮಲಗಳಂತೆ ರಂಜಿಸುವ ತನ್ನ ಮೃದುವಾದ ಪಾದಗಳನ್ನು ನೀಡಿರಲು, ಶತ್ರುರಾಜ ಸಾಮಂತರಾಜರು ಆ ಪಾದಪೀಠಕ್ಕೆ ತಮ್ಮ ಮೌಳಿಗಳು ತಾಗುವಂತೆ ತಲೆಮುಟ್ಟಿ ಪ್ರಣಾಮಮಾಡುತ್ತಿದ್ದರು. ಅಂಥ ಸುಖವೈಭವದಲ್ಲಿದ್ದ ದುರ್ಯೋಧನನು ಈಗ ಬರಿಗಾಲಿನಿಂದ ಯುದ್ಧಭೂಮಿಯಲ್ಲಿ ಆಯುಧದ ಚೂರುಗಳನ್ನು ತುಳಿದುಕೊಂಡು ನಡೆಯಬೇಕಾಗಿದೆ. ಹಾಗಿದ್ದ ಅವನ ಮೆಲ್ಲಡಿಗಳಿಗೆ ಈಗ ಎಂಥ ದುರ್ವಿಧಿ! "ಮೆಲ್ಲಿದುವಪ್ಪ ಕಾಲ ತಳಮುಂ ಕಡುವೆಟ್ಟಿದುವಪ್ಪ ಹಸ್ತಮುಂ" (ಶಬ್ದಮ, ೯೫ ಪ್ರಯೋಗ) ಎಂಬುದು ರಾಜಲಕ್ಷಣ. ಭಿಂಡಿವಾಳ—ಒಂದು ಬಗೆಯ ಚಿಕ್ಕ ಭರ್ಜಿ. ಕಕ್ಕಡೆ—ಒಂದು ಬಗೆಯ ಈಟಿ. ಕೊಂತ—ಭರ್ಜಿ; ಸಂ. ಕುಂತ. ಧಾರೆ—ಬಾಯಿ, ಅಲಗು. ಸಂಯುಗಾವನಿತಳದೊಳ್—ಯುದ್ಧಭೂಮಿಯಲ್ಲಿ.

೩ ವ. ನೆರಪು—ಸೇರಿಸು, ಕೂಡಿಸಿಕೊಳ್ಳು. ಅಭಿಮಾನಧನಂ ಎಂಬ ವಿಶೇಷಣ ಇಲ್ಲಿ ಅರ್ಥಪೂರ್ಣವಾಗಿದೆ. ಮಾಣಿಸಿ—ಸುಮ್ಮನಿರಿಸಿ.

೪. ನೆಱೆಯವು—ಸಮರ್ಥವಾಗಲಿಲ್ಲ. ಇನಿಸುಂ—ಸ್ವಲ್ಪವಾದರೂ. ಮಕ್ಕಳನ್ನೂ ತಮ್ಮಂದಿರನ್ನೂ ಕಳೆದುಕೊಂಡ ಮನೋವ್ಯಥೆಯೇ ವಜ್ರದಂತೆ ಕಠಿನವಾದ ಮನಸ್ಸುಳ್ಳ ನನ್ನನ್ನು ನೋಯಿಸಲಾರದು; ಈ ಆಯುಧದ ಚೂರು

ಗಳು ಹೇಗೆ ನೋಯಿಸಬಹುದು ಎಂದು ದುರ್ಯೋಧನನ ಆತ್ಮನಿಂದೆ. ಇದರಿಂದಲೇ ದುರ್ಯೋಧನನ ದುಃಖದ ಆಳ ನಮಗೆ ಅರಿವಾಗುತ್ತದೆ. ಆಯುಧದ ಚೂರು ಚುಚ್ಚಿದ್ದನ್ನು ಕೂಡ ಗಣನೆಗೆ ತಂದುಕೊಳ್ಳದ ಮಟ್ಟಿಗೆ ಅವನ ಹೃದಯದಲ್ಲಿ ಬಂಧುಶೋಕ ತುಂಬಿಕೊಂಡಿತ್ತು !

**೪ ವ.** ಧೈರ್ಯಾವಷ್ಟಂಭನಾಗಿ—ಧೈರ್ಯವನ್ನು ಅವಲಂಬಿಸಿದವನಾಗಿ.

**೫.** ಮೊನೆ—ಯುದ್ಧಮುಖ. ಗಜ ಬೀರನಂ—ಆನೆಯ ದಂತದ ಮೇಲೆ ಪರಾಕ್ರಮದಿಂದ ಹಾಯ್ದು ಸತ್ತ ವೀರನನ್ನು. ಅದಟಿಂ—ಶೌರ್ಯದಿಂದ. ಪೆಣೆದು—ಹೆಣೆದುಕೊಂಡು, ತೊಡರಿಕೊಂಡು. ಒಯ್ಯನೆ—ಮೆಲ್ಲನೆ. ಇಂಥ ಅಸಾಧಾರಣಶೌರ್ಯವನ್ನು ಮೆರೆದು ಮಡಿದ ಭಟರನ್ನು ದೇವಸ್ತ್ರೀಯರು ಮೆಚ್ಚಿ ತಾವಾಗಿಯೇ ಹುಡುಕಿಕೊಂಡು ಬಂದು ಸ್ವರ್ಗವಿಹಾರಕ್ಕಾಗಿ ಕರೆದೊಯ್ಯುವರೆಂದು ಭಾವನೆಯುಂಟು.

**೬.** ಈ ಮುಂದಿನ ಮರುಳುಗಳ ಪ್ರಸಂಗವನ್ನು ಪಂಪಭಾ, ೧೩. ೫೪–೫೫ ವ. ದೊಂದಿಗೆ ಹೋಲಿಸಿ.

ಗುರುವಿನ—ದ್ರೋಣನ. ಕುಡಿವೆನಪ್ಪೊಡೆ—ಕುಡಿಯೋಣವೆಂದರೆ. ಅವಂ ದ್ವಿಜವಂಶಜಂ—ಅವನು ಬ್ರಾಹ್ಮಣ; ಬ್ರಾಹ್ಮಣನ ರಕ್ತವನ್ನು ಕುಡಿದರೆ ಗಂಟಲನ್ನು ಸುಡುವುದೆಂದು ವೇಣೀಸಂಹಾರ ನಾಟಕದಲ್ಲಿ ರುಧಿರಪ್ರಿಯನೆಂಬ ರಾಕ್ಷಸನು ಭಯಪಡುತ್ತಾನೆ (೩ ನೆಯ ಅಂಕದ ಪ್ರವೇಶಕ). ನಿಜಾವರಜನ—ನಿನ್ನ ತಮ್ಮನಾದ ದುಶ್ಶಾಸನನ. ಭೀಮನೆ ಪೀರ್ದಂ—(ಅವನನ್ನು ಕೊಂದಾಗ) ಭೀಮನೇ ಹೀರಿ ಮುಗಿಸಿಬಿಟ್ಟನು. ಎಯ್ದೆ—ಚೆನ್ನಾಗಿ. ಇನ್ನುಂ ಒಳಂ—ಇನ್ನೂ ಜೀವದಿಂದ ಇದ್ದಾನೆ. ಸವಿನೋಳ್ಪನಂ—ರುಚಿನೋಡಲು. ಬಾತಪೆಂ—(ಆಸೆಯಿಂದ) ಉಬ್ಬುತ್ತಿದ್ದೇನೆ. ಪುಲ್‌ಮರುಳ್—ಕ್ಷುದ್ರವಾದ ಭೂತ, ಪಿಶಾಚ.

**೭.** ಉಣ್ಮಿದ ಉಳ್ಮಿದುಳ—ಉಬ್ಬಿ ಹೊರಟುಕೊಂಡ ಒಳಮಿದುಳಿನ. ಕರ್ದಮ—ಕೆಸರು. ಜಗುಬ್ದು—ಜಾರಿ. ಅಂಘ್ರಿ—ಪಾದ. ಊರುಭಂಗಂ ಆಗದೆ ವಲಂ—ತೊಡೆ ಮುರಿಯಲಿಲ್ಲವಷ್ಟೆ. ಆಗದು ಎನೆ—ಆಗಲಿಲ್ಲವೆಂದು (ದುರ್ಯೋಧನನು) ಹೇಳಲು. ಎಡೆವೋಗಿ—(ಅವರಿಬ್ಬರ) ನಡುವೆ ಹೋಗಿ.

ಯುದ್ಧರಂಗದಲ್ಲಿ ಸಹಜವಾಗಿ ಉಂಟಾದ ದುರ್ಯೋಧನನ ಚಾರಿಕೆ, ಅದನ್ನು ಕಂಡ ಸಂಜಯನ ಆತಂಕ—ಇವುಗಳಿಗೆ ಹುಲುಮರುಳಿನ ತುಂಟ ವ್ಯಾಖ್ಯಾನವನ್ನು ಜೋಡಿಸಿ, ಮುಂದೆ ಆಗುವುದರ ಸೂಚನೆಯನ್ನು ರನ್ನನು ಕೌಶಲದಿಂದ ತಂದಿದ್ದಾನೆ; ಈ ಅಂಶ ಪಂಪಭಾರತದಲ್ಲಿಲ್ಲ.

**೭ ವ.** ತನಗೆ ಮುನ್ನಂ . . . ಶಾಪಮಂ : ೩.೦ವ. ದ ಮೇಲಿನ ಟಿಪ್ಪಣಿಯನ್ನು ನೋಡಿ. ಪಿಶಾಚದ ಆಲಾಪಕ್ಕೂ ಮೈತ್ರೇಯರ ಊರುಭಂಗ ಶಾಪಕ್ಕೂ ಹೊಂದಿಕೆಯುಂಟಾಯಿತು. ಕಟ್ಟುಕಡೆ—ಅತಿಶಯವಾಗಿ ವ್ಯಥೆಪಡು. ಅವಧಾರಿಸದೆ—ಹೆಚ್ಚಾಗಿ ಗಮನಕ್ಕೆ ತಂದುಕೊಳ್ಳದೆ. ಪುರುಳ್ ಏನ್—ಏನು ಹುರುಳುಂಟು ?

**೮.** ಮರುಳ್ ಎಂಬ ಮಾತಿಗೆ ಪಿಶಾಚ ಎಂದೂ ಹುಚ್ಚ ಎಂದೂ ಅರ್ಥ. ದುರ್ಯೋಧನನು ತನ್ನನ್ನು "ಮರುಳ್" ಎಂದು ಅಲ್ಲಗಳೆದದ್ದಕ್ಕೆ, ನೀನು ಮರುಳೋ ನಾನು ಮರುಳೋ ಎಂದು ಅದು ಕೇಳುತ್ತದೆ. ಅರಗಿನ . . . ಕೊಲಲ್ ಒಡ್ಡಿ : ಹಿಂದೆ ಪಾಂಡವರನ್ನು ವಾರಣಾವತದಲ್ಲಿ ಅರಗಿನ ಮನೆಯಲ್ಲಿರಿಸಿ ಅದಕ್ಕೆ ಬೆಂಕಿ ಹೊತ್ತಿಸಿಯೂ, ಇನ್ನೂ ಹಿಂದೆಯೇ ವಿಹಾರಕಾಲದಲ್ಲಿ ಭೀಮನಿಗೆ ವಿಷದ ಲಡ್ಡುಗೆಗಳನ್ನು ತಿನ್ನಿಸಿಯೂ ಕೊಲ್ಲಬೇಕೆಂದು ದುರ್ಯೋಧನನು ಸಂಚುಮಾಡಿದ್ದು ಮರುಳುತನವಲ್ಲದೆ ಮತ್ತೇನು ಎಂದು ಭಾವ. ವೈರಮಂ ಪಡೆದು—ಶತ್ರುತ್ವವನ್ನು ಮೆಚ್ಚಿ (ಬೆಳಸಿ). ಇಂತು ಇನಿತರ್ಕೆ—ಹೀಗೆ ಈ ನೆಲೆಗೆ. ಮರುಳಯೊ—ಮರುಳಾಗಿರುವೆಯೋ. ಭೂತಕೋಟಿವೆರಸು—ಅನೇಕಾನೇಕಭೂತಗಳೊಡನೆ. ತಾಂ ಮರುಳೆನೊ—ನಾನು ಮರುಳಾಗಿರುವೆನೋ. ಮರುಳ್ ಎಂಬ ನಾಮಪದಕ್ಕೆ ಇಲ್ಲಿ ಎರಡು ಕಡೆ ಕ್ರಮವಾಗಿ -ಅಯ್, -ಎನ್ ಎಂಬ ಆಖ್ಯಾತಪ್ರತ್ಯಯಗಳು ಹತ್ತಿರುವುದನ್ನು ಗಮನಿಸಬೇಕು. ನೋಲ್ಪಂ—ನೋಡೋಣ.

**೯.** ಧೂರ್ಜಟಿಯ ಆಣೆ—ಶಿವನ ಆಣೆ. ಭೀಮನ ಆಣೆ ಎಂದು ಕೇಳಿದ ಕೂಡಲೆ ದುರ್ಯೋಧನನ ಸ್ಥೈರಣೆ ಕೆಟ್ಟುಹೋಗುತ್ತದೆ. ಬಡಿಗೊಳೆ—ದೊಣ್ಣೆಗಳನ್ನು ತೆಗೆದುಕೊಳ್ಳಲು. ದುರ್ಯೋಧನನಿಗೂ ಮರುಳುಗಳಿಗೂ ಹೀಗೆ

ಅನಿರೀಕ್ಷಿತವಾಗಿ ಅನುಚಿತಕದನ ಒದಗಲು ಸಂಜಯನು ದುರ್ಯೋಧನನನ್ನು ದಾರಿಗೆ ತರಬೇಕಾಯಿತು. ಬಗ್ಗಿಸು—ಗದರಿಸು.

೯ ವ. ಬಹುಳಪ್ರತ್ಯವಾಯ°—ಅನೇಕ ಅಡ್ಡಿಗಳಿಂದ (ಕೂಡಿದ).

೧೦. ಪರಿಭವಮಂ ಅದಂ—ಹಾಗೆ ಕೊಲೆಯಾದ ಅವಮಾನದ ವಿಷಯವನ್ನು. ತಮ್ಮನಿಗೆ ಆ ದುರ್ಮರಣವನ್ನು ತಪ್ಪಿಸಿ ಅವನನ್ನು ತಾನು ಉಳಿಸಿಕೊಳ್ಳಲಿಲ್ಲವಲ್ಲಾ ಎಂದು ದುರ್ಯೋಧನನಿಗೆ ಅಷ್ಟೊಂದು ಪರಿತಾಪ, ಸಂತಾಪ. ತಲೆಯಂ ಎಱಗಿ—ತಲೆತಗ್ಗಿಸಿ.

೧೧. ಇಭಶೈಲಂಗಳಂ—ಆನೆಗಳ ದೇಹಗಳೆಂಬ ಬೆಟ್ಟಗಳನ್ನು. ರುಧಿರಸ್ರೋತಂಗಳಂ—ರಕ್ತದ ನದಿಗಳನ್ನು. ಇಭದೋಃ—ಆನೆಗಳ ಸೊಂಡಲುಗಳೆಂಬ, ನೀಲಲತಾಪ್ರತಾನ—ಕಪ್ಪುಬಳ್ಳಿಗಳ ಮೆಳೆಗಳನ್ನುಳ್ಳ, ವಿಪಿನವ್ರಾತಂಗಳೊಳ್—ಅರಣ್ಯಸಮೂಹಗಳಲ್ಲಿ. ಉಱದೆ—ಲಕ್ಷ್ಯಮಾಡದೆ; ಧಾ. ಉಱು. °ಶಿರಃಸ್ಕಂಧ°—ಹೆಗಲು. ಶರಜಾಲದಿಂದ, ಜರ್ಜರಿತ—ಛಿನ್ನಭಿನ್ನವಾದ, ಗಾತ್ರತ್ರಾಣ—ಮೈಜೋಡನ್ನುಳ್ಳ.

೧೧ ವ. ನಿಸರ್ಗದುಷ್ಟ°—ಸ್ವಭಾವತಃ ಕೆಟ್ಟವನಾದ. °ವಿಲುಳಿತ°—ತಿರಿಚಲ್ಪಟ್ಟ. ಭಾರದ್ವಾಜ—ದ್ರೋಣ. ಧೃಷ್ಟದ್ಯುಮ್ನನು ದ್ರೋಣನ ಶವದ ಕೂದಲನ್ನು ಹಿಡಿದುಕೊಂಡು ತಲೆಯನ್ನು ಕತ್ತರಿಸಿ ಅಪಮಾನಪಡಿಸಿದನೆಂದು ಪೂರ್ವವೃತ್ತಾಂತ (ಪಂಪಭಾ, ೧೨.೨೯ ವ—೩೦ ನೋಡಿ).

೧೨. ಹಿಂದೆ ದುರ್ಯೋಧನನು ದ್ರೋಣನನ್ನು ಹಳಿದಿದ್ದನಷ್ಟೆ; ಈಗ ಆತನ ಶವವನ್ನು ನೋಡಿದಾಗ ಅಳಲೂ ಮೆಚ್ಚಿಕೆಯೂ ಉಕ್ಕಿಬಂದು, ಗುಣವನ್ನು ನೆನೆಯುತ್ತಾನೆ.

ಅಱಿಯೆಮೆ—ನಾವು ಅರಿಯೆವೆ? ಬಿಲ್ಲ ಬಿನ್ನಣಕೆ—ಧನುರ್ವಿದ್ಯಾಪ್ರವೀಣತೆಯಲ್ಲಿ; ಬಿನ್ನಣ—ಸಂ. ವಿಜ್ಞಾನ. ಗಾಂಡಿವಿ ಅಲ್ತು ಪಿನಾಕಪಾಣಿಯುಂ—(ಯುದ್ಧದಲ್ಲಿ ನಿಮ್ಮನ್ನು ಎದುರಿಸಿದ) ಗಾಂಡೀವಧಾರಿಯಾದ ಅರ್ಜುನನು ಮಾತ್ರವಲ್ಲ, ಪಿನಾಕವೆಂಬ ತನ್ನ ಧನುಸ್ಸನ್ನು ಹಿಡಿದ ಸಾಕ್ಷಾತ್ ರುದ್ರನು ಕೂಡ. ನೆಱೆಯಂ—ಸಮರ್ಥನಾಗುವುದಿಲ್ಲ. ನಿಮ್ಮನ್ನು ರುದ್ರನು

ಕೂಡ ಸೋಲಿಸಲಾರ; ಈ ಅರ್ಜುನ ಯಾವ ಲೆಕ್ಕದವನು! ಅದು—ಹೀಗೆ ಯುದ್ಧದಲ್ಲಿ ಕೈಯಿಳಿಸಿಬಿಟ್ಟದ್ದು. ಇದು ನಿಮ್ಮ ಉಪೇಕ್ಷೆಯ ಫಲವೋ ನನ್ನ ಕರ್ಮದ ಫಲವೋ ನಾನರಿಯೆ.

**೧೩.** °ಸಂದೋಹ—ಸಮೂಹ. ನಿಱಿಸಿದಂ—ನೆಲೆಗೊಳಿಸಿದನು, ಸ್ಥಾಪಿಸಿದನು. ದೊರೆ ಆರ್—ಯಾರು ಸಮಾನರು? ಅಳವು—ಸಾಮರ್ಥ್ಯ.
ತಮ್ಮಮ್ಮನಕ್ಕೆ ಇಸಲಂಬಂ ತಿರುವಾಯ್ಗೆ ತಂದಱಿವರೇ" ಎಂದು ಹಿಂದೆ (ಗದಾಸಂ, ೩.೧) ಆಕ್ಷೇಪಿಸಿದವನೇ ಇಲ್ಲಿ, ದ್ರೋಣನು ತನ್ನ ಬಾಣಗಳನ್ನೆಲ್ಲಾ ಶತ್ರುಸೈನ್ಯದವರ ದೇಹದಲ್ಲಿ ನೆಲೆಗೊಳಿಸಿದನು, ಒಂದನ್ನಾದರೂ ಬತ್ತಳಿಕೆಯಲ್ಲಿ ಉಳಿಸಿಕೊಳ್ಳಲಿಲ್ಲ ಎಂದು ಶ್ಲಾಘಿಸುತ್ತಾನೆ!

**೧೪.** ಅಲರ್ದ ಮೊಗಂ—(ಯುದ್ಧೋತ್ಸಾಹದಿಂದ) ಅರಳಿದ ಮುಖ. ಕಡಿವೋದ ಕಯ್ಯುಂ—ಕತ್ತರಿಸಿಹೋದ ಕೈಗಳೂ. ಅಭಿಮನ್ಯುವೊಬ್ಬನನ್ನು ವೀರರನೇಕರು ಸುತ್ತಿಕೊಂಡು ಕಾದಾಡುವಾಗ, ಅವನ ಕೈಗಳನ್ನು ಕರ್ಣನು ಕತ್ತರಿಸಿಹಾಕಿದನು; ಆದರೂ ಅಭಿಮನ್ಯು ಮೊಂಡುಕೈಗಳಿಂದಲೇ ಯುದ್ಧ ಮಾಡಿದನು (ಪಂಪಭಾ, ೧೧.೧೦೦ ವ. ಮುಂದೆ ನೋಡಿ). ಅಸುರತರಮಾಗೆ—ಅತಿಭಯಂಕರವಾಗಿ. ಅವುಡುಂ ಬೆರಸು—ಕೆಳದವಡೆಯಿಂದ ಕೂಡಿ. °ಲೋಹಿತವಾರ್ಧಿ—ರಕ್ತದ ಕಡಲು. ಅಬ್ದು—ಮುಳುಗಿ. ಆಜಿ°—ಯುದ್ಧ.

**೧೫.** ಪಣ್ಣಿದ—ರಚಿಸಿದ. ಪೆಱರ್ಗೆ ಅರಿದು ಪುಗಲ್—(ನೀನಲ್ಲದೆ ಮತ್ತು ಅರ್ಜುನನಲ್ಲದೆ) ಬೇರೆಯವರಿಗೆ ಪ್ರವೇಶಿಸಲು ಅಸಾಧ್ಯ (ಪಂಪಭಾ, ೧೧. ೮೭ ನೋಡಿ). ರಣಾಜಿರ—ಯುದ್ಧರಂಗ. ನರಸುತ—ಓ ಅರ್ಜುನಪುತ್ರನೇ. ಒರೆಗೆ ದೊರೆಗೆ—ಸರಿಸಮಕ್ಕೆ (ಬರುವ).

**೧೬.** ಮೆಯ್ಗಲಿ—ಶೂರ. ತನ್ನೊಂದೆ ಮೆಯ್ಯೊಳಂ—ನೀನೊಬ್ಬನೇ, ಏಕಾಂಗವೀರನಾಗಿ. ತವೆ—ನಿಶ್ಶೇಷವಾಗಿ. ನಿನ್ನಂ . . ಪೆತ್ತಳ್ : ನಿನ್ನನ್ನು ಹೆತ್ತಾಕೆ ಸಾಮಾನ್ಯಸ್ತ್ರೀಯಲ್ಲ; ನಿನ್ನನ್ನು ಪಡೆದಾಗಲೇ ವೀರಮಾತೆಯೆಂಬ ಹೆಸರನ್ನೂ ಪಡೆದಳು.

**೧೭.** ಭವದ್ವಿಕ್ರಮ—ನಿನ್ನ ಪರಾಕ್ರಮ. ನಿಜ . ಅಕ್ಕೆ—ನಿನ್ನ ಸಾಹಸದಲ್ಲಿ ಒಂದು ಅಂಶಕ್ಕೆ ಅನುರೂಪವಾಗುವ ಮರಣ ನನಗೆ ಒದಗಲಿ. ನಿನ್ನ ಶೌರ್ಯ ಯಾರಿಗೂ ಇಲ್ಲ, ನನಗೂ ಇಲ್ಲ. ನೀನು ತೋರಿಸಿದ ಸಾಹಸ ದಲ್ಲಿ ಒಂದು ಭಾಗ ಮಾತ್ರವನ್ನು ನಾನು ತೋರಿಸಲು ಸಾಧ್ಯವಾಗಿ, ಅದಕ್ಕೆ ತಕ್ಕ ವೀರಮರಣ ನನಗೆ ದೊರೆತರೆ ಸಾಕು ಎಂದು ದುರ್ಯೋಧನನ ವಿನಯದ ಪ್ರಾರ್ಥನೆ. ಅದು ಅವನ ನಿರೀಕ್ಷೆಗೆ ಮೀರಿಯೇ ಮುಂದೆ ಫಲಿಸುತ್ತದೆ!

**೧೭ ವ.** ಅಭಿಮನ್ಯುಗೆ. . ಬರುತ್ತುಂ: ಇದು ದುರ್ಯೋಧನನ ದೊಡ್ಡ ಗುಣವನ್ನು ಸಾರುತ್ತದೆ. ತನ್ನ ನೆನೆದು: ಅಭಿಮನ್ಯುಕುಮಾರನ ಶವ ವನ್ನು ನೋಡಿ ಮೆಚ್ಚಿದವನಿಗೆ ಇತ್ತ ತನ್ನ ಮಗನ ಕಡೆಗೆ ನೆನಪು ಹರಿಯು ವುದು ಸಹಜ. ತದಾಸನ್ನ°—ಅಲ್ಲಿಯೇ ಹತ್ತಿರದ.

**೧೮.** ಪುತ್ರಶೋಕವು ದುರ್ಯೋಧನನ ಸ್ಥಿರವಾದ ಯುದ್ಧೋತ್ಸಾಹ ವನ್ನೂ ಕೊಂಚಕಾಲ ಉಡುಗಿಸಿಬಿಟ್ಟಿತು.

**೧೮ ವ.** ಭಾನುಮತೀನಂದನ—ಲಕ್ಷ್ಮಣಕುಮಾರ.

**೧೯.** ಜಲಾಂಜಲಿ—ಬೊಗಸೆನೀರು, ತರ್ಪಣೋದಕ. ಕ್ರಮವಿಪರ್ಯಯ—ಕ್ರಮವ್ಯತ್ಯಾಸ. ನ್ಯಾಯವಾಗಿ ತಂದೆಗೆ ಮಗ ಮಾಡಬೇಕಾದದ್ದನ್ನು ಈಗ ಮಗನಿಗೆ ತಂದೆ ಮಾಡಬೇಕಾಗಿದೆ!

**೧೯ ವ.** ತಳರ್ದು—ಹೊರಟು; ಧಾ. ತಳರ್—ಚಲಿಸು.

**೨೦.** ಕೈಲಾಸಶೈಲಕಲ್ಪಕ°—(ಔನ್ನತ್ಯಾದಿಗಳಲ್ಲಿ) ಕೈಲಾಸಪರ್ವತಕ್ಕೆ ಸದೃಶರಾದ. ಅಡ್ಕಡಿದರೇ—ನಿಶ್ಶೇಷವಾದರೇ, ತೀರಿಹೋದರೇ? ತನಗಾಗಿ ಪ್ರಾಣತೆತ್ತ ರಾಜಸಮೂಹದ ಶವರಾಶಿಯನ್ನು ಕಂಡು ದುರ್ಯೋಧನನ ಪರಿತಾಪ ಬೆಳೆಯುತ್ತದೆ.

**೨೧.** ಮೆಯ್ಯ ಅಡಗಂ—ಮೈಯ ಮಾಂಸವನ್ನು. ಕಿಱುಕಿಱುದು ಕೊಱೆದು—ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ. ಗೊಲ್ಲಂಗುಡಿದುಂ—ಗೊಟ್ಟದಿಂದ ಎತ್ತಿಕುಡಿದೂ (?); "ಗೋಲಂಗುಡಿಯೆ" ಎಂಬ ಪ್ರಯೋಗ

ಅರ್ಧನೇಮಿಪುರಾಣದಲ್ಲಿ ಕಾಣಬರುತ್ತದೆ (ಲ. ೨). ಹಿಡಿಂಬರಿಪು: ಇಲ್ಲಿಗೆ ಇದು ಉಚಿತವಾದ ಪದ.

**೨೧ ವ.** ಕೆಲಗಿವಿಗೇಳ್ದು—ಕಿವಿಯ ಕೆಳಭಾಗದಿಂದ ಮಾತ್ರ ಕೇಳಿ, ಎಂದರೆ ಕೇಳಿದರೂ ಲಕ್ಷ್ಯಕೊಡದೆ.

**೨೨.** ನಡು ಉಡಿವನ್ನಂ—(ಭೀಮನ) ಸೊಂಟ ಮುರಿಯುವ ತನಕ. ಬರಿಯ ಎಲ್ವು—ಪಕ್ಕೆಯ ಎಲುಬು. ಮೆಯ್ ಅಡಗಡಗಾಗೆ—ದೇಹವೆಲ್ಲ ಕೇವಲ ಮಾಂಸದ ಮುದ್ದೆಯಾಗಲು. ಉರಮಂ ಇರ್ಬಗಿಯಾಗಿರೆ ಪೋೞ್ದು—ಎದೆಯನ್ನು ಎರಡು ಭಾಗವಾಗಿ ಸೀಳಿ ಹೋಳುಮಾಡಿ. ನೆತ್ತರಂ ಕುಡಿದನ—(ನಿನ್ನ) ರಕ್ತವನ್ನು ಕುಡಿದ ಭೀಮನ. ಅಣುಗದಮ್ಮನಂ—ಪ್ರೀತಿಯ ತಮ್ಮನನ್ನು.

**೨೨ ವ.** ಪಲುಂಬಿ—ಹಲುಬಿ. ಪಲವಾಡಿ—ಹಲವು ಮಾತುಗಳನ್ನು ಆಡಿ.

**೨೩.** °ಮಹಾಮಾಂಸ—ಮನುಷ್ಯಮಾಂಸ. ನಕ್ತಂಚರೀ°—ರಾಕ್ಷಸಿ. ಭೀಮ ಪೌರ್ದಿದಯ್—ಭೀಮನ ಭಯಂಕರವಾದ ಗದೆಯಿಂದ ನೀನು ಮರಣವನ್ನು ಹೊಂದಿದೆ. ಪಂಚತ್ವ—ಶರೀರದಲ್ಲಿ ಕೂಡಿರುವ ಪೃಥಿವಿ, ಜಲ ಮೊದಲಾದ ಪಂಚಭೂತಗಳು ಚೆದರಿ ತಮ್ಮ ತಮ್ಮ ನೆಲೆಗಳಿಗೆ ಮತ್ತೆ ಮರಳುವುದು, ಎಂದರೆ ಮರಣ. ಇಲ್ಲಾದರೆ, ದುಶ್ಶಾಸನನ ಜೀವ, ಮಾಂಸ, ರಕ್ತ, ಶಿರಸ್ಸು, ಕಾಯ—ಈ ಐದು ಅಂಶಗಳು ಈಗ ಬೇರೆ ಬೇರೆ ಕಡೆಗಳಲ್ಲಿ ಸೇರಿಹೋಗಿವೆ. ಅವನ ಪಂಚತ್ವ ಹೀಗೆ ವಿಲಕ್ಷಣವಾಗಿ ಘಟಿಸಿದೆ.

**೨೪.** ಕೊಂದಂ—ಕೊಂದವನು. ಗಡಂ ಒಳಂ ಇನ್ನುಂ; ಮಾಣ್ದ ಆನ್ ಇನ್ನುಂ ಒಳೆಂ—ಎಂದು ಪದವಿಭಾಗ. ಸೌಧರ್ಮಿಕೆ—ಧರ್ಮಕ್ರಿಯೆ (?). ಅವನೂ ಇನ್ನೂ ಬದುಕಿದ್ದಾನೆ, ನಾನೂ ಇನ್ನೂ ಬದುಕಿದ್ದೇನೆ! ನನ್ನ ಕರ್ತವ್ಯವನ್ನು ನಾನು ನಿರ್ವಹಿಸಿದ್ದರೆ ಈ ವೇಳೆಯೊಳಗೆ ನಮ್ಮಿಬ್ಬರಲ್ಲಿ ಒಬ್ಬನು ಹತನಾಗಲೇಬೇಕಾಗಿತ್ತು. ನೀನು ನನ್ನಲ್ಲಿಟ್ಟಿದ್ದ ಪ್ರೀತಿಗೂ ನಾನು ನಿನಗೆ ಸಲ್ಲಿಸಬೇಕಾದ ಧರ್ಮಕ್ರಿಯೆಗೂ ಇದು ಎಷ್ಟು ಚೆನ್ನಾಗಿ ಹೊಂದಿಕೊಳ್ಳು

ತ್ತದೆ! ನಾನು ಹೀಗೆ ಸುಮ್ಮನಿರುವುದು ಅತ್ಯಂತ ಅನುಚಿತವೆಂದು ಭಾವ. (ಈ ಪದ್ಯದೊಂದಿಗೆ ಮುಂದೆ ೫. ೩೯ ನ್ನು ಹೋಲಿಸಿ.)

**೨೫.** ಸೋಮಾಮೃತಂ—ಯಾಗದಲ್ಲಿ ಪ್ರಾಶನಮಾಡುವ ಸೋಮರಸ. ಮೊನೆಯೊಳ್ ಎಡೆಯೊಳ್—ಯುದ್ಧಮುಖದಲ್ಲಿ (ನನ್ನ) ಸರದಿ ತಡವಾಯಿತು, ಮರಣದ ಈ ಸಂದರ್ಭದಲ್ಲಿಯೂ ಅದು ತಡವಾಯಿತು. ಎಂದರೆ ಯುದ್ಧದಲ್ಲಿಯೂ ಮರಣದಲ್ಲಿಯೂ ನನಗಿಂತ ಮೊದಲೇ ನೀನು ಮುಂದೆ ನುಗ್ಗಿ, ನನ್ನ ಸರದಿಯನ್ನು ಆಕ್ರಮಿಸಿ, ಹಿಂದೆ ಎಂದೂ ಮಾಡದ ವಿನಯ ಭಂಗವನ್ನು ಮಾಡಿಬಿಟ್ಟೆ! ಸೂಠ್—ಸರದಿ.

**೨೬.** ದುರ್ಯೋಧನನೆಂಬ . . . ಆಂಪೆನೆ: ಹಿಂದೆ, ೨.೧೧ ರಲ್ಲಿ ಬಂದಿರುವ "ಸತ್ಯಾಶ್ರಯವೆಸರ್ಗೆ ಮುಯ್ಯನಾಂಪನೆ ಭೀಮಂ" ಎಂಬ ಉಕ್ತಿಯನ್ನು ಇದರೊಂದಿಗೆ ಹೋಲಿಸಿ. ಬನ್ನಮಂ ನೀಗುವೆನೇ—ಭಂಗವನ್ನು ನಾನು ಕಳೆಯುತ್ತೇನೆಯೇ, ಎಂದರೆ ಅದರ ಸೇಡನ್ನು ತೀರಿಸಿಕೊಳ್ಳುತ್ತೇನೆಯೇ?

**೨೭.** °ಸಂಘಟ್ಟ—ತಾಗಾಟ.

**೨೭ ವ.** 'ಗಂಡಸ್ಯೋಪರಿ ಸ್ಫೋಟಕಂ'—ಕುರುವಿನ ಮೇಲೆ ಬೊಕ್ಕೆ.

**೨೮.** ಇಲ್ಲಿ ಬಂದಿರುವ ಕರ್ಣನ ವರ್ಣನೆಯಲ್ಲಿ ಚಿತ್ರಕಾರನ ಕೌಶಲ ಅಳವಟ್ಟಿದೆ. ನೆಗಪಿ—ನೆಗಹಿ, ಮೇಲೆತ್ತಿ. ಸಮಪಾದದ ಆಸನಂ—ನಖರೇಖೆ ಒಂದೇ ಸಮನಾಗುವಂತೆ ಜೋಡಿಸಿದ ಪಾದಗಳನ್ನುಳ್ಳ ನಿಲವು. ತನ್ನ ಸೊಗಯಿಸೆ—ಬಾಣವನ್ನು ಹೂಡಿ ಕೊನೆತನಕ ಮೊದಲೇ ಎಳೆದ ತನ್ನ ಮುಷ್ಟಿ ಬಲಗಿವಿಯ ಬಳಿ ರಂಜಿಸಲು. ಪಾಟಿಯಂ ನೆಱಪದೆ—(ತಮ್ಮ) ಕರ್ತವ್ಯವನ್ನು ನೆರವೇರಿಸದೆ. ಆಳ್ದನ ಕಜ್ಜಮಂ ಒಕ್ಕು ಸತ್ತರಂ—ಪ್ರಭುಕಾರ್ಯವನ್ನು ಬಿಸುಟು ಸತ್ತವರನ್ನು; ಎಂದರೆ, ಸ್ವಾಮಿಕಾರ್ಯವನ್ನು ಕಡೆತನಕ ಸಾಧಿಸದೆ ನಡುವೆಯೇ ಕೈಬಿಟ್ಟು, ಆದರೂ ತಮ್ಮ ಪ್ರಾಣವನ್ನು ಉಳಿಸಿಕೊಳ್ಳದೆ ಮಡಿದಂಥ ಹೇಡಿಗಳು, ಉಪೇಕ್ಷೆಗಾರರು ಮೊದಲಾದವರನ್ನು. ನಗುವವೋಲ್—ಪರಿಹಾಸಮಾಡುವಂತೆ. ನೆಮ್ಮಿ . . . ದಂಡಮಂ—ತನ್ನ ತೇರಿನ ಎತ್ತರವಾದ

ಧ್ವಜದಂಡವನ್ನು ಒರಗಿಕೊಂಡು. ಕರ್ಣನು ಸ್ವಾಮಿಕಾರ್ಯನಿರ್ವಾಹದಲ್ಲೇ, ಶತ್ರುವಿಗೆ ಎದುರಾಗಿರುವಾಗಲೇ, ಪ್ರಾಣವನ್ನು ಒಪ್ಪಿಸಿದ್ದನು.

**೨೯.** ಈ ಮುಂದಿನ ಪದ್ಯಾವಳಿ ಕನ್ನಡ ಸಾಹಿತ್ಯದಲ್ಲಿ ಅತಿಪ್ರಸಿದ್ಧವಾದ ಶೋಕಗೀತೆ.

ಮೂವರೆ ದಲ್—(ಇದ್ದವರು) ದಿಟವಾಗಿ ನಾವು ಮೂರೇ ಮಂದಿ. ಕಟಿದ ಬಟಿಕ್ಕೆ—ತೀರಿಹೋದಬಳಿಕ. ನೀನುಂ ಅಗಲ್ದು ಎತ್ತ ಪೋದೆ—ಎಂದು ಪದವಿಭಾಗ.

**೩೦.** ತನ್ನ—ನನ್ನ, ಎಂದರೆ ದುರ್ಯೋಧನನ. ಮಗನನ್ನು ಕಳೆದುಕೊಂಡ ದುರ್ಯೋಧನನು ಮಗನನ್ನು ಕಳೆದುಕೊಂಡ ಕರ್ಣನ ಬಳಿಗೆ ಪರಸ್ಪರ ಸಮಾಧಾನಕ್ಕಾಗಿ ಬಂದಿದ್ದಾನೆ, "ಏರ್ಪೆತ್ತರ್ ಏರ್ಪೆತ್ತರಂ ಪದುಳಂ ಮಾಬ್ಪುದು ಉಚಿತಂ" ಎಂಬ ಉಕ್ತಿಯಂತೆ (ಶಬ್ದಮ, ೬೬ ಪ್ರಯೋಗ).

**೩೧.** ನಿನ್ನ ಇಂದಿನ ತೆಱನಂ—ಹೀಗೆ ನೀನು ನನಗೆ ಉತ್ತರಕೊಡದೆ ಮೌನವಾಗಿರುವ ರೀತಿಯನ್ನು. ಮೇಣ್—ಅಥವಾ. ಕರ್ಣನು ಜೀವಿಸಿಲ್ಲ ತನ್ನ ಮಾತನ್ನು ಕೇಳಲಾರ, ತನಗೆ ಉತ್ತರ ಕೊಡಲಾರ ಎಂಬುದು ದುರ್ಯೋಧನನ ಶೋಕಭರದಲ್ಲಿ ಅರಿವಿನಿಂದ ಮರೆಯಾಗುತ್ತದೆ.

**೩೨.** ಬೆಸಂ ಏನ್ ಎನ್ನದೆ—ಏನು ಕೆಲಸ, ಏನಪ್ಪಣೆ ಎನ್ನದೆ. ಜೀಯ ಎನ್ನದೆ ದೇವ ಎನ್ನದೆ—ಎಂದು ಪದವಿಭಾಗ.

**೩೩.** ನೀನ್ ಇರ್ದ ನಾಡೊಳ್ ಇರ್ಕುಮೆ: ನಿನ್ನ ವಿಷಯ ಹಾಗಿರಲಿ, ನೀನು ಇದ್ದ ನಾಡಿನಲ್ಲೇ ಇರುವುದಿಲ್ಲ. ನನ್ನಿ—ಸತ್ಯ. ಚಾಗ—ಸಂ. ತ್ಯಾಗ. ಅಣ್ಮು—ಪರಾಕ್ರಮ.

**೩೪.** ಪೃಥೆ—ಕುಂತಿ. ಅರ್ಕ—ಸೂರ್ಯ. ನೀನ್ ಆರ್ಗೆ ಎಂದು—ನೀನು ಯಾರವನು, ಯಾರ ಮಗ ಎಂದು. ಆರ್ಗೆ ಎಂಬುದು ಸಂಸ್ಕೃತದ "ಕಸ್ಯ ಎಂಬುದರ ಭಾಷಾಂತರವೆಂದು ತೋರುತ್ತದೆ. ಆದರೆ, ಇದು "ಆರ್ ಗಡ" (=ಯಾರಂತೆ, ಯಾರು) ಎಂಬುದರ ರೂಪಾಂತರವೆಂದು ಅಭಿಪ್ರಾಯ

ಪಡುವವರೂ ಉಂಟು. (ಕಂಠೀರವ, ೧೯೩೫ ನೆಯ ದಸರಾಸಂಚಿಕೆಯಲ್ಲಿ, ಮಂ. ಗೋವಿಂದ ಪೈ: 'ನೀನ್+ಆರ್+ಗೆ'; ಪ್ರಬುದ್ಧ ಕರ್ಣಾಟಕ, ೩೦. ೪ ರಲ್ಲಿ, ವೆಂಕಟರಾಯಾಚಾರ್ಯ 'ಗೆ ಪ್ರತ್ಯಯ ವಿಚಾರ'—ಈ ಲೇಖನ ಗಳನ್ನು ನೋಡಿ.)

ತಾಯಿ ಕುಂತಿ, ತಂದೆ ಸೂರ್ಯ, ಲೋಕಾಂತರ್ಯಾಮಿ ಕೃಷ್ಣ, ದಿವ್ಯ ಜ್ಞಾನಿ ಸಹದೇವ—ಇವರಿಗೆ ಮಾತ್ರವಲ್ಲದೆ ದುರ್ಯೋಧನನಿಗೂ ಕರ್ಣನ ಜನ್ಮವೃತ್ತಾಂತ ಗೊತ್ತಿದ್ದಿತೆಂದು ಇಲ್ಲಿ ಹೇಳಿದೆ; ಈ ವಿಷಯದಲ್ಲಿ ರನ್ನನು ಪಂಪನನ್ನು ಅನುಸರಿಸಿದ್ದಾನೆ. ದುರ್ಯೋಧನನಿಗೆ ಇದು ಹೇಗೆ ಯಾವಾಗ ಗೊತ್ತಾಯಿತೆಂಬುದರ ನಿರೂಪಣೆ ಪಂಪಭಾ, ೯. ೬೬ ವ—೬೭ ರಲ್ಲಿ ಬಂದಿದೆ. ಕರ್ಣನು ನಿಜವಾಗಿ ಸೂತಪುತ್ರನಲ್ಲ, ಕುಂತಿಯ ಚೊಚ್ಚಿಲ ಮಗ ಎಂಬು ದನ್ನು ದುರ್ಯೋಧನನು ಅರಿತಿದ್ದನೆಂಬುದಕ್ಕೆ ಮಹಾಭಾರತದಲ್ಲಿ ಆಧಾರ ವಿರುವಂತೆ ಕಾಣಲಿಲ್ಲ.

**೩೫.** ಆನ್ ಕುಡಲ್ ಆರ್ತೆನಿಲ್ಲ: ಧರ್ಮರಾಜನ ಹಾಗೆ ರಾಜ್ಯವನ್ನು ಕೊಡುವುದಕ್ಕೆ ನನಗೆ ಕೈಬರಲಿಲ್ಲ; ಅಂಥ ನೀಚ ನಾನು! ರಾಜ್ಯಕ್ಕೆ ಇರ್ದೆಂ: ರಾಜ್ಯವನ್ನು ನಿನಗೆ ಕೈಯೆತ್ತಿ ಕೊಡದಿದ್ದರೂ, ಮನಸ್ಸಿನಲ್ಲೇನೋ, ನೀನೇ ಅದರ ಒಡೆಯನೆಂದೂ (ನಾನು ನಿನ್ನ ಪರವಾಗಿ ಆಳುವವನೆಂದೂ) ನಾನು ಚೆನ್ನಾಗಿ ತಿಳಿದುಕೊಂಡಿದ್ದೆ. ಈ ಪದ್ಯದೊಂದಿಗೆ ಪಂಪಭಾ, ೧೩, ೫, ೬ ನ್ನು ಹೋಲಿಸಿ.

**೩೬.** ಬೆಳ್ಗೊಡೆ—ಶ್ವೇತಚ್ಛತ್ರ. ಪೀಟಿಗೆ—ಸಿಂಹಾಸನ (?); ಸಂ. ಪೀಠಿಕಾ. ಪೀಟಿಗೆ ಎಂದರೆ ಸಂತತಿ ಎಂಬ ಅರ್ಥವುಂಟು; ಆದರೆ ಅದು ಇಲ್ಲಿ ಅನ್ವಯಿಸು ವುದಿಲ್ಲ. ನೀನಿಲ್ಲದೆ . . . ಒಳವೆ: ನೀನು ಹೋದಮೇಲೆ ಇವು ಇದ್ದರೂ ಇಲ್ಲದಂತೆಯೇ ಸರಿ; ಈ ವೈಭವಸಂಪತ್ತುಗಳಿಂದ ನನಗೆ ಈಗ ಯಾವ ಸುಖವೂ ಪ್ರಯೋಜನವೂ ಇಲ್ಲ.

**೩೭.** ಹರಿ—ಇಂದ್ರ. ಅರಿದು—ಕತ್ತರಿಸಿ; ಧಾ. ಅರಿ; ಅಱಿ—ತಿಳಿ. ತನ್ನ ಮಗ ಅರ್ಜುನನನ್ನು ಮುಂದೆ ಕರ್ಣನು ಗೆಲ್ಲದಂತೆ ಮಾಡಬೇಕೆಂದು

ಇಂದ್ರನು ವಟುವೇಷದಲ್ಲಿ ಬಂದು ಕರ್ಣನ ಸಹಜಕವಚವನ್ನು ಬೇಡಿದಾಗ ಅವನು ಸ್ವಲ್ಪವೂ ಹಿಂಜರಿಯದೆ ತನ್ನ ಮೈಯಿಂದ ಅದನ್ನು ಕತ್ತರಿಸಿ ಕೊಟ್ಟನು (ಪಂಪಭಾ, ೧. ೯೯ ವ—೧೦೨ ನೋಡಿ). ಕೊಂತಿ—ಕುಂತಿ. ಬೆಗಡದೆ—ಅಳುಕದೆ. ಪುರಿಗಣೆ—ಒಂದು ಬಗೆಯ ದಿವ್ಯಾಸ್ತ್ರ. ಪುರಿಗಣೆಯನ್ನು ಯುದ್ಧದಲ್ಲಿ ಪ್ರಯೋಗಿಸುವುದಿಲ್ಲವೆಂದು ಕರ್ಣನಿಂದ ಮಾತನ್ನು ಕುಂತಿ ಪಡೆದದ್ದಕ್ಕೆ ಪಂಪಭಾ, ೯. ೮೭ನ್ನು ನೋಡಿ. ಕಸವರಗಲಿ—ಚಿನ್ನವನ್ನು (ದಾನಮಾಡುವುದರಲ್ಲಿ) ಶೂರ, ದಾನಶೂರ. ಮೆಯ್ಗಲಿ—ಪರಾಕ್ರಮಿ.

**೩೮.** ಕಣ್ಣಮುಂದೆ ನಿನ್ನ ಆಕೃತಿಯಿದೆ, ಹೃದಯದಲ್ಲಿ ನಿನ್ನ ಮೂರ್ತಿ ನೆಲಸಿದೆ, ಕಿವಿಯಲ್ಲಿ ನಿನ್ನ ಧ್ವನಿ ಇನ್ನೂ ಮೊಳಗುತ್ತಿದೆ; ಹೀಗಿರುವಾಗ ನೀನು ನನ್ನನ್ನು ಅಗಲಿದ್ದು ಹೇಗೆ ಎಂದು ದುರ್ಯೋಧನನು ಪ್ರಶ್ನಿಸುತ್ತಾನೆ. ದುರ್ಯೋಧನನ ಉತ್ಕಟಪ್ರೇಮದ ಪರಿಣಾಮವಾಗಿ ಅವನ ಕರಣಗಳಿಗೆ ಕರ್ಣನ ರೂಪವೂ ಧ್ವನಿಯೂ ಇನ್ನೂ ಗೋಚರವಾಗಿಯೇ ಇವೆ; ಕರ್ಣನು ಅಳಿದನೆಂದು ಅವನು ನಂಬಲೇ ಆರ. ಅರಣ್ಯಕ್ಕೆ ನಡೆದ ರಾಮನನ್ನು ಕುರಿತು ದಶರಥನು ಹಂಬಲಿಸಿ ಆಡಿದ ಒಂದು ಉಕ್ತಿ ಇಲ್ಲಿ ನೆನಪಿಗೆ ಬರುತ್ತದೆ:

> ಹೃದಯಾನ್ನಾಪಯಾತೋಽಸಿ ದಿಕ್ಷು ಸರ್ವಾಸು ದೃಶ್ಯಸೇ |
> ವತ್ಸ ರಾಮ ಗತೋಽಸೀತಿ ಸಂತಾಪಾದನುಮೀಯಸೇ ||
> (ಸೂಕ್ತಿಮುಕ್ತಾವಲೀ, ಪುಟ ೩೧೩)

**೩೯.** ಈ ಪದ್ಯವನ್ನು ಗದಾಸಂ, ೫. ೨೪ರೊಂದಿಗೆ ಹೋಲಿಸಿ. ಅಲ್ಲಿ ದುಶ್ಶಾಸನನ ಹೆಸರು ಮಾತ್ರ ಬಂದಿದ್ದರೆ, ಇಲ್ಲಿ ದುಶ್ಶಾಸನ, ಕರ್ಣ ಇಬ್ಬರನ್ನೂ ಕುರಿತ ಸಂತಾಪ ವ್ಯಕ್ತವಾಗಿದೆ. ಕಿರೀಟಿ—ಅರ್ಜುನ. ಎನ್ನ ಅಣುಗನಂ—ನನ್ನ ಪ್ರಿಯ ದುಶ್ಶಾಸನನನ್ನು.

**೪೦.** ಇಂದು ಆನ್ ಆದೆಂ . . . ಆದರ್—ಈ ಹೊತ್ತು ನಾನು ಮಾತ್ರ ಬದುಕಬೇಕು ಅಥವಾ ಪಾಂಡವರು ಮಾತ್ರ ಬದುಕಬೇಕು; ಎಂದರೆ, ನಾನೂ ಅವರೂ ಇಬ್ಬರೂ ಜೊತೆಯಾಗಿ ಬದುಕಿರುವುದು ಸಾಧ್ಯವಿಲ್ಲ. ಯುದ್ಧದಲ್ಲಿ ಒಬ್ಬರು ಮಡಿಯಲೇ ಬೇಕು.

**೪೧.** ಇರವು—ಸ್ಥಿತಿ. ಎನ್ನ ಅಸು—ನನ್ನ ಪ್ರಾಣ. ಬರ್ದಂ—ಬದುಕಿದವನು; ಹಳಗನ್ನಡದಲ್ಲಿ ಈ ಪದದ ರೂಪ ಬಟ್ದಂ ಎಂದು; ಧಾ. ಬಾಟ್.

**೪೨.** ಇನ್ನೇನಂ ಕಾಣಿಸಲಿರ್ದಪೆ—ಇದಕ್ಕಿಂತಲೂ ಘೋರವಾದ ಇನ್ನೇನನ್ನು ನಾನು ನೋಡಲೆಂದು ನೀನು ಒದಗಿಸಲಿದ್ದೀಯೆ?

**೪೩.** ಅಚ್ಚು—ಪ್ರೀತಿ. ಓಲಗ—ಆಸ್ಥಾನ. ಸಮಂತು—ಚೆನ್ನಾಗಿ. ಆರೋಗಿಪೆಂ—ಭೋಜನ ಮಾಡುವೆನು. ಇಭವಾಜಿಗಳಂ—ಆನೆಕುದುರೆಗಳನ್ನು.

**೪೪.** ಅಸುಮೋಕ್ಷ—ಪ್ರಾಣವಿಸರ್ಜನೆ. ಬಾಷ್ಪಾಂಬುಮೋಕ್ಷ—ಕಂಬನಿಯ ವಿಸರ್ಜನೆ. °ಶಿಖಿ—ಅಗ್ನಿ. ಸತ್ಕ್ರಿಯಾನಳ—ಸಂಸ್ಕಾರಾಗ್ನಿ. ಮತ್ಪ್ರಿಯತಮಂ ಕರ್ಣಂಗೆ: ಇಲ್ಲಿ ವಿಶೇಷಣಕ್ಕೆ ವಿಶೇಷ್ಯದ ವಿಭಕ್ತಿಯನ್ನೇ ಅನ್ವಯಿಸಿಕೊಳ್ಳಬೇಕು. ಕೂರ್ತೆನೋ—ಪ್ರೀತಿಸಿದೆನೋ! ಕರ್ಣನು ನನಗಾಗಿ ಪ್ರಾಣವನ್ನೇ ಬಿಟ್ಟನು; ನಾನು ಅವನಿಗಾಗಿ ಕಣ್ಣೀರನ್ನು ಕೂಡ ಇನ್ನೂ ಬಿಡಲಿಲ್ಲ. ಅವನು ತನ್ನದಾಗಬೇಕಾಗಿದ್ದ ಭೂಮಂಡಲವನ್ನೇ ನನಗೆ ಕೊಟ್ಟನು; ನಾನು ಅವನಿಗೆ ತರ್ಪಣೋದಕವನ್ನು ಕೂಡ ಕೊಡಲಿಲ್ಲ. ಅವನು ತನ್ನ ಪ್ರತಾಪಾಗ್ನಿಯಿಂದ ಶತ್ರುರಾಜ್ಯಗಳನ್ನು ಸುಟ್ಟನು; ನಾನು ಅವನ ಕಳೇಬರವನ್ನಾದರೂ ಮಂತ್ರಾಗ್ನಿಯಿಂದ ಸುಡಲಿಲ್ಲ. ಅವನು ನನಗಾಗಿ ಇಷ್ಟೊಂದು ಅಸಾಮಾನ್ಯಕಾರ್ಯಗಳನ್ನು ಮಾಡಿದರೂ, ಸಾಮಾನ್ಯವಾಗಿ ಯಾರಾದರೂ ತನ್ನ ಮಿತ್ರನಿಗೆ ಮಾಡತಕ್ಕ ಅಲ್ಪಕಾರ್ಯಗಳನ್ನು ಕೂಡ ನಾನು ಅವನಿಗೆ ಮಾಡಲಿಲ್ಲ. ಕರ್ಣನು ನನಗೆ ಪ್ರಿಯತಮನೆಂದು ಹೆಸರು; ಹಾಗೆಂದು ಇದುವರೆಗೂ ಹೇಳಿಕೊಂಡೆ, ಹೊಗಳಿಸಿಕೊಂಡೆ. ಅಂಥವನಿಗೆ ನಾನು ಇದೆಂಥ ಪ್ರೀತಿಯನ್ನು ತೋರಿಸಿದೆನೋ!

**೪೫.** ವಾಗ್ಜಲದಿಂ: ಕರ್ಣನನ್ನು ಕುರಿತ ನಿನ್ನ (ಇದುವರೆಗಿನ) ವಾಗ್ಧಾರೆಯಿಂದ. ಇಲ್ಲಿ ಮೂಲಪಾಠ ಏನಿತ್ತೆಂಬ ವಿಷಯದಲ್ಲಿ ಸಂದೇಹವಿದೆ. "ದೃಗ್ಜಲದಿಂ" (=ಕಣ್ಣೀರಿನಿಂದ) ಎಂಬುದು "ಕಣ್ಣೀರ್ಗಳಿಂದೆಯ್ದೆ ನೀರ್ಗೊಟ್ಟಯ್" ಎಂದು ಪಂಪಭಾರತದಲ್ಲಿ (೧೩. ೬೧) ಇದೇ ಸಂದರ್ಭದಲ್ಲಿ ಬಂದಿರುವ ಉಕ್ತಿಯನ್ನು ಅನುಸರಿಸಿ (ನ) ಪ್ರತಿಯನ್ನು ಇತ್ತೀಚೆಗೆ

ಪರಿಶೀಲಿಸಿದ ಯಾರೋ ಒಬ್ಬರು ಮಾಡಿದ ತಿದ್ದುಪಾಡೆಂದು ತೋರುತ್ತದೆ. "ಆಗದೆನಗಂ ಬಾಷ್ಪಾಂಬುಮೋಕ್ಷಂ" ಎಂದು ದುರ್ಯೋಧನನು ಹಿಂದಿನ ಪದ್ಯದಲ್ಲಿ ತಾನೆ ಹೇಳಿರುವುದರಿಂದ ಈ ತಿದ್ದುಪಾಡನ್ನು ಅಂಗೀಕರಿಸುವುದು ಕಷ್ಟ. ಅಹರ್ಪತಿ—ಸೂರ್ಯ; ಅಹರ್ಪತಿ, ಅಹಃಪತಿ, ಅಹಸ್ಪತಿ—ಈ ಮೂರು ರೂಪಗಳೂ ಉಂಟು.

**೪೬.** ಪೆಂಡಿರ್ . . ಅಂದದೆ—ಹೆಂಗಸರು ಅಳುವ ರೀತಿಯಲ್ಲಿ. ಆಯ—ಶೌರ್ಯ. ಎಸಪರ್—ಎಸಗುವವರು, ಕಾರ್ಯನಡಸುವವರು. °ಮಂಡನ—ಅಲಂಕಾರಪ್ರಾಯನಾದವನು. ಮೆಱೆಯಾ—(ಮೆಱೆ+ಆ) ಪ್ರದರ್ಶಿಸು. ದುರ್ಯೋಧನನ ತೀವ್ರಶೋಕವನ್ನು ನೋಡಿ ಸಂಜಯನ ಮನಸ್ಸೇ ಪರಿವರ್ತನೆ ಹೊಂದುತ್ತದೆ. ಯುದ್ಧ ಬೇಡವೆಂದು ಹಿಂದೆ ಹೇಳುತ್ತಿದ್ದವನು ಈಗ ಛಲವನ್ನು ತೋರಿಸಿ ಯುದ್ಧಮಾಡೆಂದು ತಾನೇ ದುರ್ಯೋಧನನಿಗೆ ಸಲಹೆ ಕೊಡುತ್ತಾನೆ.

**೪೭.** ದರಹಾಸಪೇಶಲಂ—ಮುಗುಳುನಗೆಗೂಡಿ ಮನೋಹರನಾದ. ದಿಕ್ಕರಿಗಮನಂ—ದಿಗ್ಗಜದಂತೆ (ಗಂಭೀರವಾದ) ನಡಗೆಯುಳ್ಳ. ಕನಕಪರ್ವತ ಪ್ರಾಂಶು—ಮೇರುಪರ್ವತದಂತೆ ಉನ್ನತನಾದ. ದಿನೇಶ್ವರಸುತನ—ಸೂರ್ಯ ಪುತ್ರನ, ಕರ್ಣನ. °ಭಿತ್ತಿ—ಗೋಡೆ. ಇಲ್ಲಿ ಉಪಯೋಗಿಸಿರುವ ವಿಶೇಷಣ ಗಳು ಕರ್ಣನ ಉನ್ನತಿಯನ್ನೂ ದೀಪ್ತಿಯನ್ನೂ ಎತ್ತಿಹಿಡಿದು ಅವನ ಮೂರ್ತಿ ಕಲ್ಪನೆಯನ್ನು ಬಲುಚೆನ್ನಾಗಿ ಮಾಡಿಕೊಡುತ್ತವೆ.

**೪೮.** ದೀಕ್ಷಾವಿಧಿಗಳ್ಗೆ ಗುರು, ಹಿತಕಾರ್ಯಾಳೋಚಸಕ್ಕೆ ಮಂತ್ರಿ, ಉರ್ವರೆಯಂ ಕಾವ ಗುಣಕ್ಕೆ ಆಳ್ದಂ, ಕ್ರೀಡಾರಸಕ್ಕೆ ನರ್ಮಸಚಿವಂ, . . .—ಈ ರೀತಿಯಾಗಿ ಅನ್ವಯಿಸಿಕೊಳ್ಳಬೇಕು. ದೀಕ್ಷಾವಿಧಿ—ಯಜ್ಞಯಾಗಾದಿ ಗಳಲ್ಲಿ ಕೈಕೊಳ್ಳುವ ದೀಕ್ಷಾಕ್ರಮ. ಉರ್ವರೆ—ಭೂಮಿ. ಆಳ್ದಂ—ಸ್ವಾಮಿ, ಒಡೆಯ; ಧಾ. ಆಳ್. ಗುರುಭಾರಕ್ಕೆ ಆನೆಯಾಳ್—ಅತಿಭಾರವಾದ ಕಾರ್ಯವೊದಗಿದಾಗ ನಿರ್ವಹಿಸುವುದರಲ್ಲಿ ಆನೆಯಂಥ ಬಂಟ. ಇಱಿವಾಳ್—ಹೋರಾಡುವ ಭಟ. ತುಟಿಲಾಳ್ ಕಟ್ಟಾಯದೊಳ್—ಅತಿಶಯಸಾಮರ್ಥ್ಯ ವನ್ನು ತೋರಿಸುವುದರಲ್ಲಿ (?) ಯುದ್ಧವೀರ. ಮೇಳದಾಳ್—ಗೋಷ್ಠೀ ಸಚಿವ; ಮೇಳದ ಕೆಳದಿ (ಗದಾಸಂ, ೨. ೨ವ) ಎಂಬ ಮಾತನ್ನು ಹೋಲಿಸಿ.

೪೮ ವ. ಸಂಕ್ರಂದನನಂದನ— ಇಂದ್ರಪುತ್ರ, ಅರ್ಜುನ.

೪೯. ತರಣಿ°—ಸೂರ್ಯ. ಗುಣೌಘ°—ಗುಣಸಮೂಹ. ಕಯ್‌ಗಣ್ಮು— (ಕಯ್ + ಕಣ್ಮು) ಕೈಮೀರು. ಬಾಡಬಾಗ್ನಿ—ಸಾಗರದ ಒಳಗಡೆ ನೆಲಸಿದ್ದು ಅದರ ನೀರನ್ನು ಹೀರುವುದೆಂದು ಹಿಂದಿನವರು ಭಾವಿಸಿದ್ದ ಅಗ್ನಿ.

೪೯ ವ. ಶೋಕರಸಮಂ . . . ಮೇಲಿಕ್ಕಿ—ಶೋಕವು ಕೋಪದ ಮೇಲೆ ಆಧಾರಗೊಳ್ಳುವಂತೆ ಮಾಡಿ, ಎಂದರೆ ಶೋಕಕ್ಕೆ ಪೋಷಕವಾಗಿ ಕೋಪವನ್ನು ಬೆಳಸಿ. (ಪಂಪಭಾ, ೧೩. ೬೧ ವ. ನ್ನು ಹೋಲಿಸಿ.) ಇಲ್ಲಿ ರಸ ಎಂಬುದು ಕಾವ್ಯರಸವಲ್ಲ, ಅದು ವ್ಯಾವಹಾರಿಕ ಚಿತ್ತವೃತ್ತಿ. ಮಾರ್ಪಡೆ. ನಡೆವ— ಶತ್ರುಸೈನ್ಯವು ಸಮೀಪಿಸುವುದನ್ನು ನೋಡಿ (ಅದನ್ನೆದುರಿಸಲು) ನಡೆಯುವ. ದಂದಶೂಕಪತಾಕ—ಸರ್ಪಧ್ವಜ, ದುರ್ಯೋಧನ. ನಿಜಗುರುಜನ°—ನಿಮ್ಮ ತಾಯಿತಂದೆಗಳ. ಇಂ—ಇನ್ನು.

## ೬. ಭೀಷ್ಮವಚನಂ

೧. ನರ°—ಅರ್ಜುನನ. ಜರ್ಜರಿಸೆ—ಛಿನ್ನ ಭಿನ್ನ ಗೊಳಿಸಲು. ಕುರುಭೂಮಿ— ಕುರುಕ್ಷೇತ್ರ. ತನ್ನ ಶರೀರದಲ್ಲಿ ನಾಟಿದ ಅರ್ಜುನಬಾಣಗಳು ಅತಿಯಾಗಿ ಬಾಧೆಕೊಡುತ್ತಿದ್ದರೂ ಅದನ್ನು ಭೀಷ್ಮನು ಗಮನಿಸದೆ ಒಂದೇ ಮನಸ್ಸಿನಿಂದ ಮುಕುಂದನನ್ನು ಧ್ಯಾನಿಸುತ್ತಿದ್ದನು; ಆದರೆ, ದುರ್ಯೋಧನನಿಗೆ ಯುದ್ಧರಂಗ ದಲ್ಲಿ ಈಗ ಏನು ಒದಗಿದೆಯೋ ಎಂಬ ಚಿಂತೆ ಆ ದೈವಧ್ಯಾನವನ್ನೂ ಕದಲಿಸಿ ಭೀಷ್ಮನ ಮನಸ್ಸನ್ನು ಇಬ್ಬಗಿಯಾಗಿ ಮಾಡಿತು! ತನ್ನ ಯೋಗನಿಷ್ಠೆ ಯನ್ನೂ ಅಳ್ಳಾಡಿಸುವಷ್ಟು ಮಟ್ಟಿಗೆ ಅವನಿಗೆ ದುರ್ಯೋಧನನಲ್ಲಿ ಮಮತೆ ಯಿತ್ತು! ಈ ಪದ್ಯದೊಡನೆ ಪಂಪಭಾ, ೧೩.೬.೩ ನ್ನು ಹೋಲಿಸಿ. ಭೀಷ್ಮನು ಹರನನ್ನು ನೆನೆಯುತ್ತಿದ್ದನೆಂದು ಅಲ್ಲಿ ಹೇಳಿರುವುದಕ್ಕಿಂತ ಮುಕುಂದನನ್ನು ನೆನೆಯುತ್ತಿದ್ದನೆಂದು ಇಲ್ಲಿ ಹೇಳಿರುವುದು ಉಚಿತವಾಗಿದೆ; ಭೀಷ್ಮನು ಕೃಷ್ಣ ಭಕ್ತನೆಂಬುದು ಮಹಾಭಾರತದಲ್ಲೇ ಪ್ರಸಿದ್ಧವಾಗಿದೆ.

**೨.** ಒಕ್ಕು—ಬಿಟ್ಟು ; ಧಾ. ಒಗು. ಇಳಿಂಕೆಗೊಂಡು—ಕಡೆಗಣಿಸಿ. ಆನೆ ಕಡಂಗಿದೆಂ—ನಾನೇ ಉತ್ಸಾಹಿಸಿದೆನು. ಕತದಿಂದಂ—ಕಾರಣದಿಂದ. ತಾನು ಗುರುಹಿರಿಯರ ಮಾತನ್ನು ಮೀರಿದ್ದು ಇಷ್ಟೆಲ್ಲ ಅನಾಹುತಕ್ಕೆ ದಾರಿಮಾಡಿತೆಂದು ದುರ್ಯೋಧನನಿಗೆ ಈ ವೇಳೆಗೆ ಚೆನ್ನಾಗಿ ಗೊತ್ತಾಗಿದೆ.

**೨ ವ.** ಮೊಮ್ಮ—ಮೊಮ್ಮಗ. ಸೊಪ್ಪುಳ್—ಶಬ್ದ. ವಿಕಚ—ಅರಳಿದ, ಧವಳಕುವಲಯದಳ—ಬಿಳಿನೈದಿಲೆಯ ಎಸಳಿನ, ವಿಲಾಸವನ್ನು, ಉಪಹಾಸಿಗಳುಂ—ಉಪಹಾಸಮಾಡತಕ್ಕವೂ ; ಎಂದರೆ, ಬಿಳಿನೈದಿಲೆಯ ಎಸಳುಗಳಿಗಿಂತ ಸುಂದರವಾಗಿರತಕ್ಕವೂ. ದರನಿಮೀಲಿತ—ಅರೆಮುಚ್ಚಿದ, ಕಮಲವುಳ್ಳ, ಕಮಲಾಕರ—ಕೊಳ. ಕರ್ಣಾಭ್ಯರ್ಣ—ಕಿವಿಯ ಸಮೀಪ. °ಗಭಸ್ತಿಮಾಲಿ—ಸೂರ್ಯ. ಯೋಗಾಭಿಯೋಗ—ಯೋಗದಲ್ಲಿ ನಿರತನಾಗಿರುವುದು. ಚರಣೋಪಾಂತ—ಪಾದಸಮೀಪದಲ್ಲಿರುವ, ಉತ್ತಮಾಂಗ—ಶಿರಸ್ಸುಳ್ಳವನು ; ಎಂದರೆ, (ಭೀಷ್ಮನ) ಪಾದಕ್ಕೆ ತಲೆಯೊಡ್ಡಿ ನಮಸ್ಕರಿಸಿದವನು. °ಉತ್ತಂಸ—ಆಭರಣಪ್ರಾಯನಾದವನು. ಭೀಷ್ಮರ್ ಲೋಚನನಾಗಿ : ಇಲ್ಲಿ ವಚನದಲ್ಲಿ ಹೊಂದಿಕೆ ತಪ್ಪಿದೆ. ಭೀಷ್ಮ[ಂ] ಎಂದು ಮೂಲಪಾಠವಿದ್ದಿರಬೇಕೆಂದು ತೋರುತ್ತದೆ.

**೩.** ಧವಳಾತಪತ್ರ—ಶ್ವೇತಚ್ಛತ್ರ. ಧವಳಮಂಗಳಗೇಯ—ಧವಳವೆಂಬ ಮಂಗಳಗೀತ ; ಧವಳ ಎಂಬುದು ಒಂದು ಬಗೆಯ ಹಾಡು (ರಾಘವಾಂಕ : ಸಿದ್ಧರಾಮಚಾರಿತ್ರ, ೮. ೮೭, ೮೯ ನೋಡಿ) ; ಧವಳ ಎಂಬ ರಾಗವೂ ಉಂಟು. ಕೌರವಧವಳ—ಕೌರವಪುಂಗವ, ಕೌರವಶ್ರೇಷ್ಠ ; ಇಲ್ಲಿ ಧವಳ ಎಂದರೆ ಉತ್ತಮವಾದ ವೃಷಭ. ಈ ಪದ್ಯದಲ್ಲಿ ಧವಳಶಬ್ದದ ನಾನಾರ್ಥಗಳನ್ನು ಕವಿ ಉಪಯೋಗಿಸಿಕೊಂಡಿದ್ದಾನೆ. ದೇಸಿಗ—ಪರದೇಶಿ ; ಸಂ. ದೇಶಿಕ. ರಾಜಲಕ್ಷಣಗಳು ಯಾವುವೂ ಇಲ್ಲದೆ ತನ್ನ ರಾಜ್ಯದಲ್ಲೇ ಪರದೇಶಿಯಂತೆ ದುರ್ಯೋಧನನು ಸಂಚರಿಸಬೇಕಾಗಿ ಬಂದಿದೆ.

**೩ ವ.** °ಸ್ವಾಂತ—ಮನಸ್ಸು. ವಿದಿತವೇದಿತವ್ಯ—ತಿಳಿಯಬೇಕಾದದ್ದನ್ನು ತಿಳಿದವನು, ಎಂದರೆ ಜ್ಞಾನಿ. ಭಾವಿತಾತ್ಮ—ಆತ್ಮಸ್ವರೂಪವನ್ನು ಪರಿಭಾವಿಸಿ ಅರಿತವನು. ಸಮರಪರಿಚ್ಛೇದ—ಯುದ್ಧವನ್ನೇ ಮಾಡುವ ನಿಶ್ಚಯ.

°ಅನ್ವಯ—ವಂಶ. ಇನ್ನೆವರೆಗಂ—ಇದುವರೆಗೆ. ಗೋತ್ರ°—ವಂಶ. ಎಮ್ಮ ಎಂದುದಂ—ನಾವು ಹೇಳಿದ್ದನ್ನು.

**೪.** ಪೊಡೆಮಟ್ಟು . . . ಎನೆ—ನಿಮಗೆ ನಮಸ್ಕಾರ ಮಾಡಿ ಹೋಗುವುದು ಮಾತ್ರವೇ (ಈಗಿನ) ಏರ್ಪಾಡು ಎಂದು ; ಎಂದರೆ ನಿಮಗೆ ನಮಸ್ಕಾರ ಮಾಡಿ ನಿಮ್ಮ ಆಶೀರ್ವಾದ ಪಡೆದು ಹೋಗುವುದಕ್ಕೆ ಮಾತ್ರ. ಅಹಿತ—ಶತ್ರು. ಸಮಕೊಳಿಸು—ಏರ್ಪಡಿಸು. ಸಮರದೊಳ್ ಕಜ್ಜಂ : ಯುದ್ಧದಲ್ಲಿ ನಾನು ಮಾಡಬೇಕಾದ ಕೆಲಸವೇನೆಂಬುದನ್ನು ಮಾತ್ರ ನೀವು ನನಗೆ ಹೇಳಿ ಕೊಡಿ ; ಸಂಧಿಯ ಮಾತನ್ನು ಎತ್ತಬೇಡಿ.

**೫.** ನೆಲಕೆ ಪಾಂಡುಸುತರೊಳ್—ನಾನು ಪಾಂಡವರ ಸಂಗಡ ಯುದ್ಧಮಾಡುವುದು ರಾಜ್ಯಕ್ಕಾಗಿ ಎಂದು ಭಾವಿಸುತ್ತೀರಾ? ನಾನು ಕಾದುವುದು ಛಲಕ್ಕೋಸ್ಕರ, ನೆಲಕ್ಕೋಸ್ಕರ ಅಲ್ಲ. ಪಾಳ್ನೆಲಂ ಎನಗೆ—ನನ್ನ ಪಾಲಿಗೆ ಹಾಳುಭೂಮಿ. ದಿನಪಸುತನಂ ಕೊಲಿಸಿದ ನೆಲನೊಡನೆ: ಯುದ್ಧಕಾಲದಲ್ಲಿ ಕರ್ಣನ ರಥದ ಚಕ್ರವನ್ನು ಭೂಮಿ ಹಿಡಿದುಕೊಂಡಿತು. ಸಾರಥಿಯಾಗಿದ್ದ ಶಲ್ಯನು ಆ ಮೊದಲೇ ಜಗಳವಾಡಿ ಹೊರಟುಹೋಗಿದ್ದನು. ರಥಚಕ್ರವನ್ನು ಮೇಲೆತ್ತುವುದಕ್ಕೆ ಕರ್ಣನಿಗೆ ಅವಕಾಶಕೊಡದೆ ಕೃಷ್ಣನ ಪ್ರೇರಣೆಯಿಂದ ಅರ್ಜುನನು ಯುದ್ಧಮಾಡಿ ಅಸ್ತ್ರವನ್ನು ಪ್ರಯೋಗಿಸಿ ಕರ್ಣನನ್ನು ಕೊಂದನು. (ಪಂಪಭಾರತದಲ್ಲಾದರೆ, ಕರ್ಣನು ಗಾಲಿಯನ್ನು ಕಿತ್ತು ಮತ್ತೆ ರಥವನ್ನೇರಿದನೆಂದು ಹೇಳಿದೆ; ೧೨. ೨೦೮ ವ. ನೋಡಿ.) ಹೀಗೆ ಭೂಮಿ ಕರ್ಣನ ರಥವನ್ನು ನುಂಗಿ ಅವನ ಕೊಲೆಗೆ ಕಾರಣವಾಯಿತು. ತನ್ನ ಪ್ರಿಯಮಿತ್ರನನ್ನು ಕೊಲ್ಲಿಸಿದ ಇಂಥ ದ್ರೋಹಿಯಾದ ಭೂಮಿಯೊಡನೆ ತಾನು ಮತ್ತೆ ಬಾಳುವುದು ಹೇಗೆ? ಎಂದರೆ, ಆ ಭೂಮಿಗೆ ಪತಿಯಾಗಿ ಅದನ್ನು ಆಳುವುದು ತನಗೆ ಸಾಧ್ಯವಿಲ್ಲ ಎಂದು ದುರ್ಯೋಧನನ ದೃಢೋಕ್ತಿ.

**೬.** ಅನುಜವ್ಯಪೇತ—ತಮ್ಮಂದಿರಿಂದ ವಿರಹಿತನಾದ, ತಮ್ಮಂದಿರನ್ನು ಕಳೆದುಕೊಂಡ. ಅಳಿಪಿ—ಆಸೆಪಟ್ಟು. ಮುನಿವರ . . . ಪಕ್ಕಾಗಿರೆನೇ—ನನ್ನನ್ನು ದ್ವೇಷಿಸುವವರ ಮತ್ತು ಮೆಚ್ಚುವವರ ಮಾತಿಗೆ ನಾನು ಗುರಿಯಾಗುವುದಿಲ್ಲವೆ,

ಎಂದರೆ ಶತ್ರುಮಿತ್ರರಿಬ್ಬರೂ ನಾನು ಮಾಡಿದ್ದು ಅನುಚಿತವೆಂದು ಅಲ್ಲಗಳೆಯು ವುದಿಲ್ಲವೆ ?

೭. ತದ್ವಶಮಾಂಸದೆ—ಅವರ ಕೊಬ್ಬು ಮಾಂಸಗಳಿಂದ ; ವಶ= ವಸಾ—ಕೊಬ್ಬು. ಭೂತಭೋಜನ—ಭೂತಗಳಿಗೆ ಔತನ. ವೈರಿ ಬೆಳರ್ ವಾಡದೆ—ಶತ್ರುಗಳ ವೇಶ್ಯೆಯರ ಮುಖಕಮಲಗಳನ್ನು ಬಿಳುಪೇರಿಸದೆ, ಎಂದರೆ ಶತ್ರುಗಳನ್ನು ಕೊಂದು ಅವರ ಪ್ರಿಯೆಯರಿಗೆ ಶೋಕವನ್ನುಂಟುಮಾಡದೆ. ಇದನ್ನೆಲ್ಲ ಮಾಡಿದ ಹೊರತು ತನ್ನವರ ಕೊಲೆಯ ಸೇಡನ್ನು ತೀರಿಸಿ ಕೊಂಡಂತಾಗುವುದಿಲ್ಲ.

೮. ಬಾಡಮಂ ಅಯ್ದಂ—ಐದು ಗ್ರಾಮಗಳನ್ನು ; ಬಾಡ—ಸಂ. ಪಾಟ (ಕ). ಅಟ್ಟಿದೊಡೆ—ದೂತರನ್ನು ಕಳಿಸಿದರೆ. ಏಡಿಸಿ—ಅಣಕಿಸಿ. ಜೋಡಿ ಸನೆ—ಹಾಸ್ಯಮಾಡುವುದಿಲ್ಲವೆ ? ಐದು ಹಳ್ಳಿಗಳನ್ನು ತಮಗೆ ಕೊಟ್ಟರೆ ಸಾಕು ಎಂದು ಹಿಂದೆ ಪಾಂಡವರು ತಾವಾಗಿಯೇ ಕೃಷ್ಣನೊಂದಿಗೆ ಹೇಳಿಕಳಿಸಿದಾಗ ನಾನು ಒಪ್ಪಲಿಲ್ಲ ; ಸೂಜಿಯ ಮೊನೆಯನ್ನು ಊರುವಷ್ಟು ಭೂಮಿಯನ್ನೂ ಕೊಡುವುದಿಲ್ಲವೆಂದು ನಿರಾಕರಿಸಿದೆನು. ಈಗ ಯುದ್ಧದಲ್ಲಿ ಅವರದೇ ಮೇಲು ಗೈಯಾಗಿ ರಾಜ್ಯವೆಲ್ಲವೂ ಅವರದೇ ಆಗಿದೆ. ಇಂಥ ಸಮಯದಲ್ಲಿ ನಾನಾ ಗಿಯೇ ಸಂಧಿಯ ಮಾತನ್ನೆತ್ತಿ, ಅರ್ಧರಾಜ್ಯದ ಪಾಲನ್ನು ಬೇಡಿ ಹೇಳಿ ಕಳಿಸಿದರೆ, ಭೀಮನು ಹಿಂದಿನದನ್ನೆಲ್ಲ ಜ್ಞಾಪಿಸಿ ನನ್ನನ್ನು ಅಣಕಿಸಿ ನಗುವು ದಿಲ್ಲವೆ ? ಭೀಮನ ಪರಿಹಾಸಕ್ಕೆ ಹೀಗೆ ಗುರಿಯಾಗುವುದಕ್ಕಿಂತ ಮತ್ತೆ ಯಾವ ದುಃಸ್ಥಿತಿಯಿದೆ ಎಂದು ಭಾವ. ಯಾವಾಗಲೂ ಭೀಮನ ಕಡೆಗೇ ದುರ್ಯೋಧನನ ಕಣ್ಣು.

೯. ಎನ್ನ ಅಣುಗಾಳಂ—ನನ್ನ ಪ್ರೀತಿಯ ಬಂಟನಾದ ಕರ್ಣನನ್ನು. ಉಳ್ಳನ್ನೆಗಂ—ಬದುಕಿರುವವರೆಗೆ. ಎನ್ನ ಅಸು ಉಳ್ಳಿನಂ—ನನ್ನ ಪ್ರಾಣ ವಿರುವವರೆಗೆ. ಇಕ್ಕುವೆಂ—ಕೊಲ್ಲುವೆನು. ಸಂಧಿಗೆಯ್ವೊಂ—ಸಂಧಿಮಾಡೋಣ. ಗೆಯ್ವೊಂ= ಗೆಯ್ವಂ ; ಈ ವಿಶೇಷರೂಪವನ್ನು ಗಮನಿಸಬೇಕು. ಎನ್ನ ಅಲ್ ಆಱಿದೊಡೆ—ನನ್ನ ದುಃಖ ಶಮನವಾದರೆ. ಈ ಪದ್ಯದೊಂದಿಗೆ ಗದಾಸಂ, ೪. ೧೭ ನ್ನು ಹೋಲಿಸಿ.

**೧೦.** ಅಣಂ—ಸ್ವಲ್ಪವೂ. ಅಜ್ಜ : ಇದು ಭೀಷ್ಮನಿಗೆ ಸಂಬೋಧನೆ. ತನ್ನವರೆಲ್ಲರೂ ಮಡಿದಿರುವಾಗ, ನೋಡಿ ಸಂತೋಷಿಸಿ, ಒಡಗೂಡಿ ಅನುಭವಿಸುವವರೇ ಇಲ್ಲದಿರುವಾಗ, ತನಗೊಬ್ಬನಿಗೇಕೆ ರಾಜವೈಭವ!

**೧೧.** ಖಂಡಿತಂ ಎನಿಪ್ಪ—ಕತ್ತರಿಸಿದ್ದು ಎನಿಸಿಕೊಳ್ಳುವ, ಎಂದರೆ (ಸಂಧಿಯ ಮೇರೆಗೆ ವಿಭಾಗವಾಗಿ) ತುಂಡಾದ. ಏ ಭಂಡಂ—ಏನು ಪ್ರಯೋಜನ; ಈ ಮುಕ್ಕಾದ ರಾಜ್ಯಸಂಪತ್ತಿನಿಂದ ನನಗೇನು ಕೆಲಸ? ಅಖಂಡಿತಂ ಅಭಿಮಾನಂ—ನನ್ನ ಅಭಿಮಾನ ಸ್ವಲ್ಪವೂ ಮುಕ್ಕಾಗಿಲ್ಲ. ಬಲ್ವಿಡಿವಿಡಿವೆಂ—ದೃಢವಾಗಿ ಪಟ್ಟುಹಿಡಿಯುತ್ತೇನೆ; ನನಗಿನ್ನೂ ಪೂರ್ಣವಾಗಿ ಉಳಿದಿರುವ ಸ್ವಾಭಿಮಾನವನ್ನು ಕಾದುಕೊಳ್ಳಲು ಯುದ್ಧವನ್ನೇ ಮಾಡುತ್ತೇನೆ; ಹರುಕು ಮುರುಕು ರಾಜ್ಯಕ್ಕಾಗಿ ಸಂಧಿಗೆ ಮನಸ್ಸುಕೊಡುವುದಿಲ್ಲ. ಖಂಡಿತಂ, ಅಖಂಡಿತಂ ಎಂಬ ಪದಗಳ ಪ್ರಯೋಗ ಇಲ್ಲಿ ರಮ್ಯವಾಗಿದೆ.

**೧೨.** ಪುಟ್ಟಿದ ನೂರ್ವರುಂ—(ನನಗೆ) ಜನಿಸಿದ ನೂರುಮಂದಿಯೂ. ಇದಿರ್ಚಿ—(ಶತ್ರುಗಳನ್ನು) ಎದುರಿಸಿ. ಪೊದಳ್ದುದು—ಸಮೃದ್ಧಿಹೊಂದಿತು. ಸತ್ತರ್ ಪುಟ್ಟರೆ—ಸತ್ತವರು ಹುಟ್ಟುವುದಿಲ್ಲವೆ; ಮನುಷ್ಯನಿಗೆ ಇರುವುದು ಒಂದೇ ಜನ್ಮವೆ? ಜೀವದ ಮೇಲಿನ ಆಸೆಯಿಂದ ನಾನು ಹೇಡಿಯಾಗಲಾರೆ.

**೧೩.** ಪಾಂಡವರ್ ಆದೆಂ : ಗದಾಸಂ, ೫. ೪೦ ರ ಪೂರ್ವಾರ್ಧವನ್ನು ಹೋಲಿಸಿ. ಮೇಣ್—ಅಥವಾ. ಇಂದಿನ ಯುದ್ಧದಲ್ಲಿ ನಾನೋ ಪಾಂಡವರೋ, ಇಬ್ಬರಲ್ಲಿ ಒಬ್ಬರು ಮಾತ್ರ, ಉಳಿಯಬೇಕು. "ಅಖಂಡಿತ" ವಾದ ಭೂಮಿ ನನಗೋ ಪಾಂಡರಿಗೋ, ಇಬ್ಬರಲ್ಲಿ ಒಬ್ಬರಿಗೆ ಮಾತ್ರ, ಸೇರಬೇಕು; ಅದನ್ನು ಸಂಧಿಯ ಮೂಲಕ ಪಾಲುಮಾಡಿಕೊಂಡು ಆಳುವ ಮಾತೇ ಇಲ್ಲ ಎಂದು ಭಾವ.

**೧೩ ವ.** ನಿರ್ವ್ಯಾಜಂ—ಅಕೃತ್ರಿಮವಾದ. ಮುಹುರ್ಮುಹುಃ—ಮತ್ತೆ ಮತ್ತೆ, ಆಂದೋಳಿತ—ತೂಗಿದ, ಉತ್ತಮಾಂಗನುಂ ಆಗಿ—ಶಿರಸ್ಸುಳ್ಳವನೂ ಆಗಿ; ಎಂದರೆ, ಮೆಚ್ಚಿಕೆಯಿಂದ ಮತ್ತೆ ಮತ್ತೆ ತಲೆದೂಗಿ.

**೧೪.** ಈಗ ಹೆಮ್ಮರವಾಗಿ ಹಬ್ಬಿರುವ ವೈರದ ಬೀಜ, ಮೊಳಕೆ ಮೊದಲಾದವು ಯಾವುವೆಂಬುದು ಈ ಪದ್ಯದಲ್ಲಿ ಚೆನ್ನಾಗಿ ನಿರೂಪಿತವಾಗಿದೆ. ಜತುಗೇಹಾನಲ°—ಅರಗಿನ ಮನೆಯ ಬೆಂಕಿ. °ಜಾತಾಂಕುರಂ—ಉಂಟಾದ ಮೊಳಕೆಯುಳ್ಳದ್ದು. ಕೃತಕ—ಮೋಸದ, ದ್ಯೂತವಿನೋದವೆಂಬ, ಪಲ್ಲವ ಚಯಂ—ಚಿಗುರುಸಾಲನ್ನುಳ್ಳದ್ದು. °ಆಯತಕೇಶಗ್ರಹಪುಷ್ಪಮುಂ—ತುಂಬು ತುರುಬನ್ನು ಹಿಡಿದು (ಎಳೆದ)ದ್ದೆಂಬ ಹೂವನ್ನುಳ್ಳದ್ದು. °ದ್ರುಮ—ವೃಕ್ಷ. ಇದು ಹಣ್ಣುಬಿಡುವುದೊಂದು ಮಾತ್ರ ಉಳಿದಿದೆ! ಈ ಪದ್ಯದ ಭಾವಕ್ಕೂ ವೇಣೀಸಂ, ೪.೯ ರ ಮುಂದೆ ಸುಂದರಕನ ಭಾಷಣದಲ್ಲಿ ಬರುವ ವಿಷಶಾಖಿಯ ವರ್ಣನೆಗೂ ಕೆಲಮಟ್ಟಿಗೆ ಸಾಮ್ಯವಿದೆ.

**೧೫.** ನಿಜೋದರದಿಂ—ತನ್ನ ಹೊಟ್ಟೆಯಿಂದ. ತನ್ನ ದೇಹಕ್ಕೆ ನಾಟಿದ್ದ ಬಾಣಗಳಲ್ಲಿ ಒಂದನ್ನು ಭೀಷ್ಮನು ಕಿತ್ತು ಅದನ್ನೇ ಲೇಖನಿಯಾಗಿ ಮಾಡಿಕೊಂಡನು. ಗಜಮದಮಸಿ—ಆನೆಯ ಮದೋದಕವೆಂಬ ಮಸಿ. ಪತಾಕಾಪಟ—ಬಾವುಟದ ಬಟ್ಟೆ.

**೧೫ ವ.** ಮೊಮ್ಮಂ—(ತನ್ನ) ಮೊಮ್ಮಗ, ದುರ್ಯೋಧನ. ಎಂತಾನುಂ—ಹೇಗಾದರೂ. ಸಂಜಯನೂ ಹೀಗೆ ಹೊರಟುಹೋದ ಬಳಿಕ ಭೀಷ್ಮ ದುರ್ಯೋಧನರಿಬ್ಬರೇ ಉಳಿಯುತ್ತಾರೆ.

**೧೬.** ತುಂಗ°—ಉನ್ನತವಾದ. ಅಯಶೋಭಂಗಂ—ಅಪಕೀರ್ತಿಯಿಂದ ಭಂಗಪಡೆದದ್ದು. ಛಿದ್ರಿತಂ—ಒಡಕುಳ್ಳದ್ದು. ಎನ್ನ ದೂಸಱಿಂ—ನನ್ನ ನಿಮಿತ್ತದಿಂದ. ಆನುಂ ಗಡ ಕುರುರಾಜನೆ—ನಾನು ಇನ್ನೂ ಕುರುರಾಜನಲ್ಲವೆ! ಕುರುವಂಶದವರೆಲ್ಲರನ್ನೂ ಕೊಲೆಗೆ ಗುರಿಮಾಡಿ ಕಳೆದುಕೊಂಡ ನಾನು ಇನ್ನೆಲ್ಲಿಯ ಕುರುರಾಜ! ನೀಮುಂ. . . ವೇೞ್ದಿರ್—(ಎಲ್ಲವನ್ನೂ ಬಲ್ಲ) ನಿಮ್ಮಂಥವರು ಕೂಡ ಸಂಧಿಮಾಡಿಕೊ ಎಂದು ಹೇಳಿದಿರಲ್ಲಾ! ಅರಸು—ಅರಸತನ, ರಾಜತ್ವ.

**೧೭.** ಈ ಎರಡುಂ ಎನ್ನ ನಿಡುದೋಳ ಆಯತ್ತಂ ವೀರವೃತ್ತಿ—ವೀರತ್ವವೆಂಬುದು ಈ ನನ್ನ ನೀಳವಾದ ಎರಡು ತೋಳುಗಳನ್ನು ಅವಲಂಬಿಸಿದೆ.

ವೀರತ್ವ ನನ್ನ ಕೈಯಲ್ಲಿದೆ; ವಿಜಯ ದೈವದ ಕೈಯಲ್ಲಿದೆ. ಭರತಾನ್ವಾಯ—ಭರತವಂಶ; ಅನ್ವಾಯ=ಅನ್ವಯ. ನಮ್ಮ ಕುಲಕ್ಕೆ ನನ್ನಿಂದ ಕೆಟ್ಟ ಹೆಸರು ಬಾರದಂತೆ ಪೌರುಷವನ್ನು ಪ್ರದರ್ಶಿಸುತ್ತೇನೆ.

೧೮. ಬೆಸಕಯ್ವೆಂ ಬಿಡಿಂ—ನಿಮ್ಮ ಅಪ್ಪಣೆಯನ್ನು ಪಾಲಿಸುತ್ತೇನೆ, ನನ್ನನ್ನು ಬಿಡಿ; ಎಂದರೆ, ನನಗೆ ಅಪ್ಪಣೆಕೊಟ್ಟು ನನ್ನನ್ನು ಬೀಳ್ಕೊಡಿ. (ಗದಾಸಂ, ೪. ೧೯ ರ ಟಿಪ್ಪಣಿಯನ್ನು ನೋಡಿ.) ಮಂಗಳಮಹಾಶ್ರೀಸಂಧಿಕಾರ್ಯಕ್ಕೆ: ಸಂಧಿಯನ್ನು ಕುರಿತ ದುರ್ಯೋಧನನ ತಿರಸ್ಕಾರವನ್ನು ಇಲ್ಲಿಯ ಭಾರಿಯ ವಿಶೇಷಣ ಚೆನ್ನಾಗಿ ತೋರ್ಪಡಿಸುತ್ತದೆ. ಮಂಗಳ. ಮಾತಂ—ಇಂಥ ಅನುಚಿತವಾದ ಸಂಧಿಯ ವಿಷಯದಲ್ಲಿ ನಿಮ್ಮ ಮಾತನ್ನು ಮೀರಿದೆನು. ಒರ್ಮೆಗಂ ಇದು ಆಜ್ಞಾಲಂಘನಂ ದೋಷಂ ಒಂದಿಸದು—ಇದೊಂದು ಬಾರಿಗೆ ಮಾತ್ರ ಹೀಗೆ ನಿಮ್ಮ ಅಪ್ಪಣೆಯನ್ನು ಮೀರಿದ್ದು ದೋಷವನ್ನುಂಟು ಮಾಡುವುದಿಲ್ಲ. ಬಿಸುಟ್ಟುದು—(ನೀವು) ತೊರೆಯಬೇಕು; ಧಾ. ಬಿಸುಡು. ವಿಸ್ಮಯಂ ಉತ್ತು—ಬೆರಗುಪಟ್ಟು; ಧಾ. ಉಱು—ಹೊಂದು, ಸೇರು.

೧೮ ವ. 'ಅಶುಭಸ್ಯ ಕಾಲಹರಣಂ': 'ಶುಭಸ್ಯ ಶೀಘ್ರಂ' ಎಂಬುದಕ್ಕೆ ಎದುರುಮಾತು. ಮೆಯ್‌ಗರೆದು—(ಮೆಯ್+ಕರೆದು) ಮೈಮರಸಿಕೊಂಡು. ಜಲಮಂತ್ರ°—ಜಲಸ್ತಂಭಮಂತ್ರ. ಮೇಣ್ ಇದನ್ನಾಗಲಿ ಅದನ್ನಾಗಲಿ ಮಾಡು ಎಂದು ಎರಡು ಕಾರ್ಯವಿಧಾನಗಳನ್ನು ಭೀಷ್ಮನು ದುರ್ಯೋಧನನ ಮುಂದಿಡುತ್ತಾನೆ. ಏಕಾಂಗವೀರನಾದ ದುರ್ಯೋಧನನು ಎರಡನೆಯದನ್ನು ಆರಿಸಿಕೊಳ್ಳುತ್ತಾನೆ.

೧೯. ನೋವಿಲ್ಲ: ಆ ನೋವು ಎಷ್ಟೆಂಬುದು ಈ ಹಿಂದೆಯೇ ನಮಗೆ ಅರಿವಾಗಿದೆ. ನೀನು ಶತ್ರುಗಳೊಂದಿಗೆ ಬಾಳು ಎಂಬ ಗುರುಹಿರಿಯರ ಪ್ರಾರ್ಥನೆಯನ್ನು ಕೇಳಿದಾಗ ಆದ ನೋವು ಅಂಥ ಉತ್ಕಟವಾದ ನೋವನ್ನು ಕೂಡ ಮರಸಿಬಿಟ್ಟಿತು!

೨೦. ಅರಿಯರ್—ಅಸಾಧ್ಯರಾದವರು; ಇದು ಅರಿದು ಎಂಬ ಗುಣವಾಚಕದ ಪುಲ್ಲಿಂಗಬಹುವ. ರೂಪ; ಅರಿಯಂ ಎಂಬ ಏಕವ. ರೂಪ ಗದಾಸಂ, ೩. ೧೫ ರಲ್ಲಿ ಬಂದಿದೆ. ಬಿದಿ—ಸಂ. ವಿಧಿ.

**೨೧.** ಒಂದೆರಡು ಮತ್ತರ ಅಂತರದಿಂದಂ—ಒಂದೆರಡು "ಮತ್ತರು"ಗಳ ದೂರದಿಂದ. ಮತ್ತರ್ ಎನ್ನುವುದು ಭೂಮಿಯನ್ನು ಅಳೆಯಲು ಹಿಂದಿನ ಕಾಲದಲ್ಲಿ ಗೊತ್ತುಮಾಡಿದ್ದ ಒಂದು ಪ್ರಮಾಣ; ಇದರ ಅಳತೆ ಎಷ್ಟು ಎಂಬುದು ನಿರ್ಧರವಾಗಿ ತಿಳಿದಿಲ್ಲ. ಮತ್ತರ್—ಸಂ. ಮಾತ್ರಾ (?). **ಪೊಱ ಮಟ್ಟ ಪಜ್ಜೆ ಎಂಬುದಂ ಎನಿಸಲ್**—(ಹೊರಕ್ಕೆ) ಹೊರಟು ಬಂದ ಹೆಜ್ಜೆ ಎಂದೆನ್ನಿಸುವುದಕ್ಕಾಗಿ; ಕೊಳದಿಂದ ಹೊರಕ್ಕೆ ಬಂದು ನಡೆದುಹೋದ ಹೆಜ್ಜೆ ಎಂದು ಭಾವಿಸಲು ಅವಕಾಶವಾಗುವಂತೆ; ಧಾ. **ಪೊಱಮಡು**—ಹೊರಡು. **ಪಿಂದುಪೆಱಗಾಗಿ ಪುಗೆ**—ಹಿಂದುಹಿಂದಾಗಿ ಪ್ರವೇಶಿಸಲು. **ಪೇಸಿ**—ಹೇಸಿ, ಜುಗುಪ್ಸೆಪಟ್ಟು. ದುರ್ಯೋಧನನು ಸಹಜವಾಗಿ ಕೊಳದೊಳಕ್ಕೆ ನಡೆದಿದ್ದರೆ ಅದರ ದಡದ ಕೆಸರಿನಲ್ಲಿ ಅವನ ಹೆಜ್ಜೆಯ ಗುರುತು ನೀರಿಗೆ ಅಭಿಮುಖವಾಗಿ ಕಾಣಿಸುತ್ತಿತ್ತು; ಅವನು ಅಲ್ಲಿ ಅಡಗಿರಬೇಕೆಂದು ಯಾರಾದರೂ ಊಹಿಸಬಹುದಾಗಿತ್ತು. ಹಾಗಾಗದಿರಲೆಂದು ಅವನು ಕೊಳವನ್ನು ಹಿಂದುಹಿಂದಾಗಿ ಪ್ರವೇಶಿಸಿದನು; ಆ ಹೆಜ್ಜೆಸಾಲನ್ನು ನೋಡಿದವರಿಗೆ, ಕೊಳದಿಂದ ಅವನು ಹೊರಟುಬಂದು ಇನ್ನೆಲ್ಲಿಗೋ ಹೋಗಿರಬೇಕೆಂಬ ಭಾವನೆ ಬರುವುದು ಸಾಧ್ಯವಾಯಿತು. ಇದಕ್ಕಾಗಿ ಈ ತಂತ್ರವನ್ನು ದುರ್ಯೋಧನನು ಅವಲಂಬಿಸಿದನೆಂದು ರನ್ನನ ಆಶಯ. (ಹೊರಹೊರಟ ಹೆಜ್ಜೆಸಾಲಿನ ಜೊತೆಗೆ ಹೊಕ್ಕ ಹೆಜ್ಜೆಸಾಲೂ ಇಲ್ಲದಿದ್ದರೆ ಸಂದೇಹ ಹುಟ್ಟುವುದೆಂದು ದುರ್ಯೋಧನನಿಗೆ ಏಕೆ ಹೊಳೆಯಲಿಲ್ಲವೋ ?) ವೀರನಾದ ದುರ್ಯೋಧನನು ಇಂಥ ಕುತಂತ್ರಕ್ಕೆ ಮನಸ್ಸುಕೊಟ್ಟನೆಂದು ರಾಜ್ಯಲಕ್ಷ್ಮಿ ಅವನನ್ನು ತೊರೆದುಬಿಟ್ಟಳೆಂದು ಹೇಳಿ ರನ್ನನು ದುರ್ಯೋಧನನ ನಡೆವಳಿಕೆಯ ವಿಷಯದಲ್ಲಿ ತನ್ನ ಮನೋಭಾವವನ್ನು ಸೂಚಿಸುತ್ತಾನೆ.

ದುರ್ಯೋಧನನು ವೈಶಂಪಾಯನಸರೋವರವನ್ನು ಹಿಂದುಹಿಂದಾಗಿ ಹೊಕ್ಕನೆಂಬ ಹೇಳಿಕೆಗೆ ವ್ಯಾಸಭಾರತದಲ್ಲಾಗಲಿ ಪಂಪಭಾರತದಲ್ಲಾಗಲಿ ಯಾವ ಆಧಾರವೂ ಇಲ್ಲ. ವೇಣೀಸಂಹಾರನಾಟಕದಲ್ಲಿ, ಪುರುಷನೊಬ್ಬನು ಭೀಮನ ಬಳಿಗೆ ಬಂದು, "ದೇವ ಕುಮಾರ, ಅಸ್ಮಿನ್ ಮಹತೋಽಸ್ಯ ಸರಸಸ್ತೀರೇ ದ್ವೇ ಪದಪದ್ಧತೀ ಸಮವತೀರ್ಣಪ್ರತಿಬಿಂಬೇ. ತಯೋರೇಕಾ

ಸ್ಥಲಮುತ್ತೀರ್ಣಾ [ಜಲೋತ್ತೀರ್ಣಾ—ಪಾಠಾಂತರ] ನ ದ್ವಿತೀಯಾ. ಪರತ್ರ ಕುಮಾರಃ ಪ್ರಮಾಣಂ" ಎಂದು ಹೇಳಿದನೆಂದಿದೆ (೬ ನೆಯ ಅಂಕ). ಎಂದರೆ ಎರಡು ಹೆಜ್ಜೆಸಾಲುಗಳು ಸರೋವರಕ್ಕೆ ಇಳಿದ ಗುರುತೂ, ಅವುಗಳಲ್ಲಿ ಒಂದು ಸಾಲು ಮಾತ್ರ ನೀರನ್ನು ಬಿಟ್ಟು ಹಿಂದಿರುಗಿದ ಗುರುತೂ ಗೋಚರವಾಗುತ್ತಿದ್ದುವು. ಹಾಗೆಂದರೆ, ಇಬ್ಬರು ವ್ಯಕ್ತಿಗಳು ಸರೋವರವನ್ನು ಪ್ರವೇಶಿಸಿದರೆಂದೂ, ಅವರಲ್ಲಿ ಒಬ್ಬನು ಮಾತ್ರ ಹಿಂದಕ್ಕೆ ಬಂದು ಹೊರಟು ಹೋದನೆಂದೂ, ಇನ್ನೊಬ್ಬನು ಇನ್ನೂ ನೀರಿನಲ್ಲೇ ಅಡಗಿರಬೇಕೆಂದೂ ಹೆಜ್ಜೆಗುರುತುಗಳಿಂದ ಗೊತ್ತಾಯಿತು. ಈ ಇಬ್ಬರೊಳಗೆ, ಕೊಳದಲ್ಲಿ ಅಡಗಿಕೊಂಡವನು ದುರ್ಯೋಧನ. ಮತ್ತೊಬ್ಬನು ಯಾರೆಂದು ಊಹಿಸಲು ಸಾಕಾದಷ್ಟು ಆಧಾರ ವೇಣೀಸಂಹಾರದಲ್ಲಿ ದೊರೆಯುವುದಿಲ್ಲ; ಅದು ಇಲ್ಲಿ ನಮಗೆ ಪ್ರಕೃತವೂ ಅಲ್ಲ. ಅಂತೂ ವೇಣೀಸಂಹಾರದಲ್ಲಿ ಕೂಡ, ಈಗ ದೊರೆಯುವ ಪಾಠದ ಮೇರೆಗೆ, ದುರ್ಯೋಧನನು ಕೊಳವನ್ನು ಹಿಂದುಹಿಂದಾಗಿ ಹೊಕ್ಕನೆಂಬ ಉಕ್ತಿಗೆ ಆಧಾರವಿಲ್ಲ. ಹಾಗಾದರೆ ರನ್ನನು ಈ ಅಂಶವನ್ನು ಸ್ವತಂತ್ರವಾಗಿ ಕಲ್ಪಿಸಿದನೆ? ಹಾಗೆಂದು ನಿಸ್ಸಂದೇಹವಾಗಿ ಹೇಳುವುದೂ ಕಷ್ಟ. ಏಕೆಂದರೆ, ಮುಂದಿನ ಪದ್ಯದಲ್ಲಿ ರನ್ನನು ದುರ್ಯೋಧನನ ಪ್ರಸಿದ್ಧವಾದ ಅಕಾರ್ಯಗಳ ಮಾಲೆಗೆ ಇದನ್ನು ಸೇರಿಸುತ್ತಾನೆ. ಅಂತೂ ಈ ಅಂಶವನ್ನು ಕುರಿತು ಮತ್ತಷ್ಟು ಶೋಧನೆ ಆವಶ್ಯಕ. ಕರ್ಣಪಾರ್ಯನು ನೇಮಿನಾಥಪುರಾಣದಲ್ಲಿ, ಬಹುಶಃ ರನ್ನನನ್ನೇ ಅನುಸರಿಸಿ, "ಕುರುಪತಿ ವೈಶಂಪಾಯನಸರೋವರಂಬುಗುತುಮಂದು ಪೆಱಗಡಿಯಿಟ್ಟಂ" ಎಂದು ಹೇಳುತ್ತಾನೆ (೧೨. ೧೭೯).

**೨೨.** ತುಱುವಂ ಕಳಿಸುವ—ಗೋವ್ರಗಳನ್ನು ಕದ್ದು ಹಿಡಿಸುವ; ಧಾ. ಕಳ್—ಕದಿ. ನಿಱಿಯಂ—ಸೀರೆಯ ನಿರಿಯನ್ನು. ಉರ್ಚವೇೞ್ವ—ಸೆಳೆಯುವಂತೆ (ತನ್ನ ತಮ್ಮನಿಗೆ) ಹೇಳುವ. ದುರ್ನಯಂ ಅಱಪವೆ—ದುರ್ನೀತಿಗಳು ತಿಳಿಸುವುದಿಲ್ಲವೆ? ರಾಜ್ಯದ ಆಯದ—ರಾಜ್ಯದ ಮತ್ತು ಶೌರ್ಯದ. ದುರ್ಯೋಧನನ ಅಕೃತ್ಯಗಳಲ್ಲಿ ಈ ಮೂರು ಮಹತ್ತಮವೆಂದೂ ಇವೇ ಅವನ ವಿನಾಶಕ್ಕೆ ಕಾರಣವೆಂದೂ ಕವಿಯ ಅಭಿಪ್ರಾಯ.

**೨೩.** ಗಗನಂ ಬಿಟ್ಟುದೊ : ನೀಲವೂ ವಿಶಾಲವೂ ಆದ ಆಕಾಶವೇ ಕಳಚಿಕೊಂಡು ಕೆಳಗೆ ಬಿದ್ದು ಈ ಸರೋವರವಾಗಿದೆಯೋ ? ನೆಲಕ್ಕೆ ನೆಲನೇಂ ಪುಟ್ಟಿತ್ತೊ : ಭೂಮಿ ತನ್ನಷ್ಟೇ ಹರಹುಳ್ಳ ಇನ್ನೊಂದು ಭೂಮಿಯನ್ನು ಈ ಸರೋವರದ ರೂಪದಲ್ಲಿ ಪ್ರಸವಿಸಿತೋ ? ಪನ್ನಗವೃಂದಾರಕರ್—ನಾಗರೂ ದೇವತೆಗಳೂ. ಅಷ್ಟದಿಗ್ನಾಗರಾಜಿಗೆ—ಎಂಟು ದಿಗ್ಗಜಗಳ ಗುಂಪಿಗೆ. ದಿಗ್ನಾಗ, ದಿಙ್ನಾಗ ಎಂಬ ಎರಡು ರೂಪಗಳೂ ಉಂಟು ; ರನ್ನನು ದಿಗ್ನಾಗ ಎಂಬುದನ್ನೇ ಅಂಗೀಕರಿಸುವಂತೆ ತೋರುತ್ತದೆ (ಅಜಿತಪು, ೬. ೪೧ರಲ್ಲಿ ದಿಗ್ನಾಗ ಎಂಬುದು ಪ್ರಾಸಸ್ಥಾನದಲ್ಲಿ ಬಂದಿದೆ). ಮೆಯ್ಯಗರ್ಚಿಕೊಳಲ್ಕೆ—ಮೈತೊಳೆದುಕೊಳ್ಳಲು; ಕರ್ಚು—ತೊಳೆ. ಅಜಂ ಸಮೆದ ತೋಯೋದ್ದೇಶವೋ—ಬ್ರಹ್ಮನು ಮಾಡಿದ ನೀರ್ನೆಲೆಯೋ ? ಎಂಟು ದಿಕ್ಕುಗಳ ಅಂಚಿನ ತನಕ ನೀರು ಹರಡಿತ್ತು ಎಂದು ಭಾವ. ಸಂದೆಯ—ಸಂ. ಸಂದೇಹ. ಬಗೆಗೆ—ಮನಸ್ಸಿಗೆ. °ಅಬ್ಜಾಕರ—ಕೊಳ.

**೨೩ ವ.** ಗಂಭೀರನೀರಾಕರ—ಆಳವಾದ ಸಾಗರ.

**೨೪.** ನಿನ್ನ. . . . ಬತ್ತಿದಪ್ಪುವು—ನೀನು ಹೊಕ್ಕ ಹೊಳೆ ಮೊದಲಾದವು ಕೂಡ ಒಣಗಿಹೋಗುತ್ತವೆ. ಅಂಥ ಪಾಪಿ ನೀನು ; ಹರಿಯುವ ನೀರಿಗೇ ಆ ಗತಿಯಾದರೆ, ನಿಂತ ನೀರಾದ ಈ ಕೊಳದ ಗತಿಯೇನು ಎಂದು ಭಾವ. ಈ ದೊರೆಯ—ಇಂಥ. ಎಮ್ಮುಮಂ—ನಮ್ಮನ್ನೂ, ಎಂದರೆ ಕೊಳದ ಪಕ್ಷಿಗಳನ್ನೂ. ಬಗ್ಗಿಪಂತಿರೆ–ಗದರಿಸುವಂತೆ. ನೆಗಟ್ಟುತ್ತು–ಉಂಟಾಯಿತು. °ಬಕ. . . ಸ್ವನಂ—ಕೊಕ್ಕರೆ ಚಕ್ರವಾಕ ಹಂಸ ಎಂಬ ಪಕ್ಷಿಗಳ ಧ್ವನಿ.

ಇಲ್ಲಿ ೨೩, ೨೪ ನೆಯ ಪದ್ಯಗಳನ್ನು ಪಂಪಭಾ, ೧೩. ೭೨, ೭೩ ರೊಂದಿಗೆ ಹೋಲಿಸಿ. ಪಂಪನ ವರ್ಣನೆ ನಿರೂಪಣೆಗಳಲ್ಲಿ ಹೆಚ್ಚಿನ ಅರ್ಥಪುಷ್ಟಿಯೂ ರಸಪುಷ್ಟಿಯೂ ಉಂಟೆಂದು ವಿಮರ್ಶಕರ ಅಭಿಪ್ರಾಯ. ಇದರ ವಿಸ್ತಾರವಾದ ಪ್ರತಿಪಾದನೆಗೆ, ಕುವೆಂಪು ಅವರ ' ಸರೋವರದ ಸಿರಿಗನ್ನಡಿಯಲ್ಲಿ ' ಎಂಬ ಲೇಖನವನ್ನು ನೋಡಿ (ಪ್ರಬುದ್ಧ ಕರ್ಣಾಟಕ, ೨೯. ೧).

**೨೪ ವ.** ಕುರು . ಹಂಸ—ಕುರುವಂಶವೆಂಬ ಸರೋವರದಲ್ಲಿ ಅರಸಂಚೆಯಂತೆ ಇರುವವನು, ದುರ್ಯೋಧನ. ಕೆನ್ನೈಸಿದ ಕೆನ್ನೆತ್ತರಂ—ಕೆಂಪುಗಟ್ಟಿದ ಕೆಂಪು ರಕ್ತವನ್ನು. ಕರ್ಚಿ—ತೊಳೆದು. ಮಿನುಗುತುಂ—ಜಪಿಸುತ್ತಾ.

---

## ೮. ಭೀಮಸೇನಾಡಂಬರಂ

**೦ ವ.** ವಧೆಯಿಂ ಬೞಿಯಂ—ಕೊಲೆಯಿಂದ ಈಚೆಗೆ. ಸೂಕ್ಷ್ಮಕ್ರಿಯೆಯಿಂ—ರಹಸ್ಯವಾಗಿ (?).

**೧.** ತೊದಳ್ ಆಯ್ತು—ಸುಳ್ಳಾಯಿತು. °ವದನಮ್ಲಾನತೆ—ಮುಖ ಕಂದಿರುವುದು. ಮದ್ದೋರ್ದಂಡಕಂಡೂತಿ—ನನ್ನ ಬಾಹುದಂಡಗಳ ನವೆ, ಎಂದರೆ ನನ್ನ ಯುದ್ಧಾಸಕ್ತಿ. ಇನ್ನುಂ ಒಳಂ ಸುಯೋಧನಂ—ದುರ್ಯೋಧನನು ಇನ್ನೂ ಇದ್ದಾನೆ. ಎಂಬುದಂ ಎಂದು—ಎಂದು ನುಡಿದು. ಕೌರವ್ಯಕೋಳಾಹಳಂ—ಕುರುವಂಶೀಯರಲ್ಲಿ ಗಲಿಬಿಲಿಯ ಗದ್ದಲವನ್ನು ಹುಟ್ಟಿಸುವವನು, ಭೀಮ.

**೧ ವ.** ನುರ್ಗುನುಱಿಮಾಡು—ನುಚ್ಚುನೂರು ಮಾಡು. ತತ್ತಱದಱಿ—ಚೂರು ಚೂರಾಗಿ ಕತ್ತರಿಸು. ಗದಾಲಾಂಗಲ—ಗದೆಯೆಂಬ ನೇಗಿಲು. ಇರ್ಬಗಿಯಾಗಿ—ಎರಡು ಭಾಗವಾಗಿ. ಪೋೞ್ದು ಪರಪು—ಹೋಳು ಮಾಡಿ ಹರಡು. ಚಿಪ್ಪುಚಿಪ್ಪಾದಿರ್ಗಿಡು—ಚಿಪ್ಪುಚಿಪ್ಪಾಗಿ ಒಡೆದಿಡು. °ಪೂರ—ಪ್ರವಾಹ. ಧಗಧಗಾಯಮಾನ°—ಧಗಧಗನೆ ಜ್ವಲಿಸುವ. °ಶಿಖಾಕಲಾಪ—ಉರಿಯ ಮಾಲೆ. ಅಡಹಡಿಸಿ—ತ್ವರೆಪಟ್ಟು, ಚಡಪಡಗುಟ್ಟಿ.

**೨.** ಮಿಾಱಿದ—ಉದ್ಧತನಾದ. ಪಗೆವನ ಪಟ್ಟಂ ಪಾಱಿಸುವೆನೊ—ಶತ್ರುವಿನ ಪಟ್ಟನ್ನು ನಾನು ಹಾರಿಸಲೋ? ಪಟ್ಟು ಎಂಬುದರ ಅರ್ಥ ಸ್ಪಷ್ಟವಾಗುವುದಿಲ್ಲ; ದೃಢವಾದ ನೆಲೆ ಎಂದೋ ಶಿರಸ್ಸು ಎಂದೋ ಇರಬಹುದು. "ವೈರಿಗಳ ಪಟ್ಟನೆ ಪಾಱಿಸಿ" (ಪಂಪಭಾ, ೧೨. ೫೧), "ಅರಾತಿನಾಯಕರ ಪಟ್ಟನೆ ಪಾಱಿಸೆ" (ಪಂಪಭಾ, ೧೪. ೫೦) "ಪಗೆವರ ಪಟ್ಟಂ ಪಾಱಿಸದೆ

(ಕೆ. ಜಿ. ಕುಂದಣಗಾರ: ಉತ್ತರ ಕರ್ನಾಟಕದ ಮತ್ತು ಕೊಲ್ಲಾಪುರದ ಶಾಸನಗಳು, ಪುಟ. ೬೮)—ಈ ಪ್ರಯೋಗಗಳನ್ನು ಹೋಲಿಸಿ. ಮುನ್ನಂ ಅಮರರ್ ಉಂಡ—ಹಿಂದೆ ದೇವತೆಗಳು ಕುಡಿದ. ಕಾಱಿಸು—ಕಕ್ಕಿಸು. ಖಚರರಂ—ದೇವತೆಗಳನ್ನು, ಅಡರ್ದು—ಮೇಲೆ ಹತ್ತಿ. ತೂಱಲ ತುದಿ—ತುತ್ತತುದಿ.

೩. ಪತ್ತು—ಹತ್ತು. ತುತ್ತು—ಕಬಳಿಸು.

೪. ಕುಲನಗಂಗಳಂ—ಕುಲಪರ್ವತಗಳನ್ನು. ಈಂಟು—ಕುಡಿ. ಮಿಾಂಟು—ಮಿಾಟು.

ದುರ್ಯೋಧನನು ಸಿಕ್ಕಲಿಲ್ಲವೆಂಬ ರೋಷದಲ್ಲಿ ಜಗತ್ತನ್ನೇ ತಲೆಕೆಳಗು ಮಾಡಿಬಿಡಲೆ ಎಂದು ಭೀಮನಿಗೆ ಅನ್ನಿಸುತ್ತದೆ.

೪ ವ. ಮಾಮಸಕಂ ಮಸಗಿ—ಅತಿಶಯವಾಗಿ ಕೆರಳಿ. ಪ್ರಳಯ . ಗೆಯ್ದು—ಪ್ರಳಯವನ್ನೇ ಉಂಟುಮಾಡಬೇಕೆಂದು ಸಂಕಲ್ಪಿಸಿ.

೫. ರಸೆ—ಭೂಮಿ. ಕೋಣೆ—ಮೂಲೆ. ಉಳಿ—ಅಡಗು; ಉೞಿ—ಬಿಡು. ವಸುಮತಿ—ಭೂಮಿ. ಗಾಂಧಾರಿಯ . . . ಪೊಕ್ಕಿರ್ದಪನೋ—ಮತ್ತೊಮ್ಮೆ ತಾಯ ಬಸಿರನ್ನೇ ಹೊಕ್ಕು ಅವಿತುಕೊಂಡಿದ್ದಾನೋ? ಹೀಗೆ ಅಗೋಚರವೂ ಸುರಕ್ಷಿತವೂ ಆದ ಒಂದು ಕಡೆಯಲ್ಲಿ ಅಡಗಿಕೊಳ್ಳದಿದ್ದರೆ ನನಗೆ ಸಿಕ್ಕದೆ ಇರುತ್ತಿದ್ದನೆ ಎಂದು ಆಶಯ.

೬. ಚರಂ ಅಚರಂ ಎಂಬ—ಜಂಗಮ, ಸ್ಥಾವರ ಎಂಬ ಎರಡು ಬಗೆಯ. ತದ್ಭುಜಪಂಜರದೊಳಗೆ—ಹರಿಹರಬ್ರಹ್ಮರ ಬಾಹುಗಳ ನಡುವೆ. ತ್ರಿಮೂರ್ತಿಗಳ ಮರೆಹೊಕ್ಕರೂ ಅವನನ್ನು ನಾನು ಬಿಡುವುದಿಲ್ಲ ಎಂದು ಭೀಮನ ನಿರ್ಧಾರ.

೭. ಚತುರಂತಂ—ನಾಲ್ಕು ಎಲ್ಲೆಗಳುಳ್ಳ. ಸಪ್ತಾರ್ಚಿ—ಅಗ್ನಿ. ತಾತ ಮಾರುತ—ನನ್ನ (=ಭೀಮನ) ತಂದೆಯಾದ ವಾಯುವೇ. ಮಾರುತಮಾರ್ಗ—ಆಕಾಶ. ತಱಿಸಂದು—ನಿಶ್ಚಯಿಸಿ, ಪರಿಚ್ಛೇದಿಸಿ; ಧಾ.—ತಱಿಸಲ್. ಎನ್ನ—ನನ್ನನ್ನು; ಎನ್ನಂ ಎಂಬುದರ ಅಂತ್ಯಬಿಂದು ಇಲ್ಲಿ ಲೋಪವಾಗಿದೆ; ಇಂಥ

ಕಡೆಗಳಲ್ಲಿ ದ್ವಿತೀಯಾವಿಭಕ್ತಿಯ ಅರ್ಥದಲ್ಲಿ ಷಷ್ಠಿಯ ಪ್ರಯೋಗವಾಗಿದೆ ಯೆಂದು ಶಬ್ದಮಣಿದರ್ಪಣಕಾರನ ಅಭಿಪ್ರಾಯ (ಸೂತ್ರ. ೧೩೪). ಸಂಡ ಅಗ್ನಿಗೆ—ಪ್ರಸಿದ್ಧವಾದ ಅಗ್ನಿಗೆ. ಗಡಿಂ=ಗಡ+ಇಂ. ಯಾರನ್ನಾದರೂ ಸಂಬೋಧಿಸುವ ಸಂದರ್ಭದಲ್ಲಿ ಬಹುವಚನ ವಿವಕ್ಷೆಯೂ ಇದ್ದರೆ, ಹೀಗೆ -ಇಂ ಎಂಬುದನ್ನು ಗಡ, ಏನ್ ಮೊದಲಾದವುಗಳಿಗೆ ಸೇರಿಸಿರುವುದು ಹಳಗನ್ನಡದಲ್ಲಿ ಒಂದೊಂದು ಕಡೆ ಗೋಚರಿಸುತ್ತದೆ. (ಪ್ರಬುದ್ಧ ಕರ್ಣಾಟಕ, ೨೮. ೩ ರಲ್ಲಿ, ತೀ. ನಂ. ಶ್ರೀಕಂಠಯ್ಯ : 'ಏನಿ-ಗಡಿಂ-ರೀ' ನೋಡಿ.) ಶತ್ರುವನ್ನು ಕೊಲ್ಲಲು ಸಾಧ್ಯವಾಗದಿದ್ದರೆ ತಾನು ಅಗ್ನಿಪ್ರವೇಶಮಾಡುವುದಾಗಿ ಭೀಮನು ಪಂಚ ಭೂತಸಾಕ್ಷಿಯಾಗಿ ಇಲ್ಲಿ ಪ್ರತಿಜ್ಞೆಮಾಡುತ್ತಾನೆ.

೭ ವ. ಅಜಾತಶತ್ರು—ಧರ್ಮರಾಯ.

೮. ಎನಿತಂ—ಎಷ್ಟೊಂದುಮಟ್ಟಿಗೆ. ಮುಕ್ತಕೇಶಿ—ಬಿಚ್ಚಿದ ಕೂದಲುಳ್ಳವಳು. ಎನ್ನ ಅನುಜರುಂ ಎಂಬುದರ ಮುಂದೆ ಸೈರಿಪರ್ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ನೀಂ ಇಲ್ಲ—ನೀನು ಬಾಯಲ್ಲಿ ನಾಲ್ಕು ಮಾತನ್ನು ಆಡದಿದ್ದರೆ ಹೋಗಲಿ, ಮನಸ್ಸಿನಲ್ಲಿ ಕೂಡ ವ್ಯಥೆಪಡುವುದಿಲ್ಲ. ನೀನ್ ಇಂತಿರೆ—ನೀನು ಹೀಗೆ ಇರುವಾಗ.

೯. ಗುರು—ಹಿರಿಯವನು. ಇಂದಿನ ಒಂದೆವಸದೊಳ್—ಈ ಒಂದು ದಿವಸ ಮಾತ್ರ. ಒಂದೆವಸ= ಒಂದು+ದೆವಸ; ದೆವಸ—ಸಂ. ದಿವಸ. ಪರಿಯಬಿಡ—ನನ್ನನ್ನು ಹರಿಯಬಿಡು, ನನಗೆ ಅನುಮತಿಕೊಡು. ಡೊಕ್ಕರಿಸು—ಗುದ್ದು, ಹಿಸುಕಿಬಿಡು. "ಅದ್ಯೈಕಂ ದಿವಸಂ ಮಮಾಸಿ ನ ಗುರುಃ ನಾಹಂ ವಿಧೇಯಸ್ತ್ವವ" ಎಂಬ ವೇಣೀಸಂಹಾರದ ಮಾತನ್ನು (೧. ೧೨) ಹೋಲಿಸಿ.

೧೦. ಮುಂದಲೆಯಂ ಸೊರ್ಕಿದವನಂ : ಅಂಥ ದ್ರೋಹಿಯಾದ ದುಶ್ಶಾಸನನನ್ನು.

೧೧. ಕುರುಕುಲವೆಂಬ, ಕದಳೀಕಾನನ—ಬಾಳೆಯ ವನಕ್ಕೆ, ಕರಿಕಳಭಂ—ಮರಿಯಾನೆಯಂತಿರುವವನು. ಶತ್ರುಗಳೆಂಬ, ಶಲಭ—ಮಿಡಿತೆಗಳ, ಸಂಪಾತನ—ಬೀಳುವಿಕೆಯಿಂದ, ವಿಸ್ಫುರಿತ—ಇನ್ನಷ್ಟು ಜ್ವಲಿಸುತ್ತಿರುವ, ಪ್ರದೀಪದಂತಿರು

ವವನು; ಅವರನ್ನು ಕೊಂದಷ್ಟೂ ಇವನ ಪ್ರತಾಪ ಇನ್ನಷ್ಟು ಹುರಿಗೊಳ್ಳು ತ್ತಿತ್ತು. ಕುರು          ಸುತಂ: ಕುರುಭೂಮಿಯಲ್ಲೇ ಕುರುರಾಜನನ್ನು ಭೀಮನು ಹುಡುಕಿಕೊಂಡು ಅಲೆಯಬೇಕಾಯಿತು ಎಂಬುದರಿಂದ ದುರ್ಯೋಧನನ ದುರ್ಗತಿ ಚೆನ್ನಾಗಿ ಧ್ವನಿತವಾಗುತ್ತದೆ.

**೧೨.** ಹಿಂದೆ ಭೀಮನು ಧನುರ್ವಿದ್ಯೆಯನ್ನು ಕಲಿಯುತ್ತಿದ್ದ ಕಾಲದ ಸಂಗತಿಯೊಂದನ್ನು ಈ ಪದ್ಯ ಜ್ಞಾಪಿಸುತ್ತದೆ. ಗುರು .    ಎನೆ—ಗುರಿ ಹಿಡಿಯುವುದರಲ್ಲಿ ನಿನಗಿನ್ನೂ ಸಿದ್ಧಿ ದೊರೆತಿಲ್ಲ ಎಂದು ದ್ರೋಣನು ಭೀಮನಿಗೆ ಹೇಳಲಾಗಿ. ಪರಿವ .    ತರ್ಪಂತಿರೆ—ಬಿಲ್ಲನ್ನು ಬಿಟ್ಟು ಆಗಲೇ ಸಾಗಿ ಹೋಗುತ್ತಿರುವ ಬಾಣವನ್ನು ಅದರ ವೇಗವನ್ನು ಮೀರಿಸಿ ತಾನೂ ಓಡಿ ಹೋಗಿ ಅದು ಗುರಿಮುಟ್ಟುವ ಮೊದಲೇ ಹಿಡಿದು ಹಿಂದಕ್ಕೆ ತಂದಹಾಗೆ. ಗುರು ಆಕ್ಷೇಪಿಸಿದ್ದಕ್ಕೆ ಉತ್ತರವಾಗಿ ಆ ಬಿಟ್ಟ ಬಾಣವನ್ನೇ ಭೀಮನು ಹಿಡಿದು ಹಿಂದಕ್ಕೆ ತಂದನು; ಅಷ್ಟು ವೇಗ ಅವನದು. ಈ ಸಂಗತಿ ಭಾಸ ಕವಿಯದೆಂದು ಹೆಸರಾಗಿರುವ ಪಂಚರಾತ್ರದಲ್ಲಿ ಉಕ್ತವಾಗಿದೆ. ಬಾಣವನ್ನು ನೀನು ಬಿಟ್ಟಾಗ ನಿನ್ನ ತಲೆ ಅಳ್ಳಾಡಿತೆಂದು ಭೀಮನಿಗೆ ತಾನು ಹೇಳಿದ್ದಕ್ಕೆ ಅವನು ಹೀಗೆ ಮಾಡಿದನೆಂದು ದ್ರೋಣನು ಸ್ಮರಿಸಿಕೊಂಡು ಅವನ ವೇಗ ವನ್ನು ಪ್ರಶಂಸಿಸುತ್ತಾನೆ (೩. ೧೧ ವ—೧೨). ಮಹಾಭಾರತದಲ್ಲಿ ಈ ಸಂಗತಿಯಿರುವಂತೆ ಕಾಣಲಿಲ್ಲ. ಪವನಜ: ಈ ಮಾತು ಇಲ್ಲಿ ಅರ್ಥಪೂರ್ಣ ವಾಗಿದೆ; ಈ ಪ್ರಥಮಾವಿಭಕ್ತಿಯ ರೂಪದಲ್ಲಿ ಬಿಂದುವಿಲ್ಲದಿರುವುದನ್ನು ಗಮನಿಸಬೇಕು. ಇದಿರಂ ಬಟಿಯಂ—ಎದುರಿಗೂ ಪಕ್ಕಕ್ಕೂ.

**೧೨ ವ.** ಪಾಸುಂ ಪೊಕ್ಕುಂ—ಹಾಸೂ ಹೊಕ್ಕೂ ಆಗಿ, ಎಂದರೆ ಉದ್ದಕ್ಕೂ ಅಡ್ಡಕ್ಕೂ. ದುಗುಣಮುಂ ತಿಗುಣಮುಂ—ಎರಡು ಬಾರಿಯೂ ಮೂರು ಬಾರಿಯೂ. ಅಡ್ಡಮುಂ ತಿಗಟಮುಂ—ಅಡ್ಡಲಾಗಿಯೂ ತ್ರಿಕೋಣಾಕಾರ ವಾಗಿಯೂ. ಪರಿದು—ಹರಿದಾಡಿ. ಶಬ್ದ—(೧) ಪದ, (೨) ಸದ್ದು. ಅಡಿವಜ್ಜೆ—ಕೆಳಹೆಜ್ಜೆ, ಅಂಗಾಲಿನ ಗುರುತು. ಪಾವಿನ ಪಟವಿಗೆ—(೧) ಹಾವಿನ ಚಿಹ್ನೆ (?), (೨) ದುರ್ಯೋಧನನ ಸರ್ಪಧ್ವಜ. ಆರಯ್ದು—ವಿಚಾರಿಸಿ, ಹುಡುಕಿ. ಅಹಿತಗದಾನ್ವೇಷಣ—(೧) ದೇಹಕ್ಕೆ ಹಿತವಲ್ಲದ ರೋಗವನ್ನು ಹುಡುಕುವುದು, (೨)

ಶತ್ರುವಿನ ಗದಾಯುಧವನ್ನು ಹುಡುಕುವುದು ; ಗದ—ರೋಗ. ಮುನ್ನಂ ಪರಶುರಾಮಂ. ಕೊಂದು : ತನ್ನ ತಂದೆಯಾದ ಜಮದಗ್ನಿಯನ್ನು ಕಾರ್ತವೀರ್ಯಾರ್ಜುನನು ಕೊಂದದ್ದಕ್ಕೆ ಪ್ರತೀಕಾರವಾಗಿ ಕ್ಷತ್ರಿಯಕುಲವನ್ನೇ ನಿಶ್ಶೇಷವಾಗಿ ಕೊಲ್ಲಬೇಕೆಂದು ಪರಶುರಾಮನು ಇಪ್ಪತ್ತೊಂದು ಬಾರಿ ಭೂಮಿಯನ್ನು ಸುತ್ತಿ ಸಂಹಾರಕಾರ್ಯವನ್ನು ನಡಸಿದನೆಂದು ಪೂರ್ವಕಥೆ. ಸೂಳ್—ಸಲ, ಬಾರಿ. ಪಿಳ್ಳೆ ಪೆಸರಿಲ್ಲದಂತು—ಮಕ್ಕಳ ಹೆಸರು ಕೂಡ ಉಳಿಯದಂತೆ, ನಿರ್ಮೂಲವಾಗಿ. ತೀವಿ—ತುಂಬಿ ; ಧಾ. ತೀವು. ನೀರಿಳಿಯಲುಂ—(ಸೂತಕ) ಸ್ನಾನಮಾಡುವುದಕ್ಕಾಗಿಯೂ. ನೀರ್ಗುಡಲುಂ—ತರ್ಪಣಕೊಡುವುದಕ್ಕಾಗಿಯೂ. ಮೂಡಿ ಮುಳ್ಕಾಡಿ—ಎದ್ದು ಮುಳುಗಿ. ನಾಲ್ವತ್ತೆಣ್ಗಾವುದ—ನಲವತ್ತೆಂಟುಗಾವುದ. ಪರಿಪ್ರಮಾಣ°—ಸುತ್ತಳತೆಯುಳ್ಳ. ಬಿಟ್ಟಬೀಡಿಂಗೆ—ಉಳಿದುಕೊಂಡಿದ್ದ ಪಾಳೆಯಕ್ಕೆ. ನಿಟ್ಟುರಿಗೊಂಡು—ನೇರವಾಗಿ ಓಡಿ (?) ; ನಿಟ್ಟುರಿ<ನಿಟ್ಟುವರಿ (?).

೧೩. ಜತುಗೃಹ—ಅರಗಿನ ಮನೆ. ಒಡರ್ಚಿದಂ—ಪ್ರಯತ್ನಿಸಿದವನು. ದುರೋದರವ್ಯತಿಕರ—ದ್ಯೂತದ ಸಂದರ್ಭ. ಕೃತಕಸಭಾಪ್ರವೇಶಕರಂ : ಪ್ರಸಿದ್ಧವಾದ ಪಾಂಡವ ಸಭೆಯನ್ನು ಹೋಲುವಂತೆ ದುರ್ಯೋಧನನು ಕಟ್ಟಿಸಿರುವ ಸಭೆಯನ್ನು ನೋಡಲು ಬರಬೇಕೆಂದೂ, ಅಲ್ಲಿ ವಿನೋದಕ್ಕಾಗಿ ಸ್ನೇಹದ ದ್ಯೂತವನ್ನು ಆಡಬೇಕೆಂದೂ ಯುಧಿಷ್ಠಿರನಿಗೆ ಹಸ್ತಿನಾವತಿಯಿಂದ ಆಹ್ವಾನ ಹೋಗುತ್ತದೆ. (ಮಹಾಭಾ, ೨. ೫೨. ೭—೮) ಸಭೆಯನ್ನು ತೋರಿಸುವ ನೆವದಿಂದ ಪಾಂಡವರನ್ನು ಹೀಗೆ ದುರ್ಯೋಧನನು ಬರಮಾಡಿಕೊಂಡು ಅಲ್ಲಿ ಮೋಸದ ಜೂಜಿನಲ್ಲಿ ಸೋಲಿಸಿ ಕಾಡಿಗೆ ಅಟ್ಟುತ್ತಾನೆ. ಎಲ್ಲಿದಂ—ಎಲ್ಲಿರುವವನು ; ಎಂದರೆ, ಎಲ್ಲಿ !

೧೪. ಭರತ. ಕಲಂಕಂ—ಭರತವಂಶವೆಂಬ ಚಂದ್ರನಲ್ಲಿ ಕಪ್ಪುಕಲೆಯಂತೆ ಇರುವವನು. ಭರತಾನ್ವಯ. ಕಪೋತಂ—ಭರತವಂಶವೆಂಬ ಅರಮನೆಗೆ ಅರಸುಪಾರಿವಾಳದಂತೆ ಇರುವವನು. ಕೆಲವು ಪಕ್ಷಿಗಳು ಮನೆಯನ್ನು ಹೊಕ್ಕರೆ ಕೇಡು ಸಂಭವಿಸುತ್ತದೆ ಎಂಬ ನಂಬಿಕೆಯುಂಟು. ರಾಜಕಪೋತವು ಇಂಥ ಒಂದು ಪಕ್ಷಿ ; ಹಳಗನ್ನಡದಲ್ಲಿ ಇದಕ್ಕೆ ಅರವೊಱಸು

(=ಅರಸು+ಪೊಱಸು) ಎಂದು ಹೆಸರು. (ಪ್ರಬುದ್ಧ ಕರ್ಣಾಟಕ, ೨೭. ೩ರಲ್ಲಿ, ಡಿ. ಎಲ್. ನರಸಿಂಹಾಚಾರ್ 'ಪೊಱಸು—ಒಂದು ವಿಚಾರ' ನೋಡಿ.) ದುರ್ಯೋಧನನು ಭರತಕುಲದಲ್ಲಿ ಹುಟ್ಟಿದ್ದು ಅರಮನೆಗೆ ಹೊರಸು ಹೊಕ್ಕಂತಾಯಿತು; ಅವನಿಂದ ಕುಲಕ್ಕೆ ಕೇಡು ಒದಗಿತು ಎಂದು ಭಾವ. ಕುರುಕೇತು—ಕುರುವಂಶದವರ ಒಡೆಯ. °ಲಯಕೇತು—ನಾಶಸೂಚಕವಾದ ಧೂಮಕೇತು. ಕೇತು ಎಂಬದಕ್ಕೆ ಧ್ವಜ, ಕೇತುಗ್ರಹ, ಧೂಮಕೇತು, ಒಡೆಯ ಮೊದಲಾದ ಅನೇಕ ಅರ್ಥಗಳುಂಟು.

**೧೪ ವ.** °ದ್ವಾರೋಪಾಂತಮಂ— ಬಾಗಿಲ ಸಮೀಪವನ್ನು. ಭೀಮನು ದುರ್ಯೋಧನನನ್ನು ಹುಡುಕಿಕೊಂಡು ಅವನ ತಾಯಿತಂದೆಗಳಿದ್ದ ಕಡೆಗೇ ಬರುತ್ತಾನೆ.

**೧೫.** ತೆಕ್ಕನೆ—ಅತಿಶಯವಾಗಿ. ನೀಳ್ದು—ಉದ್ದವಾಗಿ ನೀಡಿ. ಅಗುರ್ವಿಸೆ—ಭಯಂಕರವಾಗಲು. ಬಾಹು ಗದಂ—ತನ್ನ ತೋಳುಗಳಿಂದ ಆಕಾಶವನ್ನೇ ತಿರುಗಿಸುತ್ತಿರುವನೋ ಎಂಬಂತೆ ಭ್ರಮೆಗೊಳಿಸುವ ಗದೆಯುಳ್ಳವನು. ಭೀಮನು ಗದೆಯನ್ನು ತಿರುಗಿಸುತ್ತಿದ್ದರೆ, ಎಲ್ಲ ದಿಕ್ಕುಗಳಲ್ಲೂ ಗದೆಯೇ ಕಾಣಿಸಿಕೊಂಡು, ಆಕಾಶವನ್ನು ಒಟ್ಟುಗೂಡಿಸಿ ಹಿಡಿದು ತಿರುಗಿಸಿಬಿಟ್ಟಂತೆ ಭಾಸವಾಗುತ್ತಿತ್ತು. ವೇಗವೂ ಕೈಚಳಕವೂ ಅಷ್ಟೊಂದು ಅತಿಶಯವಾಗಿತ್ತು! ಬಳ್ಕುತ್ತೆ—ಭಯದಿಂದ ಕಂಪಿಸುತ್ತಾ. ಬೆಕ್ಕಸಂ ಉತ್ತಳ್—ವಿಸ್ಮಯಪಟ್ಟಳು; ಉತ್ತಳ್ ಎಂಬುದು ಉಱು ಧಾತುವಿನ ಭೂತಕಾಲದ ರೂಪ.

**೧೫ ವ.** ಬಿಲ್ಲುಂಬೆಱಗುಂ ಆಗಿ—ಅತ್ಯಂತವಿಸ್ಮಯಪಟ್ಟು.

**೧೬.** ಅನ್ನೆಯ—ಸಂ. ಅನ್ಯಾಯ.

**೧೬ ವ.** ಕಮ್ಮಿಸರದಿಂ—ಕಹಿಯಾದ ಸ್ವರದಿಂದ. ಧೃತರಾಷ್ಟ್ರನೂ ಗಾಂಧಾರಿಯೂ ಹಿರಿಯರಾದ ಕಾರಣ ಅವರಿಗೆ ಭೀಮನು ನಮಸ್ಕಾರವಚನವನ್ನು ಹೇಳುತ್ತಾನೆ; ಅವನ ಧ್ವನಿ ಮಾತ್ರ ಕಟುವಾಗಿರುತ್ತದೆ. ಹೀಗೆ ಆಚಾರವನ್ನು ಪಾಲಿಸಿದ ಬಳಿಕ, ತಾನು ಬಂದ ಉದ್ದೇಶವನ್ನು ಮುಂದಿನ ಪದ್ಯದಲ್ಲಿ ಮುಚ್ಚುಮರೆಯಿಲ್ಲದೆ ತಿಳಿಸುತ್ತಾನೆ.

೧೭. °ಕ್ಷತಜ—ಗಾಯದಿಂದ ಚಿಮ್ಮಿದ, ಅಸೃಗ್ಜಲ—ರಕ್ತದ, ಸೇಕದಿಂ—ಸೇಚನದಿಂದ. ಕೋಪ ಶತನಂ—ನಮ್ಮ ಮೇಲಿನ ಕೋಪದಿಂದ ನೂರು ಅಪರಾಧಗಳನ್ನು ಮಾಡಿದವನನ್ನು. ಭೀಮನ ಆಗ್ರಹಕ್ಕೆ ಎಷ್ಟೇ ಕಾರಣವಿದ್ದರೂ ದುಃಖದಗ್ಧರಾದ ಅವನ ತಾಯಿತಂದೆಗಳ ಮುಂದೆ ಈ ಒರಟುಮಾತುಗಳನ್ನಾಡಿದ್ದು ಉಚಿತವಲ್ಲವೆನಿಸುತ್ತದೆ.

೧೮. ಅಣಮೆ . . . ಅಸುಗಳ್—ನಮ್ಮ ಪ್ರಾಣಗಳು ಸ್ವಲ್ಪವಾದರೂ ಕದಲಲಿಲ್ಲ. ಇಷ್ಟೊಂದು ದುಃಖವನ್ನು ಉಂಡರೂ ನಮ್ಮ ಪ್ರಾಣ ಹೋಗದೆ ನಾವಿನ್ನೂ ಬದುಕಿದ್ದೇವೆ. ಇನಿತಂ ಎಮಗೆ ಒಳ್ಳಿಕೆಯ್—ನಮಗೆ ಇಷ್ಟು ಮಾತ್ರ ಉಪಕಾರಮಾಡು. ಈ ಮಗನ ಸಾವನ್ನೂ ನೋಡಲು ನಮಗೆ ಶಕ್ಯವಿಲ್ಲ. ಮೊದಲು ನಮ್ಮನ್ನು ಕೊಂದು ಆ ಬಳಿಕ ದುರ್ಯೋಧನನನ್ನು ಕೊಂದರೆ ಅವನ ಮರಣದುಃಖವನ್ನು ಅನುಭವಿಸುವ ಸಂಕಟವನ್ನಾದರೂ ತಪ್ಪಿಸಿ ನಮಗೆ ಅಷ್ಟುಮಟ್ಟಿನ ಉಪಕಾರಮಾಡಿದಂತಾಗುತ್ತದೆ ಎಂದು ಭಾವ. ಗಾಂಧಾರಿಯ ಈ ವಾಕ್ಯ ಎಂಥವರ ಕರುಳನ್ನಾದರೂ ಹಿಂಡಬೇಕು. ಅದನ್ನು ಕೇಳಿ ಭೀಮನಿಗೆ ಏನೆನ್ನಿಸಿತೋ!

೧೮ ವ. ವಿಂಧ್ಯಕನೆಂಬ ಕಿರಾತದೂತಂ: ಈ ದೂತನು ಒಬ್ಬನೇ. (ನ, ಅ೧) ಪ್ರತಿಗಳ ಪಾಠಕ್ಕೆ "ವೃಕೋದರನಟ್ಟಿದ ಕಿರಾತಂ ವಿಂಧ್ಯಕನೆಂಬಂ ಬಂದು" ಎಂಬ ಪಂಪಭಾರತದ ಉಕ್ತಿ (೧೩. ೭೬ ವ) ಅವಲಂಬನ ಕೊಡುತ್ತದೆ; ವೇಣೀಸಂಹಾರದಲ್ಲಿಯೂ ಈ ಸಂದರ್ಭದಲ್ಲಿ ಬರುವವನು ಒಬ್ಬನೇ ಪುರುಷ (೬ ನೆಯ ಅಂಕ). ದೂರಪ್ರಣತನಾಗಿ—ದೂರದಲ್ಲೇ ಅಡ್ಡಬಿದ್ದು. ತಪನತಾಪದಿಂ—ಸೂರ್ಯನ ಬೇಗೆಯಿಂದ. ತೃಷ್ಣಾಭಿಭೂತನಾಗಿ—ಬಾಯಾರಿಕೆಗೆ ಒಳಗಾಗಿ. °ಆಪ್ಯಾಯನಕಾರಿಯಪ್ಪ—ತುಷ್ಟಿಗೊಳಿಸುವ. ಕುಲಿಶ°—ವಜ್ರಾಯುಧ, °ಲಾಂಛನಂ ಅಪ್ಪ—ಗುರುತುಳ್ಳ. °ಭಾವನಂ—ಪರಿಭಾವಿಸತಕ್ಕವನು, ಅರಿತವನು. ಪಾದದಲ್ಲಿ ಹಲ ಕುಲಿಶ ಮೊದಲಾದ ರೇಖೆಗಳಿರುವುದು ಚಕ್ರವರ್ತಿಲಕ್ಷಣ. ಇವು ದುರ್ಯೋಧನನ ಪಾದದಲ್ಲಿದ್ದುವೆಂಬುದು ಗದಾಸಂ, ೫. ೨ ರಲ್ಲಿ ಆಗಲೆ ಉಕ್ತವಾಗಿದೆ. ಈ ಚಿಹ್ನೆಗಳು ಕೊಳದ ದಡದಲ್ಲಿ

ಊರಿದ್ದ ಹೆಜ್ಜೆಯ ಗುರುತುಗಳಲ್ಲಿ ಕಾಣಬಂದದ್ದರಿಂದ ಅವು ಚಕ್ರವರ್ತಿ ದುರ್ಯೋಧನನವಾಗಿರಬೇಕೆಂದು ಊಹಿಸಲು ಅವಕಾಶವಾಯಿತು.

**೧೯.** ದ್ಯುನದೀಜ—ದೇವನದಿಯ ಪುತ್ರ, ಭೀಷ್ಮ. ಕುಡೆ—ಉಪದೇಶ ಮಾಡಲು. ತೋಯ°—ಜಲ. ಬಾರದನ್ನಂ—ಬರುವುದಕ್ಕೆ ಮೊದಲೆ. ಕಯ್ಗೆ ಮಾಬ್ಪುದು—ವಶಪಡಿಸಿಕೊಳ್ಳಬೇಕು. ಬಟಿಕ್ಕೆ ಆರ್ಗಂ ಗೆಲಲ್ ಬರ್ಕುಮೇ: ಬಲರಾಮಾದಿಗಳು ಜೊತೆಗೂಡಿದ ಬಳಿಕ ದುರ್ಯೋಧನನು ಅಜೇಯನಾಗಿ ಬಿಡುತ್ತಾನೆ.

**೧೯ ವ.** ಪಱಿವಡಿಪುದು—ಛೇದಿಸತಕ್ಕದ್ದು.

**೨೦.** ಭರತಜರೊಳ್—ಭರತವಂಶದವರಲ್ಲಿ. ಪರಿಭಾಷೆ—ಅಪವಾದ. ತಲೆಯಂ ಎಱಗಿದಂ—ತಲೆತಗ್ಗಿಸಿದನು. ದುರ್ಯೋಧನನು ಈಗ ಶತ್ರುವಾದರೂ, ತನ್ನ ಕುಲದವನು ಎಂಬ ಭಾವ ಧರ್ಮರಾಯನಲ್ಲಿ ಸ್ವಲ್ಪವೂ ಮರೆಯಾಗಿಲ್ಲ. ಅವನು ಈ ಅಕಾರ್ಯ ಮಾಡಿದ್ದರಿಂದ ಬರುವ ಅಪಖ್ಯಾತಿಯಲ್ಲಿ ತಾನೂ ಭಾಗಿಯಾದಂತೆ ಧರ್ಮರಾಯನು ನಾಚಿಕೊಳ್ಳುತ್ತಾನೆ.

**೨೦ ವ.** ಧೈರ್ಯಕ್ಷತಿ—ಧೈರ್ಯದ ನಾಶ. ಸಿಗ್ಗಾಗಿ—ನಾಚಿಕೊಂಡು.

**೨೧.** ವಿರುವತ್—ಕೂಗುತ್ತಿರುವ, ಸಾರಸ . .ರವದಿಂದೆ—ನೀರುಹಕ್ಕಿ *ಅರಸಂಚೆಗಳ ಧ್ವನಿಯಿಂದ. ಏವಂದಿರ್—(ಏಂ+ಬಂದಿರ್) ಏನು ಕಾರಣಕ್ಕಾಗಿ ಬಂದಿರಿ? ಈ ಬನ್ನಿಂ—ಇಲ್ಲಿ ಬನ್ನಿ. ಇಂತು ಇರಿಂ—ಹೀಗೆ ಕುಳಿತುಕೊಳ್ಳಿ. ಪವನ—ಗಾಳಿಯಿಂದ, ಉದ್ಧೂತ—ಮೇಲಕ್ಕೆ ತೂರಲ್ಪಟ್ಟ, ಉತ್ತುಂಗಾಂಬುವಿಂ—ಎತ್ತರವಾದ ಅಲೆಯ ನೀರಿನಿಂದ. ತರದಿಂ—ಕ್ರಮವಾಗಿ. ಎಱಪಂತುಟು—ಎರಗುವಂತೆ, ನಮಸ್ಕರಿಸುವಂತೆ. ವಿಕಚತ್°—ಅರಳುತ್ತಿರುವ. ಪಂಕಜಾಕರ—ಸರೋವರ.

ಈ ಪದ್ಯಕ್ಕೂ ಹಿಂದಿನ ೬. ೨೪ ಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿ. ದುರ್ಯೋಧನನು ಬಂದಾಗ ಸರೋವರದಲ್ಲಿದ್ದ ಪಕ್ಷಿಗಳು ತೊಲಗು ಎಂದು ಅವನಿಗೆ ಹೇಳುವಂತಿದ್ದಿತೆಂದು ರನ್ನನು ಅಲ್ಲಿ ಉತ್ಪ್ರೇಕ್ಷಿಸಿದ್ದರೆ, ಭೀಮನು

ಬಂದಾಗ ಅದೇ ಪಕ್ಷಿಗಳು ಅವನನ್ನು ಸ್ವಾಗತಿಸುವಂತಿದ್ದಿತೆಂದು ಇಲ್ಲಿ ಉತ್ಪ್ರೇಕ್ಷಿಸಿದ್ದಾನೆ.

**೨೨.** ಮೀಂಗುಲಿಗವಕ್ಕಿ—ಮೀನನ್ನು ಕೊಲ್ಲುವ ಹಕ್ಕಿ, ಮೀಂಚುಳ್ಳಿ. ಮೀಂಗೆ ಎಱಗುವತೆಱದಿಂ—ಮೀನನ್ನು ಹಿಡಿಯಲು ನೀರಿಗೆ ಎರಗುವ ವಿಧಾನ ದಿಂದ. ನೋಡು ಇಲ್ಲಿ ಇರ್ದಂ—ಎಂದು ಪದವಿಭಾಗ. ಎಡೆದೋರ್ಪ ತೆಱದಿಂ—ಜಾಗವನ್ನು ತೋರಿಸುವಂತೆ. ಇಲ್ಲಿಯ ಉತ್ಪ್ರೇಕ್ಷೆ ತುಂಬ ಉಚಿತವಾಗಿದೆ.

**೨೩.** ಪಗೆವಂ—ಶತ್ರು. ತವೆ—ನಿಶ್ಶೇಷವಾಗಿ. ಮತ್ಪತಿಗೆ—ನನ್ನ ಪ್ರಭು ವಾದ ಯುಧಿಷ್ಠಿರನಿಗೆ. ಬಾಹಾಸ್ಫಾಲನಂಗೆಯ್ದು—ಭುಜವನ್ನು ತಟ್ಟಿಕೊಂಡು. ಗಜಱು—ಗರ್ಜಿಸು.

**೨೩ ವ.** ಬೊಬ್ಬಿಱಿದು ಆರ್ದು ಅಬ್ಬರಂಗೆಯ್ದು—ಬೊಬ್ಬೆ ಮಾಡಿ ಗರ್ಜಿಸಿ ಆರ್ಭಟಿಸಿ. ಪಱೆ—ತಂಬಟೆಯಂಥ ವಾದ್ಯ. ಪೂರ್ಯಿಸಿಯುಂ—(ಸೇವಕರಿಂದ) ಊದಿಸಿಯೂ. ತಾಟಿಸಿಯುಂ—ಬಡಿಸಿಯೂ. ಪಂಚಮಹಾ ಶಬ್ದಂಗಳಂ—ಕೊಂಬು ತಂಬಟೆ ಶಂಖ ಭೇರಿ ಜಾಗಟೆ ಎಂಬ ಐದು ಮಹಾ ವಾದ್ಯಗಳನ್ನು. ಈ "ಪಂಚಮಹಾಶಬ್ದ"ಗಳನ್ನು ಹೊಂದಿರುವ ಅಧಿಕಾರ ಗೌರವ ಎಲ್ಲರಿಗೂ ಇರುತ್ತಿರಲಿಲ್ಲ. ಹಿಂದಿನ ಕಾವ್ಯ ಶಾಸನಗಳಲ್ಲಿ ರಾಜರನ್ನು ವರ್ಣಿಸುವಾಗ "ಸಮಧಿಗತಪಂಚಮಹಾಶಬ್ದ" ಎಂಬ ವಿಶೇಷಣವನ್ನು ಪ್ರತ್ಯೇಕವಾಗಿ ಉಪಯೋಗಿಸಿರುವುದು ಅಲ್ಲಲ್ಲಿ ಕಾಣಬರುತ್ತದೆ. (ಉದಾ ಹರಣೆಗೆ, ಪಂಪಭಾ, ೧. ೪೯ ನೋಡಿ). ". ಪೊಯ್ಸು ಪಂಚಮಹಾ ಶಬ್ದಂಗಳುಂ ತನಗೆ ರಾಜರಾಜಶಬ್ದಮನನ್ವರ್ಥಂ ಮಾಡೆ" ಎಂದು ದುರ್ಯೋಧನನ ವಿಷಯವಾಗಿಯೇ ಬೇರೊಂದು ಸಂದರ್ಭದಲ್ಲಿ ಪಂಪಭಾರತ ದಲ್ಲಿ (೧೨. ೨೭ ವ) ಬಂದಿರುವುದನ್ನೂ ಗಮನಿಸಬಹುದು. ಕೊಳದಲ್ಲಿ ಅಡಗಿದ್ದ ದುರ್ಯೋಧನನನ್ನು, ಪೊದೆಯಲ್ಲಿ ಅಡಗಿರುವ ಬೇಟೆಯ ಮೃಗವನ್ನು ಹೊರಡಿಸುವಂತೆ, ಹೊರಕ್ಕೆ ಳೆಯುವುದಕ್ಕಾಗಿ ರಾಜಗೌರವಚಿಹ್ನೆಯಾದ ಈ ಪಂಚಮಹಾವಾದ್ಯಗಳನ್ನು ಬಾಜಿಸಿದ್ದು ವಿಲಕ್ಷಣಸಂದರ್ಭ. ಈ ಶಬ್ದಕ್ಕೆ

ದುರ್ಯೋಧನನು ಕದಲದಿರಲು, ನಕುಲಸಹದೇವರು ಮೊದಲುಗೊಂಡು ಒಬ್ಬೊಬ್ಬರೂ ಅವನ ಜಲನಿಲಯವನ್ನು ಉಪಹಾಸಮಾಡಿ ಮೇಲಕ್ಕೆಬ್ಬಿಸಲು ಮುಂದಿನ ಪದ್ಯಗಳಲ್ಲಿ ತೊಡಗುತ್ತಾರೆ.

**೨೪.** ಅಂಕದ ಕಲಿ—ಹೆಸರುಳ್ಳ ಶೂರ. °ಶಶಾಂಕ—ಚಂದ್ರ. ದುರ್ಯೋಧನಾಂಕಂ ಎನೆ ನೆಗೞ್ದು—ದುರ್ಯೋಧನನೆಂಬ ಹೆಸರುಗೊಂಡು ಪ್ರಸಿದ್ಧನಾಗಿ. ಅಯಶಃಪಂಕ—ಅಪಕೀರ್ತಿಯೆಂಬ ಕೆಸರು. ಅರ್ದು—ಅದ್ದು.

**೨೫.** ನೆಱೆಯಯ್—ನೀನು ಸಮರ್ಥನಾಗುವುದಿಲ್ಲ. ನಿನಗೆ ಆನೆ ಸಾಲ್ವೆಂ—ನಿನ್ನನ್ನು ಗೆಲ್ಲಲು ನಾನೇ ಸಾಕು. ಎಕ್ಕತುಳಕ್ಕಂ ನೆಱೆದಿರ್ದೆಂ—ದ್ವಂದ್ವಯುದ್ಧಕ್ಕೂ ನಾನು ಸಿದ್ಧವಾಗಿದ್ದೇನೆ.

**೨೫ ವ.** ಉತ್ಕಟಿಸಿ—ಉತ್ಕಟನಾಗಿ, ಉಲ್ಬಣಗೊಂಡು.

**೨೬.** ಸುಭಟರ ಜವಂ ಇರ್ಕೆ—ವೀರರಿಗೆ ಯಮನಂತಿರುವ ಭೀಮನು ಹಾಗಿರಲಿ. ಸಿತಾಶ್ವ—ಅರ್ಜುನ. ಇವರೆಲ್ಲ ಹಾಗಿರಲಿ; ನನ್ನ ಸಂಗಡ ಯುದ್ಧಕ್ಕೆ ಬಾ ಎಂದು ಸಹದೇವನ ಆಹ್ವಾನ. ಎನ್ನ ಬಾಳ . . . ನೋಡಾ: ನನ್ನ ಕತ್ತಿಯ ಪೆಟ್ಟಿನಿಂದ ಬಸವಳಿದ ನೀನು ಚೇತರಿಸಿಕೊಳ್ಳುವುದಕ್ಕಾಗಿ ಕೊಳದ ನೀರನ್ನು ಕುಡಿಯಬಹುದು ಎಂದು ಇಲ್ಲಿ ಸೂಚಿತವಾಗುತ್ತದೆ.

**೨೭.** ಅಭಿಮಾನಕ್ಷತಿಮಾಡಿದಯ್—ಆತ್ಮಗೌರವವನ್ನು ಹಾಳುಮಾಡಿಕೊಂಡೆ. ಮತ್ತೆ ಈ ನೀರೊಳಗೆ ಎಸಡಿ ಇರ್ಕುಂ—ಎಂದು ಪದವಿಭಾಗ. ಎಸಡಿ—ಏಡಿ, ನಳ್ಳಿ. ಕ್ಷುದ್ರವಾದ ಜಲಚರಗಳ ಮಟ್ಟಕ್ಕೆ ನಿನ್ನಂಥ ಶೂರನು ಇಳಿಯಬಹುದೆ?

**೨೮.** ಕುಮರರಂಕರಾಮನೃಪ: ಕುಮರರಂಕರಾಮ ಎಂಬುದು ಸತ್ಯಾಶ್ರಯನ ಬಿರುದುಗಳಲ್ಲಿ ಒಂದು; ಅದನ್ನು ಕವಿ ಇಲ್ಲಿ ಭೀಮನಿಗೆ ಅನ್ವಯಿಸಿದ್ದಾನೆ. ಅರಿದು—ಅಸಾಧ್ಯ. ಇವಱ—ಇವುಗಳ.

**೨೯.** ಅರ್ಜುನಾದಿಗಳ ಮನೋಭಾವಕ್ಕೂ ಯುಧಿಷ್ಠಿರನದಕ್ಕೂ ಇರುವ ಅಂತರವನ್ನು ಪರಿಭಾವಿಸಬೇಕು; ಈ ಪದ್ಯದಲ್ಲಿ ಅದು ಚೆನ್ನಾಗಿ ವ್ಯಕ್ತ

ವಾಗುತ್ತದೆ. ದುರ್ಯೋಧನನು ಎಷ್ಟೇ ದ್ರೋಹಮಾಡಿದ್ದರೂ, ಅವನು ತನ್ನ ತಮ್ಮನೆಂಬ ಭಾವ ಯುಧಿಷ್ಠಿರನಲ್ಲಿ ಸ್ವಲ್ಪವೂ ಅಳಿದಿಲ್ಲ; ಅವನೊಂದಿಗೆ ಸಂಧಿ ಮಾಡಿಕೊಳ್ಳಲು ಈಗಲೂ ಸಿದ್ಧವಾಗಿದ್ದಾನೆ, ತಾನೇ ಮುಂದೆ ಬರುತ್ತಾನೆ. ಅನ್ವಾಯ—ವಂಶ. ಅಂದಿನ ಇಂದಿನ ಎಡೆಯೊಳ್—ಮೊದಲಿನಿಂದ ಇಲ್ಲಿಯ ವರೆಗೆ; ಎಡೆ—ನಡುವೆ. ಸಾಪತ್ನ್ಯ—ಶತ್ರುತ್ವ. ಎಮ್ಮಂ ಅಕಾರಣಂ ಕದಡಿದಯ್—ನಮ್ಮನ್ನು ನಿಷ್ಕಾರಣವಾಗಿ ಕಲಕಿದೆ. ಸಾವೆಯ್ದಿದಯ್—ನೀನೂ ಸಾವನ್ನು ಸಮೀಪಿಸಿದೆ. ನಷ್ಟಸೋದರಂ ಆಯಿತ್ತು: ಇದು ಮುಖ್ಯವಾಗಿ ದುರ್ಯೋಧನನಿಗೇ ಅನ್ವಯಿಸಿದರೂ, ಸತ್ತವರು ತನಗೂ ತಮ್ಮಂದಿರಾಗ ಬೇಕೆಂಬ ಭಾವ ಯುಧಿಷ್ಠಿರನಲ್ಲಿ ಇಲ್ಲದಿಲ್ಲ. ಎನಗಂ . . . ಪಾತಕಂ—ನನಗೂ ಕೂಡ ಸ್ವವಂಶದ ಕೊಲೆಯ ಪಾಪ ತಟ್ಟಿತು. ಇಂತು . . ತಕ್ಕುದೇ: ಹೀಗೆ ಹೇಡಿಯಂತೆ ಅಡಗಿರುವುದು ನಿನ್ನ ಗೌರವಕ್ಕೆ ತಕ್ಕದ್ದಲ್ಲ.

**೨೯ ವ.** ಆ ನುಡಿಗೆ ಸೈರಿಸದೆ: ಧರ್ಮರಾಯನ ಶಾಂತಿವಚನವನ್ನು ಕೇಳಿ ದುರ್ಯೋಧನನು ಎಲ್ಲಿ ಸಂಧಿಗೆ ಒಪ್ಪಿಬಿಡುತ್ತಾನೋ ಎಂದು ಭೀಮನಿಗೆ ಆತಂಕ, ಅಸಹನೆ. ಬೂತು—ಸಂ. ಭೂತ; ಈ ಶಬ್ದಕ್ಕೆ ಪ್ರಾಣಿ ಎಂದೂ ದೆವ್ವ ಎಂದೂ ಯಥೋಚಿತವಾಗಿ ಅರ್ಥಮಾಡಬಹುದು. ಎನ್ನ ಸರಂ . ಬಲ್ಲೆಂ: ನಿಮ್ಮೆಲ್ಲರ ಮಾತು ಅವನನ್ನು ಕದಲಿಸುವುದಿಲ್ಲ. ನನ್ನ ಸ್ವರವನ್ನು ಕೇಳಿದ ಹೊರತು ಅವನು ಹೊರಕ್ಕೆ ಬರುವುದಿಲ್ಲ. ಇವನಿಗೆ ತಕ್ಕದ್ದನ್ನು ನಾನೇ ಬಲ್ಲೆ. ಅದನ್ನು ಈಗ ಮಾಡುತ್ತೇನೆ ಎಂದು ಭಾವ. ಪರಮಶತ್ರುವಾದ ತನ್ನ ಮೂದಲಿಕೆಯನ್ನು ಕೇಳಿದರೆ ದುರ್ಯೋಧನನು ಎದ್ದೇ ಬಿಡುವನೆಂದು ಭೀಮನು ಬಲ್ಲನು. ಈ ಬೂತು ಬಲ್ಲೆಂ—ಎಂಬ ಮಾತನ್ನು ರನ್ನನು ಪಂಪಭಾರತದಿಂದ ಹೆಚ್ಚುಕಡಮೆ ಹಾಗೆಯೇ ಎತ್ತಿಕೊಂಡಿದ್ದಾನೆ (ಪಂಪಭಾ, ೧೩. ೭೬ ವ. ನೋಡಿ). °ಬದ್ಧಭ್ರುಕುಟಿಯಾಗಿ—ಬಿಗಿದ ಹುಬ್ಬು ಗಂಟುಳ್ಳವನಾಗಿ.

**೩೦.** ಭವತ್°—ನಿನ್ನ. ಅರುಣಜಲಮಂ—ರಕ್ತವನ್ನು. ಬಲಜಲನಿಧಿಯಂ—ಸೈನ್ಯವೆಂಬ ಸಾಗರವನ್ನು. ನೀನು ಹೊರಗೆ ಬಾರದಿದ್ದರೆ ಈ ಕೊಳದ ನೀರನ್ನೇ ತಳಮುಟ್ಟ ಹೀರಿ ಬಳಿಕ ನಿನ್ನನ್ನು ಮುಗಿಸುತ್ತೇನೆ; ನಿನ್ನ

ತಮ್ಮನ ರಕ್ತರಾಶಿಯನ್ನೂ ನಿನ್ನ ಸೇನಾಸಾಗರವನ್ನೂ ಹೀರಿದವನಿಗೆ ಇದೇನೂ ಅಸದಳವಲ್ಲ ಎಂದು ಭಾವ.

**೩೧.** ಸ್ವರಮಂ ಅಣ್ಮದೆ—ನನ್ನ (ಸಿಂಹ)ನಾದವನ್ನು ಕೇಳುವುದಕ್ಕೂ ನನ್ನ ಭೀಕರಮೂರ್ತಿಯನ್ನು ನೋಡುವುದಕ್ಕೂ ನೀನು ಸಮರ್ಥನಾಗದೆ. ಸಮರಾಕರ—ಯುದ್ಧರಂಗ. ಬಗೆವಾ—ಬಗೆವೆಯಾ ? ಸಮರಾಕರ, ಕಮಲಾಕರ—ಇವುಗಳಲ್ಲಿ ಗೋಚರವಾಗುವ ಅಕ್ಷರದ ಸಾಮ್ಯವನ್ನೂ ಗೌರವದ ಅಂತರವನ್ನೂ ಪರಿಭಾವಿಸಬೇಕು.

**೩೨.** ಕೋಡ ಸೇಡು—ಚಳಿಯ ಸೆಡೆತ. ಅಕ್ಕಟಾ: ಭೀಮನ ಕ್ರೋಧಕ್ಕಿಂತಲೂ ಅವನ ಉಪಹಾಸಗರ್ಭಿತವಾದ ಕನಿಕರವನ್ನು ಸಹಿಸುವುದು ದುರ್ಯೋಧನನಿಗೆ ಅಶಕ್ಯವಾಗಿರಬೇಕು. ನಿನ್ನ ಲಜ್ಜಾಕರಂ: ಯಾರೊಡನೆ ಯುದ್ಧಮಾಡುವುದು ದುಷ್ಕರವೋ ಅವನು ದುರ್ಯೋಧನ. ಇಂಥ ದೊಡ್ಡ ಹೆಸರನ್ನು ಇಟ್ಟುಕೊಂಡವನು ಹೀಗೆ ಯುದ್ಧಕ್ಕೆ ಅಂಜಿ ಅವಿತುಕೊಳ್ಳುವುದು ನಾಚಿಕೆಗೇಡಲ್ಲವೆ! ಸತ್ತರ್ ಏಂ ಪುಟ್ಟರೆ: ಮರಣದ ಬಳಿಕ ಪುನರ್ಜನ್ಮವಿದ್ದೇ ಇರುವಾಗ ಜೀವಗಳ್ಳನಾಗಿ ಹೀಗೇಕೆ ಸಾವಿಗೆ ಅಂಜುತ್ತಿದ್ದೀಯೆ? "ಸತ್ತರ್ ಪುಟ್ಟರೆ" ಎಂಬ ಮಾತು ಈ ಮೊದಲು ದುರ್ಯೋಧನನ ಬಾಯಲ್ಲೇ ಬಂದಿದೆ (ಗದಾಸಂ, ೬. ೧೨); ಅದನ್ನು ಭೀಮನು ಹೀಗೆ ತನಗೆ ಜ್ಞಾಪಿಸಿದಾಗ ದುರ್ಯೋಧನನ ಮನಸ್ಸು ಕುದಿದಿರಬೇಕು! ಕಯ್ದುಗೊಳ್—ಆಯುಧವನ್ನು ಹಿಡಿ. ಕೌರವೇಂದ್ರನೆಂಬ, ಅಚಲ—ಪರ್ವತಕ್ಕೆ, ವಜ್ರಾಯುಧದಂತಿರುವವನು; ಕೌರವನನ್ನು ಭೇದಿಸತಕ್ಕವನು. ಕುರು ಉದ್ಭೀಕರಂ—ಕುರುವಂಶವನ್ನು ಕಡಿದು (ನಾಶಮಾಡಿ) ಭಯಂಕರನಾಗಿರುವವನು.

**೩೩.** ಸಂಧಾನಕ್ಕೆ ವಂದಂದು—ಸಂಧಿಗಾಗಿ ಬಂದಾಗ; ವಾಕ್ಯಸಂಧಿಯಲ್ಲಿ ಬಕಾರದ ಸ್ಥಾನದಲ್ಲಿ ವಕಾರ ಬಂದಿದೆ. ಅವಗಡಿಸಿದ—ಮೇಲೆ ಬಿದ್ದ. ಎಲ್ಲಿತ್ತೊ—ಎಲ್ಲೋ ಈಗ? ಸಂಧಿಗೆಂದು ಬಂದ ಕೃಷ್ಣನನ್ನು ದುರ್ಯೋಧನನು ಕಟ್ಟಿ ಹಾಕಲು ಪ್ರಯತ್ನಿಸಿದನು. °ಆಕೃಷ್ಟಿ—ಆಕರ್ಷಿಸುವುದು,

ಸೆಳೆಯುವುದು. ಮಚ್ಚರ—ಸಂ. ಮತ್ಸರ. ಕಾಂತಾರ—ಅರಣ್ಯ. ತಿರಿಪಿದ—ಅಲೆಯುವಂತೆ ಮಾಡಿದ. ಅದಟ—ಶೂರ. ಉದ್ದಾಮಭೀಮ—ಕಟ್ಟು ಮೀರಿದವರಿಗೆ ಭಯಂಕರನಾದವನು.

**೩೪.** ಅಜಾಂಡ—ಬ್ರಹ್ಮಾಂಡ. ಕೆಡೆಯಲ್—ಬೀಳಲು. ಪಿಳಿಯಲ್ಕೆ ಧಾತ್ರಿ—ಭೂಮಿ ಬಿರಿಯಲು. ಪಿಟಿ—ಹಿಂಡು; ಪಿಳಿ—ಬಿರಿ. ಒಡರಿಸುವಿನಂ—ತೊಡಗಲು.

**೩೫.** ಎರ್ದೆ ಪವ್ವನೆ ಪಾಱುವಂತೆ—ಎದೆ ಹವ್ವೆಂದು ಹಾರುವಂತೆ. ಅನಾಕುಳಂ—(ಅದುವರೆಗೆ) ನಿರಾತಂಕವಾಗಿ. ವಿಹಗಕುಳ—ಪಕ್ಷಿ ಸಮೂಹ. ಭೀಮನ ಸಿಂಹನಾದಕ್ಕೆ ಕೊಳದಲ್ಲಿದ್ದ ಪಕ್ಷಿಗಳು ಬೆಚ್ಚಿ ಹಾರಿದ್ದನ್ನು ಕೊಳದ ಎದೆಯೇ ಬೆಚ್ಚಿ ಹಾರಿದಂತಿತ್ತು ಎಂದು ಉತ್ಪ್ರೇಕ್ಷಿಸಿರುವುದು ರಮ್ಯವಾಗಿದೆ.

**೩೬.** ಅಳುರ್ದು. ಕೋಪಾನಳಂ—ಭೀಮನ ಕೋಪಾಗ್ನಿ ಉರಿದು ಹರಡಿಕೊಳ್ಳಲು. ಅಳುರ್ ಧಾತುವಿಗೆ ಉರಿ ಎಂದೂ ವ್ಯಾಪಿಸು ಎಂದೂ ಅರ್ಥವುಂಟು. ಎಸರ್ವೊಯ್ದು ಇಟ್ಟ ಜಲದವೊಲ್—ಅಕ್ಕಿ ಮೊದಲಾದವನ್ನು ಬೇಯಿಸಲು ಎಸರಿಗೆಂದು ಕಾಯುವುದಕ್ಕೆ ಇಟ್ಟ ನೀರಿನಂತೆ. ಮಱುಗು—ಕುದಿ. ಕೂೞ್—ಅನ್ನ. ಅನಿಮಿಷತತಿ—ಮೀನುಗಳ ಸಮೂಹ.

**೩೬ ವ.** ಅಸುಂಗೊಳೆ—ಬೆಚ್ಚಿ ಬೆಂಡಾಗಲು, ಶಕ್ತಿಗುಂದಲು. ಗೋೞುಂಡೆಗೊಳ್—ತುಂಬ ಗೋಳಿಡು. ಕೂೞ್ಗುದಿಗೊಳ್—ಅನ್ನ ಕುದಿಯುವಂತೆ ಕುದಿ. ಮಹೋತ್ತುಂಗ ಸಿಂಹಕೇತನ—ಅತ್ಯುನ್ನತವಾದ ಸಿಂಹಧ್ವಜವುಳ್ಳವನು, ಭೀಮ.

**೩೭.** ರವಮಂ—ಶಬ್ದವನ್ನು. °ಕಂಠೀರವ°—ಸಿಂಹ. ನಿರಸ್ತ—ಹೊರದೂಡಲ್ಪಟ್ಟ, ಎಂದರೆ ಸೋಲಿಸಲ್ಪಟ್ಟ. ಘನ—ಮೋಡದ, ರವವನ್ನುಳ್ಳದ್ದು; ಎಂದರೆ ಭೀಮನ ಆರ್ಭಟವು ಸಿಂಹದ ಗರ್ಜನೆಯನ್ನೂ ಗುಡುಗಿನ ಮೊಳಗನ್ನೂ ಮೀರಿಸಿತ್ತು. ಆ . . . ಪತಾಕಂ : ಭೀಮನ ಸಿಂಹನಾದವನ್ನು ಕೇಳಿ ಎಂಥವನ ಎದೆಯಾದರೂ ಭಯದಿಂದ ತಲ್ಲಣಿಸಬೇಕು. ಆದರೆ ಅಭಿಮಾನಧನನಾದ ದುರ್ಯೋಧನನಿಗೆ ಈ ಶತ್ರುಧ್ವನಿಯನ್ನು ಕೇಳಿ ಕೋಪದಿಂದ ಕಣ್ಣು

ಕೆಂಡವಾಯಿತು. ಆ ಕೋಪದ ಕಾವು ಎಷ್ಟು ತೀವ್ರವಾಗಿತ್ತೆಂದರೆ, ಕೊಳದ ತಳದ ಕೊರೆಯುವ ನೀರಿನಲ್ಲಿದ್ದರೂ ದುರ್ಯೋಧನನ ಮೈಯೆಲ್ಲ ಬೆವರಿಟ್ಟಿತು! ಉರಗಪತಾಕ ಎಂಬ ಮಾತೂ ಇಲ್ಲಿ ಅರ್ಥವತ್ತಾಗಿದೆ.

**೩೮.** ಉಳಿ—ಅಡಗಿಕೊ. ಕೂರದರ್—ಆಗದವರು, ಶತ್ರುಗಳು. ನಾನು ವಿದ್ಯಾಬಲದಿಂದ ಕೊಳದಲ್ಲಿ ಮುಳುಗಿರುವುದಕ್ಕೆ ಶತ್ರುಗಳು ಅಪಾರ್ಥ ಮಾಡುತ್ತಾರೆ; ದುರ್ಯೋಧನನು ಬಲಗುಂದಿ ಕೊಳದಲ್ಲಿ ಅವಿತುಕೊಂಡಿದ್ದಾನೆ ಎಂದು ನಗುತ್ತಾರೆ; ಇದನ್ನು ಹೇಗೆ ಸಹಿಸುವುದು ಎಂದು ದುರ್ಯೋಧನನ ಉಮ್ಮಳ.

**೩೯.** ತೃಣ . . . ರಕ್ಷಣಾರ್ಥದಿಂ—ಹುಲ್ಲಿನಂತೆ ಹಗುರವಾದ ಜೀವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ. ಕುಲದ ಅಂತುಂ—ಕುಲಛಲಗಳ (ಘನತೆಯನ್ನು) ತ್ಯಜಿಸಿ. ಗಣನೆಗೆ ವಂದ=ಗಣನೆಗೆ+ಬಂದ. ಪುರುಷರ . ವಂದ ಎನ್ನಂ—ಪೌರುಷಶಾಲಿಗಳಲ್ಲಿ ಒಬ್ಬನೆಂದು ಗಣ್ಯನಾದ ನನ್ನನ್ನು. ಲಘು ಮಾಡುವೆನೇ—ಹಗುರಗೊಳಿಸಲೆ ?

**೪೦.** ಮುನಿವಂ—ಶತ್ರು. ಎನಿತಂ—ಎಷ್ಟೊಂದು ಕಾಲ. ಜಲ. ವಿಬುಧಕ್ಷೋಭಂ— (ಭೀಮನ ಆರ್ಭಟದಿಂದ) ಜಲಚರಗಳು ತಳಮಳಗೊಂಡು ಮಾಡಿದ ಶಬ್ದವು ಮೇಲಕ್ಕೇರಿ ಆಕಾಶವನ್ನು ಹೊಕ್ಕು, ಅಲ್ಲಿ ನೆರೆದಿದ್ದ ದೇವತೆಗಳಲ್ಲೂ ಕ್ಷೋಭವು ಹೊಮ್ಮಲು. ವಿಬುಧ—ದೇವತೆ.

**೪೦ ವ.** ಪರಿಣಾಮ. . . ಕಿಡೆಯುಂ—ಕೊನೆಯಲ್ಲಿ ರಮ್ಯವಾಗದೆ ಕೆಟ್ಟು ಹೋಗಲು; ಎಂದರೆ, ಮಂತ್ರವನ್ನು ಅವಧಿ ಪೂರ್ಣವಾಗುವವರೆಗೂ ಜಪಿಸಲು ಸಾಧ್ಯವಾಗದೆ ಅದು ನಿಷ್ಫಲವಾಗಲು. ಮಂತ್ರ ಕೆಟ್ಟು, ವಿಜಯವು ಸಂದಿಗ್ಧವಾದರೂ ದುರ್ಯೋಧನನ ಆತ್ಮಾಭಿಮಾನವು ಸ್ವಲ್ಪವೂ ಕುಂದಲಿಲ್ಲ.

**೪೧.** ನಿಜ°—ತನ್ನ, ಮಕುಟದ, ಸ್ಫುರತ್—ಹೊಳೆಯುವ, ಮಣಿಗಣದ, ಛವಿಯಿಂ—ಕಾಂತಿಯಿಂದ. ಸುರಚಾಪಲೀಲೆ—ಕಾಮನಬಿಲ್ಲಿನ ಸೊಗಸು. ಮೇಗೆ ಒಗೆದಿರ್ದ—ಮೇಲೆ ಎದ್ದಿದ್ದ. ನೀಲನೀರಜ°—ಕನ್ನೈದಿಲೆ. ಕಱಂಗಿ—ಕಪ್ಪಾಗಿ. °ತೋರಣಾಯಿತ°—ತೋರಣದಂತಿರುವ.

ದುರ್ಯೋಧನನು ಕೊಳದಿಂದ ಮೇಲಕ್ಕೆ ಎದ್ದಾಗ ಅವನ **ಕಿರೀಟದ** ರತ್ನಗಳ ವಿವಿಧವರ್ಣಗಳಿಂದ ಆ ಕೊಳದ ಕಮಲವನದಲ್ಲಿ ಒಂದು ಕಾಮನ ಬಿಲ್ಲು ಮೂಡಿದಂತಾಯಿತು. ದುರ್ಯೋಧನನ ನೆತ್ತಿಯಮೇಲೆ ನೀರಿನಲ್ಲಿ ಹರಡಿದ್ದ ಕನ್ನೈದಿಲೆಗಳ ಕಪ್ಪುಛಾಯೆಯಿಂದ ಅವನೂ ಕ್ಷಣಕಾಲ ಕಪ್ಪಾಗಿ ಕಾಣಿಸಿದನು. ಮೇಲಕ್ಕೆ ನೀಡಿದ ಎರಡು ಬಾಹುಗಳಿಂದಲೂ ಅವನು ಎತ್ತಿ ಹಿಡಿದಿದ್ದ ಗದಾದಂಡವು ಆ ಭುಜಗಳಿಗೆ ಕಟ್ಟಿದ ಒಂದು ತೋರಣದಂತೆ ಶೋಭಿಸುತ್ತಿತ್ತು.

**೪೨.** ರಸೆಯಿಂ ವೊಲ್—(ಪ್ರಳಯಕಾಲದಲ್ಲಿ) ಭೂಮಿಯನ್ನು ಭೇದಿಸಿಕೊಂಡು ಕಾಲಾಗ್ನಿರುದ್ರನು ಮೇಲಕ್ಕೆ ಹಾಯ್ದು ಬರುವಂತೆ. ತೊಟ್ಟನೆ ಕೊಳೆ—ಥಟ್ಟನೆ ಗೋಚರಿಸುವಂತೆ, ಥಟಕ್ಕನೆ; ಗದಾಸಂ, ೭. ೪೭ ನ್ನು ಹೋಲಿಸಿ. ಎಲ್ಲಿದಂ ಭೀಮಂ—ಎಲ್ಲಿ ಭೀಮ! ಎಣ್ದೆಸೆ—ಎಂಟುದಿಕ್ಕು. ಅದ್ಭುತನಟ—ಮಹಾತಾಂಡವವನ್ನಾಡುವ ನಟರಾಜನ, ನಿಟಿಲ—ಹಣೆಯಲ್ಲಿ, ಆಲೋಲ—ಹೊರಳಿ ತಿರುಗುತ್ತಿರುವ, ಕೀಲಾಕ್ಷಿವೊಲ್—ಉರಿಗಣ್ಣಿನಂತೆ. ದಳ್ಳಿಸೆ—ಉರಿಯಲು. ಧಾರ್ತರಾಷ್ಟ್ರ—ಧೃತರಾಷ್ಟ್ರನ ಮಗ.

ಇದೊಂದು ಅದ್ಭುತವಾದ ವರ್ಣನೆ. ದುರ್ಯೋಧನನನ್ನು ಪ್ರಳಯಾಗ್ನಿಗೂ ರೋಷದಿಂದ ಜ್ವಲಿಸುವ ಅವನ ರಕ್ತನೇತ್ರವನ್ನು ತಾಂಡವರುದ್ರನ ಉರಿಗಣ್ಣಿಗೂ ಹೋಲಿಸಿ, ಅವನ ಕ್ರೋಧಾತಿಶಯವನ್ನು ರನ್ನನು ನಮ್ಮ ಅನುಭವಕ್ಕೆ ಮುಟ್ಟಿಸುತ್ತಾನೆ. ಇಲ್ಲಿಯ ವರ್ಣವಿನ್ಯಾಸವೂ ಸಂಸ್ಕೃತಸಮಾಸಗಳ ಪ್ರಯೋಗವೂ ರಸಕ್ಕೆ ತುಂಬ ಪುಷ್ಟಿಕೊಡುತ್ತವೆ.

**೪೨ ವ.** ದಂದಶೂಕಪತಾಕ—ಸರ್ಪಧ್ವಜವುಳ್ಳವನು, ದುರ್ಯೋಧನ. ಸೆರಗಿಲ್ಲದ—ಸಹಾಯವನ್ನು ಅಪೇಕ್ಷಿಸದ. ಪೆಂಪುಗ್ಗಲಿತನ—ಶೌರ್ಯ. ನಿರ್ಜಿತ—ಗೆಲ್ಲಲ್ಪಟ್ಟ, ನಿಖಿಲ—ಎಲ್ಲಾ, ಭೀಮ—ಭಯಂಕರವಾದ, ಸೇನಂ—(ಶತ್ರು) ಸೇನೆಗಳನ್ನುಳ್ಳವನು. ಇದಿರ್ಗೆ ವಂದು=ಇದಿರ್ಗೆ+ಬಂದು.

**೪೩.** ಅರುಣಜಲಮಂ—ರಕ್ತವನ್ನು. ಬೆನ್ನನೆ—ಬೆನ್ನ ಹಿಂದೆಯೇ. ಈ ಇರ್ದನಲ್ತೆ—ಇಲ್ಲೇ ಇದ್ದಾನಲ್ಲವೆ? ಕೌರವಮಲ್ಲ—ಕೌರವರನ್ನು (ಗೆಲ್ಲುವ)

ಜಟ್ಟಿ. "ಎಲ್ಲಿ ಭೀಮ" ಎಂಬ ದುರ್ಯೋಧನನ ಗರ್ಜನೆಗೆ ಉತ್ತರವಾಗಿ ಭೀಮನು "ಇಲ್ಲೇ ಇದ್ದೇನೆ" ಎಂದು ಉತ್ತರಕೊಡುತ್ತಾನೆ; ಜೊತೆಗೆ, ಹಂಗಿಸುತ್ತಾನೆ.

**೪೩ ವ.** ನೆಱಸಂ ಉಂಟುಮಾಡಿ—ಮರ್ಮೋದ್ಘಾಟನೆಮಾಡಿ.

**೪೪.** ಯಮರಾಜ . . . ಪ್ರಿಯೆಯಪ್ಪ ಹೀಗೆ ಪಾಂಡವರೆಲ್ಲರ ಹೆಸರುಗಳನ್ನೂ ದುರ್ಯೋಧನನು ಬಿಡಿಬಿಡಿಯಾಗಿ ಹೇಳಿ ದ್ರೌಪದಿಯ ಪಂಚಪತಿತ್ವವನ್ನು ಉಪಹಾಸಮಾಡುತ್ತಾನೆ. ಕಚಪ್ರಾರಂಭ—ಕೂದಲಿನ ಬುಡ. ಬಾಹುವಿಕ್ರಮಿ: ದ್ರೌಪದಿಯ ಮುಡಿಯನ್ನು ಹಿಡಿದೆಳೆಯುವುದಕ್ಕೆ ದುಶ್ಶಾಸನಿಗೆ ಹೀಗೆ ಹೊಗಳಿಸಿಕೊಳ್ಳುವಷ್ಟು ಬಾಹುಬಲ ಬೇಕಾಗಿತ್ತೆ? ಮುಂದೆ—ನಿಮ್ಮೆಲ್ಲರ ಎದುರಿಗೇ. ನಿನಗೆ ಮಾಡಿದರ್—ಈ ಪೌರುಷವನ್ನು ನಿನ್ನಲ್ಲಿ ಯಾರು ಹೊಸದಾಗಿ ಉತ್ಪಾದನೆಮಾಡಿದರು? ಅಂದು ಇಲ್ಲದ ಪೌರುಷ ಇಂದು ಹೇಗೆ ನಿನಗೆ ಬಂದಿತು?

**೪೫.** ಅಸುರಂ—(ಹಿರಣ್ಯಾಕ್ಷನೆಂಬ) ರಾಕ್ಷಸನು. ವಸುಧಾ°=ವಸುಮತಿ—ಭೂಮಿ. ರಸಾತಳಕ್ಕೆ—ಅಧೋಲೋಕಕ್ಕೆ. ಹಿರಣ್ಯಾಕ್ಷನು ಭೂಮಿಯನ್ನು ಸುರುಳಿಸುತ್ತಿ ಕೆಳಲೋಕಕ್ಕೆ ಒಯ್ದಾಗ ಅದನ್ನು ಎತ್ತಿ ತರಲು ವಿಷ್ಣು ವರಾಹಾವತಾರಮಾಡಿ ಸಮುದ್ರವನ್ನು ಹೊಕ್ಕಂತೆ, ನಾನೂ ಕೂಡ ನಿನ್ನ ಹಿಡಿತಕ್ಕೆ ಸಿಕ್ಕಿದ ನನ್ನ ಭೂಮಿಯನ್ನು ಕಸಿದುಕೊಳ್ಳಲು (ಕಾಲಸಾಧನೆಗಾಗಿ) ಈ ಕೊಳವನ್ನು ಹೊಕ್ಕೆನು; ನಿನ್ನ ಭಯದಿಂದ ಹೊಗಲಿಲ್ಲ ಎಂದು ದುರ್ಯೋಧನನು ವಿವರಿಸುತ್ತಾನೆ.

**೪೬.** ನಾಟ್ಕಡೆಗಳೆದು—ನಾಡಿನ ಕಡೆಯನ್ನು (ಎಂದರೆ ದೇಶದ ಎಲ್ಲೆಯನ್ನು) ದಾಟಿಹೋಗಿ. ನಾಡ ಕಡೆ=ನಾಟ್ಕಡೆ (ಶಬ್ದಮ, ೧೯ ರ ಕೆಳಗೆ). ಇಲ್ಲಿಯ ಪಾಠಾಂತರಗಳನ್ನೂ ಪಂಪಭಾರತದ ೧೨. ೧೭೮ ನೆಯ ಪದ್ಯವನ್ನೂ ಅನುಸರಿಸಿ, ನಾಟ್ಕಡಿ (=ನಾಡು+ಗಡಿ) ಎಂದು ಅಂಗೀಕರಿಸಿದರೆ, ಗಡಿ ಎಂಬುದರ ಗಕಾರ ಹೇಗೆ ಕಕಾರವಾಯಿತು ಎಂಬುದಕ್ಕೆ ಉತ್ತರಕೊಡುವ ಸಮಸ್ಯೆ ಒದಗುತ್ತದೆ. ಬೇರಂ ಬಿಜ್ಕೆಯುಮಂ—ಗಿಡಗಳ ಬೇರುಗಳನ್ನೂ

ಬಿಕ್ಕೆಯ ಹಣ್ಣನ್ನೂ ; ಬಿಕ್ಕೆ ಒಂದು ಜಾತಿಯ ಕಾಡುಮರ. ಅಡಗಿರೆ—ನೀವು ಅಡಗಿಕೊಂಡಿರಲಿಲ್ಲವೆ ? ನೀಟ್ಕರಿಸಿ ನಿಂದುಂ—ಉದ್ದವಾಗಿ ನೆಟ್ಟನೆ ನಿಂತು ಕೊಂಡೂ. ಕವ್ಮ್ರೃಸುವರೆ— ವಿಸ್ತರಿಸಬಹುದೆ ? ಕವ್ಮ್ರೃಸು ಎಂಬುದರ ಅರ್ಥ ಖಚಿತವಾಗಿ ತಿಳಿಯುವುದಿಲ್ಲ ; ಈ ಧಾತು ಅಜಿತವು, ೧. ೮೨ರಲ್ಲಿಯೂ ಬಂದಿದೆ.

**೪೭.** ಪುಟ್ಟು—ಹುಟ್ಟು, ಮರದ ಸೌಟು. ಸಟ್ಟುಗ—ಸೌಟು. ಅಟ್ಟು ಆಱಿಸಿ ಬೋನಮಿಟ್ಟು—ಅಡಿಗೆಮಾಡಿ ಬಿಸಿಯಾರಿಸಿ ಊಟಕ್ಕೆ ಬಡಿಸಿ ; ಬೋನ—ಸಂ. ಭೋಜನ. ಅಡಿಗೆಮನೆಯ ಕೆಲಸವನ್ನೆಲ್ಲ ಮುಗಿಸಿ ಇಲ್ಲಿಗೆ ಬಂದೆಯೊ ! ಒಟ್ಟೈಸಿ—ಮೇಲೆ ಹಾಯ್ದು (?). ಕಾದುವಂತುಟು—ಯುದ್ಧ ಮಾಡುವ ಹಾಗೆ. ಗಂಡಗರ್ವ—ಪೌರುಷದ ಹೆಮ್ಮೆ.

**೪೮.** ಅಕ್ಕಿಗರ್ಚುವ—ಅಕ್ಕಿಯನ್ನು ತೊಳೆಯುವ; ಕಯ್ಗೆ ಎಱೆವ—ಕೈಗೆ ಸುರಿಯುವ, ಬಡಿಸುವ (?). ಕಂಚುಗರ್ಚುವ—ಊಟದ ತಳಿಗೆಯನ್ನು ತೊಳೆಯುವ. ಕರ್ಚು—ತೊಳೆ. ಅಕ್ಕಿಗರ್ಚುವ ಬೆಸ[ನುಂ], ಕಂಚುಗರ್ಚುವ ಬೆಸ[ನುಂ] ಎಂದು ಪಾಠವಿದ್ದರೆ ಉತ್ತಮ. ಬೆಸನುಂ—ಕಾರ್ಯವೂ (ಬೆಸ—ಕಾರ್ಯ, ಆಜ್ಞೆಮಾಡಿದ ಕಾರ್ಯ). ಬೆಸನ—ಚಾಳಿ ; ಸಂ. ವ್ಯಸನ. ಬೆಸಂ ಅಕ್ಕುಂ—(ಇವು) ನಿನಗೆ ತಕ್ಕ ಕೆಲಸಗಳು. ಮತ್ಸ್ಯನ ಬಾಣಸಿಗಂಗೆ—ವಿರಾಟನ ಅಡಿಗೆಯವನಾದ (ನಿನಗೆ) ; ಬಾಣಸ—ಅಡಿಗೆಯ ಮನೆ ; ಸಂ. ಮಹಾನಸ ; ಬಾಣಸು—ಅಡಿಗೆಯ ಕೆಲಸ. ಆರ್ ಇತ್ತರ್—ಯಾರು ನೇಮಿಸಿ ದರು ? ಈ ಬೆಸನು—ಈ (ಗದೆ ತಿರುಗಿಸುವ) ಕೆಲಸವನ್ನು. ವಿರಾಟನ ಮನೆಯಲ್ಲಿ · ಭೀಮನು ಅಡಿಗೆಯವನಾಗಿದ್ದ ವಿಷಯವನ್ನು ದುರ್ಯೋಧನನು ಜ್ಞಾಪಿಸಿ ಹಂಗಿಸುತ್ತಾನೆ. ಆದರೆ ಭೀಮನು ಮುಂದಿನ ಪದ್ಯದಲ್ಲಿ ಅದನ್ನೇ ಹಿಂದಿರುಗಿಸಿ ಪರಿಣಾಮಕಾರಿಯಾದ ಉತ್ತರವನ್ನು ಕೊಡುತ್ತಾನೆ.

**೪೯.** ನನ್ನಿ—ಸತ್ಯ. ಅಣ್ಣನ ಮಾತನ್ನು ರಕ್ಷಿಸುವುದಕ್ಕಾಗಿ ಇನ್ನೊಬ್ಬರ ಮನೆಯಲ್ಲಿ ನಾನು ಅಡಿಗೆಮಾಡಿದ್ದು ದಿಟ ; ಅದರಲ್ಲೇನೂ ಅವಮಾನವಿಲ್ಲ. ಅಲ್ಲದೆ ಆ ಬಾಣಸಿಗತನವನ್ನು ಇಲ್ಲಿ ಕೂಡ ಬಿಡುವುದಿಲ್ಲ. ನಿನ್ನನ್ನು ಕೊಂದು

ನಿನ್ನ ಮಾಂಸವನ್ನು ಮರುಳುಗಳಿಗೆ ಆಹಾರವಾಗಿ ಬಡಿಸುತ್ತೇನೆ ಎಂದು ಭೀಮನ ಉತ್ತರ.

**೫೦.** ಜತುಗೇಹಾನಲದಾಹದಿಂ—ಅರಗಿನ ಮನೆಗೆ ಬೆಂಕಿಯನಿಕ್ಕಿ ಸುಡುವುದರಿಂದ. ಆಲಿಪ್ತ—ಲೇಪಿಸಲ್ಪಟ್ಟ. ಕೃತಕ—ಕೃತ್ರಿಮದ. ಕೊಲಲ್ಕೆ ಒಡ್ಡಿದಯ್—ಕೊಲ್ಲಲು ಏರ್ಪಾಡುಮಾಡಿದೆ. ಗತಕಾಲಂ ಗಡಾ—ಕಳೆದುಹೋದ ಕಾಲವೆಲ್ಲ (ನಮಗೆ) ನಾಶದ ಕಾಲವಾಯಿತು; ಇನ್ನು ಮುಂದೆ ನಿನಗೆ ಕೊನೆಗಾಲ ಒದಗಿತಲ್ಲ!

**೫೧.** ಇರಲಿ ಇಂತು ಈ ಮಾದ್ರಿಪುತ್ರರ್—ಈ ನಕುಲಸಹದೇವರು ಒಂದು ಕಡೆ ಹಾಗೆ ಇರಲಿ. (ಇರಲಿ ಎಂಬ ಕ್ರಿಯಾರೂಪ ಹಳಗನ್ನಡದಲ್ಲಿ ಪ್ರಚುರವಲ್ಲ; ಇರ್ಕೆ ಎಂದು ಇರಬೇಕಾಗಿತ್ತು.) ಬಡವುಗಳ್—ಬಡಪ್ರಾಣಿಗಳು, ಕೈಯಲ್ಲಾಗದವರು. ಏಗೆಯ್ದಪರ್—ಏನನ್ನು ತಾನೆ ಮಾಡಬಲ್ಲರು? ಹರಿಸುತನೊಡನೆ—ಇಂದ್ರಪುತ್ರನಾದ ಅರ್ಜುನನೊಡನೆ. ಮೇಣ್ ಅಯ್ವರುಂ ಈ ಬರ್ಕೆ—ಇಲ್ಲದಿದ್ದರೆ ಐದುಮಂದಿಯೂ (ಒಟ್ಟಾಗಿ) ಈಗಲೇ ಬರಲಿ. ತೊಡರ್ದು ಅನಿಬರೊಳಂ—ಅಷ್ಟು ಮಂದಿಯೊಡನೆಯೂ ಕೂಡಿಕೊಂಡು. ಬನ್ನಂ ಈವೆಂ—ಭಂಗಪಡಿಸುತ್ತೇನೆ, ಸದೆಬಡಿಯುತ್ತೇನೆ. ಪಾಂಡವರು ಒಬ್ಬೊಬ್ಬರಾಗಿ ತನ್ನ ಮೇಲೆ ಬಂದರೂ ಸರಿಯೆ, ಒಟ್ಟೊಟ್ಟಿಗೆ ಬಂದರೂ ಸರಿಯೆ, ಕೃಷ್ಣನೂ ಕೂಡಿಕೊಂಡು ಎಲ್ಲರೂ ಬಂದರೂ ಸರಿಯೆ, ನಾನು ಸಿದ್ಧವಾಗಿದ್ದೇನೆ ಎಂದು ದುರ್ಯೋಧನನು ಸಹಜಪೌರುಷದ ಮಾತನ್ನು ಆಡುತ್ತಾನೆ.

**೫೧ ವ.** ಗದಾಸಂ, ೭.೨೮ ವ. ನ್ನು ಹೋಲಿಸಿ.

**೫೨.** ಧರ್ಮರಾಯನು ಕೊನೆಯ ಸಲ ಮತ್ತೆ ಶಾಂತಿಯ ಮಾತನ್ನಾಡುತ್ತಾನೆ. ತಮಗೆ ಅರ್ಧರಾಜ್ಯ ಕೂಡ ಬೇಡ, ಸಮಸ್ತವನ್ನೂ ನೀನೇ ತೆಗೆದುಕೊಂಡು ಸುಖವಾಗಿರು; ಕುಲಕ್ಷಯ ತಪ್ಪಿದರೆ ಸಾಕು; ಹಠವನ್ನು ಬಿಡು ಎಂದು ದುರ್ಯೋಧನನನ್ನು ಪ್ರಾರ್ಥಿಸುತ್ತಾನೆ. ಮಹಾಭೋಗಭಾಗಿ—ರಾಜಭೋಗಗಳೆಲ್ಲಕ್ಕೂ ನೀನೇ ಭಾಗಿ(ಯಾಗಿ). ಅಗಾ—(ಅಗ+ಅ) ಅಗದೆ? ಅಗ=ಅಗದು.

**೫೩.** ಧರಣೀ ಕೊಳ್—ಭೂಮಂಡಲವನ್ನೆಲ್ಲ ನೀನೇ ಸ್ವೀಕರಿಸು. ನಮ್ಮಂ ಅಯ್ವರಂ ಇನ್ ಆಳ್ವಿಸಕಯ್ಸಿಕೊಳ್—ನಮ್ಮ ಐದು ಮಂದಿಯಿಂದಲೂ ಸೇವೆಮಾಡಿಸಿಕೊ; ನಮ್ಮಂ ಐವರ ನಿನ್ನ ಆಳ್ವಿಸಕಯ್ಸಿಕೊಳ್—ಎಂದು ಪದವಿಭಾಗಮಾಡುವುದೂ ಸಾಧ್ಯ. ಇನ್ನು ಮುಂದಿನ ಭಾಗದಲ್ಲಿ ಕೆಲವು ಕಡೆ ಅನ್ವಯವೂ ಅರ್ಥವೂ ಸರಿಯಾಗಿ ತಿಳಿಯುವುದಿಲ್ಲ. ಕಿಡ್ಪೊಕ್ಕಿನೊಳ್—(?). ಕಿಡ್ಪೊಕ್ಕಿನೊಳ್ ತೊಟ್ಟುಕೊಂಡು ನೆನೆಯದಿರ್—ಎಂದು ಅನ್ವಯವಿರಬಹುದು. ಇರದೆ—ಹೀಗಿರದೆ. ಒಳ್ಪಿಂ—ಒಳ್ಳೆಯತನದಿಂದ. ಶಾಂತಿ ವಿಶ್ರಾಂತಿ ಸೋದರನೆಂಬಂತು—ಶಾಂತಿಸಮಾಧಾನಗಳಸ್ನುಳ್ಳ ಸಹೋದರನ ಹಾಗೆ (?). ಎಮ್ಮೆಂಬುದಂ (=ನಾವು ಹೇಳುವ) ಉಪಶಾಂತಿಯಂ ಮನದೊಳ್ . . . ಇಂಬುಕಯ್—ಎಂದು ಅನ್ವಯಿಸಿಕೊಳ್ಳಬೇಕೆಂದು ತೋರುತ್ತದೆ.

**೫೪.** ಈ ಪದ್ಯದ ಮಾತನ್ನು ಕೃಷ್ಣನು ಋಜುಮನಸ್ಸಿನಿಂದ ಹೇಳುತ್ತಾನೋ ಕುಹಕವನ್ನು ಬೆರಸಿ ಹೇಳುತ್ತಾನೋ ನಿರ್ಧರಿಸುವುದು ಕಷ್ಟ. "ಕಂಜನಾಭಂ ಅಸಮಂಜಸಿಕೆಯೊಳ್ ತನ್ನಂ ತೆಗಟ್ಟಿ ನುಡಿದುದರ್ಕೆ ಏವೈಸಿ" (ಗದಾಮೂ, ೭.೪೮ ವ), ದುರ್ಯೋಧನನು ಮುಂದೆ ಕೃಷ್ಣನನ್ನು ನಿಂದಿಸುವುದನ್ನು ನೋಡಿದರೆ, ಎರಡನೆಯ ಊಹೆಯೇ ಸರಿಯಿರಬಹುದು.

**೫೫.** ಈಗಲೂ ಎಲ್ಲಿ ಸಂಧಿಗೆ ದುರ್ಯೋಧನನು ಒಪ್ಪಿಬಿಡುತ್ತಾನೋ ಎಂದು ಭೀಮನಿಗೆ ಆತಂಕ ಮೂಡಿರಬಹುದು! ಅದನ್ನು ತಪ್ಪಿಸಲು, ಸಂಧಿಯನ್ನು ಒಪ್ಪುವುದು ದುರ್ಯೋಧನನಿಗೆ ಸಾಧ್ಯವಿಲ್ಲವೆಂದು ತಾನೇ ಹೇಳಿಬಿಡುತ್ತಾನೆ. ಐದು ಬಾಡದೊಳ್—ಐದು ಗ್ರಾಮಗಳನ್ನು ಮಾತ್ರ ಬೇಡಿ. ಒಲ್ಲದಂ ಇನ್ ಈ ಮಾನಧನಂ—ಒಪ್ಪದಿದ್ದ ಈ ಮಾನಶಾಲಿ ಇನ್ನು. ಎಯ್ದೆ—ಸಂಪೂರ್ಣವಾಗಿ. ಅಟ್ಟಾಡೆ—ನಾಶವಾದಮೇಲೆ.

**೫೫ ವ.** ಯುದ್ಧವೇ ನಡೆಯಬೇಕೆಂಬ ವಿಷಯದಲ್ಲಿ ಭೀಮದುರ್ಯೋಧನರ ಮತ ಒಂದೇ!

**೫೬.** ನೇರ್ಪು—ಕೊಲೆ; ಧಾ. ನೇರ್—ಕತ್ತರಿಸು. ನೇರ್ಪಿಂಗೆ . . . ಮಾಣೆಂ—ಕೊಲೆಗೆ ಪ್ರತಿಯಾಗಿ ಕೊಲೆಮಾಡಿ ಸೇಡುತೀರಿಸಿಕೊಳ್ಳದೆ ನಾನು

ಬಿಡುವುದಿಲ್ಲ. "ನೆಪ್ಪಿಂಗೆ ನೆಪ್ಪುಗೊಳ್ಳದೆ ಮಾಣೆನೆಂಬಂತೆ" ಎಂಬ ಪಂಪಭಾರತದ ಮಾತನ್ನು (೧೧. ೭೪) ಹೋಲಿಸಿ. ಪಂಪಭಾರತದ ಕ್ಲಿಷ್ಟಪದಗಳ ನಿಘಂಟಿನಲ್ಲಿ, "ನೆಪ್ಪು—ಮುಯ್ಯಿ" ಎಂದು ಅರ್ಥಕೊಟ್ಟಿದೆ. ಇದಕ್ಕೆ ಆಧಾರವೇನೆಂದು ಗೊತ್ತಾಗುವುದಿಲ್ಲ.

**೫೭. ತಾಂ.** ನುಡಿವಂ ಗಡ—ತಾನಂತೆ, ಮಧ್ಯಸ್ಥಿಕೆಯ ಮಾತನ್ನು ಹೇಳುತ್ತಾನಂತೆ! ನೀನು ಯಾರು, ಹೀಗೆ ನಡುವೆ ಬಂದು ಸಂಧಿಯ ಮಾತನ್ನಾಡುವುದಕ್ಕೆ?—ಎಂದು ಕೃಷ್ಣನನ್ನು ದುರ್ಯೋಧನನು ಧಿಕ್ಕರಿಸುತ್ತಾನೆ. ಪುದುವಾಳ್ಕೆ ಎನಗಂ ಅವರ್ಗಂ—ನನಗೂ ಅವರಿಗೂ ಇನ್ನು ಸಹಜೀವನ ಎಲ್ಲಾದರೂ ಸಾಧ್ಯವೆ! ಲಂಘಿಸಿದೆಂ ಮುನ್ನಂ—ಹಿಂದೆಯೇ ದಾಟಿಬಿಟ್ಟೆನು.

**೫೮.** ವನವಾಸಮಲಿನನಂ—ಅರಣ್ಯದಲ್ಲಿ ನೆಲಸಿ ಕಳಂಕಿತನಾದ (ಯುಧಿಷ್ಠಿರನನ್ನು). ಉಜ್ಜ್ವಳಿಸಿ—ಬೆಳಗುವಂತೆ ಮಾಡಿ. ಗೋತ್ರಧವಳನಂ—ಪರಿಶುದ್ಧ ವಂಶದ (ನನ್ನನ್ನು). ಶ್ವೇತಕೃಷ್ಣಕಾರಕರ್—ಬಿಳಿದನ್ನು ಕರಿದಾಗಿ ಮಾಡುವವರು, ಒಳ್ಳೆಯದನ್ನು ಕೆಟ್ಟದೆನಿಸುವ ತಂತ್ರಿಗಳು.

ಧರ್ಮರಾಯನು ಕಾಡಿನಲ್ಲಿ ಹುಟ್ಟಿ ಅಲ್ಲಿಯೇ ಬಹುಕಾಲ ಇದ್ದು ಹೇಗೋ ಮಲಿನಜೀವನವನ್ನು ನಡಸಿದವನೆಂದು ದುರ್ಯೋಧನನಿಗೆ ಅವನ ವಿಷಯದಲ್ಲಿ ತಿರಸ್ಕಾರ; ಅವನನ್ನು ಯಮತನಯನೆಂದು ನಿರ್ದೇಶಿಸಿ ತನ್ನನ್ನು ಗೋತ್ರಧವಳನೆಂದು ಕರೆದುಕೊಂಡಿರುವುದರಿಂದ, ಧರ್ಮರಾಜನ ಜನನವು ಕಳಂಕಿತವೆಂದೂ ದುರ್ಯೋಧನನು ಒತ್ತಿಹೇಳುವಂತೆ ತೋರುತ್ತದೆ. ಇಂಥ ಹೀನನನ್ನು ಪರಿಶುದ್ಧನೆಂದೂ, ತನ್ನಂಥ ಉತ್ತಮನನ್ನು ದೋಷಿಯೆಂದೂ ಕಲ್ಪಿಸಿದ ಕೃಷ್ಣನು ಮಹಾ ಕೃತ್ರಿಮಿಯೆಂದು ದುರ್ಯೋಧನನ ಆಗ್ರಹ. ದುರ್ಯೋಧನನಲ್ಲಿ ಕುಲಾಭಿಮಾನ ಅತಿಪ್ರಬಲವಾಗಿತ್ತು.

**೫೯.** ಅಮರ್ದು—ಸಂ. ಅಮೃತ. ಅಂಕದ ಹಳಿ—ಪ್ರಸಿದ್ಧನಾದ ಹಲಾಯುಧ. ಸಾಗರವನ್ನು ಕಡೆದಾಗ ಅಮೃತವೂ ವಿಷವೂ ಜೊತೆಗೂಡಿ ಹುಟ್ಟಿದಂತೆ, ಯದುವಂಶದಲ್ಲಿ ಗುಣಶಾಲಿಯಾದ ಬಲರಾಮನೂ ಗುಣಹೀನನಾದ ನೀನೂ ಒಟ್ಟಿಗೆ ಹುಟ್ಟಿದಿರಿ. ಬಲಂ ಆದರ್ಕೆ ಗುಣಿಯಾದಂ—ಅದರಿಂದ ಬಲರಾಮನು ಗುಣವಂತನಾದನು.

**೬೦.** ದುರ್ಯೋಧನನು ಬಲರಾಮನ ಹೆಸರನ್ನೆತ್ತುವ ವೇಳೆಗೆ ಸರಿಯಾಗಿ ಅವನೇ ಪ್ರವೇಶಿಸುತ್ತಾನೆ; ಈ ಪ್ರವೇಶ ನಾಟಕೀಯವಾಗಿದೆ. ಬಲರಾಮನ ಚಿತ್ರವೂ ಆಕರ್ಷಕವಾಗಿದೆ. °ಮುಸಲ°—ಒನಕೆ; ಇದೂ ಒಂದು ಅವನ ಆಯುಧ. ಮಧುಪಾಟಲನೇತ್ರ—ಮದ್ಯಪಾನದಿಂದ ಕೆಂಪಾದ ಕಣ್ಣುಳ್ಳವನು; ಬಲರಾಮನು ಮದ್ಯಪ್ರಿಯನೆಂದು ಪ್ರಸಿದ್ಧ. ನೀಲವಸನ: ಬಲರಾಮನ ಧವಳ ದೇಹದ ಮೇಲೆ ನೀಲವರ್ಣದ ವಸ್ತ್ರ ಚೆನ್ನಾಗಿ ಶೋಭಿಸುತ್ತಿತ್ತು. ಏಕ ಕುಂಡಲ—ಕಿವಿಯಲ್ಲಿ ಒಂಟಿಯನ್ನು ಧರಿಸಿದವನು. ತಾಳಲಕ್ಷ್ಮ—ತಾಳ ವೃಕ್ಷದ ಚಿಹ್ನೆಯ ಧ್ವಜವುಳ್ಳವನು.

**೬೦ ವ.** ಸೈಪು—ಪುಣ್ಯ. ದುರ್ಯೋಧನನ ಸಹಾಯಕ್ಕೆಂದು ಬಲರಾಮನು ಬಂದದ್ದು ದುರ್ಯೋಧನನ ಪುಣ್ಯವೇ ಅವನಿಗೆ ಒದಗಿಬಂದಂತೆ ಇತ್ತು. ಈ ಸಂದರ್ಭದಲ್ಲಿ "ದುರ್ಯೋಧನಂಗೆ ಆಯು ಬರ್ಪಂತೆ" ಎಂದು ಪಂಪನು ಉತ್ಪ್ರೇಕ್ಷಿಸಿದ್ದಾನೆ (ಪಂಪಭಾ, ೧೩. ೮೮ ವ). ಜಂಗಮಹಿಮಾಚಲ—ನಡೆದಾಡುವ ಹಿಮಾಚಲ; ಬಲರಾಮನ ಧವಳವರ್ಣವನ್ನೂ ಔನ್ನತ್ಯವನ್ನೂ ಇದು ಸೂಚಿಸುತ್ತದೆ. ಸಂಕರ್ಷಣ—ಬಲರಾಮ. ತಮ್ಮ . . . ಗೊಂದಣಿಸಿ—ತಾವು ಅಷ್ಟುಮಂದಿಯೂ ಒಂದಾಗಿ ಗುಂಪುಕೂಡಿ. ಸಾವಿಯ—(?). ದೇಸಿಗನಾಗಿ—ಪರದೇಶಿಯಾಗಿ. ಕಟ್ಟುಕಡೆದು—ಅತಿಶಯವಾಗಿ ವ್ಯಥೆಪಟ್ಟು. ಪಾಂಡವರ ಐಕಮತ್ಯವನ್ನೂ ಕುರುಕುಲಸ್ವಾಮಿಯ ಏಕಾಕಿತನವನ್ನೂ ಕಂಡು ಬಲರಾಮನ ಕರುಳು ಕಿವಿಚುತ್ತದೆ. ಮನದ ಎಱಕದಿಂ—ಮನಃಪ್ರೀತಿಯಿಂದ. ಗರುಡ . . ಬಲ್ಲದೆ ಮುಳಿದು: ಅವರ ಮೇಲಿನ ಕೋಪದ ಜೊತೆಗೆ, "ವಿಜಯಿಭವ" ಎಂದು ತಾನು ಮಾಡುವ ಆಶೀರ್ವಾದ ಸಫಲವಾಗಿ ಪಾಂಡವರು ಗೆದ್ದರೆ ದುರ್ಯೋಧನನ ಗತಿಯೇನು ಎಂಬ ಆತಂಕವೂ ಬಲರಾಮನಿಗೆ ಇರಬಹುದು.

**೬೧.** ಎನಗೆ ಅಭಿವಂದಿತಾರ್ಥರ್—(?). ನೀಂ ಮುನಿಯದೆ: ನನ್ನ ವಿನಂತಿಯನ್ನು ಕೇಳುವ ಮೊದಲೇ ಕೋಪಿಸಿಕೊಳ್ಳಬೇಡ ಎಂದು ಅಣ್ಣನಿಗೆ ಕೃಷ್ಣನು ಹೇಳುತ್ತಾನೆ. ಬಾಡಮಂ ಅಯ್ದನೆ—ಐದೇ ಗ್ರಾಮಗಳನ್ನು. ದ್ರೋಣನ ಧೃತರಾಷ್ಟ್ರನ ಸಿಂಧುಸುತರ ಎಂದುದಂ ಆಡನೆ—ದ್ರೋಣಾದಿಗಳು

ಹೇಳಿದ್ದನ್ನು ದುರ್ಯೋಧನನು ಒಪ್ಪಲೇ ಇಲ್ಲ; ಇಲ್ಲಿ ಪ್ರಥಮಾವಿಭಕ್ತಿಯ ಅರ್ಥದಲ್ಲಿ ಷಷ್ಠಿ ಬಂದಿರುವುದಲ್ಲದೆ, ಕ್ರಿಯಾಪದಕ್ಕೆ ಅವಧಾರಣೆಯ -ಎ ಸೇರಿದೆ. ಎರಟ್ನುಡಿಯಂ ಫಣಿರಾಜಕೇತನಂ—ದುರ್ಯೋಧನನು ಎರಡು ಮಾತನ್ನು ಆಡುವುದಿಲ್ಲ; ಎಂದರೆ, ಒಂದು ಇದ್ದರೆ ಇನ್ನೊಂದನ್ನು ಹೇಳು ವುದಿಲ್ಲ. ಹುಸಿ ಹೇಳುವುದಿಲ್ಲ. ಕೃಷ್ಣನು ದುರ್ಯೋಧನನಿಗೆ ಈ ಪ್ರಶಸ್ತಿಯನ್ನು ಕೊಟ್ಟಿರುವುದನ್ನು ಗಮನಿಸಬೇಕು.

**೬೨.** ಕೃಷ್ಣನ ಉಕ್ತಿಯನ್ನೇ ದುರ್ಯೋಧನನು ಪೋಷಿಸುತ್ತಾನೆ. ಆನ್ ಒಲ್ಲೆನೆ—ನಾನು ಒಪ್ಪಲೇ ಇಲ್ಲ. ಪೇೞ್ವೆಂ ಒಂದನೆ—(ನನ್ನ ಯುದ್ಧ ನಿರ್ಧಾರಕ್ಕೆ ಕಾರಣವಾದ) ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಎನಸುಂ ಬಂದಪುದಿಲ್ಲ—ಎಷ್ಟು ಮಾತ್ರಕ್ಕೂ ಸಾಧ್ಯವಾಗುವುದಿಲ್ಲ.

**೬೩.** ಇವರ ಎನ್ನ ಅಸುವರಮಂ—ಇವರ ಮತ್ತು ನನ್ನ ಯುದ್ಧವನ್ನು. ಬೇಱೆ ಪೆಱವು ಮಾತಿಂಗೆ ಎಡೆಯಿಲ್ಲ—ಮಿಕ್ಕ ಇತರ ಮಾತುಗಳಿಗೆ ಅವಕಾಶ ವಿಲ್ಲ. ಮುಸಲಪಾಣಿ—ಬಲರಾಮ.

**೬೩ ವ.** ಆರಾಗಿಯುಂ—ಯಾರಾದರೂ. ಕಾದಿ ಗೆಲ್ದ . ಆಳ್ವಂ: ಯುದ್ಧದಲ್ಲಿ ದುರ್ಯೋಧನನೇ ಗೆಲ್ಲುವನೆಂಬ ವಿಷಯದಲ್ಲಿ ಬಲರಾಮನಿಗೆ ಸಂದೇಹವೇ ಇಲ್ಲ! ಬೆಸಕಯ್ದು ಬಾಟ್ವಿರ್—ಸೇವೆ ಮಾಡಿಕೊಂಡು ಬದುಕುವಿರಿ; ಎಂದರೆ, ಅವನಿಗೆ ಅಧೀನರಾಗಿ ನೀವು ನಿಲ್ಲಬೇಕು. ಭೀಮ ಸೇನಂ ಇದಿರ್ಗೆ ವಂದು: ತನ್ನ ಹಕ್ಕಿಗೆ ಅಡ್ಡಿಯಾಗಿ ತನ್ನ ಸಹೋದರರಲ್ಲಿ ಯಾರಾದರೂ ಬಂದುಬಿಟ್ಟಾರೆಂದು ಭೀಮನೇ ಮೊದಲು ಮುಂದೆ ನುಗ್ಗುತ್ತಾನೆ.

**೬೪.** ಅಱಿಮಗಂ ಇರ್ಕೆ—ಧರ್ಮರಾಯನು ಅತ್ತ ಇರಲಿ. ಅಱಿಕೆಯ—ಪ್ರಸಿದ್ಧಿ ಹೊಂದಿದ. ಅಟಿವಗೆಯಂ—ನೀಚಶತ್ರುವನ್ನು. ಪಱಿಪಡಿಸಲ್ಕೆ—ಕತ್ತರಿಸಿಹಾಕುವುದಕ್ಕೆ. ತೋಱಿ ಬಿಡು ಕೌರವನಂ: ನಮ್ಮಿಬ್ಬರಿಗೂ ಜೊತೆ ಕಟ್ಟಿ ಮೇಲೆ ಬೀಳಲು ಅನುಜ್ಞೆ ಕೊಡು.

**೬೪ ವ.** ರೋಹಿಣೀನಂದನ—ಬಲರಾಮ.

**೬೫.** ಮೊದಲಿಗನೆನ್ ಆನ್—ನಾನೇ ಮೊದಲ ಪುರುಷ. ಇಡುವಗೆ ಕೌರವಂ—ಕೌರವನು ಬದ್ಧದ್ವೇಷಿ. ದಾಯಿಗ . ತಗದು—ಈ ವಿಷಯದಲ್ಲಿ ನೀವು ದಾಯಾದಮತ್ಸರವನ್ನು ತೋರಿಸಕೂಡದು; ಇವನ ಮೇಲಿನ ಕಾರ್ಯಭಾರ ನನ್ನ ಪಾಲಿನ ಹಕ್ಕು; ಅದಕ್ಕೆ ನೀವು ಆಸೆಪಡಬೇಡಿ. ದೊರೆಯಾಗಿರ್ದಂ—ಸಮಾನನಾಗಿದ್ದವನು; ಎಂದರೆ ನಾವಿಬ್ಬರೂ ಸಮ ಜೋಡಿಗಳು.

**೬೫ ವ.** ಸಮಕಟ್ಟು—ಏರ್ಪಡಿಸು.

**೬೬.** ಕಯ್ವೊಯ್ದು—ಜಟ್ಟಿಗಳಂತೆ ಕೈಕೈ ಹೊಯ್ದು. ತದ್ದೇವನಿಕಾಯಂ—ಈ ಯುದ್ಧವನ್ನು ನೋಡಲು ಅಲ್ಲಿ ಮೇಲೆ ನೆರೆದಿದ್ದ ದೇವತೆಗಳ ಸಮೂಹ.

**೬೭.** ಎಡೆ—ಜಾಗ. ಶವಶತದಿಂ—ನೂರಾರು ಹೆಣಗಳಿಂದ. ತೆಕ್ಕನೆ ತೀವೆ—ಕಿಕ್ಕಿರಿದಿರಲು. ರಣೋತ್ಸವದಿಂದೆ—ಯುದ್ಧಸಂಭ್ರಮದಿಂದ. ಸಮೆಚಿದಂ—ಸರಿಪಡಿಸಿದನು. ಭೀಮನು ತಾನೇ ಆ ಹೆಣಗಳನ್ನೆಲ್ಲಾ ಒತ್ತರಿಸಿ ಕಾಳಗದ ಕಳವನ್ನು ನೇರ್ಪಡಿಸಿದನು. ಭೀಮನ ಉತ್ಸಾಹಕ್ಕೆ ಇದೊಂದು ಒಳ್ಳೆಯ ನಿದರ್ಶನ.

**೬೮.** ಪುದುವೆತ್ತ—ಇಬ್ಬರಿಗೂ ಸಮಾನವಾದ, ಎಂದರೆ ಇಬ್ಬರೂ ಒಂದೇ ರೀತಿಯಾಗಿ ಬಯಸಿದ. ಎಕ್ಕಟಿಗಾಳೆಗ—ದ್ವಂದ್ವಯುದ್ಧ. ಸಮನಿಸಿತ್ತು—ಒದಗಿತು. ತ್ರಿದಶರ್—ದೇವತೆಗಳು. ನೋಡಲೆ—(ಇದನ್ನು) ನೋಡುವುದಕ್ಕಾಗಿಯೇ. ಬೆರಸಿ: ಬೆರ[ಸು] ಎಂದಿದ್ದರೆ ಹಳಗನ್ನಡಕ್ಕೆ ಹೊಂದುತ್ತದೆ. ಮದವತ್°—ಮದಿಸಿದ. ಎಂಬುದಂ ಎಂದು—ಎಂದು ಹೇಳಿ. ಆಹವಲಂಪಟ—ಯುದ್ಧದಲ್ಲಿ ಅತ್ಯಾಸಕ್ತಿಯುಳ್ಳವನು. ಮಸಗಿದಂ—ವಿಜೃಂಭಿಸಿದನು.

---

## ೮. ಗದಾಯುದ್ಧಂ

**೧.** ಶ್ರೀ ಮಾಳ್ಪೆಂ—ನನ್ನ ವಿಶಾಲವಾದ ಎದೆಯನ್ನು ಲಕ್ಷ್ಮಿಗೆ ವಾಸಸ್ಥಾನವನ್ನಾಗಿ ಮಾಡುತ್ತೇನೆ; ಎಂದರೆ, ರಾಜ್ಯಲಕ್ಷ್ಮಿಯನ್ನು ಗೆದ್ದು ಪಡೆಯುತ್ತೇನೆ. ಪೇರುರ=ಪಿರಿದು+ಉರ. ಬಗೆ ಮಿಗೆ—ಮನೋವೃತ್ತಿ ಪ್ರಬಲವಾಗಲು. °ವಿಲಯಕೇತು—ನಾಶಸೂಚಕವಾದ ಧೂಮಕೇತು.

**೧ ವ.** ದ್ರೋಣಾಚಾರ್ಯಂ . . . ಮಾಡಿ : ಗದಾವಿದ್ಯೆಯಲ್ಲಿ ಬಲರಾಮನೇ ಇಬ್ಬರಿಗೂ ಗುರುವಾದರೂ, ಭೀಮನು ಮಾತ್ರ ಯುದ್ಧಾರಂಭದಲ್ಲಿ ಅವನಿಗೆ ನಮಸ್ಕಾರಮಾಡದೆ ತನ್ನ ಧನುರ್ವಿದ್ಯಾಗುರುವಿಗೆ ನಮಸ್ಕಾರಮಾಡುವುದು ಗಮನಾರ್ಹವಾಗಿದೆ. ಕನಕರಜತ . ಸಮನ್ವಿತಂಗಳಪ್ಪ: ಚಿನ್ನ ಬೆಳ್ಳಿಗಳ ರೇಕುಗಳನ್ನು ಹದಿದು ಚಿತ್ರಗೆಲಸಮಾಡಿರುವ. ವೈಶಾಖಸ್ಥಾನ: "ಸಮ ಪಾದ"ದಂತೆ ಇದು ಬೇರೊಂದು ರೀತಿಯ ನಿಲವು. ಇದರ ಲಕ್ಷಣಾದಿ ಗಳನ್ನು ಭರತನಾಟ್ಯಶಾಸ್ತ್ರ, ೨೦. ೬೧-೬೫ ರಲ್ಲಿ ಹೇಳಿದೆ; ಇದಕ್ಕೆ ವಿಶಾಖ (=ಸ್ಕಂದ)ನು ಅಧಿದೇವತೆಯಾದ ಕಾರಣ ಈ ಹೆಸರು ಬಂದಿದೆ.

**೨.** ಭೀಕರ ಘಟಿತರ್—ಭಯಂಕರವಾಗುವಂತೆ ಬಿಗಿದು ಹುಬ್ಬು ಗಂಟಿಕ್ಕಿದವರು. ಆಟ್ಟಾಸುರರ್—ಅತ್ಯುಗ್ರರಾದವರು. ಅಧಿಕ . . ಪರುಷೇ ಕ್ಷಣರ್—ಅತಿಕ್ರೋಧದಿಂದ ಕೆಂಪಾದ ಬಿರುಗಣ್ಣುಳ್ಳವರು. ದೃಷ್ಟಿಯುದ್ಧ—ಒಬ್ಬರನ್ನೊಬ್ಬರು ನಟ್ಟ ನೋಟದಿಂದ ನೋಡುತ್ತಾ ಕಣ್ಣಿನಿಂದಲೇ ಸೆಣ ಸುವುದು.

**೩.** ದೆಸೆದೇವತೆಗಳ್ಗೆ ಇಲ್ಲಿಯ ಅರಿಸಮಾಸವನ್ನು ಲಕ್ಷಿಸಿ. ಜಪಾಪ್ರ ಸೂನ—ಕೆಂಪು ದಾಸವಾಳದ ಹೂವು. ಸಿಂಹಭುಜಗಧ್ವಜರಾ—ಸಿಂಹಧ್ವಜ ನಾದ ಭೀಮನ ಮತ್ತು ಸರ್ಪಧ್ವಜನಾದ ದುರ್ಯೋಧನನ; ಈ ಷಷ್ಠ್ಯಂತ ಪದಕ್ಕೆ ಕಡೆಗಣ್ಣೊಳ್ ಎಂಬುದರೊಡನೆ ಅನ್ವಯ.

ಯಾವುದಾದರೊಂದು ವಿಶೇಷಕಾರ್ಯದ ಮೊದಲಲ್ಲಿ ದಿಕ್ಕುಗಳನ್ನು ಪೂಜಿಸಿ ಅವಕ್ಕೆ ಬಲಿಯನ್ನು ಸಲ್ಲಿಸುವುದು ಸಂಪ್ರದಾಯವಷ್ಟೆ. ಈ ಗದಾಯುದ್ಧ

ಮಹಾಸಮಾರಂಭದ ಪ್ರಾರಂಭದಲ್ಲಿ ಈ ವೀರರಿಬ್ಬರ ಕಣ್ಣುಗಳಿಂದ ದಿಕ್ಕು ದಿಕ್ಕಿಗೂ ಸೂಸುತ್ತಿದ್ದ ಕೆಂಪುಬಣ್ಣವು ರಕ್ತಪುಷ್ಪೋಪಹಾರವನ್ನೂ ರಕ್ತ ಬಲಿಯನ್ನೂ ಅವರು ಅರ್ಪಿಸುವಂತೆ ತೋರುತ್ತಿತ್ತು.

**೪.** ಎತ್ತಂ—ಎಲ್ಲಾ ಕಡೆಗೂ. ಬಿಚ್ಚನೆ ಬಿಟ್ಟರ್ದ—ಅಗಲವಾಗಿ ತೆರೆದಿದ್ದ. ಎನಸುಂ—ಅತಿಶಯವಾಗಿ. ಈ ಪದ್ಯದಲ್ಲಿರುವ ಉತ್ಪ್ರೇಕ್ಷೆಗಳು ರೌದ್ರರಸಕ್ಕೆ ತುಂಬ ಪೋಷಕವಾಗಿವೆ. ಇಲ್ಲಿರುವುವೆಲ್ಲವೂ ಅಚ್ಚಗನ್ನಡ ಪದಗಳೇ ಆದರೂ ಇಲ್ಲಿ ಪ್ರಾಯಿಕವಾಗಿ ಸಮಾಸವೇ ಇಲ್ಲದಿದ್ದರೂ ಇದರ ಬಂಧವು ರೌದ್ರ ರಸಕ್ಕೆ ಅನುಗುಣವಾಗಿದೆ.

**೫.** ಉದಯಾದ್ರಿಯುಂ ಅಸ್ತಾದ್ರಿಯುಂ : ಇಲ್ಲಿ ಉದಯಾದ್ರಿಯಂತೆ ಭೀಮ, ಅಸ್ತಾದ್ರಿಯಂತೆ ದುರ್ಯೋಧನ ; ಇಬ್ಬರ ಭವಿಷ್ಯವನ್ನೂ ಈ ಹೋಲಿಕೆ ಎಷ್ಟು ಚೆನ್ನಾಗಿ ಸೂಚಿಸುತ್ತದೆ ! ಉದಗ್ರಕೋಪೋತ್ಕರಂಗಳ್—ಉಕ್ಕೇರಿದ ಕೋಪಾತಿರೇಕವುಳ್ಳವು. ನೀಳ್ದು—ಉದ್ದಕ್ಕೆ ನಿಂತು. ಒದವು—ಒದಗು, ಸಿದ್ಧವಾಗು. ಒದವಿ ಗದಾಯುಧದೆ—ಗದಾಸಂಪನ್ನರಾಗಿ.

**೬.** ಕಿಱುಕಿಱಿದೆ ಮೆಟ್ಟಿ—ಸ್ವಲ್ಪಸ್ವಲ್ಪವಾಗಿ ಹೆಜ್ಜೆಯಿಟ್ಟು. ಸಾರ್ಚಿ—ಚಾಚಿ. ತಿರಿಪಿ—ತಿರುಗಿಸಿ. ತೂಂಕಿ—ತೂಗಿ.

**೭.** ಪುಗಿಸುವ—ಒಳಹೊಗಿಸುವ, ಹಿಂದಕ್ಕೆ ಸರಿಸುವ. ದಂಡೆಯಂ ನಿಳ್ಕುವ—ಆಯುಧವನ್ನು ಬಿಗಿಹಿಡಿದ ಮುಷ್ಟಿಯನ್ನು ಎತ್ತಿ ನೀಡುವ. ಬೆಡಂಗು—ಬೆಡಗು, ವಿಲಾಸ.

**೮.** ಇಲ್ಲಿಯ ಅನುಕರಣಾವ್ಯಯಗಳು ಗದೆಗಳ ಘಟ್ಟನೆಯನ್ನು ಚೆನ್ನಾಗಿ ಅನುವದಿಸುತ್ತವೆ. ಸೊಪ್ಪುಸೊವಡಪ್ಪಿನಂ—ಜಜ್ಜಿ ಹೋಗುವ ತನಕ. ಮೆಯ್ಗ್ಗಳ್ ಎಂಬ ಅಂಗೀಕೃತ ಪಾಠವೇ ಉಚಿತ; ಅದು ಪ್ರಹಾರಗಳ ಬಿರುಸನ್ನು ಅತ್ಯುಕ್ತಿಗೆ ಅವಕಾಶಕೊಡದೆ ಚೆನ್ನಾಗಿ ವ್ಯಕ್ತಪಡಿಸುತ್ತದೆ. ಸೂಱ್ ತಪ್ಪದೆ—ಸರದಿ ತಪ್ಪದೆ; ಏಟಿಗೆ ಏಟಿನಂತೆ ಕ್ರಮಬದ್ಧವಾಗಿ. ಕಡುಕಯ್ದು—ಜೋರುಮಾಡಿ.

**೯.** ಪಗಲ್ ಉಳ್ಕಂ ಉಳ್ಕುವಂದದಿಂ—ಹಗಲು ಹೊತ್ತಿನಲ್ಲೇ ಉಲ್ಕಾಪಾತವಾದಂತೆ. ಒಗೆವ ಗದಾಶಲ್ಕಂ—ಗದೆಯಿಂದ ಏಳುವ ಚಕ್ಕೆಗಳು.

ಝುಳ್ಕೆ—ಬೆಳಗಲು, ಕಣ್ಣನ್ನು ಕುಕ್ಕಲು. ಕಣ್ಣಂ . . . ದಿವಿಜರ್ ನೋಟಕರಾಗಿದ್ದ ದೇವತೆಗಳ ಕಣ್ಣು ಕೋರೈಸುವಂತೆ ಗದೆಯ ಚಕ್ಕೆಗಳು ಉರಿದು ಬೆಳಗಿದುವು. ಗದಾಹವ—ಗದಾಯುದ್ಧ. ಅಗುರ್ವು—ಭಯಂಕರ.

**೧೦.** ತಂಡ—ಸಮೂಹ. ಪುದಿಯೆ—ಕವಿಯಲು. ಪದಧೂಳಿ—ಈ ವೀರರಿಬ್ಬರ ತುಳಿದಾಟದಿಂದ ಮೇಲೆದ್ದ ಧೂಳು.

**೧೧.** ವಾರಣ—ಆನೆಯ, ರಕ್ತದಿಂದ, ಸಿಕ್ತ—ತೊಯ್ದಿರುವ. ಮೃಗರಾಜಯುಗಕ್ಕೆ—ಸಿಂಹಗಳ ಜೋಡಿಗೆ. ನವಪ್ರಸೂನ—ಹೊಸ ಹೂವುಗಳ. ರಾಗ—ಕೆಂಬಣ್ಣದಿಂದ, ಅರುಣ—ಕೆಂಪಾದ, ಕಿಂಶುಕದ್ರುಮಯುಗಕ್ಕೆ—ಮುತ್ತುಗದ ಮರಗಳ ಜೋಡಿಗೆ. ಸಧಾತು—(ಕೆಂಪುಬಣ್ಣದ) ಜಾಜುಗಲ್ಲನ್ನುಳ್ಳ, ಕುಭೃದ್ಯುಗಕ್ಕೆ—ಪರ್ವತಗಳ ಜೋಡಿಗೆ. ಸಿಂದೂರಿತ—ಸಿಂದೂರದಿಂದ ಅಲಂಕಾರ ಪಡೆದಿರುವ, ಗಂಧಸಿಂಧುರಯುಗಕ್ಕೆ—ಮದದಾನೆಗಳ ಜೋಡಿಗೆ. ಎಣೆ—ಸಮ. ರುಧಿರ–ರಕ್ತದಿಂದ, ಅಕ್ತ–ಲೇಪನಹೊಂದಿದ, ಮೂರ್ತಿಗಳ್–ದೇಹವುಳ್ಳವರು.

**೧೨.** ಕರಿಯುಂ . . . ದರ್ಪಕ್ಕೆ : ಕಳಿಂಗರಾಜನ ಗಜಘಟೆ ಭೀಮನನ್ನು ಮುತ್ತಿದಾಗ ಅದಷ್ಟನ್ನೂ ಅವನು ಕೊಂದು ಕಳಿಂಗರಾಜನನ್ನೂ ತೀರಿಸಿಬಿಟ್ಟನು (ಪಂಪಭಾ, ೧೧. ೬೫ ವ—೬೮ ವ. ನೋಡಿ) ; ನೊಣೆ—ನುಂಗು. ಒಂದುಗೊಳ್—ಇದೋ ಒಂದು ಏಟು! °ಕ್ಷರತ್—ಉಕ್ಕುತ್ತಿರುವ, ಅಸ್ರಾಂಬುವಂ—ರಕ್ತವನ್ನು. ಆರ್ದು—ಆರ್ಭಟಿಸಿ ; ಧಾ. ಆರ್. ಓವದೆ—ನಿಷ್ಕರುಣವಾಗಿ. ಭೀಮನು ತನಗೆ ಮಾಡಿದ ಮುಖ್ಯವಾದ ಅಪರಾಧಗಳನ್ನು ದುರ್ಯೋಧನನು ಜ್ಞಾಪಿಸಿ ಒಂದೊಂದಕ್ಕೆ ಒಂದೊಂದು ಪೆಟ್ಟನ್ನು ಹಾಕುತ್ತಾನೆ.

**೧೩.** ದುರ್ಯೋಧನನು ಮೂರು ಬಾರಿ ಹೊಡೆದರೆ, ಭೀಮನು ಐದು ಬಾರಿ ಹೊಡೆಯುತ್ತಾನೆ. ಅವನು ಜ್ಞಾಪಿಸುವ ಅಪರಾಧಗಳೆಲ್ಲ ಈ ಹಿಂದೆಯೇ ಹಲವು ಕಡೆಗಳಲ್ಲಿ ಉಕ್ತವಾಗಿರತಕ್ಕವು, ಭಾರತಯುದ್ಧಕ್ಕೆ ತಳಹದಿಯಾಗಿರತಕ್ಕವು. ಲಾಕ್ಷಾಗೇಹ°—ಅರಗಿನ ಮನೆ. ಇದು ಆ ನಾಡ ಜೂದಿಂಗೆ—ಇದು ಆ ಕಳ್ಳಜೂಜಿಗೆ, ಕಪಟದ್ಯೂತಕ್ಕೆ! ನಾಡ ಎಂಬುದರ ನಿಷ್ಪತ್ತಿ ಸರಿಯಾಗಿ

ತಿಳಿದಿಲ್ಲ. ಕೇಶಿರಾಜನು 'ಸಹಜಱಟಂಗಳ' ಪಟ್ಟಿಯಲ್ಲಿ ಕೊಟ್ಟಿರುವ ನಾಱ ಎಂಬುದೂ ಇದೂ ಒಂದೇ ಎಂದು ತೋರುತ್ತದೆ. "ನಾಱಮೆಂಬುದು ತುಂಬಿಸೊಳಂ ಕ[ೞ]ನೊಳಂ ಱಟಂ ; ನಾಱವಾಸಗೆ ಕೞವಾಸಗೆ" (ಶಬ್ದಮ, ೨೩ ನೆಯ ಸೂತ್ರದ ಕೆಳಗೆ). ನಾಱವಾಸಗೆ (=ಮೋಸದ ದಾಳ) ಎಂಬುದು ಪಂಪಭಾರತದಲ್ಲಿಯೂ (೬. ೬೮ ವ) ಬೇರೆ ಕಾವ್ಯಗಳಲ್ಲಿಯೂ ಪ್ರಯೋಗವಾಗಿದೆ. ಅಗಲುರಮಂ—ಅಗಲವಾದ ಎದೆಯನ್ನು.

**೧೪.** ಚರಣಾಕ್ರಾಂತಂ—(ಅವರ) ಪಾದಗಳ ತುಳಿತಕ್ಕೆ ಒಳಗಾದ. ಆಶಾಗಜೇಂದ್ರೋತ್ಕರ—ದಿಗ್ಗಜಗಳ ಸಮೂಹ. ಆಶಾಭಿತ್ತಿಯಿಂದಂ—ದಿಕ್ಕುಗಳ ಗೋಡೆಗಳಿಂದ. ಪೆಱದೆಗೆಯೆ—ಹಿಮ್ಮೆಟ್ಟಲು. ಗದಾಕ್ರಾಂತ—ಗದೆಗಳ ಬೀಸಿಗೆ ಒಳಪಟ್ಟ. ಉದ್ಭ್ರಾಂತ—ಮೇಲಕ್ಕೆ ಸುಳಿಸುತ್ತಿ ತೂರಿಹೋದ, ವಿದ್ಯಾಧರ ಚಕ್ರ—ವಿದ್ಯಾಧರರ ಮಂಡಲ. ಗೆಂಟು ವಿಮಾನಂಗಳಂ—ತಮ್ಮ ವಿಮಾನಗಳನ್ನು ದೂರದೂರಕ್ಕೆ ಒಯ್ದು ನಿಲ್ಲಿಸಿಕೊಳ್ಳಲು. ಭೈರವಾಡಂಬರಂ—ಭಯಂಕರವಾದ ಆಡಂಬರವುಳ್ಳ.

ಈ ವೀರರಿಬ್ಬರು ಪಾದಗಳಿಂದ ಘಟ್ಟಿಸಲು ನೆಲ ನಡುಗಿತು. ನೀಡಿದ ಬಾಹುಗಳು ದಿಗಂತವನ್ನು ಮುಟ್ಟಲು ಅಲ್ಲಿದ್ದ ದಿಗ್ಗಜಗಳು ಹಿಂದಕ್ಕೆ ಸರಿದುವು. ಗದೆಗಳನ್ನು ಎತ್ತಿ ಆಕಾಶದಲ್ಲಿ ಬೀಸಲು, ಯುದ್ಧವನ್ನು ನೋಡಲೆಂದು ನೆರೆದಿದ್ದ ವಿದ್ಯಾಧರರು ತೂರಿಹೋಗಿ, ತಮಗೆಲ್ಲಿ ಏಟು ಬೀಳುವುದೋ ಎಂದು ಬೆದರಿ ತಮ್ಮ ವಿಮಾನಗಳನ್ನು ದೂರದೂರಕ್ಕೆ ಜರುಗಿಸಿದರು. ಕಲ್ಪದ ಕೊನೆಯವರೆಗೆ ಯುದ್ಧ ನಡೆಯಿತು!—ಇಲ್ಲಿಯ ವರ್ಣನೆಯಲ್ಲಿ ಅತ್ಯುಕ್ತಿಯಿದ್ದರೂ ಇಂಥ ಸಮರವನ್ನು ಕಣ್ಣಾರ ನೋಡುವವರಿಗೆ ಹೀಗೆನ್ನಿಸುವುದು ಸೋಜಿಗವಲ್ಲ.

**೧೫.** ನೆಲಸಿದ—ನೆಲೆಗೊಂಡ, ಅವರಲ್ಲಿ ನೆಲೆಯಾಗಿದ್ದ. ಬಿನ್ನಣ—ವಿದ್ಯಾನೈಪುಣ್ಯ. ಸೆಣಸಿ—ಮಸದಾಡಿ. ಕಾಣ್ಕೆ—ನೋಟ. ಜವ—ವೇಗ. ದಂಡೆ—ಮುಷ್ಟಿಯ ಹಿಡಿತ. ಅಳುರ್ಕೆ—ವ್ಯಾಪ್ತಿ. ಒಬ್ಬನ ಶಕ್ತಿನೈಪುಣ್ಯಾದಿಗಳು ಇನ್ನೊಬ್ಬನ ಶಕ್ತಿನೈಪುಣ್ಯಾದಿಗಳಿಗೆ ಸರಿಮಿಗಿಲಾಗಿದ್ದುವು ; ಆದಕಾರಣವೇ ಯಾರನ್ನು ಯಾರೂ ಗೆಲ್ಲಲು ಸಾಧ್ಯವಾಗಲಿಲ್ಲ.

**೧೫ ವ.** ನೆಟಲೊಳ್ ಪೋರ್ಕುಳಿಯಾಡುವಂತೆ—ತನ್ನ ನೆರಳಿನೊಡನೆ ತಾನೇ ಹೋರಾಟಮಾಡುವಂತೆ. ಕರಂ—ಅಧಿಕವಾಗಿ.

**೧೬.** ವಿದ್ಯಾಧರಕರಣದೆ: ಕರಣ ಎಂದರೆ ಹಸ್ತಪಾದಗಳನ್ನು ವಿಶೇಷ ರೀತಿಗಳಲ್ಲಿ ಚಲಿಸಿ ಮಾಡುವ ಕ್ರಿಯೆ. ಆಕಾಶಕ್ಕೆ ನೆಗೆಯಲು ಅವಲಂಬಿಸುತ್ತಿದ್ದ ಕರಣಕ್ಕೆ ವಿದ್ಯಾಧರಕರಣವೆಂಬ ಹೆಸರಿದ್ದಂತೆ ತೋರುತ್ತದೆ. "ಪಿರಿದೊಂದು ಕಿಱುವಳ್ಳಮಂ ಕಂಡದಂ ವಿದ್ಯಾಧರಕರಣದಿಂ ಲಂಘಿಸಿ" (ವಡ್ಡಾರಾಧನೆ, ಪುಟ ೧೧೭) ಹೋಲಿಸಿ. ಕೋವರ ಚಕ್ರಂ ತಿರಿವ ತೆಱದೆ—ಕುಂಬಾರರ ಚಕ್ರವು ತಿರುಗುವಂತೆ; ಕೋವರ್—ಕುಂಬಾರರು. ದುರ್ಯೋಧನನು ಗದೆಯನ್ನು ತಿರುಗಿಸಿದ ವೇಗಕ್ಕೂ ರಭಸಕ್ಕೂ ಭೂಮಂಡಲವೇ ತಿರುಗಿತು! (ಪಂಪರಾಮಾಯಣ, ೧೪. ೧೮೩ ನ್ನು ಹೋಲಿಸಿ.)

**೧೬ ವ.** ತುಟಿಲಾಯ್ತು—ವೀರವೃತ್ತಿ.

**೧೭.** ತೆಱಪಂ ನಿಟ್ಟಿಸಿ—ಅವಕಾಶ ದೊರೆಯುವುದನ್ನೇ ನೋಡಿಕೊಂಡು. ಅದೇಕೆ ಎಂದು ಅಱಿಯೆಂ: ಭೀಮನಂಥ ಮಹಾವೀರನು ಕೂಡ ಏಕೆ ಹೀಗೆ ಮೈಮರೆತು ಬಿದ್ದನೋ ಎಂದು ಕವಿ ವಿಸ್ಮಯದಿಂದ ಹೇಳುತ್ತಾನೆ.

**೧೭ ವ.** ಕುಲಿಶಾಭಿಘಾತ—(ಇಂದ್ರನ) ವಜ್ರಾಯುಧದ ಏಟು. ನೀಲಾಚಲಮೆ ಕೆಡೆವಂತೆ—ಕುಲಪರ್ವತಗಳಲ್ಲಿ ಒಂದಾದ ನೀಲಾಚಲವು ಬೀಳುವಂತೆ. ಕೋಪಾತುರಾಟೋಪಮಂ ತಾಳ್ದಿ—ಕೋಪಪೀಡಿತನಾಗಿ ಸಂಭ್ರಮಗೊಂಡು; ತಾಳ್ದಿ—ತಳೆದು; ಧಾ. ತಾಳ್ದು=ತಾಳ್.

**೧೮.** ಎಲ್ಲಿಯ ಸತ್ಯವ್ಯವಸ್ಥೆ: ಬಲರಾಮನು ಮಧ್ಯಸ್ಥನಾಗಿ ನಿಂತಿದ್ದಮಾತ್ರಕ್ಕೆ ಅವನನ್ನು ಇನ್ನು ಯಾರು ಲಕ್ಷಿಸುವವರು? ಧರ್ಮಯುದ್ಧದ ವ್ಯವಸ್ಥೆಯನ್ನು ಇನ್ನು ಪಾಲಿಸುವುದು ಸಾಧ್ಯವಿಲ್ಲ. ಅಣ್ಣನ ಮರಣದ ಸೇಡಿಗಾಗಿ, ಎಲ್ಲ ಕಟ್ಟುಪಾಡನ್ನೂ ಮೀರಿ ದುರ್ಯೋಧನನ ಮೇಲೆ ಬಿದ್ದು ಅವನನ್ನು ನಾನು ಕೊಂದುಬಿಡುತ್ತೇನೆ—ಎಂದು ಅರ್ಜುನನು ಹವಣಿಸುತ್ತಾನೆ. ಗಾಂಡಿವಕೆ ತಿರುವಂ—ತನ್ನ ಧನುಸ್ಸಿಗೆ ಹೆದೆಯನ್ನು ಸರಿಯಾಗಿ ಅಳವಡಿಸಿದನು; ನೇಱು—ಅಳವಡಿಸು, ಸಜ್ಜುಗೊಳಿಸು (?).

**೧೯.** ಮುಳಿದು ಏವಂ ಹಲಿ—ಬಲರಾಮನು ಕೋಪಿಸಿಕೊಂಡು ಏನುತಾನೆ ಮಾಡುತ್ತಾನೆ? ಮುಳಿದರಂ ಇಕ್ಕುವೆಂ: ಹಿರಿಯರಲ್ಲಿ ಯಾರು ರೇಗಿದರೂ ನಾನು ಲಕ್ಷಿಸುವುದಿಲ್ಲ. ಅಷ್ಟೇ ಅಲ್ಲ; ಹಾಗೆ ರೇಗಿ ಅಡ್ಡಿಯಾಗಿ ಬಂದವರನ್ನೇ ಘಾತಿಸಿಬಿಡುತ್ತೇನೆ. ಇಕ್ಕುವೆಂ ಎಂಬಲ್ಲಿಯ ಏಕವಚನವನ್ನು ನಕುಲನಿಗೂ ಸಹದೇವನಿಗೂ ಪ್ರತ್ಯೇಕವಾಗಿ ಅನ್ವಯಿಸಿಕೊಳ್ಳಬೇಕು.

**೨೦.** ಅರಿಗೆ ಇಂಬಾಯ್ತು—ಶತ್ರುವಿಗೆ ಅನುಕೂಲವಾಯಿತು. ನನ್ನಿ—ಸತ್ಯ. ಭೀಮನು ಬಿದ್ದನೆಂದು ಮೂರುಮಂದಿ ತಮ್ಮಂದಿರೂ ಹೀಗೆ ದುರ್ಯೋಧನನ ಮೇಲೆ ಬೀಳಲು ತ್ವರೆಪಡುತ್ತಿರುವಾಗ ಧರ್ಮರಾಯನಿಗೆ ಒದಗಿದ ಚಿಂತೆ ಗಮನಾರ್ಹವಾಗಿದೆ. ಇವರು ಕಟ್ಟನ್ನು ಮೀರಿ ಎಲ್ಲಿ ನನ್ನ ಸತ್ಯಕ್ಕೆ ಭಂಗತರುತ್ತಾರೋ ಎಂದು ಅವನು ಆತಂಕಪಡುತ್ತಾನೆ. ಅವನ ದೃಷ್ಟಿಯಲ್ಲಿ ಎಲ್ಲಕ್ಕಿಂತಲೂ ಸತ್ಯವೇ ಮಿಗಿಲಿನದೆಂಬುದನ್ನು ಇದು ಅನುಪಮವಾಗಿ ತೋರಿಸುತ್ತದೆ.

**೨೧.** ಅಲರ್ದ—ಅರಳಿದ. ತನ್ನ ಪ್ರಿಯಶಿಷ್ಯನು ಗೆದ್ದನೆಂದು ಬಲರಾಮನು ಗೆಲವೇರಿದನು. ಎರ್ದೆ ಕಲಂಕಿ—ಹೃದಯ ಕಳವಳಗೊಂಡು. ಕಣ್ ಜರ್ಬು ಜರ್ಬಿದಂ—ಕಣ್ಣುಗದರಿಕೆಯಿಂದ ಗದರಿಸಿದನು. ಧರ್ಮಯುದ್ಧದ ವ್ಯವಸ್ಥೆಯನ್ನು ಉಲ್ಲಂಘಿಸಬೇಡವೆಂದು ಅರ್ಜುನನಿಗೆ ಸಂಜ್ಞೆಮಾಡಬೇಕಾಯಿತು.

**೨೧ ವ.** ಧಾತುನಿರ್ಜರಗಿರಿ—(ಕೆಂಪುಬಣ್ಣದ) ಜಾಜುಕಲ್ಲಿನಿಂದ ಕೂಡಿದ ಮೇರುಪರ್ವತ. ಧರ್ಮಯುದ್ಧಮಂ ನೆನೆದು: ದುರ್ಯೋಧನನ ಸ್ವಭಾವ ಪರಿಶೀಲನೆಯಲ್ಲಿ ಇದು ಗಮನಿಸಬೇಕಾದ ಅಂಶ.

**೨೨.** ಇಱಿಯೆಂ ಬಿಟ್ಟನಂ—ಬಿದ್ದವನನ್ನು ಹೊಡೆಯುವುದಿಲ್ಲ. ಬಿಱುಬು—ಬಿರುಸು, ತೀವ್ರತೆ. ಕೋಳ್—ಹಿಡಿತ, ಎಂದರೆ ಸ್ಪರ್ಶ. ಕೋಟ್ ಎಂಬುದು ಪಾಠವಾದಲ್ಲಿ, ಕೋಡು>ಕೋೞ್ ಎಂದು ಭಾವಿಸಿ, ಶೈತ್ಯ ಎಂದು ಅರ್ಥ ಮಾಡಬೇಕಾಗುತ್ತದೆ. ತಂದೆ ಸುತರ್ಗೆ ಕೂರದರ್ ಒಳರೇ: ತಂದೆ ಮಕ್ಕಳಲ್ಲಿ (ಪರಸ್ಪರವಾಗಿ) ಪ್ರೀತಿಸದವರು ಉಂಟೆ? ಇಲ್ಲಿಯ ಅನ್ವಯದಲ್ಲಿ ಕ್ಲೇಶವಿಲ್ಲದಿಲ್ಲ. ತಂದೆ ಎಂಬುದಕ್ಕೆ ಬಹುವಚನದ ಅರ್ಥವನ್ನು ಕೊಡಲು ಸಾಧ್ಯ

ವಾದರೆ, ಮಕ್ಕಳನ್ನು ಪ್ರೀತಿಸದ ತಂದೆಗಳೂ ಉಂಟೆ ಎಂದು ಅರ್ಥಮಾಡಬಹುದು. ದುರ್ಯೋಧನನ ಗದೆಯ ಚಲನೆಯಿಂದ ಒದಗಿಬಂದ ಮಾರುತನು· ತನ್ನ ಮಗನಾದ ಭೀಮನನ್ನು ಪ್ರೀತಿಯಿಂದ ಸ್ಪರ್ಶಿಸಿ ಎಚ್ಚರಿಸಿದನು; ಇದು ಸಹಜವೇ ತಾನೆ—ಎಂದು ಕವಿಯ ಆಶಯ.

**೨೩.** ಪೊಡೆಯ ಅಲರ ಆತಂ—ಉದರದಲ್ಲಿ ಹೂವುಳ್ಳವನು, ಕಮಲೋದರ, ಕೃಷ್ಣ. ರಾಗದೆ . . . ನೆವದೆ—ಭೀಮನ ಮೇಲಿನ ಪ್ರೀತಿಯಿಂದ (ಅವನನ್ನು ಉಬ್ಬಿಸಲು) ತೊಡೆ ತಟ್ಟಿ ಗರ್ಜಿಸುವ ಸೋಗಿನಲ್ಲಿ. ನೆಱಂ ಈತಂಗೆ ಈ ಎಡೆ ಎಂದು—ದುರ್ಯೋಧನನಿಗೆ ಈ ಜಾಗ (ಎಂದರೆ ತೊಡೆ) ಮರ್ಮಸ್ಥಾನವೆಂದು. ಪೊಲಗಿಡದೆ ಅಱಿದಂ—ದಾರಿತಪ್ಪದೆ ಸರಿಯಾಗಿ (ಆ ಸೂಚನೆಯನ್ನು) ಗ್ರಹಿಸಿದನು. ಊರುಭಂಗಪ್ರತಿಜ್ಞೆಯನ್ನು ಮೊದಲಲ್ಲೇ ಭೀಮನು ಮಾಡಿ ಅದರ ನಿರ್ವಾಹಕ್ಕಾಗಿಯೇ ಅವಕಾಶವನ್ನು ಎದುರುನೋಡುತ್ತಿದ್ದರೂ, ಬಹುಶಃ ಮೂರ್ಛಾಪ್ರಸಂಗದಿಂದ ಅದನ್ನು ಮರೆತುಬಿಟ್ಟನೆಂದು ತೋರುತ್ತದೆ. ಆದರೂ, ತೊಡೆಯೇ ದುರ್ಯೋಧನನ ದೌರ್ಬಲ್ಯದ ಸ್ಥಾನವೆಂದು ಅವನಿಗೆ ತಿಳಿದಿರಲಿಲ್ಲ (ಪಂಪಭಾ, ೧೩.೯೬ ನ್ನು ನೋಡಿ). ಆ ವಿಷಯದಲ್ಲಿ ಕೃಷ್ಣನು ಅವನಿಗೆ ಸೂಚನೆಕೊಡಬೇಕಾಯಿತು.

**೨೪.** ನೆಲನಂ ಮಾಱುದ್ದಿ ಕಯ್ಯಿಂ—ಭೂಮಿಯನ್ನು ತನ್ನ ಕೈಯಿಂದ (ಜಿವರು ಕಳೆದುಕೊಳ್ಳುವುದಕ್ಕಾಗಿ) ಎದುರಾಗಿ ಉಜ್ಜಿ. ಸೂಸಿದ—ಚೆಲ್ಲಿ ಬಿದ್ದ. ಸಿಡಿಲ ಏಟ್ಗೆಯಿಂದೆ ಎಱಗಿ—ಸಿಡಿಲಿನ ವೇಗದಿಂದ ಮೇಲೆ ಹಾಯ್ದು. ಸತ್ತಿಗ—ಸತ್ಯಾಶ್ರಯ, ಭೀಮ. ಕುರುಕುಭೃತ್—ಕುರುರಾಜನ, ಚಂಡ°—ಉಗ್ರವಾದ.

**೨೫.** ಉಡಿದು—ಮುರಿದು. ಕರ್ಚಿ—ಕಚ್ಚಿ ಹಿಡಿದು. ಇಲ್ಲಿಯ ಉತ್ಪ್ರೇಕ್ಷೆ ಅತ್ಯುಚಿತವಾಗಿದೆ. ತಾನು ಬಿದ್ದ ಮೇಲೆ ಕೂಡ ಭೂಮಿಯನ್ನು ಪಾಂಡವರಿಗೆ ಕೊಡಲು ತನಗೆ ಇಷ್ಟವಿಲ್ಲವೆಂಬಂತೆ ಕೌರವನು ನೆಲವನ್ನು ಹಿಡಿದನು! "ಅಂತು ಸತ್ತುಂ ನೆಲನಂ ಪತ್ತುವಿಡೆನೆಂಬಂತೆ ನೆಲನಂ ಪತ್ತಿ" ಎಂಬ ಪಂಪಭಾರತದ ಮಾತನ್ನು (೧೩.೯೬ ವ) ಹೋಲಿಸಿ.

**೨೫ ವ.** ಆಶ್ರಮದೊಳ್—ಆಯಾಸವೇ ಇಲ್ಲದೆ.

**೨೬.** °ಸವನೋದಕ—ಅಭಿಷೇಕಜಲ. ಪೂತಂ ಆದುದು—ಪವಿತ್ರವಾಯಿತು. ಆರ್ಗಂ ಇಂತಿದು ಗಡ ಬಾಗದು : ಯಾರಿಗೂ ಬಾಗದೆ ಅಭಿಮಾನದಿಂದ, ಗರ್ವದಿಂದ ಎತ್ತಿ ಮೆರೆಯುತ್ತಿದ್ದ ತಲೆ ದುರ್ಯೋಧನನದು ! ಸಾರ್ತರೆ—ಸಮಿಾಪಿಸಲು. ಹತೋರು—ಘಾತಿಸಿದ ತೊಡೆಯುಳ್ಳ, ಸಪತ್ನ—ಶತ್ರುವಿನ, ಕಿರೀಟದ, ಶೃಂಗಮಂ—ಶಿಖರವನ್ನು.

**೨೭.** ಆಗದು ಆಗದು ಒದೆಯಲ್ಕೆ—ಒದೆಯಕೂಡದು, ಕೂಡದು ! ಪರಾಭವಿಸದಿರ್—ಅವಮಾನಗೊಳಿಸಬೇಡ. ಎಂದು ಮಾರ್ಕೊಳಲುಂ ಮಾಣದೆ—ಹೀಗೆನ್ನುತ್ತಾ ಅಡ್ಡಬಂದರೂ ನಿಲ್ಲದೆ. ವಾಮಾಂಘ್ರಿಯಿಂ : ಬಲಗಾಲಿನಿಂದ ಕೂಡ ಅಲ್ಲ ! °ಜ್ವಲತ್°—ಉಜ್ಜ್ವಲವಾಗಿ ಬೆಳಗುತ್ತಿರುವ.

**೨೭ ವ.** ಗುಣರತ್ನಾರ್ಣವ—ಗುಣಗಳೆಂಬ ರತ್ನಗಳಿಗೆ ಸಾಗರದಂತಿರುವವನು. ಪಂಪನ ಕಥಾನಾಯಕನು ಗುಣಾರ್ಣವನಾದರೆ ರನ್ನನ ಕಥಾನಾಯಕನು ಗುಣರತ್ನಾರ್ಣವ ! ತೀರ್ಣ°—ದಾಟಿದ.

**೨೮.** ಭೀಮನ ಸಾಹಸಕಾರ್ಯವನ್ನು ದೇವಲೋಕದವರು ಕೂಡ ಮೆಚ್ಚುತ್ತಾರೆ. ಸುರತರುಕುಸುಮೋತ್ಕರಮಂ—ಕಲ್ಪವೃಕ್ಷಗಳ ಪುಷ್ಪರಾಶಿಯನ್ನು. ಎಸೆಯೆ ಸುರದುಂದುಭಿಗಳ್—ದೇವದುಂದುಭಿಗಳು ಧ್ವನಿಮಾಡಲು. ಪರಸಿದರ್—(ಕೃಷ್ಣಾದಿಗಳು) ಹರಸಿದರು.

**೨೯.** ಬಳದೇವ—ಬಲರಾಮ. ಭುಜಬಳದ ಏವ—ಭೀಮನ ಬಾಹುಬಲದಿಂದ ತನಗೆ ಉಂಟಾದ ವ್ಯಥೆ. ಮನಮಂ ಅಲೆಯೆ—ತನ್ನ ಮನಸ್ಸನ್ನು ಪೀಡಿಸಲು. ಬಳದೇವಂ ಎಂಬ ಅಕ್ಷರಾನುಪೂರ್ವಿ ಎರಡು ಬಾರಿ ನಿಯತ ಸ್ಥಾನದಲ್ಲಿ ಬಂದಿರುವುದರಿಂದ ಇಲ್ಲಿ ಯಮಕಾಲಂಕಾರವುಂಟಾಗಿದೆ. ಮಾರ್ಕೊಳೆ—(ನಾನು) ಪ್ರತಿಭಟಿಸಿದರೂ. ಕೆಳರ್ದು—ಕೆರಳಿ ; ಧಾ. ಕೆಳರ್. ಕಿರ್ಚೆದಾರ್ಗಳ್—ಬೆಂಕಿಬೆಂಕಿಯಾಗಲು.

**೨೯ ವ.** ತನ್ನ      ಸೋಇಯಿಸಲಾಱದೆಯುಂ: ಭೀಮನನ್ನು ತಾನು ನಿಗ್ರಹಿಸಿದರೆ ಕೃಷ್ಣನಿಗೆ ವ್ಯಥೆಯಾಗುವುದೆಂದು ಅರಿತು ಬಲರಾಮನು ಹಾಗೆ ಮಾಡಲಿಲ್ಲ.

**೩೦.** ಈ ಪದ್ಯದ ಪಾಠ ಅನಿಶ್ಚಿತವಾಗಿ ನಿಂತಿದೆ. ಇಲ್ಲಿ ಪೂರ್ಣಕ್ರಿಯಾ ಪದವೇ ಕಾಣಿಸುವುದಿಲ್ಲ. (ಮ) ಪ್ರತಿಯ ಪಾಠಾಂತರ ಈಚೆಯ ತಿದ್ದು ಪಾಡೆಂದು ತೋರುತ್ತದೆ; ಅದೂ ಸಮರ್ಪಕವಾಗಿಲ್ಲ. ಧಾತ್ರೀಪತಿಗೆ ಅಱಿಪಿ—ಧರ್ಮರಾಯನಿಗೆ ತಿಳಿಸಿ (ಒಪ್ಪಿಗೆಪಡೆದು). ಒಟಿಯಟ್ಟಿ ಕರಸಿ—ಚಾರನನ್ನು ಕಳಿಸಿ (ದ್ರೌಪದಿಯನ್ನು) ಬರಮಾಡಿಕೊಂಡು. ತೋಱಲ್ಕೆ—(ದುರ್ಯೋಧನನನ್ನು) ತೋರಿಸುವುದಕ್ಕಾಗಿ. ಏಕಚ್ಛತ್ರಧೃತಭುವನ—ಒಂದೇ ಕೊಡೆಯಿಂದ ಲೋಕವನ್ನು ಧರಿಸಿದ (ಎಂದರೆ ಸಮಸ್ತ ಭೂಮಂಡಲವನ್ನು ಅವಿಭಕ್ತವಾಗಿ ಪಾಲಿಸುವ), ಮಹಿತ—ವಂದ್ಯರಾದ, ಕ್ಷತ್ರಿಯಕುಲ—ಕ್ಷತ್ರಿಯವಂಶದವರಿಗೆ (ಎಂದರೆ ಕೌರವರಿಗೆ), ಕಾಳರಾತ್ರಿಯಂ—ಪ್ರಳಯಕಾಲದ ರಾತ್ರಿಯಂತೆ ವಿನಾಶಕರಳಾದ (ದ್ರೌಪದಿಯನ್ನು).

**೩೧.** ತೊಡೆಮುರಿದು ಧೂಳುಹತ್ತಿ ನೆಲದ ಮೇಲೆ ಹೊರಳುತ್ತಿರುವ ದುರ್ಯೋಧನನನ್ನು ದ್ರೌಪದಿಗೆ ಭೀಮನು ತೋರಿಸುತ್ತಾ, ಅಂಥಂಥ ದ್ರೋಹಗಳನ್ನು ಅಂದು ಮಾಡಿದವನ ಸ್ಥಿತಿ ಇಂದು ಏನಾಗಿದೆ ನೋಡು ಕೈ ನೀಡಿ ನೀಡಿ ಹೇಳುತ್ತಿದ್ದಾನೆ. ಮುಳಿಸಿಂ . ಕೊಲ್ವಂದಿನ, ಜತು . ಕೊಲ್ವಂದಿನ, ಉರ್ವೀ . . . ಗೆಲ್ವಂದಿನ, ನಿಜಕಬರೀ . . . ನಡೆ ನೋಟ್ಪಂದಿನ—ಎಂಬ ನಾಲ್ಕು ವಿಶೇಷಣಗಳು ಆ ದ್ರೋಹನ, ಆ ಸಂಚಳನ, ಆ ಚಾಂಡಾಲನ, ಆ ಪಾತಕನ ಎಂಬ ನಾಲ್ಕು ವಿಶೇಷ್ಯಗಳೊಡನೆ ಅನ್ವಯಿಸುತ್ತವೆ; ಒಟ್ಟಿಗೇ ಅನ್ವಯಿಸುತ್ತವೆ ಎಂದಾದರೂ, ಅನುಕ್ರಮವಾಗಿ ಅನ್ವಯಿಸುತ್ತವೆ ಎಂದಾದರೂ, ಇಟ್ಟುಕೊಳ್ಳಬಹುದು. ಕೊಲ್ವಂದಿನ—ಹಾಗೆ ನಮ್ಮನ್ನು ಕೊಲ್ಲಲು ಆ ದಿನ ಹವಣಿಸಿದ. ನಿಜ . . ಬಂಧಂಗಳಂ—ನಿನ್ನ ಮುಡಿಯನ್ನೂ ಉಡಿಗಂಟನ್ನೂ. ದೋರ್ವಳದಿಂದಂ—ಬಾಹುಬಲದಿಂದ. ನಡೆ ನೋಟ್ಪಂದಿನ—ಆ ದಿನ ದಿಟ್ಟಿಸಿ ನೋಡುತ್ತಿದ್ದ. ಅಂಥ ಅಕೃತ್ಯವನ್ನು ಮಾಡಲು ಆ ತಮ್ಮನಿಗೆ

ನೇಮಿಸಿ ಅದನ್ನು ಮೆಚ್ಚಿ ನೋಡುತ್ತಿದ್ದ ಪಾಪಿ ಇವನು ಎಂದು ಭೀಮನ ಆಗ್ರಹ. ಸಂಚಳ—ಚಂಚಲ, ಚಪಲ.

ಈ ಪದ್ಯದಲ್ಲಿ -ಅಂದಿನ ಎಂದು ಮುಗಿಯುವ ವಿಶೇಷಣಗಳನ್ನು ಜೋಡಿಸಿರುವಂತೆ, ಪೊನ್ನನ ಶಾಂತಿಪುರಾಣದ ಒಂದು ಪದ್ಯದಲ್ಲಿಯೂ (೭. ೬೦), ಕಾವ್ಯಾವಲೋಕನದಲ್ಲಿ ಉದಾಹೃತವಾಗಿರುವ (ಅದೇ ವಿಷಯದ) ಒಂದು ಪದ್ಯದಲ್ಲಿಯೂ (ಸಂಖ್ಯೆ ೩೬೪) ಜೋಡಿಸಿರುವುದು ಕಾಣಬರುತ್ತದೆ. (ಕಾವ್ಯಾವಲೋಕನದ ಉದಾಹರಣಪದ್ಯವು ಪೊನ್ನನಿಗೆ ಪ್ರಾಚೀನನೂ ಪ್ರೇರಕನೂ ಆದ ಅಸಗನ ಕಾವ್ಯದ್ದಾಗಿರಬಹುದೆಂದು ಊಹಿಸಲು ಕೆಲಮಟ್ಟಿಗೆ ಅವಕಾಶವುಂಟು.) ಆದರೆ ಅಲ್ಲಿಯ ಸಂದರ್ಭ ಸಂಪೂರ್ಣವಾಗಿ ಬೇರೆ: ಒಂದು ಉದ್ಯಾನವನದ ವಿಷಯವಾಗಿ ತನ್ನನ್ನು ಹಿಂದೆ ಭಂಗಿಸಿ ಹೊಡೆದೋಡಿಸಿದ್ದ ವಿಶ್ವನಂದಿ ಈಗ ಒಂದು ಹಸುವಿನ ಕೋಡಿಗೆ ಸಿಕ್ಕಿ ರಕ್ತಸುರಿಸುತ್ತಾ ಬೀದಿಯ ಮಣ್ಣಿನಲ್ಲಿ ಬಿದ್ದಿರುವಾಗ, ವಿಶಾಖನಂದಿ ಅವನನ್ನು ಹಂಗಿಸುತ್ತಾನೆ. ಹೋಲಿಕೆಗಾಗಿ ಶಾಂತಿಪುರಾಣದ ಪದ್ಯವನ್ನು ಕೆಳಗೆ ಉದಾಹರಿಸಿದೆ :

> ಮುನಿದೆಮ್ಮಂ ಕೊಲಲೊಡ್ಡಿದಂದಿನ ಶಿಲಾಸ್ತಂಭಕ್ಕೆ ಕಯ್ ನೀಡಿದಂ-
> ದಿನ ಕಿಟ್ಟಿಂದಿನ ಕಾದಿದಂದಿನ ಕಪಿತ್ಥೋರ್ವೀಜದಿಂ ಮೋದಿದಂ- |
> ದಿನ ಗೆಲ್ದಂದಿನ ಗೆಲ್ದು ಬಂದು ಬನಮಂ ಕೊಂಡಂದಿನಾ ನಿನ್ನ ಗ-
> ರ್ಜನೆಯುಂ ಬೀರಮುಮಿಾಗಳಿಂತು ಪುಡಿಯೊಳ್ ಚೀಃಸೀ ಪೊರಳ್ದಿರ್ಪುದೇ ||

ಈ ಧಾಟಿ ಭೀಮದುರ್ಯೋಧನ ಪ್ರಸಂಗಕ್ಕೆ ಉಚಿತವೆಂದು, ಉಚಿತತರವೆಂದು ರನ್ನನು ಮನಗಂಡು ಇಲ್ಲಿಗೆ ಅಳವಡಿಸಿಕೊಂಡನೆಂದು ತೋರುತ್ತದೆ. ರನ್ನನ ಪದ್ಯದ ಬೀಸು ವಿಸ್ಮಯಕರವಾಗಿದೆ ; ಆ ಎಂಬ ದೀರ್ಘಸ್ವರದ ನಿರ್ದೇಶಕವನ್ನು ಹಲವು ಬಾರಿ ಪ್ರಯೋಗಿಸಿರುವುದಂತೂ ಅನ್ಯಾದೃಶವಾದ ಪರಿಣಾಮವನ್ನುಂಟುಮಾಡುತ್ತದೆ.

**೩೨.** ಈ ಪದ್ಯದಲ್ಲಿ ಭೀಮನು ಕೌರವವಧೆಯನ್ನು ಒಂದು ಯಾಗಕ್ಕೆ ಹೋಲಿಸುತ್ತಾನೆ. ಅರಸಂ ದೀಕ್ಷಿತಂ ಇಲ್ಲಿ—ಈ ಯಾಗದಲ್ಲಿ ಧರ್ಮರಾಯನು ಯಜಮಾನ. ಋತ್ವಿಜರ್—ಮಂತ್ರಗಳನ್ನು ಹೇಳಿ ಹೋಮಾದಿಗಳನ್ನು ಮಾಡುವ ಹೋತೃ, ಅಧ್ವರ್ಯು, ಉದ್ಗಾತೃ, ಬ್ರಹ್ಮ ಎಂಬ ನಾಲ್ವರು.

ಎಮ್ಮಾ ನಾಲ್ವರುಂ: ಭೀಮಾರ್ಜುನನಕುಲಸಹದೇವರು. ಸಂಗರಾಧ್ವರ ದೊಳ್—ಯುದ್ಧಯಜ್ಞದಲ್ಲಿ. ತಾನ್ ಉಪದೇಶಕಂ ಮುರಹರಂ—ಕೃಷ್ಣನೇ ಕರ್ಮೋಪದೇಶಮಾಡುವ ಆಚಾರ್ಯ. ನೀನುಂ: ದ್ರೌಪದಿ. ಗೃಹೀತ ವ್ರತಾಚರಣವ್ಯಾಪಿಕೆಯುಂ—ವ್ರತಾಚರಣೆಯನ್ನು ಕೈಕೊಂಡಿರತಕ್ಕವಳು. ವ್ಯಾಪಿಕೆ ಎಂದರೆ ವ್ಯಾಪಿಸಿದವಳು ಎಂದು ಅರ್ಥ; ಇದನ್ನು ಇಲ್ಲಿಗೆ ಸರಿಯಾಗಿ ಅನ್ವಯಿಸುವುದು ಕಷ್ಟ. ನೀನುಂ ಎಂಬ ಕಡೆ ಸಮುಚ್ಚಯ ಆಗಲೆ ಇರುವಾಗ ವ್ಯಾಪಿಕೆಯುಂ ಎಂಬಲ್ಲಿ ಅದು ಮತ್ತೆ ಬಂದಿರುವುದಕ್ಕೂ ಔಚಿತ್ಯ ತೋರುವುದಿಲ್ಲ, °ವ್ಯಾ[ಪೃತೆಯಾ] ಎಂದು ಮೂಲಪಾಠವಿದ್ದಿರಬಹುದೆ? (ವ್ಯಾಪೃತೆ—ನಿರತಳಾದವಳು.) ಆ ಭವತ್ಪರಿಭವಂ ಎಂದು ಮುಂದಕ್ಕೆ ಅನ್ವಯಿಸಿಕೊಳ್ಳಬಹುದು. ಸಂಚಾರಕಂ—ನಮ್ಮೆಲ್ಲರನ್ನೂ ಕಾರ್ಯಕ್ಕೆ ಪ್ರೇರಿಸಿದ್ದು. ಬೇಳ್ದಿಂ—ಆಹುತಿಕೊಟ್ಟೆನು; ಧಾ. ಬೇಳ್. ದ್ರೌಪದಿಯನ್ನು ಇಲ್ಲಿ ಅಗ್ನಿಜೇ ಎಂಬ ಸಂಬೋಧಿಸಿರುವುದರ ಔಚಿತ್ಯವನ್ನು ಗಮನಿಸಬೇಕು. ಈ ಪದ್ಯ ಬಲುಮಟ್ಟಿಗೆ ವೇಣೀಸಂ, ೧. ೨೫ ರ ಅನುವಾದ.

**೩೩.** ಕೌರವ್ಯಕ್ರವ್ಯಹವ್ಯದಿಂದೆ—ಕೌರವನ ಮಾಂಸವೆಂಬ ಹವಿಸ್ಸಿನಿಂದ. ಎನ್ನ ಕೋಪಹವ್ಯವಹಂ—ನನ್ನ ಕೋಪಾಗ್ನಿ. ಸುಹುತಂ—ಪೂರ್ಣಾಹುತಿ ಪಡೆಯಿತು. ದುರ್ವಹ—ಸಹಿಸಲು ಅಸಾಧ್ಯನಾದ, ದುರ್ಯೋಧನನ ದೇಹದ, ಪ್ರಹರಣ—ಪೆಟ್ಟುಗಳಿಂದ ಉಕ್ಕಿದ, ಲೋಹಿತ—ರಕ್ತದಿಂದ. ಆದುದು ಅವಭೃಥಸವನಂ—ಯಜ್ಞಸಮಾಪ್ತಿಯ ಸ್ನಾನ (ನನಗೆ) ಆಯಿತು. ಈ ಸಮರ ಯಜ್ಞದಲ್ಲಿ ದುರ್ಯೋಧನವಧೆಯೇ ಪೂರ್ಣಾಹುತಿ, ಅವನ ರಕ್ತಲೇಪನವೇ ಭೀಮನಿಗೆ ಅವಭೃಥಸ್ನಾನ.

**೩೩ ವ.** ಆದಿತ್ಯನ ಸಾರಥಿ—ಅರುಣ; ಇವನು ಹೆಳವನೆಂದು ಪ್ರಸಿದ್ಧಿ.

**೩೪.** ಪಗೆ ಮಡಿದುದು ಮುಡಿ ಎನೆ—ಶತ್ರು ಸತ್ತನು, ವೈರ ತೀರಿತು, ಇನ್ನು ಮುಡಿಯನ್ನು ಕಟ್ಟಿಕೊ ಎಂದು ಭೀಮನು ಹೇಳಲು. ಪಲಕಾಲಂ ವಿಗತಾಭ್ಯಾಸದೆ—ಬಿಚ್ಚಿದ ಕೂದಲನ್ನು ಹದಿಮೂರು ವರ್ಷಕಾಲ ಹಾಗೆಯೇ ಬಿಟ್ಟದ್ದರಿಂದ ಮುಡಿಗಟ್ಟುವ ಅಭ್ಯಾಸ ತಪ್ಪಿಹೋಗಿ. ಪಗೆಯುಂ . . .

ಮುಡಿಯಲ್ವೇೞ್ಕುಂ: ತನ್ನ ಬಯಕೆಯನ್ನು ಈಡೇರಿಸಿದ ಪ್ರಿಯವೀರನ ಕೈಯಿಂದಲೇ ಈ ಕೆಲಸವನ್ನು ಮಾಡಿಸುವುದು ದ್ರೌಪದಿಗೆ ಇಷ್ಟ; ಅದು ಉಚಿತವೂ ಹೌದು.

**೩೫.** ಇದಱೊಳ್—ಈ ಕೇಶಪಾಶದಲ್ಲಿ (ಎಂದರೆ, ಇದರ ಪ್ರಭಾವದಿಂದ), ಬಾಹಾಬಳಾಗ್ರ್ಯರ್—ಬಾಹುಬಲದಲ್ಲಿ ಅಗ್ರಗಣ್ಯರು. ಕದನ—ಯುದ್ಧದಲ್ಲಿ, ಪ್ರೋಚ್ಚಂಡ—ಅತ್ಯುಗ್ರವಾದ, ದಂಡಕ್ರಮದಿಂದ, ವಿಜಿತರಿಪುಕ್ಷತ್ರಿಯರ್—ಶತ್ರುರಾಜರನ್ನು ಗೆದ್ದವರು. ವೀರಲಕ್ಷ್ಮಿಗೆ, ಸದನರ್—ನೆಲೆಮನೆಯಾದವರು. ಸೋಮಾಮೃತ—ಸೋಮರಸವನ್ನು, ಆಸ್ವಾದನ—ಸವಿಯುವುದರಿಂದ, ಶುಚಿ—ಪವಿತ್ರವಾದ, ವದನವುಳ್ಳವರು. ಅೞ್ಕಾಡಿದರ್—ನಿಶ್ಶೇಷವಾದರು. ಈ ನಿನ್ನ ಕೂದಲಿಗೆ ಕೌರವಸಭೆಯಲ್ಲಿ ಆದ ಅವಮಾನದ ಫಲವಾಗಿ ಈ ಘೋರ ಯುದ್ಧ ನಡೆದು ಅನೇಕ ಮಂದಿ ಮಹಾವೀರರು ಹತರಾದರು. ಕೀನಾಶಪಾಶ—ಯಮಪಾಶ.

ಈ ಪದ್ಯದ ಬಂಧವೂ ಛಂದಸ್ಸೂ ಇಲ್ಲಿಯ ಭಾವಕ್ಕೆ ತುಂಬ ಹೊಂದಿಕೆಯಾಗಿವೆ. ಆದರೂ ಇದಕ್ಕೆ ಪ್ರೇರಕವಾದ ಪಂಪಭಾ, ೧೨. ೧೫೬ ರ ಅರ್ಥಸ್ವಾರಸ್ಯವಷ್ಟು ಇಲ್ಲಿ ಬಂದಿಲ್ಲವೆಂದು ಒಪ್ಪಿಕೊಳ್ಳಬೇಕು. “ಇದುವೆ ಮಹಾಭಾರತಕ್ಕಾದಿಯಾಯ್ತು ಎಂಬ ಅಲ್ಲಿಯ ಉಕ್ತಿ ತ್ರಿವಿಕ್ರಮನ ಪಾದದಂತೆ ವ್ಯಾಪಕವಾದದ್ದು. ಪಂಪಭಾರತದಲ್ಲಿ ದುಶ್ಶಾಸನವಧೆಯಾದ ಕೂಡಲೆ ಭೀಮನು ದ್ರೌಪದಿಯ ಮುಡಿಯನ್ನು ಕಟ್ಟುತ್ತಾನೆ. ಇಲ್ಲಾದರೆ ಸಮಸ್ತ ಪ್ರತಿಜ್ಞಾಭಾರವೂ ತೀರಿದ ಬಳಿಕ ವಿಜಯಕ್ಕೆ ಕಳಶವಿಟ್ಟಂತೆ ಅದು ನಡೆಯುತ್ತದೆ. ರಸಪುಷ್ಟಿಯ ದೃಷ್ಟಿಯಿಂದ ಇದೇ ಹೆಚ್ಚು ಉಚಿತ.

**೩೬.** ಸ್ಮರಸಂಜೀವನೆ—ಮನ್ಮಥನನ್ನು ಬದುಕಿಸತಕ್ಕವಳು; ಇದುವರೆಗೆ ಭೀಮನಲ್ಲಿ (ಶತ್ರುಗಳ ಮೇಲೆ) ಕ್ರೋಧವನ್ನು ಉದ್ದೀಪಿಸುತ್ತಿದ್ದವಳು ಈಗ ಅವನಲ್ಲಿ (ತನ್ನ ಮೇಲಿನ) ಪ್ರೇಮವನ್ನು ಉಕ್ಕಿಸುತ್ತಾಳೆ. ಕೃಷ್ಣೆ ಪೂಮುಡಿದಳ್ ಪಂಪಭಾರತದಲ್ಲಿ ದುಶ್ಶಾಸನನ ಕರುಳನ್ನು ಭೀಮನು ಅವಳಿಗೆ ಮುಡಿಸುತ್ತಾನೆ! ಇಲ್ಲಾದರೆ ಶೃಂಗಾರಪೋಷಕವೂ ಸ್ತ್ರೀಸಮುಚಿತವೂ ಆದ

ಹೂವನ್ನು ಮುಡಿಯುತ್ತಾಳೆ. ಪರಿಜು—ರೂಪ, ಆಕಾರ. ಲಟಹ—ಸೊಗಸು; ಸಂ. ಲಟಭ. ದರಹಾಸಾಮೃತ—ಮುಗುಳುನಗೆಯ ಅಮೃತರಸ. ಚಾಳುಕ್ಯ ಕಂದರ್ಪನಂ: ಹಿಂದೆಲ್ಲ ಚಾಳುಕ್ಯಕಂಠೀರವಂ ಎಂಬ ವಿಶೇಷಣವನ್ನು ಉಪಯೋಗಿಸುತ್ತಿದ್ದ ಕವಿ ಇಲ್ಲಿಗೆ ಉಚಿತವಾಗುವಂತೆ ಈ ಬಿರುದಿನ ಕಡೆಗೆ ತಿರುಗಿದ್ದಾನೆ. °ಕಂದರ್ಪ—ಮನ್ಮಥ.

**೩೭.** ಪನ್ನೆರಡು ಬರಿಸಂ: ಅಜ್ಞಾತವಾಸದ ಕಾಲವನ್ನೂ ಸೇರಿಸಿಕೊಂಡರೆ ಹದಿಮೂರುವರ್ಷವಾಗುತ್ತದೆ; ಬರಿಸ—ಸಂ. ವರ್ಷ. ಅಲಸದೆ—ಬೇಸರವನ್ನು ಸಹಿಸಿಕೊಂಡು. ಬನ್ನದ ಕೂಟುಂಡು ಬರ್ದ ಅಟಲ್—ಭಂಗದ ಅನ್ನವನ್ನು ಉಂಡು (ಎಂದರೆ, ಭಂಗಪಟ್ಟು) ಬಾಳಿದ ದುಃಖ; ಬರ್ದ ಎಂಬ ರೂಪಕ್ಕೆ ಹಿಂದೆ ೫. ೪೧೨ ಟಿಪ್ಪಣಿಯನ್ನು ನೋಡಿ. ತನ್ನಿಂ ಪೊನ್ನಂತೆ—ಕಪ್ಪು ಕಸರು ತನ್ನಿಂದ ತೊಲಗಿಹೋಗಿ ಶುಭ್ರವಾದ ಅಪರಂಜಿಚಿನ್ನದಂತೆ. ಆ ದುಃಖದ ಮಲಿನತೆ ತೊಲಗುತ್ತಲೂ ದ್ರೌಪದಿಯ ಸಹಜಸೌಂದರ್ಯ ಬೆಳಗಿತು.

**೩೭ ವ.** ಜಾತವೇದೋಜಾತೆ—ಅಗ್ನಿಪುತ್ರಿ, ದ್ರೌಪದಿ. ಕಟಾಕ್ಷಚ್ಛಟಾ—ಕಡೆಗಣ್ಣಿನ ಕಾಂತಿಯ, ಆಚ್ಛೋಟನ—ಚಿಟಿಕೆಯೇಟು. ಪೊಡೆವಟ್ಟು—ನಮಸ್ಕರಿಸಿ. ಧಾ. ಪೊಡೆವಡು=ಪೊಡೆಮಡು.

**೩೮.** °ಹತಿ°—ಹನನ, ವಧೆ. ದ್ರೋಹದುರ್ಧರ°—ದ್ರೋಹಮಾಡಿದ ಕಾರಣದಿಂದ ಸಹಿಸಲು ಅಶಕ್ಯನಾದ. °ಕಚೋತ್ತಂಸನ—ಕೂದಲನ್ನು ಎತ್ತಿ ಕಟ್ಟುವುದು. ಭೀಮನ ಪ್ರತಿಜ್ಞೆ ಇಲ್ಲಿಗೆ ಸಾಂಗವಾಗಿ ನೆರವೇರಿತು.

**೩೯.** ಕರ್ಚಿ ತೀರ್ಥಜಲದಿಂ—ಪುಣ್ಯತೀರ್ಥಗಳ ನೀರಿನಿಂದ ತೊಳೆದು. ಅಲ್ಲಿಗೆ ಭೀಮನ ಬಾಹುದಂಡದ ಅಶುಚಿತ್ವವೆಲ್ಲ ಹರಿಯಿತು; ಬಳಿಕ ಅಲಂಕಾರ. ಆಯುಧವನ್ನು ಪೂಜಿಸುವಂತೆಯೇ ಇದನ್ನು ಪೂಜಿಸುತ್ತಾರೆ. ಭೀಮನಿಗೆ ಗದೆಯಂತೆಯೇ ಭುಜವೂ ಆಯುಧವಷ್ಟೆ. °ಅಗರು°—ಒಂದು ಬಗೆಯ ಸುಗಂಧದ ಚಕ್ಕೆ, °ಕಾಶ್ಮೀರಜ°—ಕುಂಕುಮಕೇಸರಿ. ಕೇಯೂರಾದಿ°—ಭುಜಕೀರ್ತಿಯೇ ಮೊದಲಾದ. ದೋರ್ದಂಡ—ಬಾಹುದಂಡ.

**೩೯ ವ.** ಭುಜಾ°=ಭುಜ.

**೪೦.** ಿಆತೋದ್ಯ—ವಾದ್ಯಸಮೂಹ. ಪೊದಳ್ದು—ಸಮೃದ್ಧಿಯಾಗಿ. ದಿಕ್ಚಕ್ರಂಬರಂ—ದಿಙ್ಮಂಡಲದ ವರೆಗೂ. ಕರ್ಣಾಮೃತಸ್ಯಂದಿ—ಕಿವಿಗೆ ಅಮೃತವನ್ನು ಕರೆಯುವುದು.

---

## ೯. ದುರ್ಯೋಧನಾವಸಾನಂ

**೦ ವ.** ಚಕ್ರಿ—ಚಕ್ರಧರ, ಕೃಷ್ಣ. ಅನಾಗತ. . . ಮಾಡಲೆಂದು : ಪಾಂಡವರು ವಿಜಯಸಂಭ್ರಮದಲ್ಲಿರುವಾಗ, ಅವರ ಯೋಗಕ್ಷೇಮದ ಹೊಣೆಯನ್ನು ಹೊತ್ತ ಕೃಷ್ಣನು ಮುಂದೆ ಅಶ್ವತ್ಥಾಮನಿಂದ ಒದಗಲಿರುವ ಅಪಾಯವನ್ನು ಅರಿತು ಅದಕ್ಕೆ ಪರಿಹಾರವನ್ನು ಯೋಜಿಸುತ್ತಾನೆ. ಧೃಷ್ಟದ್ಯುಮ್ನ. ಉತ್ತಮೌಜಸರುಮಂ : ಇವರು ಇದುವರೆಗಿನ ಯುದ್ಧದಲ್ಲಿ ಮಡಿಯದೆ ಉಳಿದಿದ್ದ ಪಾಂಡವಪಕ್ಷದ ವೀರರು. ಶ್ರುತಸೋಮಕ ಪಂಚಪಾಂಡವರುಮಂ : ಪಾಂಡವರಿಗೆ ದ್ರೌಪದಿಯಲ್ಲಿ ಜನಿಸಿದ ಪ್ರತಿವಿಂಧ್ಯ, ಶ್ರುತಸೋಮ (ಅಥವಾ ಸುತಸೋಮ) ಶ್ರುತಕೀರ್ತಿ, ಶತಾನೀಕ, ಶ್ರುತವರ್ಮ(ಅಥವಾ ಶ್ರುತಕರ್ಮ ಅಥವಾ ಶ್ರುತಸೇನ) ಎಂಬ ಐದುಮಂದಿ. ಶ್ರುತಸೋಮ(ಕ)ನು ಭೀಮನ ಮಗ. ಪಂಪಭಾರತದಲ್ಲೂ ಗದಾಯುದ್ಧದಲ್ಲೂ " ಶ್ರುತಸೋಮಕ ಪ್ರಮುಖರಪ್ಪ ಎಂದು ಹೇಳಿ ಇವನ ಹೆಸರನ್ನೇ ಮುಂದುಮಾಡಿರುವುದು ವಿಚಾರಾರ್ಹವಾಗಿದೆ. ಅಲ್ಲಿಯೂ ಇಲ್ಲಿಯೂ " ಪಂಚಪಾಂಡವ "ರೆಂದು ಇವರನ್ನು ನಿರ್ದೇಶಿಸಿರುವುದನ್ನೂ ಗಮನಿಸಬೇಕು. ಬೀಡಿಂಗೆ ಕಾಪುವೇಟ್ಟು—ಶಿಬಿರದ ರಕ್ಷಕರನ್ನಾಗಿ ನೇಮಿಸಿ. ನೀಲಾಂಗ—ಕೃಷ್ಣ. ಗಾಂಗೇಯಂ ಅಱಿಪೆ—ಭೀಷ್ಮನು ತಿಳಿಸಲಾಗಿ.

೧. ಇಲ್ಲಿ, ಕನತ್ಕನಕ[ತಾ]ಮರಂ ಧವಳಚಾಮರಂ ಎಂದು ಮೂಲಪಾಠವಿದ್ದಿರಬಹುದು. ಕನತ್—ಹೊಳೆಯುವ, ಕನಕತಾಮರಂ—ಹೊಂದಾವರೆ. ತಾಮರಸ ಎಂಬಂತೆ ತಾಮರ ಎಂಬ ರೂಪವೂ ಸಂಸ್ಕೃತದಲ್ಲಿ ಉಂಟೆ ಎಂದು ವಿಚಾರಮಾಡಬೇಕಾಗಿದೆ. ತಾಱಿದ—ಶುಷ್ಕವಾದ. ಬಿನ್ನನೆ ಇರ್ದ—ಸಪ್ಪಗೆ ಇದ್ದ. ಇಲ್ಲಿ ಅನ್ವಯ ಹೊಂದಬೇಕಾದರೆ, ಮಾ[ಸೆ] ತಾಱಿದ ಕುರುಳ್ಗಳುಂ

ಎಂದು ಪಾಠವನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ತವಿಲ್ದು ಇರೆ ವಿಲಾಸಮುಂ—ಬೆಡಗೂ ನಷ್ಟವಾಗಿರಲು. ವೃಷಭಲಕ್ಷ್ಮಣ—ವೃಷಭಧ್ವಜ, ರುದ್ರಾವತಾರನಾದ ಅಶ್ವತ್ಥಾಮ.

೧ ವ. ಕುಂಭಸಂಭವಸಂಭವ—ದ್ರೋಣಪುತ್ರ. ನೀನಾರ್ಗೆ—ನೀನು ಯಾರವಳು, ಎಂದರೆ ನೀನು ಯಾರು? (ಹಿಂದೆ ೫. ೩೪ರ ಟಿಪ್ಪಣಿಯನ್ನು ನೋಡಿ.)

೨. ಇಲ್ಲಿ, . . . ಪುಟ್ಟಿದ, . ರಮಿಯಿಪ, ನೆಲಸಿರ್ಪ ಎಂಬ ಮೂರು ವಿಶೇಷಣಗಳನ್ನು ಮಹಾನುಭಾವೆಯೆಂ ಎಂಬುದರೊಂದಿಗೆ ಅನ್ವಯಿಸಿಕೊಳ್ಳಬೇಕು. ತಾನು ಕ್ಷೀರಸಾಗರವನ್ನು ಕಡೆದಾಗ ಹುಟ್ಟಿದವಳು, ಕಮಲವನದೊಳಗೆ ವಿಹರಿಸುವವಳು, ವಿಷ್ಣುವಿನ ವಕ್ಷಃಸ್ಥಳದಲ್ಲಿ ನೆಲಸಿರುವವಳು ಎಂದು ತನ್ನ ಹಿರಿಮೆಯ ಪರಿಚಯವನ್ನು ಆಕೆ ಮಾಡಿಕೊಡುತ್ತಾಳೆ. ಕಮಲೆಯೆಂ—ಲಕ್ಷ್ಮಿ ನಾನು. ಬೆಸಸೆ—ಅಪ್ಪಣೆಮಾಡಲು. ಗೆದ್ದವರನ್ನು ಸೇರುವುದು ತಾನೆ ಲಕ್ಷ್ಮಿಯ ಕರ್ತವ್ಯ!

೩. ಚಳಮತಿ . . . ಸಂಭವೆಯಪ್ಪುದಱಿಂ—ಚಂಚಲವಾದ ಜಲರಾಶಿಯಲ್ಲಿ ಹುಟ್ಟಿದ್ದರಿಂದ ನೀನು ಚಂಚಲಬುದ್ಧಿಯುಳ್ಳವಳಾದೆ; ಅದರಿಂದಲೇ, ಒಬ್ಬರಿಂದ ಮತ್ತೊಬ್ಬರಿಗೆ ದಾಟಿಹೋಗುತ್ತಿದ್ದೀಯೆ. ಸರೋಜಸಂಕುಳ ರಜದಿಂದೆ—ಕಮಲಸಮೂಹದ ಧೂಳಿನಿಂದ; ರಜ—ಸಂ. ರಜಸ್. ಪೊರೆದು—(ಮೈಯೆಲ್ಲ) ವ್ಯಾಪಿಸಿ. ರಾಜಸದೊಳ್ ನೆಲಸಿರ್ಪೆ—ರಜೋಗುಣದಿಂದ ಕೂಡಿದ್ದೀಯೆ. ರಜಸ್ ಎಂಬುದಕ್ಕೆ ಅನೇಕಾರ್ಥಗಳಿರುವುದರಿಂದ ಇಲ್ಲಿಯ ಉಕ್ತಿಚಮತ್ಕಾರಕ್ಕೆ ಅವಕಾಶವುಂಟಾಗಿದೆ. ಗೋವುಗಾದು—ದನಗಳನ್ನು ಕಾದು. ಅಳವಟಿದಿರ್ದ—ಶಕ್ತಿಯನ್ನು ಕಳೆದುಕೊಂಡ. ಗೋವಿಯಾದೆ—ಗೊಲ್ಲತಿಯಂತೆ ಮೂಢೆಯಾದೆ; ಗೋವಿ—ಸಂ. ಗೋಪೀ. ಅಗ್ಗಳದ—ಹೆಚ್ಚಿನ. ಎತ್ತ ಅಱಿವೆ ಆ ಪುರುಷಾಂತರಗಳಂ—ಪುರುಷರಲ್ಲಿ ಒಬ್ಬರಿಗೂ ಇನ್ನೊಬ್ಬರಿಗೂ ಇರುವ ವ್ಯತ್ಯಾಸಗಳು ಅವಿವೇಕಿಯಾದ ನಿನಗೆ ಹೇಗೆ ತಾನೆ ಗೊತ್ತಾಗುತ್ತವೆ?

ಲಕ್ಷ್ಮಿ ತನ್ನ ಜನ್ಮಸ್ಥಾನ, ವಿಹಾರಸ್ಥಾನ, ವಾಸಸ್ಥಾನ ಈ ಮೂರನ್ನೂ ಹೆಮ್ಮೆಯಿಂದ ಹೇಳಿಕೊಂಡಳಷ್ಟೆ. ಆ ಮೂರರ ಸಂಸರ್ಗದಿಂದಲೇ ನೀನು ಕ್ರಮವಾಗಿ ಚಂಚಲೆಯೂ ರಾಜಸವುಳ್ಳವಳೂ ಮೂಢೆಯೂ ಆದೆ ಎಂದು ಅಶ್ವತ್ಥಾಮನು ಧಿಕ್ಕರಿಸುತ್ತಾನೆ.

**೪.** ಇನ್ನು ಮುಂದೆ ಸಾಮಾನ್ಯನಿಂದೆ. ಕಲಿ ಪಂದೆ ಎಂದು ಬಗೆಯದೆ—ಇವನು ಶೂರನೇ ಹೇಡಿಯೇ ಎಂದು ಆಲೋಚಿಸದೆ. ಲಕ್ಷ್ಮಿ (ಎಂದರೆ, ರಾಜ್ಯ, ಐಶ್ವರ್ಯ ಮೊದಲಾದವು) ಪಾತ್ರಾಪಾತ್ರಗಳನ್ನು ಗಮನಿಸುವುದಿಲ್ಲ. ನಿನ್ನಿಂ ಒಳರೇ—ನಿನಗಿಂತ ನೀಚರೆನ್ನಿಸಿಕೊಂಡವರೂ ಉಂಟೆ?

**೫.** ತಮ್ಮೊಳ್ ತಳ್ತು ಇಱಿಯಿಸುವಯ್—ಒಬ್ಬರೊಡನೊಬ್ಬರು ಹೆಣೆದುಕೊಂಡು ಇರಿದಾಡುವಂತೆ ಮಾಡುತ್ತೀಯೆ. ಅಱಿಗುಲಿ—(ಅಱಿನಂ ಕೊಲ್ವಳ್) ಧರ್ಮಘಾತುಕಿ. ರಾಜ್ಯಕ್ಕಾಗಿ, ಐಶ್ವರ್ಯಾದಿಗಳಿಗಾಗಿ ಯಾರೊಡನೆ ಯಾರು ಹೋರಾಡಿಲ್ಲ! ಅಲ್ಲಿ ಬಂಧುತ್ವ, ಶಿಷ್ಯತ್ವ ಮೊದಲಾದ ಯಾವುದೂ ಗಣನೆಗೆ ಬರುವುದಿಲ್ಲ. ಮಹಾಭಾರತಕಥೆಯಲ್ಲಿಯೇ ಎಲ್ಲಕ್ಕೂ ನಿದರ್ಶನಗಳನ್ನು ನೋಡಬಹುದು.

**೬.** ಪೋ ಮಾಣ—ಹೋ ನಿಲ್ಲು! ಅಮಳ್ಗಳ್ ಗಡ—ನಕುಲಸಹದೇವರಂತೆ! ಅವಂದಿರ್—ನೀನು ಸೇರಲು ಹೊರಟಿರುವ ಈ ಪಾಂಡವರೆಲ್ಲರೂ. ಅಶ್ವತ್ಥಾಮಂಗೆ ನೆಱೆದಪರೇ—ಅಶ್ವತ್ಥಾಮನಾದ ನನಗೆ ಆಪೋಶನದ ಗುಟುಕಿಗಾದರೂ ಸಾಲುತ್ತಾರೆಯೆ? ಊಟಕ್ಕೆ ಕುಳಿತವನಿಗೆ ಆಪೋಶನದ ಒಂದು ತೊಟ್ಟು ನೀರು ಹೇಗೆ ಯಾವ ಲೆಕ್ಕಕ್ಕೂ ಬರುವುದಿಲ್ಲವೋ ಹಾಗೆ ಎಂಥ ಶೂರರನ್ನಾದರೂ ಸದೆಬಡಿಯಲು ಶಕ್ತನಾಗಿರುವ ನನಗೆ ಈ ಪಾಂಡವರನ್ನು ಕೊಲ್ಲುವುದು ಯಾವ ಲೆಕ್ಕ ಎಂದು ಅಶ್ವತ್ಥಾಮನ ಆಶಯ.

**೭.** ಅಳವುಮಂ—ಶಕ್ತಿಯನ್ನೂ. ಎಲೆಗೆ ಕಾಣ್ಬೆ—ಎಲೇ, ನೀನೇ ಕಾಣುವೆ! ಮುನ್ನಂ ತ್ವತ್ಪತಿಯಿಂದಂ ಕುರುಪತಿಯಿಂದಂ—ಎಂದು ಅನ್ವಯ. ಕಪಟಗೋಪಂ ಪ್ರಭುವೇ—ಈ ಮೋಸದ ಗೋಪಾಲ ಒಡೆಯನೇ; ಎಂದರೆ, ಅವನಿಗೆ ಯಾವ ಅಧಿಕಾರ ದುರ್ಯೋಧನನಿಂದ ನಿನ್ನನ್ನು ಅಗಲಿಸುವುದಕ್ಕೆ

**೮.** ಇರ್ದಂತೆ—ಇನ್ನೂ ಬದುಕಿರುವಾಗ. ಮೆಯ್ವೆಟ್ಟು—ಮರುಳಾಗಿ, ಮೋಸಹೋಗಿ; ಧಾ. ಮೆಯ್ವಡು. ಮೆಯ್ವೆಟ್ಟು ಎಂಬ ಟಕಾರಸಹಿತವಾದ ರೂಪ ಪಂಪಭಾರತದಲ್ಲಿ (೯. ೫೬) ಪ್ರಾಸಸ್ಥಾನದಲ್ಲಿ ಬಂದಿದೆ. ಚೆಚ್ಚರಂ—ಶೀಘ್ರವಾಗಿ. ಅತ್ತ—ದುರ್ಯೋಧನನ ಕಡೆಗೆ. ಇನ್ನೆತ್ತ ಪೋಪೌ: ಅಶ್ವತ್ಥಾಮನ ಮಾತನ್ನು ಲೆಕ್ಕಿಸದೆ ಲಕ್ಷ್ಮಿ ಮುಂದೆ ಸಾಗುತ್ತಿದ್ದಳೆಂದು ತೋರುತ್ತದೆ; ಆದರಿಂದ ಅವನು ಹೀಗೆ ಗದರಿಸಿ ಕೇಳುತ್ತಾನೆ. ಪರಿಹರಿಸಿದಪೆಂ—ನಾನು ನಿವಾರಿಸುತ್ತೇನೆ, ತಡೆಯುತ್ತೇನೆ. ಇೞ ಕಾವಂ ಆವೊಂ—ಇನ್ನು ರಕ್ಷಿಸುವವನು ಯಾರು? ಆವೊಂ=ಆವಂ.

**೯.** ಈಗ ಲಕ್ಷ್ಮಿಗೆ ನಿಜವಾಗಿಯೂ ಸಮಸ್ಯೆ ಒದಗಿತು. ಅತ್ತ ಪುಲಿ ಇತ್ತ ದರಿ—ಆ ಕಡೆ ಹುಲಿ ಈ ಕಡೆ ಕಮರಿ; ಯಾವ ಕಡೆ ಹೊರಳಿದರೂ ಪ್ರಾಣಾಪಾಯ. ತಳವೆಳಗಾದಳ್—ತುಂಬ ಬೆರಗಾದಳು, ದಿಗ್ಭ್ರಮೆಗೊಂಡಳು.

**೯ ವ.** ಚಳತ್—ಚಲಿಸುತ್ತಿರುವ, ಅಳಿವಿಸೀಳ—ತುಂಬಿಯಂತೆ ಕಪ್ಪಾದ, ಕುಟಿಲಕುಂತಳಂಗಳಂ—ಕೊಂಕುಕುರುಳುಗಳನ್ನು. ತಳಂ ಆರೆ—ಕರತಳದ ತುಂಬ, ತನ್ನ ಅಂಗೈ ತುಂಬ. ತಳ ಎಂಬುದಕ್ಕೆ ಕರತಳ ಎಂದೂ ಪಾದತಳ ಎಂದೂ ಸಮಯೋಚಿತವಾಗಿ ಅರ್ಥವಾಗುತ್ತದೆ. (ಗದಾಸಂ, ೫.೧ ನ್ನೂ ನೋಡಿ). ಕುರುಕುಲಕುಟುಂಬನ—ಕುರುಕುಲವನ್ನೇ ತನ್ನ ಕುಟುಂಬವಾಗಿ ಉಳ್ಳ ದುರ್ಯೋಧನನ. ಘಟಚೇಟಿ—ಕುಂಭದಾಸಿ, ನೀರುಗಡಿಗೆಯನ್ನು ಹೊರುವ ಸೇವಕಿ. ಪಂಪಭಾರತದಲ್ಲಿ ಈ ಸಂದರ್ಭದಲ್ಲಿ, "ಕುರುಕುಟುಂಬ ಘಟಚೇಟಿಕೆಯಂ ತರ್ಪಂತೆ" ಎಂದು ಇದೆ (೧೩.೧೦೨ ವ). ಸುರುಳ್ದು ತೆರಳ್ದು—ಸುರುಟಿ ಮುದುರಿಕೊಂಡು.

**೧೦.** ತೊಡೆವೇನೆಗೆ—(ಮುರಿದ) ತೊಡೆಯ ಬೇನೆಗೆ. ನರಳನೆ—ನರಳಲೇ ಇಲ್ಲ; ಅವಧಾರಣೆಯ -ಎ ಕ್ರಿಯಾಪದಕ್ಕೆ ಸೇರಿದೆ. ಕುಱುವಾದ—ಕುರುಹುಣ್ಣು ಎದ್ದ. ಗಂಡರ್ ತಕ್ಕುದೆ—ವೀರರು ನರಳಬಹುದೆ? ಕಂಡರ್ ನರಳ್ವಂತೆ ಎಂಬ ಪಾಠವನ್ನು ಅಂಗೀಕರಿಸಿದಲ್ಲಿ, ಸಾಮಾನ್ಯರು ನರಳುವಹಾಗೆ ಎಂದು ಅರ್ಥವಾಗುತ್ತದೆ. ದುರ್ಯೋಧನನು ಊರುಭಂಗದಿಂದ ನೊಂದಿರಲಿಲ್ಲ.

ವೀರನಿಗೆ ಆ ಬಗೆಯ ನೋವು ಸಹಜ, ಅದನ್ನು ಸಹಿಸುವ ಕೆಚ್ಚೂ ಇರುತ್ತದೆ. ಆದರೆ ಶತ್ರು ತನ್ನನ್ನು ಕಾಲಿನಿಂದ ಒದೆದು ಮಾಡಿದ ಮಾನಭಂಗದಿಂದ ಅವನು ನೊಂದಿದ್ದನು.

೧೧. ಕುಳಿಕ—ಒಂದು ಬಗೆಯ ವಿಷಸರ್ಪ. ಮುಱಿಯೆ ಮೋದಿದರ್ ಆರ್—ಮುರಿಯುವಂತೆ ಹೊಡೆದವರು ಯಾರು? ನೆಱಂಗೊಳೆ—ಮರ್ಮ ಸ್ಥಾನಕ್ಕೆ ಪೆಟ್ಟುಬೀಳುವಂತೆ. ಕೋಡೆರಡುಮಂ—ಎರಡು ದಂತಗಳನ್ನೂ. ಸುರಾದ್ರಿನಿಶ್ಚಳ—ಮೇರುಪರ್ವತದಂತೆ ಅಚಲವಾದ, ನಿಬಿಡ°—ಒತ್ತಾದ. ಉಗ್ರಸರ್ಪದ ಹಲ್ಲನ್ನು ಮುರಿಯುವುದು, ಕೆರಳಿದ ಸಿಂಹದ ದಾಡೆಯನ್ನು ಕೀಳುವುದು—ಈ ಮೊದಲಾದವುಗಳಂತೆಯೇ ಮಹಾವೀರನಾದ ದುರ್ಯೋಧನನ ತೊಡೆಯನ್ನು ಮುರಿಯುವುದೂ ಅಶಕ್ಯವಾದ ಸಾಹಸ; ಇದು ಹೇಗೆ ಸಂಭವಿಸಿತು ಎಂದು ಅಶ್ವತ್ಥಾಮನ ಶೋಕವಿಸ್ಮಯ.

೧೨. ವಿಧಿವಶದೆ: ಕೇವಲ ಮನುಷ್ಯಸಂಕಲ್ಪ ಮನುಷ್ಯಪ್ರಯತ್ನಗಳಿಂದ ಇಷ್ಟೆಲ್ಲ ಆಗುತ್ತಿರಲಿಲ್ಲ ಎಂದು ಭಾವ.

೧೨ ವ. ಮೇಲುದಱ—ಉತ್ತರೀಯದ. ಮೇಲುದು ಎಂಬ ಪ್ರಕೃತಿಗೆ ವಿಭಕ್ತಿಪ್ರತ್ಯಯಗಳು ಸೇರುವಾಗ ನಡುವೆ -ಅಱ್- ಎಂಬ ಆಗಮ ಬರುತ್ತದೆ, ಸಾಮಾನ್ಯವಾಗಿ ಬರಬೇಕಾದ -ಇನ್- ಎಂಬ ಆಗಮ ಬರುವುದಿಲ್ಲ. ಕಟ್ಟು ಕಡೆದು—ಅಧಿಕವಾಗಿ ವ್ಯಥೆಪಟ್ಟು.

೧೩. ಅಶ್ವತ್ಥಾಮನಿಗೆ ದುರ್ಯೋಧನನಲ್ಲಿ ನಿಜವಾದ ಪ್ರೀತಿಯಿದೆ. ನನಗೆ ಹೇಳದೆ ಮರೆಮಾಜಿ ನೀನು ಒಬ್ಬನೇ ಬಂದೆಯಲ್ಲಾ, ನಾನು ನಿನ್ನ ಜೊತೆ ಗಿದ್ದಿದ್ದರೆ ಇವೆಲ್ಲ ಆಗುತ್ತಿರಲಿಲ್ಲ ಎಂದು ದುಃಖಿಸುತ್ತಾನೆ. ಇನ್ನುಂ ಪ್ರತಿ ಕಾರಮಂ ಅಱಿಪು: ಇಷ್ಟಾದರೂ ಎಲ್ಲವೂ ಮುಗಿದಿಲ್ಲ; ಈಗಲೂ ಕೂಡ ಇದಕ್ಕೆ ಪ್ರತೀಕಾರ ಏನೆಂದು ಹೇಳು; ನಾನು ಮಾಡಿ ನಿನಗೆ ಸೇವೆ ಸಲ್ಲಿಸುತ್ತೇನೆ. ಪ್ರತಿಕಾರ=ಪ್ರತೀಕಾರ.

೧೪. ಹತಹೃತ್ ನನ್ನ ಹೃದಯ ಕೂಡ ಹತವಾಗಿದೆ. ನನ್ನ ದೇಹ, ಜೀವ, ಮಾನ, ಆಸೆ—ಎಲ್ಲವೂ ಧ್ವಂಸವಾಗಿವೆ. ಗತಿಯಂ . . . ಪ್ರತಿಕಾರಂ:

ಅಪಮಾನದ ಸೇಡು ತೀರಿಸಿಕೊಳ್ಳುವ ಇಹಲೋಕದ ಯೋಚನೆಯನ್ನು ಇನ್ನು ಬಿಟ್ಟು, ಪರಲೋಕದಲ್ಲಿ ಸದ್ಗತಿಯನ್ನು ಸಾಧಿಸಿಕೊಳ್ಳುವುದೊಂದೇ ನನಗಿರುವ ಕಾರ್ಯ. ಅದೇ ಈ ಸಂದರ್ಭದಲ್ಲಿ ಪ್ರತೀಕಾರ.

**೧೫.** ಅರಿಚರಣಪಾಂಸು—ಶತ್ರುವಿನ ಪಾದದ ಧೂಳು. ಪರಿಭವಪಾಂಸು—ಅಪಮಾನದ ಕಳಂಕ. ಅದು ಮೈಗೆ ಹತ್ತಿದ ಧೂಳು, ಅದನ್ನೇನೋ ವಸ್ತ್ರದಿಂದ ಒರಸಿ ಕಳೆಯಲು ನಿನಗೆ ಸಾಧ್ಯವಾಯಿತು. ಈ ಮನಸ್ಸಿಗೆ ಹತ್ತಿದ ಧೂಳು ಅಷ್ಟು ಮಾತ್ರಕ್ಕೆ ಹೋಗುತ್ತದೆಯೆ? ಇದನ್ನು ಹೇಗೆ ತಾನೆ ಕಳೆಯಬಲ್ಲೆ?

**೧೫ ವ.** ಪರಮನಿರ್ವೇಗಪರಾಯಣನಾಗಿ—ಅತ್ಯಂತವಿರಕ್ತಿಯನ್ನು ಅವಲಂಬಿಸಿ.

**೧೬.** ಹರಿಯ ಅನುಬಲದಿಂ—ಕೃಷ್ಣನ ಬೆಂಬಲದಿಂದ. ಅರಿಯರ್ ಗೆಲಲ್—ಗೆಲ್ಲಲು ಅಸಾಧ್ಯರು, ಅಜೇಯರು. ಈಶ್ವರಾಂಗ—ರುದ್ರಾಂಶವುಳ್ಳವನು. ಪರಬಲಕೆ ಅಜೇಯಂ ಎಂದು ಅಂತರಮಂ—ಎಂದು ಪದವಿಭಾಗ. ವಿಷ್ಣುವಿನ ಅವತಾರವಾದ ಕೃಷ್ಣನ ಪ್ರಭಾವ ಮಿಗಿಲೋ ರುದ್ರನ ಅವತಾರವಾದ ಅಶ್ವತ್ಥಾಮನ ಪ್ರತಾಪ ಮಿಗಿಲೋ, ಪರೀಕ್ಷಿಸಿಬಿಡೋಣ ಎಂದು ಕೊನೆಯದೊಂದು ಆಲೋಚನೆಯನ್ನು ದುರ್ಯೋಧನನು ಮಾಡುತ್ತಾನೆ. ಆಗಲೇ ಪ್ರಬಲಿಸಿದ್ದ ವಿರಕ್ತಿ ಮತ್ತೆ ಮರೆಯಾಗುತ್ತದೆ.

**೧೭.** ಇದುವಂ ನೋಡುವೆಂ—ಇದನ್ನೂ ನೋಡಿಬಿಡುತ್ತೇನೆ. ಎನ್ನೀ ಪ್ರಾಣಂ ಉಳ್ಳನ್ನಂ—ನನ್ನ ಪ್ರಾಣವು ಇರುವಷ್ಟರೊಳಗೇ. ಪಂದಲೆಗಳಂ—ಹಸಿಯ ತಲೆಗಳನ್ನು, ರಕ್ತಸೋರುವ ತಲೆಗಳನ್ನು. ಕೂರದ—ನನ್ನಲ್ಲಿ ಪ್ರೀತಿಯಿಡದ. ಎನ್ನ ಚಿತ್ತದೊಳ್ ಒಂದುಂ ತೊದಳ್ ಇಲ್ಲದೆ—ನನ್ನ ಮನಸ್ಸಿನಲ್ಲಿ ಯಾವ ಹುಸಿಯೂ ಇಲ್ಲದೆ, ಎಂದರೆ ನಿರುಪಾಧಿಕವಾಗಿ. ಎನ್ನ ಅಸುಗಣಕ್ಕೆ ಉತ್ಕ್ರಾಂತಿಯಂ ಮಾಡುವೆಂ—ನನ್ನ ಪ್ರಾಣಗಳನ್ನು ಹೊರಹೊರಡಿಸುತ್ತೇನೆ. ಅವರ ತಲೆಗಳನ್ನು ನೋಡಿಬಿಟ್ಟರೆ ಸಾಕು, ನಿಶ್ಚಿಂತೆಯಾಗಿ ಪ್ರಾಣ ಬಿಡುತ್ತೇನೆ.

**೧೭ ವ.** ಅದಾವ ಗಹನಂ—ಅದು ಯಾವ ಕಠಿನವಿಚಾರ! ಕಣ್ಗಿಡೆ ಜಡಿಯೆ—ಕಂಗೆಡುವಂತೆ ಗದರಿಸಲು.

**೧೮.** ಶ್ರೀಕಾಂತೆ (=ಲಕ್ಷ್ಮಿ) ಈ ಮೊದಲೇ ಅಲ್ಲಿದ್ದಳಷ್ಟೆ. ಅಶ್ವತ್ಥಾಮನ ಗದರಿಕೆಗೆ ಭೂಕಾಂತೆಯೂ ಸ್ತ್ರೀರೂಪದಿಂದ ಎದುರಿಗೆ ನಿಲ್ಲುತ್ತಾಳೆ. ಉರಗೇಂದ್ರ . . . ಮಣಿ—ಆದಿಶೇಷನ ಹೆಡೆಯ ಮಣಿಯೇ (ತನ್ನ) ಕಾಲಂದುಗೆಯ ಮಣಿ. ಆದಿಶೇಷನ ಹೆಡೆಯ ಮೇಲೆ ಭೂಮಿ ನಿಂತಿದೆಯೆಂದು ಪುರಾಣಗಳ ಹೇಳಿಕೆ. ಜಲ . . ಮೇಖಲೆ—ಸಮುದ್ರವೇ (ತನ್ನ) ರತ್ನಖಚಿತವಾದ ಡಾಬು.

**೧೯.** ಚಮರಜ—ಚಾಮರ. ಆಂ ಬರ್ಪಿನಂ—ನಾನು ಬರುವ ತನಕ. ಅಂತೂ ಶ್ರೀಕಾಂತೆ ಭೂಕಾಂತೆಯರು ದುರ್ಯೋಧನಚಕ್ರವರ್ತಿಗೆ ಕೊನೆತನಕ ಸೇವೆಯನ್ನು ಸಲ್ಲಿಸುತ್ತಾರೆ.

**೧೯ ವ.** ನೇಸಱ್ ಪಡುವಿನಂ—ಸೂರ್ಯನು ಮುಳುಗುವ ವರೆಗೆ.

**೨೦.** ಇಲ್ಲಿ ಪಾಂಡವರ ಶಿಬಿರವನ್ನು ಕಮಲವನಕ್ಕೆ ಶ್ಲೇಷೆಯಿಂದ ಹೋಲಿಸಿದೆ. ಲಕ್ಷ್ಮೀ°—(೧) ಐಶ್ವರ್ಯ, (೨) ಶ್ರೀಕಾಂತೆ. ಚಿತ್ರಪತ್ರಮುಂ—(೧) ಚಿತ್ರಮಯವಾದ ವಾಹನಗಳನ್ನುಳ್ಳದ್ದೂ, (೨) ಬಗೆಬಗೆಯ ಎಲೆಗಳನ್ನುಳ್ಳದ್ದೂ. ಚಕ್ರಾಂಕವ್ಯಂಜಿತಮುಂ—(೧) ರಥದ ಗಾಲಿಗಳ ಗುರುತಿನಿಂದ ಸೂಚಿತವಾದದ್ದೂ, (೨) ಚಕ್ರವಾಕಪಕ್ಷಿಗಳಿಂದ ವ್ಯಕ್ತವಾಗತಕ್ಕದ್ದೂ. ಮಂಜು ಇಱುವಂತೆ—ಹಿಮ ಹೊಡೆಯುವಂತೆ. ರಾತ್ರಿಯಲ್ಲಿ ಹಿಮ ಬಿದ್ದು ತಾವರೆಗಳನ್ನೆಲ್ಲಾ ಘಾತಿಸುವಂತೆ, ರಾತ್ರಿಯಲ್ಲಿ ಅಶ್ವತ್ಥಾಮನು ಪಾಂಡವರ ಪಾಳೆಯಕ್ಕೆ ನುಗ್ಗಿ ಅಲ್ಲಿದ್ದವರನ್ನೆಲ್ಲಾ ಘಾತಿಸಿದನು.

**೨೦ ವ.** ಪಲವು ದಿವಸಂ ಕಾದಿ—ಹದಿನೆಂಟು ದಿನಗಳು ಒಂದೇ ಸಮನೆ ಯುದ್ಧಮಾಡಿ. ಕೋರ್ಕೈಸಿ—ಗೊರಕೆ ಹೊಡೆಯುತ್ತಾ. ನಿದ್ರೆಗೆಯ್ದುವರ್—ನಿದ್ದೆಮಾಡುತ್ತಿದ್ದ ಬೀಡಿನ ಭಟರು. ಮುಟ್ಟೆ ವಂದಾಗಳ್—ಅಶ್ವತ್ಥಾಮನು ತಮ್ಮ ಬಳಿಗೆ ಬರಲು. ಕರವಾಳಂ—ಕತ್ತಿಯನ್ನು. ನಿಂದ ನೆಲೆಯೊಳ್

ತಳರದಿರ್ದ—ತಾವು ಇದ್ದ ಕಡೆಯಲ್ಲೇ ಇದ್ದುಕೊಂಡು ಚಲಿಸದಿದ್ದ. ತಲೆಗಾಪಿನ ಆಳ್—ತಲೆಗಾವಲಿನ ಭಟರು. ಉಕ್ಕಡದ ಆಳ್—ಉಕ್ಕಡದ ಜಾಗಗಳಲ್ಲಿದ್ದ ಭಟರು. ಘರವಟ್ಟಿಗೆಯ ಆಳ್—ಗಸ್ತು ತಿರುಗುತ್ತಿದ್ದ ಭಟರು. ಅಶ್ವತ್ಥಾಮನು ನುಗ್ಗಿದಾಗ ಉಂಟಾದ ಗಡಿಬಿಡಿಯಲ್ಲಿ, ಶತ್ರುಗಳು ಯಾರು, ತಮ್ಮವರು ಯಾರು ಎಂದು ತಿಳಿಯದೆ ಈ ಬೇರೆ ಬೇರೆ ವರ್ಗದ ಕಾವಲುಗಾರರು ತಮ್ಮಲ್ಲೇ ಒಬ್ಬರಮೇಲೊಬ್ಬರು ಬಿದ್ದು ಕತ್ತರಿಸಿಹಾಕಿದರು. ಘರವಟ್ಟಿಗೆಯಾಗೆ—(ಇದೆಲ್ಲದರಿಂದ ಗಲಭೆಯಾಗಲು.) ಘರವಟ್ಟಿಗೆ (=ಗರವಟಿಗೆ, ಗರಟಿಗೆ) ಎಂದರೆ ಗಸ್ತು ತಿರುಗುವುದು ಎಂದೂ (ಯಶೋಧರ ಚರಿತೆ, ೨. ೨೭, ೪. ೧೨ ನೋಡಿ), (ಗಸ್ತಿನವರ ಕೂಗಿನ ಹೋಲಿಕೆಯಿಂದ) ಗದ್ದಲ ಎಂದೂ (ಹರಿಶ್ಚಂದ್ರಕಾವ್ಯಸಂಗ್ರಹ, ೩.೨೮ ನೋಡಿ) ಅರ್ಥವಾಗುತ್ತದೆ. ಜವಂ ನೇಱು ಬರ್ಚಿದಂತೆ—ಯಮನು ಸಜ್ಜಾಗಿ ಮೇಲೆರಗಿದಂತೆ (ಗದಾಸಂ, ೮. ೧೪, ೩. ೨೦ ಇವುಗಳ ಮೇಲಿನ ಟಿಪ್ಪಣಿಯನ್ನು ನೋಡಿ). ನಿವಳಿವಟ್ಟಂ ಅಪ್ಪಿಸಂ—ಬಲಿಗೊಟ್ಟು ನಿವಾಳಿಸಿ ಎಸೆದಂತೆ(?). ಪೇಡೆ ಪೆಸರಿಲ್ಲವೆಂಬಂತೆ—ಹೆಸರು ಹೇಳುವುದಕ್ಕೆ ಕೂಡ ಒಬ್ಬನೂ ಉಳಿಯದಂತೆ. ಕಟ್ಟಿದಿರೊಳ್—ಎದುರಿಗೆ ನೇರವಾಗಿ. ತಮ್ಮಯ್ಯನಂ      ಪಗೆಯಂ: ದ್ರೋಣನು ಪ್ರಾಣತ್ಯಾಗ ಮಾಡಿದ ಬಳಿಕ ಅವನ ಶವವನ್ನು ಧೃಷ್ಟದ್ಯುಮ್ನನು ಇರಿದು ತನ್ನ ತಂದೆಯಾದ ದ್ರುಪದನ ಮರಣದ ಸೇಡನ್ನು ತೀರಿಸಿಕೊಂಡಿದ್ದನು. ದೆಸೆವಲಿ—ದಿಗ್ಬಲಿ. ಪಾಂಡವರ ಶಂಕೆಯಿಂ: ತಂದೆ ಮಕ್ಕಳ ರೂಪಸಾದೃಶ್ಯದಿಂದಲೂ, ಇರುಳ ಕತ್ತಲೆಯ ಪ್ರಭಾವದಿಂದಲೂ ಅಶ್ವತ್ಥಾಮನು ಹಾಗೆ ಭಾವಿಸಲು ಸಾಧ್ಯವಾಯಿತು. ನಿನ್ನ ನಚ್ಚಿನ: ನೀನು ಆಸೆಪಟ್ಟು ನಂಬಿಕೊಂಡಿದ್ದ. ಮಹಾನುಭಾವ—ಮಹಾಸತ್ತ್ವಶಾಲಿ. ನೀಡುಂ—ದೀರ್ಘಕಾಲ. ಥಳಥಳನೆ . ತಲೆಗಳ್ ಇವೆ ಎಂದು: ಈ ಮಾತನ್ನು ರನ್ನನು ಪಂಪಭಾರತದಿಂದ ಹೆಚ್ಚುಕಡಮೆ ಅಲ್ಲಿರುವಂತೆಯೇ ತೆಗೆದುಕೊಂಡಿದ್ದಾನೆ. (ಪಂಪಭಾ, ೧೩. ೧೦೬ ವ. ನೋಡಿ). "ತಟತಟನೆ ನೇಸಮುರ್ಡಿದುದು" ಎಂಬುದನ್ನು ಕೇಶಿರಾಜನು ಸಹಜಱಟಗಳ ಪಟ್ಟಿಯಲ್ಲಿ (ಶಬ್ದಮ, ೨೩ ರ ಕೆಳಗೆ) ಉದಾಹರಿಸಿದ್ದರೂ, "ತಳತಳಿಸಿ" ಎಂಬ ಳಕಾರಸಹಿತವಾದ ರೂಪ ಪಂಪರಾಮಾಯಣ

ದಲ್ಲಿ (೯. ೭೯) ಪ್ರಾಸಸ್ಥಾನದಲ್ಲಿ ಬಂದಿದೆ. ಅನುಕರಣಶಬ್ದಗಳಲ್ಲಿ ಳಕಾರವಿದ್ದಿತೆ ಟಕಾರವಿದ್ದಿತೆ, ಅಲ್ಪಪ್ರಾಣವಿದ್ದಿತೆ ಮಹಾಪ್ರಾಣವಿದ್ದಿತೆ ಎಂಬುದನ್ನು ನಿರ್ಣಯಿಸುವುದು ದುಷ್ಕರ.

**೨೧.** ಆ ರುಂಡಗಳ ರಾಶಿಯಲ್ಲಿ ದುರ್ಯೋಧನನಿಗೆ ಮುಖ್ಯವಾಗಿ ಬೇಕಾಗಿದ್ದದ್ದು ಭೀಮನ ತಲೆ. ಅದರ ಹೋಲಿಕೆಯಿದ್ದ ತಲೆಯನ್ನು ದಿಟ್ಟಿಸಿ ನೋಡುತ್ತಾನೆ. ಪವನಜನ ಆಸ್ಯಂ ಅಲ್ತು ಇದು—ಇದು ಭೀಮನ ಮುಖವಲ್ಲ. ಏಕೆ ಅಲ್ಲ ಎಂಬುದಕ್ಕೆ ದುರ್ಯೋಧನನು ಕೊಡುವ ಕಾರಣ ಅನುಪಮವಾಗಿದೆ. ಅವನ ಕೆಮ್ಮನೆ: ಇದು ಅವನ ಮುಖವಾಗಿದ್ದರೆ ಹೀಗೆ ಮಟ್ಟವಾಗಿ ನೆಲದ ಮೇಲೆ ಬಿದ್ದಿದ್ದು ನನ್ನ ಮುಖವನ್ನು ನೋಡಿದರೂ ಸುಮ್ಮನಿರುತ್ತಿತ್ತೆ? (ಕೆಮ್ಮನೆ—ಸುಮ್ಮನೆ.) ಇದು ಜೀವವಿಲ್ಲದ ತಲೆಯಾದರೂ ನನ್ನನ್ನು ಕಂಡಕೂಡಲೆ ಕೆರಳಿ ಹುಬ್ಬುಬಿಗಿದು ಅವುಡುಗಚ್ಚಿ ಸಿಱ್ರನೆ ಸಿಡಿಯಬೇಕಾಗಿತ್ತು! ಅಷ್ಟು ದ್ವೇಷ ಭೀಮನಿಗೆ ಮತ್ತು ತನಗೆ! ಕಾವ್ಯದ ಪ್ರಧಾನರಸವನ್ನು ಪರಾಕಾಷ್ಠೆಗೆ ಮುಟ್ಟಿಸುವ ಈ ಭಾವ ರನ್ನನಿಗೆ ಸ್ವೋಪಜ್ಞವಾದದ್ದು; ಪಂಪಭಾರತದಲ್ಲಿಲ್ಲ. ಅಱಿವಿಲ್ಲದೆ ಆಯ್ತು—ತಿಳಿವಳಿಕೆಯಿಲ್ಲದೆ ಇದು ನಿನ್ನಿಂದ ಆಗಿಹೋಯಿತು. ನೆಱೆ—ಚೆನ್ನಾಗಿ.

**೨೨.** ಅರಿದು—ಕತ್ತರಿಸಿ; ಧಾ. ಅರಿ. ದೊರೆಕೊಂಡುದು—ಪ್ರಾಪ್ತವಾಯಿತು. ಈ ಬಾಲವಧೆ ದುರ್ಯೋಧನನಿಗೆ ಎಳ್ಳಷ್ಟೂ ಸಮ್ಮತವಲ್ಲ.

**೨೨ ವ.** ರೌದ್ರ°—ಈ ಭಯಂಕರಕಾರ್ಯಕ್ಕೆ. ಚಿತ್ತಸಮಾಧಾನಂಗೆಯ್ದು—ಅಶ್ವತ್ಥಾಮನ ಮನಸ್ಸನ್ನು ಸಮಾಧಾನಗೊಳಿಸಿ. ಅಜಿತನಂ ಸ್ಮರಿಯಿಸಿ—(ತಾನು) ವಿಷ್ಣುವನ್ನು ಧ್ಯಾನಮಾಡಿ. ಅಜಿತ ಎಂಬುದನ್ನು ಕೃಷ್ಣ ಎಂಬ ಅರ್ಥದಲ್ಲಿ ಪಂಪನೂ ಪ್ರಯೋಗಿಸಿದ್ದಾನೆ (ಪಂಪಭಾ, ೯. ೨೬ ವ, ೧೦. ೬೪).

**೨೩.** ಕುರುಕುಲಾರ್ಕನುಂ ಅರ್ಕನುಂ ಅಸ್ತಮೆಯ್ದಿದರ್—ಕುರುವಂಶದ ಸೂರ್ಯನಾದ ದುರ್ಯೋಧನನೂ ಜಗತ್ತಿನ ಸೂರ್ಯನೂ ಒಟ್ಟಿಗೇ ಅಸ್ತಂಗತರಾದರು. ದುರ್ಯೋಧನನು ಮಡಿದನು, ಸೂರ್ಯನೂ ಮುಳುಗಿದನು. ಇಬ್ಬರಿಗೂ

ಆ ಸ್ಥಿತಿಯಲ್ಲಿ ಅನೇಕ ಸಮಾನಧರ್ಮಗಳನ್ನು ಕವಿ ಹೇಳಿದ್ದಾನೆ; ಅಲ್ಲಲ್ಲಿ ಶ್ಲೇಷೆಯೂ ಉಂಟು. ಪಂಕಜಮುಂ. . . ಮುಗಿವನ್ನಂ—(ಸೂರ್ಯನ ಪರವಾಗಿ) ಕಮಲವೂ (ದುರ್ಯೋಧನನ ಪರವಾಗಿ) ಮಿತ್ರರ ಮುಖಕಮಲಗಳೂ ಮುಚ್ಚಿಕೊಳ್ಳುತ್ತಿರಲು. ತೇಜಂ—(೧) ಬಿಸಿಲು, (೨) ತೇಜಸ್ಸು. ನಿಜಕರಂಗಳಂ ಅಂದು ಉಡುಗುತ್ತುಂ—ತನ್ನ (೧) ಕಿರಣಗಳನ್ನೂ (೨) ಕೈಗಳನ್ನೂ ಮುದುರಿಕೊಳ್ಳುತ್ತಲೂ. ಇರ್ಪ ಚಕ್ರಾಂಕಂ ಅಗಲ್ವಿನಂ—(೧) ಕೂಡಿ ಇರುವ ಚಕ್ರವಾಕಪಕ್ಷಿಗಳು ಅಗಲಲು (ಸೂರ್ಯನು ಮುಳುಗಿದಾಗ ಚಕ್ರವಾಕ ದಂಪತಿಗಳು ಅಗಲುವುವೆಂದೂ ಸೂರ್ಯೋದಯದಲ್ಲಿ ಮತ್ತೆ ಸೇರುವುವೆಂದೂ ಕವಿಸಮಯ), (೨) ತನಗೆ ಅದುವರೆಗೂ ಇದ್ದ ಚಕ್ರ(ವರ್ತಿ) ಎಂಬ ಹೆಸರು ಬಿಟ್ಟುಹೋಗಲು. ಅಂಬರ—(೧) ಆಕಾಶ, (೨) ವಸ್ತ್ರ. ಉರ್ವಿಗೆ ಅಂಧಕಾರಂ ಕವಿತರ್ಪಿನಂ—(೧) ಭೂಮಿಗೆ ಕತ್ತಲೆ ಕವಿಯಲು, (೨) ದೇಶಕ್ಕೆಲ್ಲಾ ದುಃಖದ ಕತ್ತಲೆ ಹಬ್ಬಲು.

---

## ೧೦. ಭೀಮಸೇನಪಟ್ಟಬಂಧಂ

೧. ಪರಾಕ್ರಮಕೃತಾಲಂಕಾರ—ಪರಾಕ್ರಮವನ್ನೇ ಅಲಂಕಾರವಾಗಿ ಮಾಡಿಕೊಂಡವನು. ಸತ್ಯವಾದಿ: ಸತ್ಯಾಶ್ರಯ ಎಂಬ ಹೆಸರನ್ನು ಜ್ಞಾಪಿಸಿಕೊಳ್ಳಬೇಕು. ಅರ್ಥಿಪ್ರಿಯ—ಯಾಚಕರಿಗೆ ಬೇಕಾದವನು. ನಿರ್ದ್ವೇಷಿ—ಶತ್ರುಗಳಿಲ್ಲದವನು. ಈಗ ಭೀಮನಿಗೆ ಯಾವ ಶತ್ರುವೂ ಉಳಿದಿಲ್ಲ! ರಾಜಿತ ಸಹಿತಂ—ಹೊಳೆಹೊಳೆಯುವ ರಾಜಚಿಹ್ನೆಗಳನ್ನು ಜೊತೆಗೆ ತೆಗೆದುಕೊಂಡು. ದುರ್ಯೋಧನನು ಪ್ರಾಣಬಿಟ್ಟ ಬಳಿಕ, ಇದುವರೆಗೂ ಅಶ್ವತ್ಥಾಮನ ನಿರ್ಬಂಧದಿಂದ ಅವನ ಬಳಿ ಇದ್ದ ಶ್ರೀಕಾಂತೆಯೂ ಭೂಕಾಂತೆಯೂ ಇನ್ನು ಯಾರ ಅಡ್ಡಿಯೂ ಇಲ್ಲದೆ ವಿಜಯಿಯಾದ ಭೀಮನನ್ನು ಮೆಚ್ಚಿ ಬಂದು ಸೇರಿದರು. ಚಾಳುಕ್ಯಕಂದರ್ಪನೊಳ್ ಎಂಬುದರ ಔಚಿತ್ಯವನ್ನು ಇಲ್ಲಿ ಮತ್ತೆ ಲಕ್ಷಿಸಬೇಕು. ಈ ಕಾಂತಾದ್ವಯಕ್ಕೆ ಭೀಮನು ಮನೋಹರನಾಗಿದ್ದನೆಂದು ಇದರಿಂದ ಸೂಚಿತವಾಗುತ್ತದೆ.

೨. ಎಲ್ಲ ವಿಧದ ಶ್ರೇಯಸ್ಸಿಗೂ ಭೀಮನು ಪಾತ್ರನಾದನು.

೩. ನಿಜ—ತನ್ನ, ಉಗ್ರಗದೆಯ, ಏರ್ಗಳಿಂ—ಪೆಟ್ಟುಗಳಿಂದ, ಉಱ್ತು—ಉತ್ತು, ಉಳುಮೆ ಮಾಡಿ. ಬಿದೆ ಮಾಡಿಯೆ—ಬಿತ್ತನೆಗೆ ಹದಗೊಳಿಸಿ. ಏರ್ (=ಆರ್) ಎಂದರೆ ಎತ್ತುಗಳನ್ನು ಕಟ್ಟಿದ ನೊಗ ಎಂಬ ಅರ್ಥವುಂಟು; °ಗದೆಯೆಂಬ ಏರ್ಗಳಿಂ ಎಂದು ಸಮಾಸವನ್ನು ಬಿಡಿಸಿ, ಈ ಅರ್ಥವನ್ನು ಅನ್ವಯಿಸುವುದೂ ಸಾಧ್ಯ. ಘಟ್ಟಿತಕುಂಭಿ——ಪೆಟ್ಟುತಿಂದ ಆನೆಗಳಿಂದ, ಮುಕ್ತ°—ಬಿಡಲ್ಪಟ್ಟ, ಎಂದರೆ ಅವುಗಳ ಕುಂಭಸ್ಥಳದಿಂದ ಸುರಿದ. ಆನೆಯ ಕುಂಭಸ್ಥಳದಲ್ಲಿ ಮುತ್ತುಗಳಿರುವುವೆಂದು ಪ್ರಸಿದ್ಧಿ. ಓಳಿಯೆ—ಸಾಲಾಗಿ; ಇದು ಓಳಿ ಎಂಬುದರ ತೃತೀಯಾವಿಭಕ್ತಿಯ ರೂಪ. ಸೂಸಿ—ಚೆಲ್ಲಿ, ಎರಚಿ. ತಾರಭೂಧರ—ಬೆಳ್ಳಿಯ ಬೆಟ್ಟದಂತೆ, ಸಿತ°—ಬಿಳುಪಾದ. ಭೀಮನ ಈ ಆರಂಬದಲ್ಲಿ ಗದೆಯ ಏಟುಗಳೇ ನೇಗಿಲ ಉಳುಮೆ, ಶತ್ರುರಕ್ತವೇ ನೀರು, ಗಜಕುಂಭದ ಮುತ್ತುಗಳೇ ಬೀಜಗಳು, ಕೀರ್ತಿಯೇ ಬೆಳೆ. ತನ್ನ ಅಪ್ರತಿಹತವಾದ ಶೌರ್ಯದಿಂದ ಅತಿಶಯವಾದ ಕೀರ್ತಿಯನ್ನು ಭೀಮನು ಗಳಿಸಿದನು.

೪. ಮುನಿಯಿಸಿದ—(ತನಗೆ) ಕೋಪ ಬರಿಸಿದ. ಅರಾತಿಯಂ—ಶತ್ರುವನ್ನು. ನಿನಗಲ್ಲದೆ ತೀರ್ಗುಮೆ—ನಿನಗಲ್ಲದೆ ಬೇರೆಯವರಿಗೆ ಸಾಧ್ಯವೆ?

೫. ಪೆಱರ ಆಳ—ಬೇರೆ ರಾಜರ ಪದಾತಿಗಳ. ಪೆಱರ್—ಇತರರು. ಇಕ್ಕ ವೀರರು ಯುದ್ಧಮಾಡಬೇಕಾದರೆ, ಅವರಿಗೆ ಅನ್ಯರಾಜರ ಚತುರಂಗಸೈನ್ಯದ ಸಹಾಯ ಬೇಕೇ ಬೇಕು; ನೀನೊಬ್ಬನೇ ಏಕಾಂಗವೀರ ಎಂದು ಕೃಷ್ಣನ ಪ್ರಶಂಸೆ.

೫ ವ. ಮಹಾದೇವಿಯರ್—ಪಟ್ಟದರಸಿಯರು. ಶುದ್ಧಾಂತ—ಅಂತಃಪುರದ, ನಿತಂಬಿನೀಜನಂಗಳುಂ—ಸ್ತ್ರೀಯರೂ.

೬. ಎಲ್ಲಿದಂ—ಎಲ್ಲಿ! °ಆಹ್ವಯಂ—ಹೆಸರುಳ್ಳವನು. ಲಸತ್°—ಹೊಳೆಯುವ.

೬ ವ. ಕರುಣಾಕ್ರಂದನ—ಮನಮರುಗಿಸುವ ರೋದನ.

೭. ಬಾಡಂ ಅಯ್ದುಂ ಎಮಗೆ ಈಯದೆ ಸಂಧಿಯಂ ಒಲ್ಲದೆ—ಎಂದು ಅನ್ವಯ. ಅಯ್ಯ : ಧೃತರಾಷ್ಟ್ರನಿಗೆ ಸಂಬೋಧನೆ. ಬಾಯಟಿಯಲ್ಕೆವೇಡ—ಬಾಯಿಸೋಲುವಂತೆ ನೀವು ಅಳುವುದು ಬೇಡ. ನಿಮಗೆ ಆಂ ಮಗನಲ್ಲೆನೆ—ನಾನು ನಿಮ್ಮ ಮಗನಲ್ಲವೆ! ಯುಧಿಷ್ಠಿರನು ಈ ಮಾತನ್ನು ನಿರ್ವಂಚನೆಯಾಗಿ ಹೇಳಿದರೂ, "ಆಂ ಮಗನೆನಾಗೆ ಧರ್ಮಜನೇಂ ಮಗನಲ್ಲನೆ' ಎಂದು ದುರ್ಯೋಧನನು ಹಿಂದೆ ಹೇಳಿದ್ದು (ಗದಾಸಂ, ೪. ೧೯) ಧೃತರಾಷ್ಟ್ರನ ನೆನಪಿಗೆ ಬಂದು ಅವನ ಕರುಳನ್ನು ಇರಿದಿರಬೇಕು. ಅಮೋಘಂ—ತಪ್ಪದೆ.

೮. ನಿಮಗೆ ಬೆಸಕಯ್ವೆಂ ಅಯ್ವರ್—ನಾವು ಐದುಮಂದಿಯೂ ನಿಮ್ಮ ವಶವರ್ತಿಗಳಾಗಿ ಅಪ್ಪಣೆ ಪಾಲಿಸುತ್ತೇವೆ. ಪೂರ್ವಕ್ರಮದಿಂಥೆ—ಹಿಂದಿನ ರೀತಿಯಲ್ಲಿಯೇ. ನೀಂ . . ನೋಡಿ ಇನಿಸಂ—ನಮ್ಮನ್ನು ನೋಡಿಕೊಂಡು ನಿಮ್ಮ ಮಕ್ಕಳನ್ನು ಸ್ವಲ್ಪಮಟ್ಟಿಗಾದರೂ ಮರೆಯಬೇಕು.

೯. ಎಮಗೆ ಇನ್ನುಂ ಮಾನಸವಾಟಿ ವಿಮೋಹಂ ಇಲ್ಲ—ಇನ್ನು ಮುಂದೆ ನಮಗೆ ಮನುಷ್ಯಜೀವನದಮೇಲೆ ವ್ಯಾಮೋಹವಿಲ್ಲ; ಎಂದರೆ, ಎಲ್ಲರ ಹಾಗೆ ಎಂದೆಂದಿನ ಜೀವನವನ್ನು ನಡಸುವ ಹಂಬಲು ನಮಗೆ ತಪ್ಪಿಹೋಯಿತು; ರಾಜ್ಯಾದಿಗಳು ನಮಗಿನ್ನು ಬೇಡ. ಬೇಡ್ವೆಂ—ಬೇಡುತ್ತೇನೆ. ಅಸುವೊಸರ್ದ ಅರಸುಮಕ್ಕಳಂ—ಪ್ರಾಣಹೋದ ರಾಜಪುತ್ರರ ಶರೀರಗಳನ್ನು.

೧೦. ಅಳುರ್ವ—ದಹಿಸುವ. ನೆನೆದು ಅಲ್ಲಿಯೆ ಕಂಡು—(ಕರ್ಣನನ್ನು) ಸ್ಮರಿಸಿಕೊಂಡು ಎದುರಿಗೇ ಶವವನ್ನು ಕಂಡು.

೧೦ ವ. ತಕ್ಕೈಸಿ—ಅಪ್ಪಿಕೊಂಡು.

೧೧. ವನ . . . ಬಂಧುಗೆ—ಕಮಲಪ್ರಿಯನಾದ ಸೂರ್ಯನಿಗೆ. ಹುತಾಶನ ಮಿತ್ರಂಗೆ—ಅಗ್ನಿ ಸಖನಾದ ವಾಯುವಿಗೆ. ಕುಲಿಶಿಗೆ—ಇಂದ್ರನಿಗೆ.

೧೨. ಅಂದು . . . ಪೇಟದಿರ್ದಿರೊ—ಹಿಂದೆಯೇ ಏಕೆ ಈ ವಿಷಯವನ್ನು ನೀವು ಹೇಳಲಿಲ್ಲ? ಇದೇಕೆ ಕೂಡಿದಪುದು—ಇವನ ಮರಣವೇಕೆ ಸಂಘಟಿಸುತ್ತಿತ್ತು? ಉರ್ವರೆಯಂ ಕೊಟ್ಟು—ಭೂಮಿಯನ್ನು ಅರ್ಪಿಸಿ. ಅವಂ ಆಳ್ದಂ ಆಗೆ ಬಟಿಕೆ

ಆಂ ಆಳಾಗಿ—ಎಂದು ಪದವಿಭಾಗ. ಸೌದರ್ಯದಿಂದೆ ಇರೆವೇ—(ಅವನಲ್ಲಿಯೂ ದುರ್ಯೋಧನನಲ್ಲಿಯೂ) ಸೋದರಸ್ನೇಹದಿಂದ ಬಾಳುತ್ತಿರಲಿಲ್ಲವೆ? ಪೊಲ್ಲದು ಗೆಯ್ದಿರ್—ಕೆಟ್ಟಕೆಲಸ ಮಾಡಿದಿರಿ. ಜಡಿದರ್—ಆಕ್ಷೇಪಿಸಿದರು. ಈ ಮಕ್ಕಳಿಗಾಗಿಯೇ ಕುಂತಿ ತನ್ನ ಆ ಮಗನನ್ನು ಬಲಿಕೊಟ್ಟರೂ, ಇವರಿಂದ ಹೀಗೆ ಅನ್ನಿಸಿಕೊಳ್ಳಬೇಕಾಗಿ ಬಂದಿತು! ಇಲ್ಲಿಯ ಪ್ರಸಂಗವನ್ನು ಪಂಪಭಾ, ೧೪.೮ ವ—೧೦ ರೊಂದಿಗೆ ಹೋಲಿಸಿ.

**೧೨ ವ.** ಕರ್ಣನ . ಮಾಡಿ: ಕರ್ಣನು ತಮ್ಮ ಅಣ್ಣನಾದ ಕಾರಣ ಆತನ ಶವವನ್ನು ಮಿಕ್ಕೆಲ್ಲರ ಶವಗಳ ರಾಶಿಗೆ ಸೇರಿಸಿ ಸಮೂಹಾಗ್ನಿಗೆ ಕೊಡದೆ, ತಾವೇ ಮುಂದೆ ನಿಂತು ಪ್ರತ್ಯೇಕವಾಗಿ ಸಂಸ್ಕಾರ ಮಾಡುತ್ತಾರೆ. ಅನಶನ ದೀಕ್ಷೆಯಂ ಕಯ್ಕೊಂಡು—ಆಹಾರವನ್ನು ವರ್ಜಿಸಿ ದೇಹತ್ಯಾಗಮಾಡುವ ದೀಕ್ಷೆಯನ್ನು ಹಿಡಿದು. ಧೃತರಾಷ್ಟ್ರಾದಿಗಳು ತಪೋವನಕ್ಕೆ ಹೋಗಿ ಉಪವಾಸಾದಿ ನಿಯಮವನ್ನು ಅಂಗೀಕರಿಸಿದರೆಂದು ಮಹಾಭಾರತದಲ್ಲಿ ಸೂಚನೆಯಿದ್ದರೂ ಕಾಡುಕಿಚ್ಚಿನಿಂದ ಭಸ್ಮವಾದರೆಂದು ಅಲ್ಲಿ ಉಕ್ತವಾಗಿದೆ. ಎಲ್ಲರೂ ಹೀಗೆ ಅನಶನವ್ರತ (=ಸಲ್ಲೇಖನವ್ರತ)ದಿಂದ ಮೋಕ್ಷವನ್ನು ಗಳಿಸಿದರೆಂದು ಹೇಳುವುದರಲ್ಲಿ ಕೆಲಮಟ್ಟಿಗೆ ಜೈನಸಂಸ್ಕಾರದ ಧ್ವನಿಯಿದೆ. ಸಲ್ಲೇಖನವ್ರತಕ್ಕೆ ಜೈನಮತದಲ್ಲಿ ವಿಶೇಷ ಪ್ರಾಶಸ್ತ್ಯವುಂಟು.

**೧೩.** ನಿಜಾನುಗ್ರಹದಿಂದಂ—ನಿನ್ನ (ಎಂದರೆ ಕೃಷ್ಣನ) ಕೃಪೆಯಿಂದ. ಈಗ ಪಟ್ಟವನ್ನು ಯಾರಿಗೆ ಕಟ್ಟಬೇಕೆಂಬ ಪ್ರಶ್ನೆ ಒದಗುತ್ತದೆ. ಹಿರಿಯವನಾದ ಧರ್ಮರಾಯನಿಗೇ ನ್ಯಾಯವಾಗಿ ಪಟ್ಟಾಭಿಷೇಕವಾಗಬೇಕು; ಆದರೆ "ಮಹೀಮೋಹಂ ಇಲ್ಲ ಎನಗೆ" ಎಂದು ತಾನೇ ಹೇಳಿಬಿಡುತ್ತಾನೆ. ಕಿಱಿಯಂ ಪಾರ್ಥಂ: ಪಂಪಭಾರತದಲ್ಲಿ ಅರ್ಜುನನಿಗೆ ಪಟ್ಟ ಕಟ್ಟಿರುವುದರಿಂದ ರನ್ನನು ಈ ರೀತಿ ಅವನ ಹೆಸರನ್ನೆತ್ತಿ ಪರಿಹರಿಸಿದನೆಂದು ತೋರುತ್ತದೆ. ಅಲ್ಲದೆ, ಭೀಮದುರ್ಯೋಧನರ ಗದಾಯುದ್ಧವೇ ಪ್ರಧಾನವಾಗಿರುವ ಈ ಕಾವ್ಯದಲ್ಲಿ ಅರ್ಜುನನಿಗೆ ಯಾವ ಪ್ರಾಶಸ್ತ್ಯವೂ ಇಲ್ಲ; ಭೀಮನಿಗೆ ಪಟ್ಟಕಟ್ಟುವುದೇ ಎಲ್ಲ ದೃಷ್ಟಿಯಿಂದಲೂ ಉಚಿತ. ಪಟ್ಟಬಂಧನ=ಪಟ್ಟಬಂಧ—ಪಟ್ಟಕಟ್ಟು

ವುದು. ಹಸ್ತಿನಪುರಪ್ರಸ್ಥಾನಮಂ ಮಾಡುವಂ—ಈ ಯುದ್ಧಭೂಮಿಯಿಂದ ಹಸ್ತಿನಾವತಿಗೆ ಹೊರಡೋಣ.

**೧೩ ವ.** ಮುಂತಾಗಿ—ಮುಂದು ಮಾಡಿಕೊಂಡು.

**೧೪.** ಎಣ್ದೆಸೆಯೊಳ್—ಎಂಟುದಿಕ್ಕಿನಲ್ಲೂ. ಸೇಸೆಯಂ ಇಕ್ಕೆ—ಮಂಗಳಾಕ್ಷತೆಯನ್ನು ಸೂಸಲು.

**೧೫.** ಭುಜಮಂದರ–ಭುಜಗಳೆಂಬ ಮಂದರಪರ್ವತ. ೦ವಿಭಾಸಿ–ಪ್ರಕಾಶಿಸತಕ್ಕವನು. ಮಂದರಪರ್ವತವನ್ನು ಕಡೆಗೋಲಾಗಿ ಮಾಡಿಕೊಂಡು ಕ್ಷೀರಸಾಗರವನ್ನು (ದೇವತೆಗಳು) ಕಡೆದಂತೆ ಭೀಮನು ಬಾಹುಬಲದಿಂದ ಕುರುಸೈನ್ಯವನ್ನು ಮಥನಮಾಡಿದಾಗ ಅಲ್ಲಿಯಂತೆ ಇಲ್ಲಿಯೂ ಲಕ್ಷ್ಮಿ ಉದಿಸಿ ಬಂದಳು; ಅವಳನ್ನು ಭೀಮನು ತನ್ನ ಸಾಹಸದ ಫಲವಾಗಿ ಪಡೆದನು.

---

## ಪರಿಶಿಷ್ಟ

**೧.೫.**—ನಾರಾಚೀ ಎಂಬ ಪದಕ್ಕೆ (ಬಾಣದ ಆಕಾರವುಳ್ಳ) ಅಕ್ಕಸಾಲೆಯ ತ್ರಾಸು ಎಂಬ ಅರ್ಥವುಂಟು. ನಾರಾಚ ಎಂಬುದಕ್ಕೂ ಈ ಅರ್ಥವಿರುವ ಪಕ್ಷದಲ್ಲಿ ಈ ಪದ್ಯದ ಸ್ವಾರಸ್ಯ ಹೆಚ್ಚುತ್ತದೆ. ನೆಱೆಗೊಂಡುದು ನಾರಾಚಂ—(ಶತ್ರುಗಳ ವಿಷಯದಲ್ಲಿ) ಬಾಣ ತುಂಬ ನಾಟಿತು; (ಅರ್ಥಿಗಳ ವಿಷಯದಲ್ಲಿ) ತ್ರಾಸು ತುಂಬಿ ತೂಗಿತು, ಎಂದರೆ ದಾನಕಾಲದಲ್ಲಿ ಚಿನ್ನವನ್ನು ತೂಗುವ ತ್ರಾಸಿಗೆ ಕೊನೆತನಕವೂ ಚಿನ್ನ ಕೊರೆಯಾಗಲೇ ಇಲ್ಲ. ಶತ್ರುಗಳೂ ಅರ್ಥಿಗಳೂ ದಣಿದರೇ ಹೊರತು ಇಱಿವಬೆಡಂಗನ ವೀರವಾಗಲಿ ವಿತರಣವಾಗಲಿ ಕೊನೆಗಾಣಲಿಲ್ಲ.

**೩.೧.**—ಅಶ್ವತ್ಥಾಮನಲ್ಲಿ ಮಹಾದೇವನ ಅಂಶವೂ ಯಮನ ಮತ್ತು ಕಾಮಕ್ರೋಧಗಳ ಅಂಶಗಳೂ ಏಕೀಭವಿಸಿದ್ದುವೆಂದು ಮಹಾಭಾರತದಲ್ಲಿ ಹೇಳಿದೆ:

ಮಹಾದೇವಾಂತಕಾಭ್ಯಾಂ ಚ ಕಾಮಾತ್ ಕ್ರೋಧಾಚ್ಚ ಭಾರತ |
ಏಕತ್ವಮುಪಪನ್ನಾನಾಂ ಜಜ್ಞೇ ಶೂರಃ ಪರಂತಪಃ ||
ಅಶ್ವತ್ಥಾಮಾ ಮಹಾವೀರ್ಯಃ ಶತ್ರುಪಕ್ಷಕ್ಷಯಂಕರಃ |
ವೀರಃ ಕಮಲಪತ್ರಾಕ್ಷಃ ಕ್ಷಿತಾವಾಸೀನ್ನರಾಧಿಪ ||

(೧. ೬೧. ೬೬, ೬೭)

**೩.೩.**—ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಸೂತ್ರಗಳ ಕೆಳಗೆ ಕೊಟ್ಟಿರುವ ಪ್ರಯೋಗಗಳಲ್ಲಿ ಗದಾಯುದ್ಧದ ಒಂದು ಪೂರ್ಣಪದ್ಯವೂ (ಗದಾಸಂ, ೫. ೫೬) ಕೆಲವು ಪದ್ಯಖಂಡಗಳೂ ದೊರೆಯುತ್ತವೆ; ಅಲ್ಲಿ ಕಾಣಬರುವ ಪಾಠಗಳು ಒಮ್ಮೊಮ್ಮೆ ನಮ್ಮ ಗ್ರಂಥದ ಮಾತೃಕೆಗಳ ಪಾಠಕ್ಕಿಂತ ಬೇರೆಯಾಗಿರುವುದೂ ಉಂಟು. ಆ ಪ್ರಯೋಗಗಳಲ್ಲಿ ಪ್ರಸಕ್ತಪದ್ಯದ ಒಂದು ತುಣುಕು ಪಾಠಪರಿಷ್ಕರಣದ ದೃಷ್ಟಿಯಿಂದ ಉಪಯುಕ್ತವಾಗಿದೆ. "ಬ್ರಹ್ಮರ್ ಭೋಯೆನಲುಂ ಬಲ್ಲರ್ ಕೊಲೆ ಧ್ಯೋಯೆನಲುಂ ಬಲ್ಲರಿಜಿಯಲವರೆತ್ತಜಿವರ್" ಎಂಬುದು ನಮ್ಮ (ಅ, ನ) ಮಾತೃಕೆಗಳ ಪಾಠವಷ್ಟೆ. ಕಿಟ್ಟೆಲ್ ಅವರು ಸಂಪಾದಿಸಿರುವ ಶಬ್ದಮಣಿದರ್ಪಣದಲ್ಲಿ (ಮೂರನೆಯ ಆವೃತ್ತಿ) "ಆತ್ವದಿನಿವರ್ಣದಿಂ ." ಎಂಬ ಸೂತ್ರದ (ಸಂಖ್ಯೆ ೫೩) ಕೆಳಗೇನೋ ಇದೇ ರೂಪದಲ್ಲಿಯೇ ಈ ಭಾಗ ದೊರೆಯುತ್ತದೆ. ಆದರೆ ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣದಲ್ಲಿ "ಅಬ್ರಹ್ಮಣ್ಯಂ ಭೋಯೆನಲುಂ ಬ್ರಾಹ್ಮಣರವಿಧೋಯೆನಲುಂ" ಎಂಬ ರೂಪದಲ್ಲಿ ಈ ಪ್ರಯೋಗ ಕಾಣಬರುತ್ತದೆ. ಈ ಸಂಪಾದಕನ ಬಳಿ ಇರುವ ಶಬ್ದ
ದರ್ಪಣದ ಒಂದು ಹಸ್ತಪ್ರತಿ ಪರಿಷನ್ಮುದ್ರಣದ ಪಾಠವನ್ನೇ ಸ
ತ್ತದೆ. ಶಬ್ದಮಣಿದರ್ಪಣದ ಲಿಂಗಣಾರಾಧ್ಯವಿರಚಿತವೃತ್ತಿಯ
ವಿಶ್ವವಿದ್ಯಾನಿಲಯದ ಪ್ರಕಟನೆ) "ಅಬ್ರಹ್ಮಣ್ಯಂ ಭೋ
ವಿಧೋಯೆನಲುಂ ಬಲ್ಲರಿಜಿಯಲಿವರೆತ್ತಜಿವರ್" ಎ
ಪರಿಷನ್ಮುದ್ರಣದ ಪಾಠಕ್ಕೇ ಪೋಷಕವಾಗಿದೆ
ಗಿಲ್ಲ. "ರಾಬ್ರಹ್ಮಣ್ಯಂ ××× " ಎಂ
ಪಾಠವೆಂಬುದನ್ನೂ ಇಲ್ಲಿ ಸ್ಮರಿಸಬಹುದ
ಪ್ರಸಕ್ತಪದ್ಯದ ಪಾಠವನ್ನು ಈ ರೀ

POPULAR SCIENCE

ಈಯಲಿಱಿಯಲ್ ಶರಣ್ಬುಗೆ
ಕಾಯಲ್ ಕ್ಷತ್ರಿಯರೆ ಬಲ್ಲರಬ್ರಹ್ಮಣ್ಯಂ |
ಭೋಯೆನಲುಂ ಬ್ರಾಹ್ಮಣರವಿ
[ಧಾ]ಯೆನಲುಂ ಬಲ್ಲರಿಱಿಯಲವರೆತ್ತಱಿವರ್ ||

ಅಬ್ರಹ್ಮಣ್ಯಂ ಎಂದರೆ "ಬ್ರಾಹ್ಮಣರಿಗೆ ಉಚಿತವಲ್ಲದ್ದು ಎಂದೂ, "ಕೊಲ್ಲ ಕೂಡದು!" ಎಂದೂ ಅರ್ಥ. ಭೋಃ—ಸ್ವಾಮಿ! ಅವಿಧಾ—ಅಯ್ಯೋ! (ಅವಿಹಾ ಎಂಬುದು ಇದರ ಪ್ರಾಕೃತ ರೂಪ); ಅವಿಧೋ ಎಂಬ ರೂಪವಿರುವಂತೆ ಕಾಣಲಿಲ್ಲ. ಬ್ರಾಹ್ಮಣರ್ ಅಬ್ರಹ್ಮಣ್ಯಂ ಭೋಃ ಎನಲುಂ ಅವಿಧಾ ಎನಲುಂ ಬಲ್ಲರ್—ಎಂದು ಅನ್ವಯ. ಭೋಃ+ಎನಲುಂ: ಸಂಧಿಯಲ್ಲಿ ಸಂಸ್ಕೃತ ಪದದ ಕೊನೆಯ ವಿಸರ್ಗವು ಲೋಪವಾಗಿ ಬಳಿಕ ಯಕಾರಾಗಮವಾಗಿದೆ.